Bennett & Coleman
THE TIMES OF INDIA
ಭಾನುವಾರ, 21 ಜೂನ್ 2026 | ಪುಟಗಳು: 20 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
www.vijaykarnataka.com
ಸಂಪುಟ: 27 | ಸಂಚಿಕೆ: 171
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಇಂದು ಅಂತಾರಾಷ್ಟ್ರೀಯ ಯೋಗ ದಿನ

ವಿಜಯ ಕರ್ನಾಟಕ

ದಶಕಗಳ ಕಾಲ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸಿದ ಅನುಭವಿ ನಾಯಕ ಬಿ.ಕೆ. ಹರಿಪ್ರಸಾದ್. ಅವರ ನಾಯಕತ್ವ ಕರ್ನಾಟಕ ಕಾಂಗ್ರೆಸ್‌ಗೆ ಹೊಸ ಚೈತನ್ಯ ಮತ್ತು ದಿಕ್ಕು ನೀಡಲಿದೆ."

— ಮಲ್ಲಿಕಾರ್ಜುನ ಖರ್ಗೆ
ಅಧ್ಯಕ್ಷರು, ಅಖಿಲ ಭಾರತ ಕಾಂಗ್ರೆಸ್ ಸಮಿತಿ

ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಅವರ ಅನುಭವ, ಸಂಘಟನಾ ಸಾಮರ್ಥ್ಯ ಮತ್ತು ಕಾರ್ಯಕರ್ತರ ಮೇಲಿನ ಬದ್ಧತೆ ಕರ್ನಾಟಕ ಕಾಂಗ್ರೆಸ್‌ಗೆ ಹೊಸ ಚೈತನ್ಯ ತುಂಬಲಿದೆ. ಅವರ ನಾಯಕತ್ವದಲ್ಲಿ ಕರ್ನಾಟಕ ಕಾಂಗ್ರೆಸ್ ಇನ್ನಷ್ಟು ಬಲಿಷ್ಠವಾಗಿ ಬೆಳೆಯಲಿದೆ.

— ಡಿ.ಕೆ. ಶಿವಕುಮಾರ್,
ಮುಖ್ಯಮಂತ್ರಿ, ಕರ್ನಾಟಕ

ಸಂಘಟನೆಯ ಸಾರಥಿ

ಬಿ.ಕೆ. ಹರಿಪ್ರಸಾದ್

ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಿರಿಯ ನಾಯಕ

- ಜನನ: 29 ಜುಲೈ 1954, ಬೆಂಗಳೂರು
  ಶಿಕ್ಷಣ: ಬಿ.ಕಾಂ ಪದವಿ
- ಯುವ ಕಾಂಗ್ರೆಸ್ ಚಟುವಟಿಕೆಗಳ ಮೂಲಕ ರಾಜಕೀಯ ಪ್ರವೇಶ
- ಪ್ರಸ್ತುತ ಹುದ್ದೆ: ಕೆ.ಪಿ.ಸಿ.ಸಿ. ಅಧ್ಯಕ್ಷ
  ಹಿಂದಿನ ಹುದ್ದೆ: ರಾಜ್ಯಸಭಾ ಸದಸ್ಯ, ವಿಧಾನ ಪರಿಷತ್ ಸದಸ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ
- ರಾಜ್ಯಸಭಾ ಸದಸ್ಯರಾಗಿ ಅಭಿವೃದ್ಧಿ, ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗ ಹಕ್ಕುಗಳು, ರೈತರ ಸಮಸ್ಯೆಗಳಿಗೆ ದನಿಯಾದವರು.

ಸಂಘಟನಾ ಚತುರ

ಬೆಂಗಳೂರು ಮೂಲದ ಬಿ.ಕೆ. ಹರಿಪ್ರಸಾದ್ ಅವರು ವಿದ್ಯಾರ್ಥಿ ದಿಶೆಯಿಂದಲೇ ಸಾರ್ವಜನಿಕ ಜೀವನದಲ್ಲಿ ಆಸಕ್ತಿ ಬೆಳೆಸಿಕೊಂಡವರು. ಯುವ ಕಾಂಗ್ರೆಸ್ ಚಟುವಟಿಕೆಗಳ ಮೂಲಕ ರಾಜಕೀಯ ಪ್ರವೇಶಿಸಿದ ಅವರು, ಸಂಘಟನಾ ಕೌಶಲ್ಯ, ಕಾರ್ಯಕರ್ತರೊಂದಿಗೆ ನಿಕಟ ಸಂಪರ್ಕ ಹಾಗೂ ಸಿದ್ಧಾಂತ ನಿಷ್ಠೆಯಿಂದ ಕಾಂಗ್ರೆಸ್ ಪಕ್ಷದಲ್ಲಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡರು. ಪಕ್ಷ ಸಂಘಟನೆಯಲ್ಲಿ ಕೊಡುಗೆ, ಕಾರ್ಯಕರ್ತ ಆಧರಿತ ರಾಜಕಾರಣಕ್ಕೆ ಒತ್ತು, ಸಂಘಟನಾ ಬಲವರ್ಧನೆಗೆ ಆದ್ಯತೆ, ಯುವ ನಾಯಕತ್ವಕ್ಕೆ ಪ್ರೋತ್ಸಾಹ, ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳ ಪರವಾಗಿ ಪಕ್ಷದ ಸಿದ್ಧಾಂತಗಳನ್ನು ಜನಸಾಮಾನ್ಯರ ಮಟ್ಟಕ್ಕೆ ತಲುಪಿಸುವ ಪ್ರಯತ್ನ ಮಾಡಿದ್ದಾರೆ.

ಪ್ರಮುಖ ಹುದ್ದೆಗಳು

- ಕರ್ನಾಟಕದಿಂದ ರಾಜ್ಯಸಭಾ ಸದಸ್ಯ
- ಕರ್ನಾಟಕ ವಿಧಾನ ಪರಿಷತ್ ಸದಸ್ಯ
- ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ
- ಅಖಿಲ ಭಾರತ ಕಾಂಗ್ರೆಸ್ ಸಮಿತಿ (AICC) ಪ್ರಧಾನ ಕಾರ್ಯದರ್ಶಿ
- 20 ರಾಜ್ಯಗಳ ಕಾಂಗ್ರೆಸ್ ಉಸ್ತುವಾರಿ
- ಕೆ.ಪಿ.ಸಿ.ಸಿ. ಅಧ್ಯಕ್ಷ (2026)

ಪ್ರಮುಖ ಸಾಧನೆಗಳು

ಸಂಘಟನೆ ಬಲವರ್ಧನೆ
ಕಾರ್ಯಕರ್ತ ಆಧರಿತ ರಾಜಕಾರಣಕ್ಕೆ ಒತ್ತು ನೀಡಿ, ಪಕ್ಷ ಸಂಘಟನಾ ಬಲವರ್ಧನೆಗೆ ಸದಾ ಪ್ರಯತ್ನಿಸಿದರು.

ಯುವ ನಾಯಕತ್ವಕ್ಕೆ ಪ್ರೋತ್ಸಾಹ
ಯುವಕರನ್ನು ಬೆಳೆಸಿ, ಹೊಸ ನಾಯಕತ್ವಕ್ಕೆ ಅವಕಾಶ ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ರಾಷ್ಟ್ರೀಯ ಜವಾಬ್ದಾರಿಗಳು
ಎ.ಐ.ಸಿ.ಸಿ, ಪ್ರಧಾನ ಕಾರ್ಯದರ್ಶಿಯಾಗಿ 20 ರಾಜ್ಯಗಳ ಉಸ್ತುವಾರಿ ನಿರ್ವಹಿಸಿದ್ದಾರೆ.

ಹೋರಾಟದ ನಾಯಕ
ಸಂವಿಧಾನ, ಸಾಮಾಜಿಕ ನ್ಯಾಯ, ರೈತರ ಹಕ್ಕು ಮತ್ತು ಜನರ ಸಮಸ್ಯೆಗಳ ಪರ ಸದಾ ಧ್ವನಿಯಾದವರು.

ಕಾರ್ಯಕರ್ತರ ಧ್ವನಿ
ಕಾರ್ಯಕರ್ತರ ಸಮಸ್ಯೆಗಳನ್ನು ಅರಿತು, ಪಕ್ಷ ಮತ್ತು ಕಾರ್ಯಕರ್ತರ ನಡುವಿನ ಬಲವಾದ ಸೇತುವೆಯಾದವರು.

"ದೀರ್ಘ ರಾಜಕೀಯ ಅನುಭವಕ್ಕೆ ದೊರೆತ ಗೌರವ, ಜನಪರ ನಾಯಕತ್ವಕ್ಕೆ ದೊರೆತ ಹೊಸ ವೇದಿಕೆ."

ಅನುಭವದ ಹಲವು ಆಯಾಮಗಳು

- ಪಕ್ಷ ಸಂಘಟನೆ ಕೊಡುಗೆ
- ಕಾರ್ಯಕರ್ತರ ಸಂಪರ್ಕ
- ಹೋರಾಟದ ನಾಯಕ
- ಸಂಘಟನಾ ಶಕ್ತಿ
- ರಾಷ್ಟ್ರೀಯ ನಾಯಕತ್ವ

Bennett & Coleman
THE TIMES OF INDIA
www.vijaykarnataka.com
ಭಾನುವಾರ, 21 ಜೂನ್ 2026 | ಪುಟಗಳು: 20 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
c
ಸಂಪುಟ: 27 | ಸಂಚಿಕೆ: 171
VK ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಇಂದು ಅಂತಾರಾಷ್ಟ್ರೀಯ ಯೋಗ ದಿನ

ರಾಷ್ಟ್ರಪತಿ ದ್ರೌಪದಿ ಮುರ್ಮು ಜೀವನಗಾಥೆ ಕುರಿತು ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಮುಂದಾದ ಆಮೀರ್ ಖಾನ್

₹13,390 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹14,608 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	₹2,50,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ಮೋದಿ ಮಹಾನ್ ನಾಯಕ, ಯುದ್ಧಗಳಿಂದ ಅಂತರ ಕಾಯುವ ಚಾಣಾಕ್ಷ: ಟ್ರಂಪ್ ಮೆಚ್ಚುಗೆ

ವಿಕ ಹೊಂಗಿರಣ

ಹಿಂಸೆ ಅನ್ನುವುದು ಶಾರೀರಿಕವಾದುದಷ್ಟೇ ಅಲ್ಲ, ಮಾತುಗಳಿಂದ ಎದುರಿನವರಿಗೆ ನೋವುಂಟು ಮಾಡಿದರೂ ಅದು ಹಿಂಸೆಯೇ ಆಗಿರುತ್ತದೆ.

- ಗೌತಮ ಬುದ್ಧ

SBI
The banker to every Indian
ಎಸ್‌ಬಿಐ ಡಿಜಿಟಲ್ ಎಂಎಸ್‌ಎಂಇ ಸಾಲಗಳು
• ಎಂಎಸ್‌ಎಂಇ ಸಾಲದ ತ್ವರಿತ ಅನುಮೋದನೆ
• 5 ಕೋಟಿವರೆಗಿನ ಸಾಲಗಳು
• ತಕ್ಷಣದ ತಾತ್ವಿಕ ಮಂಜೂರಾತಿ
• ಅವಧಿ: 10 ವರ್ಷಗಳವರೆಗೆ
• ಸಿಜಿಟಿಎಮ್‌ಎಸ್‌ಇ ರಕ್ಷಣೆ
• ಆಕರ್ಷಕ ಬಡ್ಡಿದರಗಳು
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 | 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹114/- ಕೋಲಾರ 112/- ತುಮಕೂರು 112/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹154/-
ಕೋಲಾರ 152/- ತುಮಕೂರು 152/-
ವಿಥ್ ಸ್ಕಿನ್ ₹217/- ಕೋಲಾರ 214/- ತುಮಕೂರು 214/-
ವಿಥೌಟ್ ಸ್ಕಿನ್ ₹248/- ಕೋಲಾರ 245/- ತುಮಕೂರು 245/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಸಿಇಟಿ ಆಪ್ಷನ್ ಎಂಟ್ರಿ ಆರಂಭ »04

ಆಫ್ಘನ್ ವಿರುದ್ಧ ಭಾರತಕ್ಕೆ 9 ವಿಕೆಟ್ ಗೆಲುವು »12

ಬ್ರೆಜಿಲ್‌ಗೆ ಹೈಟಿ ವಿರುದ್ಧ 3-0 ಗೋಲುಗಳ ಜಯ »12

ಮುಖ್ಯಮಂತ್ರಿ ಡಿಕೆಶಿ ಸಂಪುಟದ ಜನಸ್ನೇಹಿ ಆಡಳಿತದ ಎರಡು ಮಹತ್ವದ ನಿರ್ಧಾರ

ಅನಧಿಕೃತ ಕಟ್ಟಡಗಳ ಮಾಲೀಕರಿಗೆ ಸಿಹಿ ಸುದ್ದಿ | ಜನರ ಕಷ್ಟ ಆಲಿಸಲು ಪ್ರಜಾ ಸೇವೆ ಇಲಾಖೆ

ನೀರು, ಪವರ್ ನಿರಾತಂಕ

■ **ವಿಕ ಸುದ್ದಿಲೋಕ** ಬೆಂಗಳೂರು

ಹಲವು ಕಾರಣಗಳಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ, ನೀರಿನ ಸಂಪರ್ಕ ಸಿಗದೇ ಇರುವ ಲಕ್ಷಾಂತರ ಕಟ್ಟಡಗಳ ಮಾಲೀಕರಿಗೆ ರಾಜ್ಯ ಸರಕಾರ ಶುಭ ಸುದ್ದಿ ನೀಡಿದೆ. ಕಳೆದ ಮೇ 31ರೊಳಗೆ ಪೂರ್ಣಗೊಂಡಿರುವ ಎಲ್ಲ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರು ಕಾಯಂ ಸಂಪರ್ಕಕ್ಕೆ ವಿನಾಯಿತಿ ನೀಡಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ.

ತಮ್ಮ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸಿಎಂ ಡಿ.ಕೆ.ಶಿವಕುಮಾರ್ ಅವರೇ ಖುದ್ದುಮಾಹಿತಿ ನೀಡಿದರು. ''ವಿದ್ಯುತ್, ನೀರು ಸಂಪರ್ಕ ಸಂಬಂಧ ಸದ್ಯದಲ್ಲೇ ವಿವರವಾದ ಸರಕಾರಿ ಆದೇಶ ಹೊರಡಿಸಲಾಗುತ್ತದೆ. ಆದೇಶ ಹೊರಡಿಸಿದ ನಂತರದ 15 ದಿನಗಳೊಳಗೆ ಶಾಶ್ವತ ಸಂಪರ್ಕಕ್ಕೆ ಅರ್ಜಿ ಸಲ್ಲಿಸಬೇಕು,'' ಎಂದರು.

''ಸಾರ್ವಜನಿಕ ಅನುಕೂಲ ಗಮನದಲ್ಲಿಟ್ಟುಕೊಂಡು ಒಂದು ಸಲದ ಕ್ರಮವಾಗಿ ಸಂಪುಟ ಈ ತೀರ್ಮಾನ ಮಾಡಿದೆ. ಅರ್ಜಿಯೊಂದಿಗೆ ಫಲಾನುಭವಿಗಳ ಫೋಟೋ, ಕಟ್ಟಡದ ಫೋಟೊ ಹಾಗೂ ಜಿಪಿಎಸ್ ಲೊಕೇಷನ್ ಅನ್ನು ಲಗತ್ತಿಸಬೇಕು,'' ಎಂದರು.

''ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರು ಸಂಪರ್ಕ ಕಲ್ಪಿಸಬಾರದೆಂಬ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಎದುರಾಗಿದ್ದ ತೊಂದರೆ ತಪ್ಪಿಸಲು ಕೆಲವು ವಿನಾಯಿತಿಗಳನ್ನು ನೀಡಲಾಗಿತ್ತು. ಆದರಿಂದ ಹೆಚ್ಚಿನ ಜನರಿಗೆ ಅನುಕೂಲವಾಗುತ್ತಿಲ್ಲ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಆದರೆ, ಅಕ್ರಮ -ಸಕ್ರಮಕ್ಕೂ ಈ ತೀರ್ಮಾನಕ್ಕೂ ಯಾವುದೇ ಸಂಬಂಧ ಇರುವುದಿಲ್ಲ. ಈ ಸೌಲಭ್ಯ ಪಡೆಯಲು ತರಾತುರಿಯಲ್ಲಿ ಕಟ್ಟಡ ನಿರ್ಮಾಣ ಮಾಡಿದರೆ, ಅಂಥವರಿಗೆ ಅವಕಾಶ ಇರುವುದಿಲ್ಲ'' ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ವಾರಕ್ಕೊಮ್ಮೆ ಜನಸ್ಪಂದನ ಕಡ್ಡಾಯ

ಸಚಿವರು ತಮ್ಮ ಉಸ್ತುವಾರಿ ಜಿಲ್ಲೆಯ ಕ್ಷೇತ್ರಗಳಿಗೆ ವಾರಕ್ಕೊಮ್ಮೆ ತೆರಳಿ, ಸ್ಥಳೀಯ ಶಾಸಕರೊಂದಿಗೆ 'ಜನಸ್ಪಂದನ' ಕಾರ್ಯಕ್ರಮ ಮಾಡಬೇಕು. ರಾಜ್ಯದ ಎಲ್ಲ 224 ಕ್ಷೇತ್ರಗಳಲ್ಲೂ ಈ ಕಾರ್ಯಕ್ರಮ ನಡೆಯುವುದು ಕಡ್ಡಾಯ. ಜನಸ್ಪಂದನದಲ್ಲಿ ಬರುವ ದೂರು, ಸಮಸ್ಯೆ, ಬೇಡಿಕೆಗಳನ್ನು ನೂತನ ಪ್ರಜಾ ಸೇವೆ ಇಲಾಖೆ ಪರಿಶೀಲನೆ ನಡೆಸಲಿದೆ.

- ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ

ಯಾರಿಗೆಲ್ಲ ಅನುಕೂಲ?

- ಮೇ 31, 2026ರ ಒಳಗೆ ಮುಕ್ತಾಯವಾಗಿದ್ದು, ತಾತ್ಕಾಲಿಕ ವಿದ್ಯುತ್ ಸಂಪರ್ಕ ಹೊಂದಿರುವ ಕಟ್ಟಡಗಳಿಗೆ ಮಾತ್ರ ಅನ್ವಯ
- ಸಚಿವ ಸಂಪುಟ ತೀರ್ಮಾನದ ಬಳಿಕ ನೀರು, ವಿದ್ಯುತ್ ಸಂಪರ್ಕಕ್ಕೆಂದೇ ತರಾತುರಿಯಲ್ಲಿ ಕಟ್ಟಡ ಮುಗಿಸಿದವರಿಗೆ ಅನ್ವಯವಾಗುವುದಿಲ್ಲ
- ಗ್ರಾಮೀಣ ಪ್ರದೇಶಗಳಲ್ಲಿ ರೇಷ್ಮೆ ಗೂಡು ಮನೆ, ಕೊಟ್ಟಿಗೆಗಳು, ಹೈನುಗಾರಿಕೆ, ಕೋಳಿ ಸಾಕಾಣೆ ಮತ್ತಿತರ ಕಟ್ಟಡಗಳಿಗೆ ವಿನಾಯಿತಿ

ಪ್ರಜಾ ಸೇವೆಗೆ ಪ್ರತ್ಯೇಕ ಸಚಿವರು

ಜನಸ್ನೇಹಿ ಆಡಳಿತದ ಮಹತ್ವದ ಹೆಜ್ಜೆಯಾಗಿ ಸಾರ್ವಜನಿಕರ ಸಮಸ್ಯೆ, ಕುಂದುಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸಲು 'ಪ್ರಜಾ ಸೇವೆ ಇಲಾಖೆ' ಸ್ಥಾಪನೆಗೆ ರಾಜ್ಯ ಸಚಿವ ಸಂಪುಟ ಸಭೆ ನಿರ್ಣಯಿಸಿದೆ. ಇಲಾಖೆಗೆ ಪ್ರತ್ಯೇಕ ಸಚಿವರೊಬ್ಬರ ನೇಮಕದ ಜತೆಗೆ, ಹಿರಿಯ ಐಎಎಸ್ ಅಧಿಕಾರಿಯೊಬ್ಬರು ಮುಖ್ಯಸ್ಥರಾಗಲಿರುವ ಹೊಸ ಸಚಿವಾಲಯವು ಅಸ್ತಿತ್ವಕ್ಕೆ ಬರಲಿದೆ.

''ಜನಸಾಮಾನ್ಯರ ಕಷ್ಟ ಮತ್ತು ಸಮಸ್ಯೆಗಳಿಗೆ ಕಾನೂನು ಚೌಕಟ್ಟಿನೊಳಗೆ ಶೀಘ್ರ ಸ್ಪಂದನಾಶೀಲ ವ್ಯವಸ್ಥೆಗಾಗಿ ಈ ತೀರ್ಮಾನ ಮಾಡಲಾಗಿದ್ದು, ಈ ಮೂಲಕ ಸಾರ್ವಜನಿಕರಿಗೆ ನ್ಯಾಯ ಒದಗಿಸುವುದು ಸರಕಾರದ ಉದ್ದೇಶವಾಗಿದೆ,'' ಎಂದು ಸಿಎಂ ಪ್ರಕಟಿಸಿದರು.

''ಸಚಿವರು ಹಾಗೂ ತಮಗೆ ಸಲ್ಲಿಕೆಯಾಗುವ ಮನವಿಗಳನ್ನೂ ಪ್ರಜಾ ಸೇವೆ ಇಲಾಖೆ ವ್ಯಾಪ್ತಿಗೆ ತರಲಾಗುತ್ತಿದ್ದು, ಸಾರ್ವಜನಿಕರ ಕುಂದುಕೊರತೆ ಹಾಗೂ ಸಾರ್ವಜನಿಕ ಹೋರಾಟದ ಅಹವಾಲುಗಳನ್ನು ಆಲಿಸುವ ಕೆಲಸವನ್ನು ಈ ಇಲಾಖೆ ಮಾಡಲಿದೆ. ನಾನಾ ಇಲಾಖೆಗಳಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನೂ ಪರಿಶೀಲಿಸಿ, ಮಾಹಿತಿ ನೀಡುವ ವ್ಯವಸ್ಥೆಯಾಗಿಯೂ ಈ ಹೊಸ ಇಲಾಖೆ ಕೆಲಸ ಮಾಡಲಿದೆ,'' ಎಂದು ತಿಳಿಸಿದರು.

ಪ್ರಯಾಣ ದರ ಏರಿಕೆ?

ಬೆಂಗಳೂರು: ಡೀಸೆಲ್ ದರ ಏರಿಕೆ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಏರಿಕೆಗೆ ಸಾರಿಗೆ ನಿಗಮಗಳು ಪ್ರಸ್ತಾವನೆ ಸಲ್ಲಿಸಿದ್ದು, ಸಾರ್ವಜನಿಕರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಸೂಕ್ತ ತೀರ್ಮಾನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಶನಿವಾರ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು, ''ಬಸ್ ಪ್ರಯಾಣ ದರ ಏರಿಕೆ ಪ್ರಸ್ತಾಪದ ಬಗ್ಗೆ ವರದಿ ಕೇಳಲಾಗಿದೆ. ವರದಿ ಬಂದ ಬಳಿಕ, ಸಾರಿಗೆ ನಿಗಮಗಳೂ ಉಳಿಯಬೇಕು, ಜನರಿಗೂ ಹೆಚ್ಚಿನ ತೊಂದರೆ ಆಗಬಾರದು. ಈ ಎರಡೂ ಅಂಶ ದೃಷ್ಟಿಯಲ್ಲಿಟ್ಟುಕೊಂಡು ಸರಕಾರ ನಿರ್ಧಾರ ಮಾಡಲಿದೆ,'' ಎಂದರು.

''ಇಂಧನ ಉಳಿತಾಯದ ಕ್ರಮವಾಗಿ ಸಾರ್ವಜನಿಕ ಸಾರಿಗೆ ಬಳಸಲು ಪ್ರಧಾನಿ ಕರೆ ನೀಡಿದ್ದಾರೆ. ಬಸ್ ಪ್ರಯಾಣ ದರ ಏರಿಕೆ ಪ್ರಸ್ತಾವನೆ ಬಗ್ಗೆ ತೀರ್ಮಾನ ಮಾಡುವ ಮುನ್ನ ಈ ಅಂಶವನ್ನೂ ಗಮನದಲ್ಲಿಟ್ಟುಕೊಳ್ಳಬೇಕಿದೆ,'' ಎಂದು ಹೇಳಿದರು.

ಇಂದು ನೀಟ್ ಮರುಪರೀಕ್ಷೆ

ಹೊಸದಿಲ್ಲಿ: ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಿಗದಿಯಾದ ನೀಟ್-ಯುಜಿ ಮರುಪರೀಕ್ಷೆ ಭಾನುವಾರ (ಜೂನ್ 21) ನಡೆಯಲಿದೆ. ಒಟ್ಟು 551 ನಗರ ಹಾಗೂ ಪಟ್ಟಣಗಳ 5,500 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲು ಸಿದ್ಧತೆ ಪೂರ್ಣಗೊಳಿಸಲಾಗಿದೆ.

ದೇಶಾದ್ಯಂತ 22.79 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಸಜ್ಜಾಗಿದ್ದಾರೆ. ಪರೀಕ್ಷೆ ಪಾವಿತ್ರ್ಯತೆ ಕಾಯ್ದುಕೊಳ್ಳುವ ಜತೆಗೆ ಪ್ರಶ್ನೆಪತ್ರಿಕೆಗಳ ಸುರಕ್ಷಿತ ಸಾಗಾಟಕ್ಕೆ ಜಿಲ್ಲಾಡಳಿತ ಹಾಗೂ ಪೊಲೀಸ್ ಪಡೆಗಳ ಜತೆ ಎನ್‌ಟಿಎ ನಿಕಟವಾಗಿ ಕೆಲಸ ಮಾಡುತ್ತಿದೆ.

ಪರೀಕ್ಷೆಯ ಮೇಲ್ವಿಚಾರಣೆಗೆ 674 ಸಹ ಸಂಯೋಜಕರು, 6,669 ವೀಕ್ಷಕರನ್ನು ನೇಮಿಸಲಾಗಿದೆ. ಭದ್ರತೆಗೆ ಅರೆಸೇನಾಪಡೆ ಯೋಧರು ಸೇರಿದಂತೆ 2 ಲಕ್ಷ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ಪರೀಕ್ಷೆಯನ್ನು ಸುರಕ್ಷಿತ, ಪಾರದರ್ಶಕ ಹಾಗೂ ಸುಸೂತ್ರವಾಗಿ ಕೈಗೊಳ್ಳಲು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಶನಿವಾರ ದೇಶಾದ್ಯಂತ ಅಣಕು ಪರೀಕ್ಷಾ ಪ್ರದರ್ಶನ ನಡೆಸಿತು. ಪರೀಕ್ಷೆ ನಡೆಯುವ ನಗರ ಹಾಗೂ ಪಟ್ಟಣಗಳಲ್ಲಿ ಅಣಕು ಪ್ರದರ್ಶನ ನಡೆಸಿದ ಎನ್‌ಟಿಎ, ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿನ ಭಯ, ಆತಂಕ, ದುಗುಡ ಹೋಗಲಾಡಿಸಲು ಯತ್ನಿಸಿತು.

ಹರ್ಮುಜ್ ಮತ್ತೆ ಬಂದ್

ಟೆಹರಾನ್: ಅಮೆರಿಕ-ಇರಾನ್ ಶಾಂತಿ ಒಪ್ಪಂದದ ಬೆನ್ನಲ್ಲೇ ಇಸ್ರೇಲ್ ಸೇನೆಯು ಲೆಬನಾನ್ ಮೇಲೆ ನಡೆಸಿದ ವೈಮಾನಿಕ ದಾಳಿಗೆ ರೊಚ್ಚಿಗೆದ್ದಿರುವ ಇರಾನ್, ಹರ್ಮುಜ್ ಜಲಸಂಧಿಯನ್ನು ಮತ್ತೆ ಬಂದ್ ಮಾಡಿದೆ. ಅಂತಾರಾಷ್ಟ್ರೀಯ ಜಲಮಾರ್ಗದಲ್ಲಿ ತೈಲ, ಅನಿಲ ಟ್ಯಾಂಕರ್ ಶಿಪ್ ಹಾಗೂ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಅಡಚಣೆ ಎದುರಾಗಿದ್ದು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಸಮಸ್ಯೆ ತಂದೊಡ್ಡುವ ಸಾಧ್ಯತೆ ಇದೆ.

ಈ ಬಿಕ್ಕಟ್ಟಿನ ನಡುವೆ 8.6 ಲಕ್ಷ ಮೆಟ್ರಿಕ್ ಟನ್‌ಗೂ ಹೆಚ್ಚಿನ ಕಚ್ಚಾ ತೈಲ ಹೊತ್ತ ಭಾರತದ ಧ್ವಜಹೊಂದಿರುವ 'ದೇಶ್ ವೈಭವ್', 'ದೇಶ್ ವಿಭೋರ್' ಮತ್ತು 'ಸನ್ಮಾರ್ ಹೆರಾಲ್ಡ್' ಎಂಬ ಮೂರು ಟ್ಯಾಂಕರ್ ಶಿಪ್‌ಗಳು ಹರ್ಮುಜ್ ದಾಟಿ ಭಾರತದತ್ತ ಹೊರಟಿವೆ. ಇವು ಜೂನ್ 24 ಮತ್ತು ಜುಲೈ 1ರ ಅವಧಿಯಲ್ಲಿ ಭಾರತದ ಬಂದರುಗಳನ್ನು ತಲುಪುವ ನಿರೀಕ್ಷೆಯಿದೆ.

ಈ ಮಧ್ಯೆ, ಸಂಘರ್ಷ ಪೀಡಿತ ಹರ್ಮುಜ್ ಜಲಸಂಧಿ ಸಮೀಪ ಸಿಲುಕಿದ ಭಾರತದ 9 ಹಡಗುಗಳನ್ನು ಗುರುತಿಸಲಾಗಿದೆ. ಎಲ್ಲಾ ವಾಣಿಜ್ಯ ಹಡಗುಗಳು, ಭಾರತೀಯ ಸಿಬ್ಬಂದಿಯನ್ನು ಸ್ಥಳಾಂತರಿಸಲು ಕೇಂದ್ರ ಸರಕಾರ ಮುಂದಾಗಿದೆ.

ವಿವರ»05

ಬಂಗಾಳದಲ್ಲಿ ಮೋದಿ ಯೋಗ

ಕೋಲ್ಕೊತಾ: ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಧಾನ ಕಾರ್ಯಕ್ರಮ ಭಾನುವಾರ (ಜೂನ್ 21) ಪಶ್ಚಿಮ ಬಂಗಾಳದ ಕೋಲ್ಕೊತಾದ ರೆಡ್ ರೋಡ್ ಬಳಿ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ನಡೆಯಲಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ನಡೆಯುತ್ತಿರುವ ಮೊದಲ ಅತಿದೊಡ್ಡ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಇದಾಗಿದೆ.

ಪ್ರಧಾನಿ ಮೋದಿ ಪಾಲ್ಗೊಳ್ಳುವ 80 ನಿಮಿಷದ ಪ್ರಧಾನ ಕಾರ್ಯಕ್ರಮ ಬೆಳಗ್ಗೆ 6.30ಕ್ಕೆ ಶುರುವಾಗಲಿದ್ದು, ಇದರಲ್ಲಿ 35 ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಹಂಪಿಯೂ ಸೇರಿದಂತೆ ದೇಶಾದ್ಯಂತ 12 ಪಾರಂಪರಿಕ ತಾಣಗಳೂ ಸೇರಿ ವಿಶ್ವದಾದ್ಯಂತ ಒಟ್ಟು 2,500 ಸ್ಥಳಗಳಲ್ಲಿ ಯೋಗ ಪ್ರದರ್ಶನ ನಡೆಯಲಿದೆ.

'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಘೋಷವಾಕ್ಯದಡಿ ಈ ಬಾರಿ ದೇಶಾದ್ಯಂತ ಯೋಗ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಇಂದು ಬಿಕೆಎಚ್ ಪದಗ್ರಹಣ

ಬೆಂಗಳೂರು: ಕಾಂಗ್ರೆಸ್ ಕಟ್ಟಾಳು ಬಿ.ಕೆ.ಹರಿಪ್ರಸಾದ್ ಅವರು ಕೆಪಿಸಿಸಿ ನೂತನ ಸಾರಥಿಯಾಗಿ ಭಾನುವಾರ (ಜೂನ್ 21) ಅಧಿಕಾರ ಸ್ವೀಕಾರ ಮಾಡಲಿದ್ದಾರೆ. ನಗರದ ಅರಮನೆ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಕ್ಷದ ಹಿರಿಯ ನಾಯಕರು ಹಾಗೂ ಅಪಾರ ಕಾರ್ಯಕರ್ತರ ಸಮ್ಮುಖದಲ್ಲಿ ಹರಿಪ್ರಸಾದ್ ಪದಗ್ರಹಣ ಮಾಡಲಿದ್ದಾರೆ.



ಮುಖ್ಯಮಂತ್ರಿ ಹಾಗೂ ನಿಕಟಪೂರ್ವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಧ್ವಜವನ್ನು ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರಿಗೆ ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ಸುರ್ಜೇವಾಲಾ, ಮಾಜಿ ಸಿಎಂ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ.

ನೀಟ್ ಪರೀಕ್ಷೆ ಹಿನ್ನೆಲೆಯಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ರೂಟ್ ಮ್ಯಾಪ್ ಸಿದ್ಧಪಡಿಸಲಾಗಿದೆ ಎಂದು ಕೆಪಿಸಿಸಿ ತಿಳಿಸಿದೆ.



50 ಕೋಟಿ ರೂ. ಹಣ ಕೂಡ ನೀಡಿದ್ದಾರೆ ಎಂದು ಎಚ್ಡಿಕೆ ಗಂಭೀರ ಆರೋಪ | ಆಮಿಷಕ್ಕೆ ಬಲಿಯಾದ ಪಕ್ಷದ ಶಾಸಕರಿಗೆ ಕಠಿಣ ಎಚ್ಚರಿಕೆ

ಅಡ್ಡ ಮತದಾನಕ್ಕೆ ₹100 ಕೋಟಿ ಅನುದಾನ ಆಮಿಷ

■ ವಿಕ ಸುದ್ದಿಲೋಕ ಬೆಂಗಳೂರು

ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದರೆ 50 ಕೋಟಿ ರೂ. ಜತೆಗೆ ಕ್ಷೇತ್ರಕ್ಕೆ 100 ಕೋಟಿ ರೂ. ಅನುದಾನ ನೀಡುವುದಾಗಿ ಕಾಂಗ್ರೆಸ್‌ನವರು ಆಮಿಷ ಒಡ್ಡಿರುವುದು ಪರಿಷತ್ ಚುನಾವಣೆಯಲ್ಲಿ ಕೆಲಸ ಮಾಡಿದೆ ಎಂದು ಗಂಭೀರ ಆರೋಪ ಮಾಡಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು, ಭ್ರಷ್ಟಾಚಾರ ತೊಲಗಬೇಕು ಎಂದು ಮುಖ್ಯಮಂತ್ರಿಗಳು ಹೇಳಿದ್ದು, ಈಗ ಯಾರಿಗೆ ಫೋನ್ ಮಾಡಬೇಕು ಎಂದು ಪ್ರಶ್ನಿಸಿದ್ದಾರೆ.

''ವಿಧಾನ ಪರಿಷತ್ ಚುನಾವಣೆಯಲ್ಲಿ ಗೆಲ್ಲುತ್ತೇವೆಂದು ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಲಿಲ್ಲ. ನಮ್ಮ ಶಾಸಕರು ಎಷ್ಟು ಗಟ್ಟಿಯಾಗಿ, ದೃಢವಾಗಿ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದನ್ನು ಪರೀಕ್ಷಿಸಲು ಕಣಕ್ಕಿಳಿಸಬೇಕಾಯಿತು. ಜತೆಗೆ ಶಾಸಕರ ಒತ್ತಡವಿತ್ತು. ಶಾಸಕರ ಗಟ್ಟಿತನದ ಬಗ್ಗೆ ತಿಳಿದುಕೊಳ್ಳುವ ಅಗತ್ಯವೂ ಇತ್ತು,'' ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

ಜೆಡಿಎಸ್ ಕಚೇರಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿಯವರು ಸ್ವಪಕ್ಷೀಯ ಕೆಲವರ ಅಡ್ಡ ಮತದಾನಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

''ಅಡ್ಡ ಮತದಾನದಿಂದ ಜೆಡಿಎಸ್-ಬಿಜೆಪಿ ಮೈತ್ರಿಯಲ್ಲಿ ಬಿರುಕು ಉಂಟಾಗುವುದಿಲ್ಲ. ಇದು ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯೂ ಅಲ್ಲ. ನಮ್ಮಲ್ಲಿ ಬಿಕ್ಕಟ್ಟು ಸೃಷ್ಟಿಸಲು ಕಾಂಗ್ರೆಸ್ ವಿಫಲ ಯತ್ನ ನಡೆಸುತ್ತಿದೆ. ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೊದಲೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆರ್.ಅಶೋಕ್ ಅವರೊಂದಿಗೆ ಚರ್ಚಿಸಿ ಅವರೆಲ್ಲರ ಸಹಮತದಿಂದ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಲಾಗಿತ್ತು. ಹಾಗಾಗಿ ಮೈತ್ರಿಯಲ್ಲಿ ಬಿರುಕು ಮೂಡುವ ಪ್ರಶ್ನೆ ಇಲ್ಲ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

''ಮೂರು ವರ್ಷಗಳಿಂದ ನಮ್ಮ ಶಾಸಕರಿಗೆ ಕ್ಷೇತ್ರಗಳಲ್ಲಿ ಸರಿಯಾಗಿ ಕೆಲಸಗಳಾಗಿಲ್ಲ. ಕಾರ್ಯಕರ್ತರು, ಸಾರ್ವಜನಿಕರ ಒತ್ತಡದ ಕಾರಣಕ್ಕೆ ಜನರಿಗೆ ಮುಖ ತೋರಿಸುವುದು ಕಷ್ಟವಾಗುತ್ತಿದೆ ಎಂದು ಶಾಸಕರು ಹೇಳುತ್ತಿದ್ದಾರೆ. ಜೆಡಿಎಸ್ ಮಾತ್ರವಲ್ಲ, ಬಿಜೆಪಿ, ಕಾಂಗ್ರೆಸ್ ಶಾಸಕರ ಪರಿಸ್ಥಿತಿಯೂ ಇದೇ ಆಗಿದೆ. ಇದು ಪರಿಷತ್ ಚುನಾವಣೆ ಮೇಲೆ ಸ್ವಲ್ಪ ಪರಿಣಾಮ ಬೀರಿದೆ ಎನ್ನಬಹುದು,'' ಎಂದು ವಿಶ್ಲೇಷಿಸಿದರು.

ಜೆಡಿಎಸ್‌ನಲ್ಲಿ ಉಳಿದಿರುವುದು 17 ಶಾಸಕರಷ್ಟೇ

''ನಾನು 20 ವರ್ಷಗಳಿಂದ ಪಕ್ಷದ ನೇತೃತ್ವ ವಹಿಸಿ ಸಂಘಟಿಸುತ್ತಿದ್ದು, ಪರಿಷತ್ ಚುನಾವಣೆ ಏನಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲವೇ? ಸುಖಾಸುಮ್ಮನೆ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಮೂರ್ಖನಲ್ಲ. ನಮ್ಮ ಸಂಖ್ಯಾಬಲ ಕೇವಲ 18. ಅದರಲ್ಲಿ ಈಗಾಗಲೇ ಒಬ್ಬರು ಕಾಲು ಹೊರಗಿಟ್ಟಿದ್ದು, ಉಳಿದಿದ್ದು 17 ಶಾಸಕರಷ್ಟೇ. ಬಿಜೆಪಿಯ ಹೆಚ್ಚುವರಿ 6 ಮತಗಳು ಬರುವ ನಿರೀಕ್ಷೆ ಇತ್ತು. ಎಲ್ಲಾ ಸೇರಿ ಒಟ್ಟಾರೆ ನಮ್ಮ ಅಭ್ಯರ್ಥಿಗೆ 24 ಮತಗಳು ಬರಬಹುದೆಂಬ ಲೆಕ್ಕಾಚಾರವಿತ್ತು. ಆದರೆ, ಕೆಲ ಶಾಸಕರು ಪಕ್ಷದೊಂದಿಗೆ ಗಟ್ಟಿಯಾಗಿ ನಿಲ್ಲದೆ ಅನುದಾನಕ್ಕಾಗಿ ಚಂಚಲರಾಗಿದ್ದಾರೆ,'' ಎಂದು ಬೇಸರ ವ್ಯಕ್ತಪಡಿಸಿದರು.

ಯಾರಿಗೆ ಫೋನ್ ಮಾಡಿ ಹೇಳಬೇಕು?

''ರಾಜ್ಯದಲ್ಲಿ ಭ್ರಷ್ಟಾಚಾರ ತೊಲಗಬೇಕು. ಯಾರಾದರೂ 10 ರೂ. ಕೇಳಿದರೆ ನಿರ್ದಿಷ್ಟ ಸಂಖ್ಯೆಗೆ ಕರೆ ಮಾಡುವಂತೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಪರಿಷತ್ ಚುನಾವಣೆಯಲ್ಲಿ ಕೋಟಿ ಕೋಟಿ ಹಣ ಕೈ ಬದಲಾಗಿದ್ದು, ಯಾರಿಗೆ ದೂರು ಕೊಡಬೇಕು? ಹಣ ಕೊಟ್ಟವರನ್ನು, ಹಣ ಪಡೆದುಕೊಂಡವರನ್ನು ಈ ಫೋನ್ ಸಂಖ್ಯೆಯಿಂದ ಹೊರಗಿಡಲಾಗಿದೆಯೇ? ಅದಕ್ಕೆ ಪ್ರತ್ಯೇಕ ನಿಯಮವೇನಾದರೂ ಮಾಡಿದ್ದಾರೆಯೇ,'' ಎಂದು ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಕ್ರಮ ಜರುಗಿಸದೆ ಬಿಡುವುದಿಲ್ಲ

''ಅಡ್ಡ ಮತದಾನ ಮಾಡಿದ ಶಾಸಕರ ವಿರುದ್ಧ ಕ್ರಮ ಜರುಗಿಸದೆ ಬಿಡುವುದಿಲ್ಲ. ಸಮಯ, ಸಂದರ್ಭ ನೋಡಿಕೊಂಡು ಮಾಡುತ್ತೇವೆ. 2028ರ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ವೇಳೆ ಕಠಿಣ ನಿರ್ಧಾರ ಮಾಡಿಯೇ ತೀರುತ್ತೇವೆ,'' ಎಂದು ಗುಡುಗಿದರು.

ಹೋಗುವವರನ್ನು ತಡೆಯುವುದಿಲ್ಲ

''ಪಕ್ಷದ ಶಾಸಕರ ಸಭೆಯಲ್ಲಿ ಮುಕ್ತವಾಗಿ ಮಾತನಾಡಿದ್ದೇನೆ. ಯಾರೊಬ್ಬರ ಭವಿಷ್ಯಕ್ಕೆ ತೊಂದರೆ ನೀಡುವುದಿಲ್ಲ. ಬೇರೆ ಕಡೆ ಅನುಕೂಲವಾಗಲಿದ್ದು, ಹೋಗುವವರು ಧೈರ್ಯವಾಗಿ ನನಗೆ ಹೇಳಿಯೇ ಹೋಗಿ, ನಾನು ತಡೆಯುವುದಿಲ್ಲ ಎಂದಿದ್ದೇನೆ. ಅದನ್ನು ಬಿಟ್ಟು ಇಂತಹ ಕೆಲಸಗಳನ್ನು ಮಾಡಿ ಪಕ್ಷಕ್ಕೆ ಧಕ್ಕೆ ತರಬೇಡಿ ಎಂದೂ ಹೇಳಿದ್ದೇನೆ. ಶಾಸಕರ ಸಭೆಯಲ್ಲಿ ಒಬ್ಬರನ್ನು ಹೊರತುಪಡಿಸಿ (ಜಿ.ಟಿ.ದೇವೇಗೌಡ) 17 ಮಂದಿ ಹಾಜರಿದ್ದರು,'' ಎಂದು ಕುಮಾರಸ್ವಾಮಿ ಹೇಳಿದರು.

ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯಲ್ಲ

''ಅಡ್ಡ ಮತದಾನ ಮಾಡಿದಾಕ್ಷಣ ಪಕ್ಷ ಮುಳುಗಿ ಹೋಗುವುದಿಲ್ಲ. 2017ರಲ್ಲಿ ರಾಜ್ಯಸಭೆ ಚುನಾವಣೆ ನಡೆದಾಗ ಜೆಡಿಎಸ್‌ನ ಆರೇಳು ಶಾಸಕರು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ ಆನಂತರ ಆ ಪಕ್ಷವನ್ನೇ ಸೇರಿದರು. ಬಳಿಕ ನಡೆದ ಚುನಾವಣೆಯಲ್ಲಿ ಬಹುತೇಕರು ಸೋತರು,'' ಎಂದು ನೆನಪಿಸಿದರು.



ಸಿಎಂ ಸ್ಥಾನದ ವಿಷಯ ಮುಖ್ಯವಲ್ಲ

''ದಿಲ್ಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿಯಾಗಿ ಈ ವಿಚಾರವಾಗಿ ನನಗಿರುವ ಮಾಹಿತಿ ಹಂಚಿಕೊಳ್ಳುತ್ತೇನೆ. ನಮ್ಮ ಶಾಸಕರೆಲ್ಲಾ ಅಂತಿಮ ನಿರ್ಣಯ ಮಾಡುವ ಜವಾಬ್ದಾರಿಯನ್ನು ನನಗೆ ನೀಡಿದ್ದಾರೆ. ಇದರ ಬಗ್ಗೆ ಪೂರ್ಣ ಮಾಹಿತಿ ಇದ್ದು, ಹೆಚ್ಚಿಗೆ ಬೆಳೆಸುವುದಿಲ್ಲ. 2028ರ ಚುನಾವಣೆಯಲ್ಲಿ ಮೈತ್ರಿ ಪಕ್ಷಗಳು ರಾಜ್ಯದ ಚುಕ್ಕಾಣಿ ಹಿಡಿಯಬೇಕೆಂಬುದು ನನ್ನ ಗುರಿ. ಅದಕ್ಕಾಗಿ ನನ್ನ ಶ್ರಮ ಮೀಸಲು. ಅದನ್ನು ಬಿಟ್ಟು ಮುಖ್ಯಮಂತ್ರಿ ಸ್ಥಾನದ ವಿಷಯ ಮುಖ್ಯವಲ್ಲ. ಮೊದಲು ಈ ಕೆಟ್ಟ ಸರಕಾರ ಹೋಗಬೇಕು,'' ಎಂದು ಕುಮಾರಸ್ವಾಮಿ ಹೇಳಿದರು.

ನೀತಿಗೆಟ್ಟ ಸರಕಾರ: ಅಶೋಕ್ ಕಿಡಿ

ಬೆಂಗಳೂರು: ಅಡ್ಡ ಮತದಾನ ಮಾಡಿಸುವಲ್ಲೇ ಬಿಜಿಯಾಗಿರುವ ಈ ಅಡ್ಡ ಕಸುಬಿ ಕಾಂಗ್ರೆಸ್ ಸರಕಾರದಲ್ಲಿ ಆಡಳಿತ ಸಂಪೂರ್ಣ ಮುಳುಗಿ ಹೋಗಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ಮಾಡಿದ್ದಾರೆ.

ವಿಜಯ ಕರ್ನಾಟಕದಲ್ಲಿ ಪ್ರಕಟವಾದ 'ಹೊಸ ಅಡ್ಮಿಷನ್‌ಗೆ ಪಠ್ಯ ಪುಸ್ತಕ ಪ್ರಾಬ್ಲಂ' ಶೀರ್ಷಿಕೆಯ ವಿಶೇಷ ವರದಿಯನ್ನು ಎಕ್ಸ್‌ನಲ್ಲಿ ಹಂಚಿಕೊಂಡಿರುವ ಅವರು, ''ಪ್ರತಿಪಕ್ಷದ ಶಾಸಕರಿಗೆ ಆಮಿಷ ಒಡ್ಡಿ, ಅಡ್ಡ ಮತದಾನ ಮಾಡಿಸುವ ರಾಜಕೀಯ ಸರ್ಕಸ್‌ನಲ್ಲಿ ದಿನಪೂರ್ತಿ ಮುಳುಗಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ನಿಮ್ಮ ಈ ಅಡ್ಡಕಸುಬಿ ಆಡಳಿತದಿಂದಾಗಿ ರಾಜ್ಯದ ಶಾಲಾ ಮಕ್ಕಳ ಭವಿಷ್ಯ ಡೋಲಾಯಮಾನವಾಗಿದೆ. ಶೈಕ್ಷಣಿಕ ವರ್ಷ ಆರಂಭವಾಗಿ ತಿಂಗಳು ಕಳೆಯುತ್ತಾ ಬಂದರೂ ಸರಕಾರಿ ಶಾಲೆಗಳತ್ತ ಕಣ್ಣೆತ್ತಿ ನೋಡುವ ವ್ಯವಧಾನವೂ ಸರಕಾರಕ್ಕಿಲ್ಲ. ದಿನಬೆಳಗಾದರೆ ಕುರ್ಚಿ ಉಳಿಸಿಕೊಳ್ಳುವಲ್ಲೇ ತಾವು ಮುಳುಗಿದ್ದರೆ, ಇತ್ತ ಬಡವರ ಮಕ್ಕಳು ಸರಕಾರಿ ಶಾಲೆಗಳಲ್ಲಿ ಕನಿಷ್ಠ ಸೌಲಭ್ಯಗಳೂ ಇಲ್ಲದೆ ಪರದಾಡುತ್ತಿದ್ದಾರೆ,'' ಎಂದು ಕಿಡಿಕಾರಿದ್ದಾರೆ.

''ಶಾಲೆಗಳು ಆರಂಭವಾಗಿ 20 ದಿನವಾದರೂ ಹೊಸದಾಗಿ ದಾಖಲಾದ ಬಡ ವಿದ್ಯಾರ್ಥಿಗಳಿಗೆ ಕನಿಷ್ಠ ಪಠ್ಯಪುಸ್ತಕಗಳನ್ನು ವಿತರಿಸಲು ನಿಮ್ಮ ಇಲಾಖೆಗೆ ಸಾಧ್ಯವಾಗಿಲ್ಲ. ಇನ್ನೂ ಕೆಲವು ಪುಸ್ತಕಗಳು ಮುದ್ರಣದ ಹಂತದಲ್ಲಿವೆ ಎಂದರೆ ನಿಮ್ಮ ಸರಕಾರದ ಸಿದ್ಧತೆ ಎಷ್ಟು ದರಿದ್ರವಾಗಿದೆ ಎಂಬುದು ಅರ್ಥವಾಗುತ್ತದೆ,'' ಎಂದು ದೂರಿದರು.

ಗ್ರಾಮೀಣ ಸಾರಿಗೆಗೆ 620 ಹೊಸ ಬಸ್

■ ವಿಕ ಸುದ್ದಿಲೋಕ ಬೆಂಗಳೂರು

ಗ್ರಾಮೀಣ ಸಾರಿಗೆ ವ್ಯವಸ್ಥೆಗೆ ಬಲತುಂಬುವ ಕ್ರಮವಾಗಿ ಒಟ್ಟು 235 ಕೋಟಿ ರೂ. ವೆಚ್ಚದಲ್ಲಿ 620 ಹೊಸ ಬಸ್‌ಗಳನ್ನು ಖರೀದಿ ಮಾಡಲು ಸಿಎಂ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿತು.

ಹೊಸ ಬಿಎಸ್-6 ಪೂರ್ಣ ನಿರ್ಮಿತ ಗ್ರಾಮೀಣ ಬಸ್‌ಗಳನ್ನು ಖರೀದಿ ಮಾಡಲಾಗುತ್ತಿದ್ದು, ಈ ಪೈಕಿ 220 ಹೊಸ ಬಸ್‌ಗಳನ್ನು ವಾಯುವ್ಯ ಸಾರಿಗೆ ಸಂಸ್ಥೆಗೆ ನೀಡಲಾಗುತ್ತಿದೆ. ಇನ್ನುಳಿದ 400 ಹೊಸ ಬಸ್‌ಗಳು ಕೆಎಸ್ಆರ್‌ಟಿಸಿಗೆ ಸೇರ್ಪಡೆಯಾಗಲಿವೆ ಎಂದು ಸಂಪುಟ ಸಭೆ ಬಳಿಕ ಸಿಎಂ ಡಿಕೆಶಿ ತಿಳಿಸಿದರು.

ರೈತರಿಗೆ ಆಫರ್ ವಿಸ್ತರಣೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ಒಟ್ಟು 1,777 ಎಕರೆ ಭೂಮಿಯನ್ನು ಡಿಫೆನ್ಸ್ ಪಾರ್ಕ್ ನಿರ್ಮಾಣಕ್ಕಾಗಿ ಸ್ವಾಧೀನ ಮಾಡಿಕೊಳ್ಳುವ ಕ್ರಮಕ್ಕೆ ರೈತರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಹಾಗಾಗಿ, ಕೃಷಿಗೆ ಮಾತ್ರ ಬಳಕೆ ಮಾಡಬೇಕು ಎಂಬ ಷರತ್ತಿನ ಮೇಲೆ ಭೂಮಿ ಕೈಬಿಡಲಾಗಿತ್ತು. ಆದರೆ, ಬಹಳಷ್ಟು ರೈತರು ಸರಕಾರ ನಿಗದಿಪಡಿಸಿರುವ ಪರಿಹಾರ ಒಪ್ಪಿ ಕೆಐಎಡಿಬಿಗೆ ಭೂಮಿ ಬಿಟ್ಟುಕೊಡಲು ಮುಂದಾಗಿದ್ದರು. ಇಂತಹ ಆಸಕ್ತ ರೈತರಿಗೆ ಅಕ್ಟೋಬರ್ 31,2026 ರವರೆಗೆ ಕಾಲಾವಕಾಶವನ್ನು ವಿಸ್ತರಣೆ ಮಾಡಲು ಕ್ಯಾಬಿನೆಟ್ ನಿರ್ಧರಿಸಿತು.

ಸಿಎಂಗೆ ಅಧಿಕಾರ: ವಿಧಾನ ಪರಿಷತ್‌ನಲ್ಲಿ ಜುಲೈನಲ್ಲಿ ತೆರವಾಗಲಿರುವ ಐದು ಸದಸ್ಯ ಸ್ಥಾನಗಳಿಗೆ ನಾಮನಿರ್ದೇಶನ ಮಾಡಬೇಕಿದ್ದು, ಈ ಸಂಬಂಧ ಅರ್ಹರನ್ನು ಪಟ್ಟಿ ಮಾಡಿ ರಾಜ್ಯಪಾಲರಿಗೆ ಶಿಫಾರಸು ಮಾಡಲು ಸಿಎಂಗೆ ಸಂಪುಟ ಅಧಿಕಾರ ನೀಡಿತು. ಸಚಿವ ಸಂಪುಟ ಉಪಸಮಿತಿಗಳನ್ನು ಪುನಾರಚನೆ ಮಾಡಲೂ ಕ್ಯಾಬಿನೆಟ್ ಸಿಎಂಗೆ ಅಧಿಕಾರ ನೀಡಿತು.

- ಬೆಂಗಳೂರು ವೈದ್ಯಕೀಯ ಕಾಲೇಜಿಗೆ (ಬಿಎಂಸಿ) 60 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಉಪಕರಣ ಖರೀದಿ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ.
- ಪಿಎಂ ಇ-ಬಸ್ ಸೇವಾ ಯೋಜನೆಯಡಿ ಕೆಎಸ್ಆರ್‌ಟಿಸಿ, ವಾಯುವ್ಯ ಮತ್ತು ಈಶಾನ್ಯ ಸಾರಿಗೆ ಈ ಮೂರು ನಿಗಮಗಳ ವ್ಯಾಪ್ತಿಯ 10 ನಗರಗಳ ಒಟ್ಟು 11 ಸ್ಥಳಗಳಲ್ಲಿ ಎಲೆಕ್ಟ್ರಿಕ್ ಬಸ್ ಘಟಕಗಳನ್ನು 112 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡುವ ಪ್ರಸ್ತಾವನೆಗೆ ಸಂಪುಟ ಅನುಮೋದನೆ ನೀಡಿತು.
- ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ 100 ಕೋಟಿ ವೆಚ್ಚದಲ್ಲಿ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಕಲಬೆರಕೆ ಹಾಲು ಪತ್ತೆಗೆ ಪರೀಕ್ಷೆ ತೀವ್ರ

■ ವಿಕ ಸುದ್ದಿಲೋಕ ಬೆಂಗಳೂರು

ಹೊರ ರಾಜ್ಯಗಳಿಂದ ರಾಜ್ಯಕ್ಕೆ ಪೂರೈಕೆಯಾಗುವ ಹಾಲು ಕಲಬೆರಕೆಯಾಗಿದೆಯೇ ಹಾಗೂ ಗುಣಮಟ್ಟ ಹೇಗಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಗಡಿಭಾಗಗಳಿಂದ ಹಾಲಿನ ಮಾದರಿಗಳನ್ನು ಸಂಗ್ರಹಿಸಿ ತಪಾಸಣೆಗೆ ಒಳಪಡಿಸಲಾಗುತ್ತಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಈ ಕುರಿತು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಇಲಾಖೆಯ ಅಧಿಕಾರಿಗಳು ಹೊಸೂರು, ಚಾಮರಾಜನಗರ ಹಾಗೂ ಮೈಸೂರು ಸೇರಿ ಹಲವೆಡೆ ಗಡಿಭಾಗಗಳಲ್ಲೇ ಹಾಲಿನ ಗುಣಮಟ್ಟ ಪರಿಶೀಲಿಸುತ್ತಿದ್ದಾರೆ. ಖಾಸಗಿ ಒಡೆತನದ ಹಾಲಿನ ಟ್ಯಾಂಕರ್‌ಗಳು, ದೊಡ್ಲಾ ಸೇರಿದಂತೆ ನಾನಾ ಕಂಪನಿಗಳ ಹಾಲಿನ ಟ್ಯಾಂಕರ್‌ಗಳಿಂದ ಮಾದರಿ ಸಂಗ್ರಹಿಸಿ, ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಹೊರ ರಾಜ್ಯಗಳಿಂದ ಕಲಬೆರಕೆ ಹಾಲು ಪೂರೈಕೆಯಾಗುತ್ತಿರುವ ದೂರುಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ,'' ಎಂದು ಹೇಳಿದರು.

''ಹೊರ ರಾಜ್ಯದಿಂದ ಬರುವ ಹಾಲಿನಲ್ಲಿ ಕಲಬೆರಕೆ ಅಥವಾ ಜನರ ಆರೋಗ್ಯಕ್ಕೆ ಮಾರಕವಾಗುವ ಅಂಶಗಳು ಕಂಡು ಬಂದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ನಮ್ಮಲ್ಲಿ ನಂದಿನಿ ಹಾಲು ಸಾಕಷ್ಟು ಲಭ್ಯವಿದೆ. ಆದರೂ, ತಮಿಳುನಾಡಿನ ಕೃಷ್ಣಗಿರಿ ಸೇರಿದಂತೆ ಇತರೆ ಪ್ರದೇಶಗಳಿಂದ ಹಾಲು ಪೂರೈಕೆಯಾಗುತ್ತಿದೆ. ಹೀಗಾಗಿ ಹೊರ ರಾಜ್ಯಗಳಿಂದ ಬರುವ ಹಾಲು ಗುಣಮಟ್ಟದಿಂದ ಕೂಡಿದೆಯೇ ಎಂಬುದನ್ನು ಪರಿಶೀಲಿಸುವುದು ನಮ್ಮ ಜವಾಬ್ದಾರಿ,'' ಎಂದು ತಿಳಿಸಿದರು.

''ಹಾಗೆಯೇ, ಆಹಾರ ಪದಾರ್ಥಗಳಾದ ಶವರ್ಮಾ, ಕಬಾಬ್, ಗೋಬಿ ಸೇರಿ ಇತರೆ ಆಹಾರಗಳಲ್ಲಿ ಹೋಟೆಲ್‌ಗಳು ಅಪಾಯಕಾರಿ ರಾಸಾಯನಿಕ ಮಿಶ್ರಣ ಮಾಡಿರುವುದು ಕಂಡುಬಂದರೆ, ಕಠಿಣ ಕ್ರಮ ಕೈಗೊಳ್ಳಲಾಗುವುದು,'' ಎಂದು ಎಚ್ಚರಿಕೆ ನೀಡಿದರು.

''ಜನೌಷಧಿ ಕೇಂದ್ರದ ಮೇಲೆ ಅಧಿಕಾರಿಗಳು ದಾಳಿ ನಡೆಸಿಲ್ಲ, ಬದಲಿಗೆ ಪರಿಶೀಲನೆಯಷ್ಟೇ ಮಾಡಿದ್ದಾರೆ. ಔಷಧಿಯ ಗುಣಮಟ್ಟ ಪರೀಕ್ಷಿಸಿದ್ದಾರೆ. ಜನೌಷಧಿ ಕೇಂದ್ರಗಳಲ್ಲಿ ಔಷಧ ಹೊರತುಪಡಿಸಿ, ಬೇರೆ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವ ದೂರುಗಳಿವೆ. ಜನೌಷಧ ಮಳಿಗೆಯ ಮಾಲೀಕರು ಯಾವುದೇ ತಪ್ಪು ಮಾಡದಿದ್ದರೆ, ಆತಂಕಪಡಬೇಕಾದ ಅಗತ್ಯವಿಲ್ಲ,'' ಎಂದು ಹೇಳಿದರು

ಕ್ಯಾಬಿನೆಟ್ ಮಹತ್ವದ ನಿರ್ಧಾರ | ನಿವೃತ್ತ ಐಎಎಸ್,ಐಪಿಎಸ್ ಅಧಿಕಾರಿಗಳ ತಂಡ ರಚನೆಗೆ ನಿರ್ಧಾರ

ರಾಜಧಾನಿ ದಿಲ್ಲಿಯಲ್ಲಿ ರಾಜ್ಯದ ಹಿತಕ್ಕೆ ವೇದಿಕೆ ಬಲ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಹಿತಾಸಕ್ತಿ ಕಾಯಲು ದಿಲ್ಲಿಯಲ್ಲಿ ರಾಜ್ಯದ ನೌಕರಶಾಹಿ ವ್ಯವಸ್ಥೆಯನ್ನು ಬಲಪಡಿಸಿ, ಕಾನೂನು ವಿಭಾಗವನ್ನು ಸದೃಢ ಮಾಡಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಕೇಂದ್ರ ಸರಕಾರದ ನಾನಾ ಯೋಜನೆಗಳಡಿ ಸಕಾಲಿಕ ಮತ್ತು ಸಮರ್ಪಕ ಅನುದಾನ ಪಡೆಯುವುದು, ಕಾನೂನು ಹೋರಾಟಗಳಲ್ಲಿ ರಾಜ್ಯದ ಹಿತಾಸಕ್ತಿ ಕಾಪಾಡುವುದು ಸೇರಿ ರಾಷ್ಟ್ರ ರಾಜಧಾನಿಯಲ್ಲಿ ರಾಜ್ಯದ ಕೆಲಸಗಳ ನಿರ್ವಹಣೆಗಾಗಿ ಪರಿಣಾಮಕಾರಿ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ''ದಿಲ್ಲಿಯಲ್ಲಿನ ನಮ್ಮ ನಿವಾಸಿ ಆಯುಕ್ತ ಕಚೇರಿಯ ಕಾರ್ಯನಿರ್ವಹಣೆ ಬಗ್ಗೆ ಸಮಾಧಾನ ಇಲ್ಲ. ಹಾಗಾಗಿ, ರಾಜ್ಯದ ಪರ ಪರಿಣಾಮಕಾರಿಯಾಗಿ ಕೆಲಸ ಮಾಡಲು ಪ್ರತ್ಯೇಕ ಅಧಿಕಾರಿಗಳ ತಂಡವೊಂದನ್ನು ರಚಿಸಲು ತೀರ್ಮಾನಿಸಲಾಗಿದೆ. ಇತ್ತೀಚೆಗೆ ದಿಲ್ಲಿಯಲ್ಲಿ ತಾವು ಆಯೋಜಿಸಿದ್ದ ರಾಜ್ಯದ ಹಿರಿಯ ಅಧಿಕಾರಿಗಳ ಡಿನ್ನರ್ ಮೀಟಿಂಗ್‌ನಲ್ಲಿ ವ್ಯಕ್ತವಾದ ಅಭಿಪ್ರಾಯ ಮತ್ತು ಸಲಹೆಗಳನ್ನು ಆಧರಿಸಿ ಈ ನಿರ್ಧಾರ ಮಾಡಲಾಗಿದೆ,'' ಎಂದು ತಿಳಿಸಿದರು.

ನಿವೃತ್ತ ಅಧಿಕಾರಿಗಳಿಗೆ ಅವಕಾಶ: ''ಕೇಂದ್ರ ಸರಕಾರದ ನಾನಾ ಯೋಜನೆಗಳನ್ನು ಕರ್ನಾಟಕಕ್ಕೆ ತರಲು ಅಧಿಕಾರಿಗಳ ತಂಡವನ್ನು ನಿಯೋಜನೆ ಮಾಡಲಾಗುತ್ತಿದೆ. ಕೇಂದ್ರದ ಯೋಜನೆಗಳನ್ನು ರಾಜ್ಯಕ್ಕೆ ತರುವುದು ಹೇಗೆ? ಯಾವ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕು. ತಮಿಳುನಾಡು, ಆಂಧ್ರಪ್ರದೇಶ, ಗುಜರಾತ್ ಸೇರಿದಂತೆ ನಾನಾ ರಾಜ್ಯಗಳು ಯಾವ ಯೋಜನೆಗಳನ್ನು ತೆಗೆದುಕೊಂಡು ಹೋಗುತ್ತಿವೆ. ಅವುಗಳನ್ನು ರಾಜ್ಯಕ್ಕೂ ತರುವ ನಿಟ್ಟಿನಲ್ಲಿ ಈ ತಂಡವು ಪರಿಣಾಮಕಾರಿಯಾಗಿ ಕೆಲಸ ಮಾಡಲಿದೆ,'' ಎಂದು ಹೇಳಿದರು.

''ಈ ಉದ್ದೇಶಕ್ಕಾಗಿ ನಿವೃತ್ತ ಐದಾರು ಮಂದಿ ಐಎಎಸ್, ಐಪಿಎಸ್ ಮತ್ತಿತರ ರಾಜ್ಯದ ಕೇಂದ್ರ ನಾಗರಿಕ ಸೇವಾ ಅಧಿಕಾರಿಗಳ ತಂಡವನ್ನು ರಚಿಸಲಾಗುತ್ತಿದೆ. ತಮ್ಮ ಮುಂದಿನ ದಿಲ್ಲಿ ಭೇಟಿ ವೇಳೆ ಆಸಕ್ತ ನಿವೃತ್ತ ಅಧಿಕಾರಿಗಳನ್ನು ಈ ಕೆಲಸಕ್ಕೆ ನಿಯೋಜನೆ ಮಾಡಲು ತೀರ್ಮಾನಿಸಿದ್ದೇನೆ,'' ಎಂದು ತಿಳಿಸಿದರು.

ಲೀಗಲ್ ಟೀಂಗೆ ಬಲ: ''ಸುಪ್ರೀಂಕೋರ್ಟ್‌ನಲ್ಲಿ ರಾಜ್ಯಕ್ಕೆ ಸಂಬಂಧಿಸಿದ ನಾನಾ ಪ್ರಕರಣಗಳ ಪರಿಣಾಮಕಾರಿ ನಿರ್ವಹಣೆ ಹಾಗೂ ತ್ವರಿತ ಇತ್ಯರ್ಥಕ್ಕೆ ಕ್ರಮ ವಹಿಸಲು ಸಾಧ್ಯವಾಗುವಂತೆ ದಿಲ್ಲಿಯಲ್ಲಿನ ರಾಜ್ಯ ಪರ ವಕೀಲರ ತಂಡವನ್ನು (ಕಾನೂನು ವಿಭಾಗ) ಸದೃಢಗೊಳಿಸಲಾಗುವುದು,'' ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ದಿಲ್ಲಿಯಲ್ಲಿ ಹಾಸ್ಟೆಲ್: ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು (ಕೋಚಿಂಗ್) ದಿಲ್ಲಿಗೆ ತೆರಳುವ ರಾಜ್ಯದ ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ಸುಸಜ್ಜಿತ 'ಕರ್ನಾಟಕ ಭವನ-4' ಕಟ್ಟಡ ನಿರ್ಮಾಣ ಮಾಡುವ 80 ಕೋಟಿ ರೂ. ಮೊತ್ತದ ಪ್ರಸ್ತಾವನೆಗೆ ಕ್ಯಾಬಿನೆಟ್ ಒಪ್ಪಿಗೆ ನೀಡಿದೆ.

''ಕೋಚಿಂಗ್‌ಗಾಗಿ ದಿಲ್ಲಿಗೆ ತೆರಳುವ ರಾಜ್ಯದ ವಿದ್ಯಾರ್ಥಿಗಳಿಗೆ ಒಂದೇ ಸೂರಿನಡಿ ಎಲ್ಲಾ ಅನುಕೂಲ ದೊರೆಯಬೇಕು. ಅದಕ್ಕಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ ಈ ಕಟ್ಟಡ ನಿರ್ಮಾಣ ಮಾಡಲಾಗುವುದು. ಈ ಉದ್ದೇಶಕ್ಕೆ 80 ಕೋಟಿ ರೂ. ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ,'' ಎಂದರು.

- ರಾಜ್ಯದ ಲೀಗಲ್ ಟೀಂ ಸದೃಢಗೊಳಿಸಲು ನಿರ್ಧಾರ
- ಸ್ಪರ್ಧಾತ್ಮಕ ಪರೀಕ್ಷೆ ಕೋಚಿಂಗ್ ಮಕ್ಕಳಿಗೆ ದಿಲ್ಲಿಯಲ್ಲಿ ಹಾಸ್ಟೆಲ್



KEA

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ವೆಬ್‌ಸೈಟ್: http://cetonline.karnataka.gov.in/kea/ ಇ-ಮೇಲ್:keauthority-ka@nic.in

ಸಂಖ್ಯೆ: ಇಡಿ/ಕೆಇಎ/ನೇ.ವಿ/13/2026 | ದಿನಾಂಕ:20-06-2026

ಅಧಿಸೂಚನೆ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದದ 1421 ಮತ್ತು ಸ್ಥಳೀಯ ವೃಂದದ 179 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್ / ಡಿಎಆರ್) ಹುದ್ದೆಗಳ ನೇರ ನೇಮಕಾತಿ

ಕರ್ನಾಟಕ ರಾಜ್ಯ ಪೊಲೀಸ್ ಲಿಪಿಕ ನೌಕರರ ಸೇವೆಗಳು ಸೇರಿದಂತೆ (ನೇಮಕಾತಿ) ನಿಯಮ 2004 ಮತ್ತು ಅದರ (ತಿದ್ದುಪಡಿ) ನಿಯಮಗಳು 2009, 2014, 2016 ಮತ್ತು ಸರ್ಕಾರದ ಆದೇಶ ಸಂಖ್ಯೆ **ಹೆಚ್‌ಡಿ 44 ಪಿಪಿಎ 2026 ದಿನಾಂಕ:13.04.2026** ರಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ವೃಂದದ ಹುದ್ದೆಗಳ ನೇರ ನೇಮಕಾತಿಯಲ್ಲಿನ ವಿಧಾನ ಮತ್ತು ಅರ್ಹತೆಯನ್ನು ಪರಿಷ್ಕರಿಸಿದನ್ವಯ ಹಾಗೂ ಪ್ರಚಲಿತ ನೇಮಕಾತಿ ನಿಯಮಗಳ ಪ್ರಕಾರ ಕರ್ನಾಟಕ ರಾಜ್ಯದ, ಪೊಲೀಸ್ ಇಲಾಖೆಯಲ್ಲಿ **ಮಿಕ್ಕುಳಿದ ವೃಂದದಲ್ಲಿ** ಖಾಲಿ ಇರುವ 1421 (ಆರ್‌ಪಿಸಿ) ಮತ್ತು **ಸ್ಥಳೀಯ ವೃಂದದಲ್ಲಿ ಖಾಲಿ ಇರುವ** 179 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ **(ಸಿಎಆರ್ / ಡಿಎಆರ್)** ಖಾಲಿ ಹುದ್ದೆಗಳ ನೇರ ನೇಮಕಾತಿಗಾಗಿ ಲಿಖಿತ ಪರೀಕ್ಷೆಯನ್ನು ನಡೆಸಿಕೊಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಪೊಲೀಸ್ ಇಲಾಖೆಯವರು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಮಿಕ್ಕುಳಿದ ವೃಂದ ಮತ್ತು ಸ್ಥಳೀಯ ವೃಂದದ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ **(ಸಿಎಆರ್ / ಡಿಎಆರ್)** ಹುದ್ದೆಗಳಿಗೆ ಪ್ರತ್ಯೇಕವಾಗಿ ಅರ್ಜಿಯನ್ನು ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಕೆಇಎ ನಡೆಸುವ ಲಿಖಿತ ಪರೀಕ್ಷೆಗೆ ಹಾಜರಾಗಬೇಕು.

a) ಹುದ್ದೆಗಳ ವಿವರ:

ಕ್ರ.ಸಂ	ಹುದ್ದೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ	
		ಪುರುಷ	ಪುರುಷ
		ಮಿಕ್ಕುಳಿದ ವೃಂದ	ಸ್ಥಳೀಯ ವೃಂದ
01	ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್)	1421	179

b) ವೇತನ ಶ್ರೇಣಿ: ರೂ. 37500-900-39300-1000-43300-1125-47800-1250-52800-1375-58300-1500-64300-1650-74200-1900-76100

c) ಪಿಂಚಣಿ ಸೌಲಭ್ಯ: ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31.03.2006 ರಂತೆ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಸೌಲಭ್ಯ ಅನ್ವಯವಾಗುವುದು.

d) ಶೈಕ್ಷಣಿಕ ವಿದ್ಯಾರ್ಹತೆ – ಪಿ.ಯು.ಸಿ., ಅಥವಾ ತತ್ಸಮಾನ ವಿದ್ಯಾರ್ಹತೆ.

e) ಆನ್‌ಲೈನ್ ಅರ್ಜಿ ಸಲ್ಲಿಸಲು ವೇಳಾಪಟ್ಟಿ: ಅಭ್ಯರ್ಥಿಗಳು ONLINE ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿ ತಿಳಿದುಕೊಳ್ಳತಕ್ಕದ್ದು.

i	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	22-06-2026
ii	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	22-07-2026
iii	ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	24-07-2026

f) ಲಿಖಿತ ಪರೀಕ್ಷೆಯ ವೇಳಾಪಟ್ಟಿ:

ದಿನಾಂಕ / ದಿನ	ವೃಂದ	ಸಮಯ	ವಿಷಯ	ಒಟ್ಟು ಪ್ರಶ್ನೆಗಳು	ಒಟ್ಟು ಅಂಕಗಳು	ಗಂಟೆ / ಅವಧಿ
06-09-2026 ಭಾನುವಾರ	ಮಿಕ್ಕುಳಿದ ವೃಂದ	ಬೆಳಿಗ್ಗೆ 10.30 ರಿಂದ 12.00 ರವರೆಗೆ	ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಭಾರತದ ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಮಾನಸಿಕ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ಒಳಗೊಂಡ ಸಾಮಾನ್ಯ ಅಧ್ಯಯನ.	100	100	1½ ಗಂಟೆ (90 ನಿಮಿಷಗಳು)
06-09-2026 ಭಾನುವಾರ	ಸ್ಥಳೀಯ ವೃಂದ	ಮಧ್ಯಾಹ್ನ 2.30 ರಿಂದ 04.00 ರವರೆಗೆ		100	100	1½ ಗಂಟೆ (90 ನಿಮಿಷಗಳು)

ಋಣಾತ್ಮಕ ಮೌಲ್ಯಮಾಪನ (Negative Valuation):

- ಲಿಖಿತ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿನ ಪ್ರತಿಯೊಂದು ಪ್ರಶ್ನೆಗೂ 04 ಪರ್ಯಾಯ ಉತ್ತರಗಳಿದ್ದು, ಅಭ್ಯರ್ಥಿಯು ಯಾವುದಾದರೂ ಒಂದು ಸರಿ ಉತ್ತರವನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಪ್ರತಿ ತಪ್ಪು ಉತ್ತರಕ್ಕೆ ನಾಲ್ಕನೇ ಒಂದಂಶ ದಷ್ಟು **0.25** ಅಂಕಗಳನ್ನು ಕಳೆಯಲಾಗುವುದು.
- ಒ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ 5ನೇ ಆಯ್ಕೆ / ವೃತ್ತವನ್ನು ನೀಡಿದ್ದು, ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ಆಯ್ಕೆ / ವೃತ್ತವನ್ನು ಶೇಡ್ ಮಾಡಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿಯಾಗಿ **ಐದು ನಿಮಿಷಗಳನ್ನು** ನೀಡಲಾಗುವುದು. ಯಾವುದೇ ಆಯ್ಕೆಯನ್ನು / ವೃತ್ತವನ್ನು ಶೇಡ್ ಮಾಡಿಲ್ಲದಿದ್ದರೆ, ಪ್ರತಿ ಪ್ರಶ್ನೆಗೆ 0.25 ಅಂಕಗಳನ್ನು ಕಡಿತಗೊಳಿಸಲಾಗುತ್ತದೆ.

ಗಮನಿಸಿ:

ಎ. ವಯೋಮಿತಿ, ಪಿಂಚಣಿ ಸೌಲಭ್ಯ, ಶೈಕ್ಷಣಿಕ ಅರ್ಹತೆ, ಶುಲ್ಕ ಪಾವತಿ, ಲಿಖಿತ ಪರೀಕ್ಷೆಯ ವಿಧಾನ, ದೇಹದಾರ್ಢ್ಯತೆ ಪರೀಕ್ಷೆ, ಸಹಿಷ್ಣುತೆ ಪರೀಕ್ಷೆ, ಅರ್ಹತಾ ಷರತ್ತುಗಳು, ನೇಮಕಾತಿ ವಿಧಾನ ಮುಂತಾದ ಮಾಹಿತಿ ಮತ್ತು ಸೂಚನೆಗಳಿಗಾಗಿ ಅಭ್ಯರ್ಥಿಗಳು ಕೆಇಎ ಮತ್ತು ಪೊಲೀಸ್ ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಿರುವ ವಿವರವಾದ ಅಧಿಸೂಚನೆಯನ್ನು ನೋಡುವುದು.

ಬಿ. ನೇಮಕಾತಿಯ ಎಲ್ಲಾ ಪ್ರಕ್ರಿಯೆಗಳು ಕಾಲಕಾಲಕ್ಕೆ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರಗಳು ಹೊರಡಿಸಿರುವ / ಹೊರಡಿಸುವ ಆದೇಶಗಳು ಮತ್ತು ಪ್ರಚಲಿತ ನಿಯಮಗಳಿಗೆ ಒಳಪಟ್ಟಿರುತ್ತದೆ.

ಸಹಿ/- (ಹೆಚ್. ಪ್ರಸನ್ನ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/1290/2026-27

ಅನುದಾನ, ಜಿಟಿಡಿಯಿಂದ ಸಿಎಂ ಭೇಟಿ

■ ವಿಕ ಸುದ್ದಿಲೋಕ ಬೆಂಗಳೂರು

ಪರಿಷತ್ ಚುನಾವಣೆಯಲ್ಲಿ ಕೆಲ ಶಾಸಕರ ಅಡ್ಡ ಮತದಾನದಿಂದ ಬಿಜೆಪಿ, ಜೆಡಿಎಸ್ ಮುಜುಗರಕ್ಕೆ ಒಳಗಾಗಿರುವ ವಿಚಾರದ ಚರ್ಚೆ ನಡೆದಿರುವ ಹೊತ್ತಿನಲ್ಲೇ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನಕ್ಕಾಗಿ ಮನವಿ ಮಾಡಿರುವುದು ಗಮನ ಸೆಳೆದಿದೆ.

ಸಿಎಂ ಭೇಟಿ ಬಳಿಕ ಪ್ರತಿಕ್ರಿಯಿಸಿದ ಜಿ.ಟಿ.ದೇವೇಗೌಡ, ''ಸಿಎಂರನ್ನು ಮೊದಲ ಬಾರಿಗೆ ಭೇಟಿಯಾಗಿ ನಮ್ಮ ಕ್ಷೇತ್ರಕ್ಕೆ ಅನುದಾನ ಯಾವಾಗ ನೀಡುತ್ತೀರಿ ಎಂಬುದಾಗಿ ಕೇಳಿದ್ದೇನೆ,'' ಎಂದರು.

ಜೆಡಿಎಸ್‌ನ ಶಾಸಕರೊಬ್ಬರು ಈಗಾಗಲೇ ಕಾಲು ಹೊರಗಿಟ್ಟಿದ್ದಾರೆ ಎಂಬ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ''ಎಲ್ಲ ಅವರೇ ಹೇಳಿದ್ದಾರಂತೆ. ನಾನು ಇನ್ನೂ ನೋಡಿಲ್ಲ. ನಾನು ಆತ್ಮಸಾಕ್ಷಿ ಮತದಾನ ಮಾಡಿದ್ದೇನೆ,'' ಎಂದು ಪುನರುಚ್ಚರಿಸಿದರು.

ಮುಂದಿನ ಬಾರಿಯೂ ಜೆಡಿಎಸ್‌ನಿಂದಲೇ ಸ್ಪರ್ಧಿಸುವಿರಾ ಎಂಬ ಪ್ರಶ್ನೆಗೆ, ''ಇನ್ನೂ ಎರಡು ವರ್ಷ ಇದೆ,'' ಎಂದಷ್ಟೇ ತಿಳಿಸಿದರು.

ಎಂಇಎಸ್ ರ‍್ಯಾಲಿಗೆ ಅನುಮತಿ ನಿರಾಕರಣೆ

ಬೆಳಗಾವಿ: ಬೆಳಗಾವಿಯಲ್ಲಿ ಕನ್ನಡ ಕಡ್ಡಾಯ ವಿರೋಧಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ಮುಖಂಡರು ಜೂ. 22ರಂದು ಹಮ್ಮಿಕೊಳ್ಳಲು ಯೋಜಿಸಿದ್ದ ರ‍್ಯಾಲಿಗೆ ನಗರ ಪೊಲೀಸ್ ಆಯುಕ್ತ ಭೂಷಣ ಬೊರಸೆ ಅನುಮತಿ ನಿರಾಕರಿಸಿದ್ದಾರೆ. ಎಂಇಎಸ್ ಮುಖಂಡರು ನಗರದ ಸಂಭಾಜಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಲು ಅನುಮತಿ ಕೋರಿ ಮನವಿ ಸಲ್ಲಿಸಿದ್ದರು. ಆದರೆ, ಈ ರ‍್ಯಾಲಿಯಿಂದ ಸಂವೇದನಾಶೀಲತೆ ಹೆಚ್ಚಾಗಿ, ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಯ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಕುಮಾರಸ್ವಾಮಿಯೇ ಬಿಡದಿ ಟೌನ್‌ಶಿಪ್ ಪಿತಾಮಹ

ಎಚ್ಡಿಕೆ ಪ್ರತಿರೋಧಕ್ಕೆ ಡಿಕೆಶಿ ತಿರುಗೇಟು

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆಗೆ ಕುಮಾರಸ್ವಾಮಿ ಅವರೇ ಪಿತಾಮಹ. ಕುಮಾರಸ್ವಾಮಿ ಜನ್ಮನೀಡಿದ್ದ ಕೂಸನ್ನು ಯಡಿಯೂರಪ್ಪ ಬೆಳೆಸಿದ್ದರು ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಬಿಡದಿ ಭಾಗದ ರೈತರು ನಿಜಕ್ಕೂ ಒಳ್ಳೆಯವರು. ರಾಜ್ಯ ಸರಕಾರ ನಿಗದಿಪಡಿಸಿರುವ ದೊಡ್ಡ ಮೊತ್ತದ ಪರಿಹಾರಕ್ಕೆ ಖುಷಿಯಾಗಿದ್ದಾರೆ. ಆದರೆ, ರೈತರನ್ನು ದಾರಿ ತಪ್ಪಿಸಲಾಗುತ್ತಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

''ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಟೌನ್‌ಶಿಪ್‌ಗೆ ಜಮೀನು ನೋಟಿಫೈ ಮಾಡಿಸಿದ್ದರು. ಯಡಿಯೂರಪ್ಪ ಅವರು ಅಧಿಕಾರದಲ್ಲಿದ್ದಾಗ ಈ ಯೋಜನೆ ಮುಂದುವರೆಸಿದ್ದರು. ಅದನ್ನು ನಾವು ಇನ್ನಷ್ಟು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆಯೇ ಹೊರತು, ಹೊಸದಾಗಿ ಏನೂ ಮಾಡುತ್ತಿಲ್ಲ. ಬಿಡದಿ ಕೈಗಾರಿಕಾ ಪ್ರದೇಶಕ್ಕೆ ಭೂ ಸ್ವಾಧೀನ ಮಾಡಿದವರು ಯಾರು,'' ಎಂದು ಪ್ರಶ್ನಿಸಿದರು.

''ಕುಮಾರಸ್ವಾಮಿ ಅವಧಿಯಲ್ಲಿ ನೋಟಿಫೈ ಆದ ಆ ಜಮೀನನ್ನು ನಾನು ಡಿನೋಟಿಫೈ ಮಾಡಿ ಜೈಲಿಗೆ ಹೋಗಲು ಸಿದ್ಧನಿಲ್ಲ. ಅವರು ಅಂದು ರೈತರಿಗೆ ಪರಿಹಾರವಾಗಿ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇ.40 ಕೊಡುತ್ತೇನೆ ಎಂದು ಹೇಳಿದ್ದರು. ನಮ್ಮ ಸರಕಾರ ಶೇ.50 ರಷ್ಟು ಅಭಿವೃದ್ಧಿಪಡಿಸಿದ ಭೂಮಿಯನ್ನು ಪರಿಹಾರವಾಗಿ ನೀಡುತ್ತಿದ್ದೇವೆ. ನಗದು ಪರಿಹಾರ ಬಯಸಿದ ರೈತರಿಗೆ 1 ಎಕರೆಗೆ 2.50 ಕೋಟಿ ರೂ. ಪರಿಹಾರ ವಿತರಿಸುವ ಕೆಲಸವೂ ಶುರುವಾಗಿದೆ. ಶೇ.80ರಷ್ಟು ರೈತರು ಭೂಮಿ ಬಿಟ್ಟುಕೊಡಲು ಒಪ್ಪಿದ್ದು, ಒಪ್ಪಿಗೆ ಕೊಡದ ರೈತರ ವಿಚಾರದಲ್ಲಿ ಕಾನೂನು ಪ್ರಕಾರ ಮುಂದುವರಿಯುತ್ತೇವೆ,'' ಎಂದು ಸ್ಪಷ್ಟಪಡಿಸಿದರು.

ಸಿಎಂ ಭೇಟಿಯಾದ ಅನಿವಾಸಿ ಕನ್ನಡಿಗರು

■ **ವಿಕ ಸುದ್ದಿಲೋಕ** ಬೆಂಗಳೂರು

ಜಾಗತಿಕ ಅನಿವಾಸಿ ಕನ್ನಡ ಮೂಲ ನಿವಾಸಿಗಳ ನಿಯೋಗವು ಸಚಿವ ಕೆ.ಎಚ್.ಮುನಿಯಪ್ಪ ಅವರ ನೇತೃತ್ವದಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಭೇಟಿಯಾಗಿ ಚರ್ಚೆ ನಡೆಸಿತು.

ಉದ್ಯಮಿ ರೊನಾಲ್ಡ್ ಕೊಲಾಸೊ ಅವರ ನೇತೃತ್ವದಲ್ಲಿ ನಾನಾ ದೇಶಗಳ ಅನಿವಾಸಿ ಸಂಘಟನೆಗಳ ಪ್ರತಿನಿಧಿಗಳ ನಿಯೋಗ ವಿಧಾನಸೌಧದಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿತು. ಅನಿವಾಸಿ ಕನ್ನಡಿಗರಿಗಾಗಿ ಪ್ರತ್ಯೇಕ ಸಚಿವಾಲಯಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಒಪ್ಪಿಗೆ ನೀಡಿದ್ದು, ಈ ಸಚಿವಾಲಯ ಶೀಘ್ರವೇ ಕಾರ್ಯೋನ್ಮುಖವಾಗಬೇಕು. ಈ ಸಚಿವಾಲಯ ಸ್ಥಾಪನೆಯಾದರೆ ಅನಿವಾಸಿ ಕನ್ನಡಿಗರು ಸರಕಾರದೊಂದಿಗೆ ಕೈಜೋಡಿಸಿ ಉದ್ಯಮ, ಹೂಡಿಕೆ ಹಾಗೂ ಅನಿವಾಸಿ ಕನ್ನಡಿಗರ ಸರ್ವತೋಮುಖ ಬೆಳವಣಿಗೆಗೆ ಹೆಚ್ಚಿನ ಬೆಂಬಲ ನೀಡಲು ಹೊಸ ವೇದಿಕೆಯಾಗಲಿದೆ ಎಂದು ರೊನಾಲ್ಡ್ ಕೊಲಾಸೊ ಹೇಳಿದರು. ಎಂಎಲ್ಸಿ ಆರತಿ ಕೃಷ್ಣ ಪಾಲ್ಗೊಂಡಿದ್ದರು.

ಮುಂಬಯಿಗೆ ತೆರಳಿದ ಸಿಎಂ

ಬೆಂಗಳೂರು: ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಅವರ ಪುತ್ರಿಯ ವಿವಾಹ ಸಮಾರಂಭದಲ್ಲಿ ಪಾಲ್ಗೊಳ್ಳುವ ಸಲುವಾಗಿ ಶನಿವಾರ ಮುಂಬಯಿಗೆ ತೆರಳಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಬೆಂಗಳೂರಿಗೆ ವಾಪಸಾಗಲಿದ್ದಾರೆ. ಶನಿವಾರ ಸಂಜೆ ಡಿ.ಕೆ.ಶಿವಕುಮಾರ್ ಅವರು ಮುಂಬಯಿನ ಸಿದ್ಧಿವಿನಾಯಕ ದೇವಾಲಯಕ್ಕೆ ಭೇಟಿ ನೀಡಿ ದರ್ಶನ ಪಡೆದರು. ಬಳಿಕ ಜಿಯೊ ಕನ್ವೆನ್ಷನ್ ಸೆಂಟರ್‌ಗೆ ತೆರಳಿ ಸುಪ್ರಿಯಾ ಸುಳೆ ಅವರ ಪುತ್ರಿಯ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡರು.



ರಾಜ್ಯಾದ್ಯಂತ ಸಾಮೂಹಿಕ ಯೋಗ

■ **ವಿಕ ಸುದ್ದಿಲೋಕ** ಬೆಂಗಳೂರು

12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ರಾಜ್ಯಾದ್ಯಂತ ಸಾಮೂಹಿಕ ಯೋಗಾಭ್ಯಾಸಕ್ಕೆ ಸಿದ್ಧತೆ ನಡೆದಿದ್ದು, ಭಾನುವಾರ ಆಯುಷ್ ಇಲಾಖೆ ವತಿಯಿಂದ ಬೆಳಗ್ಗೆ 7 ಗಂಟೆಗೆ ವಿಧಾನಸೌಧ ಮುಂಭಾಗ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದಡಿ ಯೋಗಾಭ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

''ರಾಜ್ಯಮಟ್ಟದ ಈ ಕಾರ್ಯಕ್ರಮದಲ್ಲಿ 40 ನಿಮಿಷಗಳ ಯೋಗ ಪ್ರಾತ್ಯಕ್ಷಿಕೆ ನಡೆಯಲಿದ್ದು, ಎರಡು ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್, ನಟರಾದ ವಸಿಷ್ಠ ಸಿಂಹ, ಸುಧಾರಾಣಿ, ಹರಿಪ್ರಿಯಾ ಹಾಗೂ ಇತರರು ಭಾಗವಹಿಸಲಿದ್ದಾರೆ. 2 ಸಾವಿರಕ್ಕೂ ಅಧಿಕ ಯೋಗಪಟುಗಳು ಪಾಲ್ಗೊಳ್ಳಲಿದ್ದಾರೆ. ಮನೆ ಮನೆಗೂ ಯೋಗ, ಎಲ್ಲರಿಗೂ ಯೋಗ ಎಂಬ ವಿಶಾಲ ದೃಷ್ಟಿಕೋನದಿಂದ ಸಾಂಕೇತಿಕವಾಗಿ ಒಂದು ದಿನದ ಯೋಗಾಚರಣೆ ನಡೆಸಲಾಗುತ್ತಿದೆ,'' ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಯೋಗಾಸಕ್ತಿ ಹೆಚ್ಚಿಸಲು ಕ್ರಮ

''ಯುವಕರಲ್ಲಿ ಯೋಗದ ಬಗ್ಗೆ ಆಸಕ್ತಿ ಹೆಚ್ಚಿಸಲು ಹಾಗೂ ಅದರ ಮಹತ್ವ ತಿಳಿಸಲು ಮೈಸೂರಿನ ಸರಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ನಾನಾ ಸ್ಪರ್ಧೆಗಳನ್ನು ಸಾಮಾಜಿಕ ಜಾಲತಾಣದ ಮೂಲಕ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ 50 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು,'' ಎಂದು ಹೇಳಿದರು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತ್ವಿಕ ರಂಜನಂ ಪಾಂಡೆ, ಆಯುಕ್ತ ಗುರುದತ್ತ ಹೆಗಡೆ, ಆಯುಷ್ ಇಲಾಖೆಯ ಆಯುಕ್ತ ಸುನೀಲ್ ಪನ್ವಾರ್ ಉಪಸ್ಥಿತರಿದ್ದರು.

ನಿತ್ಯ ಯೋಗ: ''ಜಿಲ್ಲಾ ಹಾಗೂ ತಾಲೂಕುಮಟ್ಟದಲ್ಲೂ ಕಾರ್ಯಕ್ರಮಗಳು ನಡೆಯಲಿದ್ದು, ರಾಜ್ಯಾದ್ಯಂತ 10 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಯೋಗಾಭ್ಯಾಸವನ್ನು ಒಂದು ದಿನಕ್ಕೆ ಸೀಮಿತಗೊಳಿಸದೆ, ನಿತ್ಯವೂ ಮಾಡಬೇಕಿದೆ. ಆದ್ದರಿಂದ ಈ ವರ್ಷ 'ನಿತ್ಯ ಯೋಗ' ಶೀರ್ಷಿಕೆಯಡಿ ಎಲ್ಲ ಆಯುಷ್ ಸಂಸ್ಥೆಗಳಲ್ಲಿ 365 ದಿನಗಳೂ ವಿಶೇಷ ಯೋಗ ಶಿಬಿರಗಳನ್ನು ಆಯೋಜಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ,'' ಎಂದು ಹೇಳಿದರು.

''ಯೋಗ ದಿನಾಚರಣೆ ಪ್ರಯುಕ್ತ ಜುಲೈ ತಿಂಗಳಲ್ಲಿ ಬೆಂಗಳೂರಿನ ಐಐಎಸ್ಸಿಯಲ್ಲಿ 'ವಿಜ್ಞಾನ ಯೋಗ', ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ 'ಕಾರ್ಸಿನೋ ಯೋಗ', ಜಯದೇವ ಹೃದ್ರೋಗ ಸಂಸ್ಥೆಯಲ್ಲಿ 'ಕಾರ್ಡಿಯೋ ಯೋಗ' ಸೇರಿದಂತೆ ಹಲವೆಡೆ ಯೋಗ ಕುರಿತ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. 360 ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಗ್ರಾಮೀಣ ಯೋಗ ಕಾರ್ಯಕ್ರಮವು ವರ್ಷವಿಡೀ ನಡೆಯಲಿದೆ,'' ಎಂದರು.

ಸಿಇಟಿ ಆಪ್ಷನ್ ಎಂಟ್ರಿ: 10 ದಿನ ಕಾಲಾವಕಾಶ

■ **ವಿಕ ಸುದ್ದಿಲೋಕ** ಬೆಂಗಳೂರು

ಎಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಭಾಗವಾಗಿ ಆಪ್ಷನ್ (ಆಯ್ಕೆ/ಇಚ್ಛೆ)ಗಳನ್ನು ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಶನಿವಾರ ತನ್ನ ವೆಬ್‌ಸೈಟ್‌ನಲ್ಲಿ ಪೋರ್ಟಲ್ ತೆರೆದಿದೆ. ಜೂ.30ರ ಬೆಳಗ್ಗೆ 10 ಗಂಟೆಯವರೆಗೆ ಅಭ್ಯರ್ಥಿಗಳು ತಮ್ಮ ಇಚ್ಛೆಯ ಕಾಲೇಜು ಮತ್ತು ಕೋರ್ಸ್‌ಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

ಜು. 6ರಂದು ಬೆಳಗ್ಗೆ 11 ಗಂಟೆಗೆ ಸೀಟು ಹಂಚಿಕೆಯ ಅಣಕು ಫಲಿತಾಂಶ ಪ್ರಕಟಿಸಲಾಗುತ್ತದೆ. ಜು.6 ರಿಂದ ಜು.9ರವರೆಗೆ ಇಚ್ಛೆ(ಆಯ್ಕೆ)ಗಳನ್ನು ಸೇರಿಸಲು, ಅಳಿಸಲು, ಬದಲಾಯಿಸಲು ಅಥವಾ ಮಾರ್ಪಡಿಸಲು ಅವಕಾಶ ನೀಡಲಾಗುತ್ತದೆ. ಇದಾದ ಮೂರು ದಿನಗಳ ನಂತರ ಜು.15ರಂದು ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಭಾನುವಾರ ನೀಟ್ ಬರೆಯುತ್ತಿರುವ ಅಭ್ಯರ್ಥಿಗಳು ಸೋಮವಾರದ ನಂತರ ಆಪ್ಷನ್ ದಾಖಲಿಸಬಹುದು. ಹೀಗಾಗಿ, ವಿದ್ಯಾರ್ಥಿಗಳು ನೀಟ್ ಪರೀಕ್ಷೆಯತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದ್ದಾರೆ.

ಪ್ರೀ ರೌಂಡ್ ಕೌನ್ಸೆಲಿಂಗ್ ರದ್ದು

ನೀಟ್ ಫಲಿತಾಂಶ ವಿಳಂಬ ಹಿನ್ನೆಲೆಯಲ್ಲಿ ಈ ಬಾರಿ ಮೊದಲ ಸುತ್ತಿನ ಸೀಟು ಹಂಚಿಕೆಗೆ ಮುನ್ನ ಪ್ರೀ ರೌಂಡ್ ಕೌನ್ಸೆಲಿಂಗ್ ನಡೆಸಲು ಕೆಇಎ ಸಜ್ಜಾಗಿತ್ತು. ಪ್ರೀ ರೌಂಡ್‌ನಲ್ಲಿ ಆಯ್ಕೆ ದಾಖಲಿಸಿದ ಬಳಿಕ ತಮ್ಮಿಷ್ಟದ ಸೀಟು ಸಿಕ್ಕವರು ದಾಖಲಾತಿ ಪಡೆಯಲು ಅವಕಾಶ ನೀಡಲು ತಯಾರಿ ನಡೆಸಲಾಗಿತ್ತು. ಆದರೆ, ಬಹುತೇಕರು ಪ್ರೀ ಸುತ್ತಿನಲ್ಲಿ ಸೀಟು ಉನ್ನತೀಕರಣ ಸೇರಿದಂತೆ ಮೊದಲ ಸುತ್ತಿನಲ್ಲಿರುವ ಚಾಯ್ಸ್ ಆಯ್ಕೆಗೆ ಅವಕಾಶ ನೀಡಬೇಕೆಂದು ಮನವಿ ಸಲ್ಲಿಸಿದ ಹಿನ್ನೆಲೆ ಪ್ರೀ ಸುತ್ತಿನ ಕೌನ್ಸೆಲಿಂಗ್ ಅನ್ನು ಕೈಬಿಡಲಾಗಿದೆ. ಎಂದಿನಂತೆ ಮೊದಲ ಸುತ್ತಿನ ಕೌನ್ಸೆಲಿಂಗ್ ಆರಂಭವಾಗಲಿದೆ ಎಂದು ಕೆಇಎ ಸ್ಪಷ್ಟಪಡಿಸಿದೆ.

- ಜೂ.30ರ ಬೆಳಗ್ಗೆ 10 ಗಂಟೆವರೆಗೆ ಆಯ್ಕೆ ದಾಖಲಿಸಲು ಅವಕಾಶ
- ಜು.6ರಂದು ಸೀಟು ಹಂಚಿಕೆಯ ಅಣಕು ಫಲಿತಾಂಶ ಪ್ರಕಟ
- ಜು.9ರವರೆಗೆ ಆಯ್ಕೆ ತಿದ್ದುಪಡಿ, ಜು.15ಕ್ಕೆ ಅಂತಿಮ ಫಲಿತಾಂಶ ಪ್ರಕಟ
- ಕರಡು ಸೀಟ್ ಮ್ಯಾಟ್ರಿಕ್ಸ್ ಆಧರಿಸಿ ಸೀಟು ಹಂಚಿಕೆಗೆ ಕೆಇಎ ಸಜ್ಜು

''ಕೃಷಿ, ಪಶು ವೈದ್ಯಕೀಯ, ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ ಬಂದಿದೆ. ಎಂಜಿನಿಯರಿಂಗ್ ಕೋರ್ಸ್‌ಗಳ ಕರಡು ಸೀಟ್ ಮ್ಯಾಟ್ರಿಕ್ಸ್ ಬಂದಿದ್ದು, ಅಂತಿಮ ಪಟ್ಟಿಗೆ ಕಾಯುತ್ತಿದ್ದೇವೆ. ಅಂತಿಮ ಪಟ್ಟಿ ಬಂದ ಬಳಿಕ ಎಲ್ಲ ಮಾಹಿತಿಯನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುವುದು. ಅಲ್ಲಿಯವರೆಗೂ ಅಭ್ಯರ್ಥಿಗಳು ಕಾಯುವ ಅಗತ್ಯ ಇಲ್ಲ, ಬದಲಿಗೆ ಪರ್ಯಾಯವಾಗಿ ಕರಡು ಸೀಟ್ ಮ್ಯಾಟ್ರಿಕ್ಸ್ ಪ್ರಕಾರ ಆಪ್ಷನ್ ದಾಖಲಿಸಬಹುದು,'' ಎಂದು ತಿಳಿಸಿದ್ದಾರೆ.

ದಾಖಲೆ ಸಲ್ಲಿಕೆಗೆ ಅವಕಾಶ

■ **ವಿಕ ಸುದ್ದಿಲೋಕ** ಬೆಂಗಳೂರು

ವೃತ್ತಿಪರ ಡಿಪ್ಲೊಮಾ ಪದವೀಧರ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಪ್ರವೇಶದ ಅರ್ಹತೆಗೆ ದಾಖಲೆಗಳನ್ನು ಪರಿಶೀಲನೆಗೆ ಒದಗಿಸುವಂತೆ ಕೆಇಎ ಸೂಚಿಸಿದೆ.

ಡಿ-ಸಿಇಟಿ ಅರ್ಜಿಗಳಲ್ಲಿ ಡಿಫೆನ್ಸ್, ಕ್ರೀಡೆ ಮುಂತಾದ ಕೋಟಾಗಳನ್ನು ಕ್ಲೇಮ್ ಮಾಡಿರುವವರು ತಮ್ಮ ದಾಖಲೆಗಳನ್ನು ಜೂ.24 ಅಥವಾ 25ರಂದು ಸಲ್ಲಿಸಬೇಕು ಎಂದು ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ವಿಶೇಷಚೇತನ ಕೋಟಾ ದಡಿಯಲ್ಲಿ ಸೀಟು ಪಡೆಯಲು ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಜೂ.30 ರಂದು ನಡೆಯಲಿದೆ. ವಿಕ್ಟೋರಿಯಾ ಮತ್ತು ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ನಡೆಯುವ ತಪಾಸಣೆಗೆ ನಿಗದಿತ ದಾಖಲೆಗಳ ಸಹಿತ ಹಾಜರಾಗಬೇಕು. ವೃತ್ತಿಪರ ಡಿಪ್ಲೊಮಾ ಪದವೀಧರ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಪ್ರವೇಶಕ್ಕೆ ಅವಕಾಶವಿದ್ದು, ಜೂ.30 ಅಥವಾ ಜು.1ರಂದು ದಾಖಲೆ ಪರಿಶೀಲನೆ ನಡೆಸಲಾಗುವುದು ಎಂದು ವಿವರಿಸಿದ್ದಾರೆ.

ವೈದ್ಯಕೀಯ ಪರೀಕ್ಷೆಗೆ ಒಳಪಡುವ ಅಭ್ಯರ್ಥಿಗಳು ಡಿ-ಸಿಇಟಿ ಪ್ರವೇಶ ಪತ್ರ, ಯುಡಿಐಡಿ ಕಾರ್ಡ್, ಮಾನ್ಯತೆಪಡೆದ ಯಾವುದಾದರೂ ಗುರುತಿನ ಚೀಟಿ, ರಾಜ್ಯದ ಯಾವುದೇ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಿಶೇಷಚೇತನ ಕ್ಷೇತ್ರದಲ್ಲಿ ಸಕ್ಷಮರಾದ ವೈದ್ಯರು ನೀಡಿರುವ ವೈದ್ಯಕೀಯ ಪ್ರಮಾಣಪತ್ರಗಳನ್ನು ಸಲ್ಲಿಸಬೇಕು. ಶ್ರವಣದೋಷವಿರುವ ವಿದ್ಯಾರ್ಥಿಗಳು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ನಿಮ್ಹಾನ್ಸ್ ಅಥವಾ ಮಣಿಪಾಲ್ ಆಸ್ಪತ್ರೆ, ಲಿಂಗರಾಜಪುರಂನಲ್ಲಿನ ಸರಕಾರಿ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಪಡೆದ ಇತ್ತೀಚಿನ ಶ್ರವಣ ಮಾಪನ ವರದಿಯನ್ನು ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಎಸ್‌ಸಿ, ಎಸ್‌ಟಿ ಕಾಯಿದೆ ದುರ್ಬಳಕೆ ಸಲ್ಲದು

ಮಲ್ನಾಡ್ ಕಂಪನಿಯ ಐವರ ವಿರುದ್ಧ ದಾಖಲಿಸಿದ್ದ ಎಫ್‌ಐಆರ್ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

ಕಾರ್ಮಿಕ ಮತ್ತು ಸಿವಿಲ್ ಪ್ರಕರಣಗಳಿಗೆ ಕ್ರಿಮಿನಲ್ ರೂಪ ನೀಡಿ, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆಯನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ತಮ್ಮ ವಿರುದ್ಧದ ದಾಖಲಾಗಿರುವ ಎಫ್‌ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆ ರದ್ದುಮಾಡಬೇಕೆಂದು ಕೋರಿ ಭದ್ರಾವತಿಯ 'ಮಲ್ನಾಡ್ ಅಲೋಯ್ಸ್ ಕಾಸ್ಟಿಂಗ್ಸ್ ಪ್ರೈವೇಟ್ ಲಿಮಿಟೆಡ್'ನ ವ್ಯವಸ್ಥಾಪಕ ಮಧುಕರ್ ಜೋಯಿಸ್ ಸೇರಿ ಮತ್ತಿತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿದೆ. ಜತೆಗೆ, ಕಂಪನಿ ವ್ಯವಸ್ಥಾಪಕ ನಿರ್ದೇಶಕರು ಸೇರಿ ಐವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ರದ್ದುಗೊಳಿಸಿದೆ. ಅಲ್ಲದೆ, ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ಕಂಪನಿಯು ಶೋಕಾಸ್ ನೋಟಿಸ್ ನೀಡಿ ಶಿಸ್ತುಕ್ರಮ ಕೈಗೊಂಡಿದ್ದಕ್ಕೆ ಪ್ರತಿಕಾರವಾಗಿ ಹಾಗೂ ಆಡಳಿತ ಮಂಡಳಿಯ ವಿರುದ್ಧ ಈ ಸುಳ್ಳು ದೂರನ್ನು ದಾಖಲಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

''ಪರಿಶಿಷ್ಟ ಜಾತಿ ಮತ್ತು ಪಂಗಡ ಕಾಯಿದೆಯಡಿ ಪ್ರಕರಣ ದಾಖಲಿಸಲು ಅಂತಹ ನಿಂದನಾತ್ಮಕ ಘಟನೆ ಸಾರ್ವಜನಿಕರು ನೋಡುವ ಅಥವಾ ಇರುವ ಜಾಗದಲ್ಲಿ ನಡೆದಿರಬೇಕೆಂದು ಹಲವು ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ತಿಳಿಸಿದೆ. ಆದರೆ ಈ ಪ್ರಕರಣದಲ್ಲಿ ಆರೋಪಿಸಲಾದ ಘಟನೆಯು ಕಂಪನಿಯ ಒಳಗಿನ ನಾಲ್ಕು ಗೋಡೆಗಳ ಮಧ್ಯೆ ನಡೆದಿದೆ. ಅಲ್ಲಿ ಯಾವುದೇ ಸಾರ್ವಜನಿಕರು ಇರಲಿಲ್ಲ, ಹಾಗಾಗಿ ಇದು ಕಾಯಿದೆಯ ವ್ಯಾಪ್ತಿಗೆ ಬರುವುದಿಲ್ಲ'' ಎಂದು ನ್ಯಾಯಪೀಠ ತಿಳಿಸಿದೆ.

ಜತೆಗೆ, ಸಿವಿಲ್ ಮತ್ತು ಸೇವಾ ವಿವಾದಗಳಿಗೆ ಕ್ರಿಮಿನಲ್ ಬಣ್ಣ ಬಳಿದು ವಿಶೇಷ ಕಾಯಿದೆಗಳನ್ನು ದುರುಪಯೋಗಪಡಿಸಿಕೊಳ್ಳುವುದು ಕಾನೂನಿನ ದುರ್ಬಳಕೆ ಮಾಡಿದಂತಾಗಲಿದೆ. ಜತೆಗೆ, ದೂರುದಾರರು ಮಾಡಿರುವ ಆರೋಪಗಳಲ್ಲಿ ಯಾವುದೇ ಪ್ರಮುಖ ಅಂಶಗಳಿಲ್ಲದ ಕಾರಣ, ಶಿವಮೊಗ್ಗದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣ ಮತ್ತದರ ವಿಚಾರಣಾ ಪ್ರಕ್ರಿಯೆ ರದ್ದುಗೊಳಿಸಿದೆ.

ಗಡೀಪಾರು ಆದೇಶ ಕಾನೂನು ಬದ್ಧವಾಗಿರಲಿ

ಬೆಂಗಳೂರು: ಗಡೀಪಾರು ಮಾಡುವ ಆದೇಶವು ವ್ಯಕ್ತಿಯೊಬ್ಬನ ಸಂವಿಧಾನದ ವಿಧಿ 21ರ ಅಡಿಯ ಜೀವಿಸುವ ಮತ್ತು ವ್ಯಕ್ತಿಗತ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಸಿದುಕೊಳ್ಳುವ ಕಠಿಣ ಕ್ರಮವಾಗಿದ್ದು, ಅಂತಹ ಆದೇಶ ನೀಡುವಾಗ ಕಾನೂನುಗಳ ಬದ್ಧ ಕಾರಣಗಳನ್ನು ನೀಡಬೇಕು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ವ್ಯಕ್ತಿಯೊಬ್ಬರನ್ನು ಬೆಳಗಾವಿ ಜಿಲ್ಲೆಯಿಂದ ಆರು ತಿಂಗಳ ಕಾಲ ಗಡೀಪಾರು ಮಾಡಿದ್ದ ಆದೇಶವನ್ನು ನ್ಯಾಯಾಲಯ ರದ್ದುಪಡಿಸಿದೆ. ಗಡೀಪಾರು ಆದೇಶ ಎತ್ತಿಹಿಡಿದಿದ್ದ ಏಕಸದಸ್ಯಪೀಠದ ಆದೇಶ ಪ್ರಶ್ನಿಸಿ ಮುಜಮ್ಮಿಲ್ ಎಂಬುವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಮತ್ತು ನ್ಯಾ. ಕೆ.ಜಿ.ಶಾಂತಿ ಅವರಿದ್ದ ವಿಭಾಗೀಯಪೀಠ ಈ ಆದೇಶ ನೀಡಿದೆ.

ಗಡೀಪಾರು ಆದೇಶಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದ ಪ್ರಕರಣಗಳ ಪಟ್ಟಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನ್ಯಾಯಪೀಠ, ''ಮುಜಮ್ಮಿಲ್ ವಿರುದ್ಧ ದಾಖಲಾಗಿದ್ದ ಪ್ರಕರಣಗಳು ಕರ್ನಾಟಕ ಪೊಲೀಸ್ ಕಾಯಿದೆ 1963ರ ಕಲಂ 56ರ ಗಡೀಪಾರು ವ್ಯಾಪ್ತಿಗೆ ಬರುವುದಿಲ್ಲ'' ಎಂದು ಹೇಳಿದೆ. ''ಇದನ್ನು ನೆಪವಾಗಿಟ್ಟುಕೊಂಡು ಗಡೀಪಾರು ಆದೇಶ ಹೊರಡಿಸಿರುವುದು ಕಾನೂನುಬಾಹಿರ ಮತ್ತು ಅಧಿಕಾರ ವ್ಯಾಪ್ತಿ ಮೀರಿದ್ದಾಗಿರಲಿದೆ. ಗಡೀಪಾರು ಎನ್ನುವುದು ವ್ಯಕ್ತಿಯೊಬ್ಬನ ಸಂವಿಧಾನದ ವಿಧಿ 21ರ ಅಡಿಯ ಜೀವಿಸುವ ಮತ್ತು ವ್ಯಕ್ತಿಗತ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಸಿದುಕೊಳ್ಳುವ ಕಠಿಣ ಕ್ರಮವಾಗಿದೆ. ಅದನ್ನು ಕಾನೂನು ಚೌಕಟ್ಟನ್ನು ಮೀರಿ ಬಳಸುವಂತಿಲ್ಲ'' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ
ಅನ್ಸಾರಿ ನಗರ, ನವದೆಹಲಿ-110029
ಪರೀಕ್ಷಾ ವಿಭಾಗ
ಸಾಮಾನ್ಯ ನೇಮಕಾತಿ ಪರೀಕ್ಷೆ (CRE-5)
ನೋಟಿಸ್ ನಂ. 93/2026

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಡಿ ಭಾಗವಹಿಸುವ AIIMS ಮತ್ತು ಕೇಂದ್ರ ಸರ್ಕಾರಿ ಆಸ್ಪತ್ರೆಗಳಲ್ಲಿ ವಿವಿಧ ಗ್ರೂಪ್ 'B&C' ಹುದ್ದೆಗಳ ನೇಮಕಾತಿಗಾಗಿ ಸಾಮಾನ್ಯ ನೇಮಕಾತಿ ಪರೀಕ್ಷೆ (CRE-5).
ಭಾಗವಹಿಸುವ ಎಲ್ಲಾ ಸಂಸ್ಥೆಗಳು/ಆಸ್ಪತ್ರೆಗಳ ಪರವಾಗಿ ವಿವಿಧ ಗ್ರೂಪ್-'ಬಿ ಮತ್ತು ಸಿ' ಹುದ್ದೆಗಳ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ವೇಳಾಪಟ್ಟಿ ಕೆಳಕಂಡಂತಿದೆ.

ಅರ್ಜಿಗಾಗಿ ಆನ್‌ಲೈನ್ ನೋಂದಣಿ	
ಆರಂಭ ದಿನಾಂಕ	– 13ನೇ ಜೂನ್, 2026
ಮುಕ್ತಾಯ ದಿನಾಂಕ	– 3ನೇ ಜುಲೈ, 2026
ನೇಮಕಾತಿ ಪರೀಕ್ಷೆಯ ದಿನಾಂಕ	
ಪ್ರವೇಶ ಪತ್ರ ವಿತರಿಸುವ ದಿನಾಂಕ	– ಪರೀಕ್ಷೆಗೆ ಮೂರು ದಿನಗಳ ಮೊದಲು
ಪರೀಕ್ಷಾ ಕೇಂದ್ರದ ನಗರ ಕುರಿತು ಮಾಹಿತಿ	– ಪರೀಕ್ಷೆಗೆ ಒಂದು ವಾರದ ಮೊದಲು
ಪರೀಕ್ಷೆಯ ದಿನಾಂಕ	– 25 ರಿಂದ 27ನೇ ಜುಲೈ, 2026 (ತಾತ್ಕಾಲಿಕ)

ಅರ್ಜಿ ಶುಲ್ಕಗಳು:
ಎ) ಸಾಮಾನ್ಯ/ಒಬಿಸಿ ಅಭ್ಯರ್ಥಿಗಳು : ರೂ.3000/- (ಮೂರು ಸಾವಿರ ರೂಪಾಯಿ ಮಾತ್ರ)
ಬಿ) ಎಸ್‌ಟಿ/ಎಸ್‌ಟಿ ಅಭ್ಯರ್ಥಿಗಳು/EWS : ರೂ.2400/- (ಎರಡು ಸಾವಿರದ ನಾಲ್ಕುನೂರು ರೂಪಾಯಿ ಮಾತ್ರ)
ಸಿ) ವಿಕಲಾಂಗ ವ್ಯಕ್ತಿಗಳು : ವಿನಾಯಿತಿ ನೀಡಲಾಗಿದೆ
- ಅಭ್ಯರ್ಥಿಯು ನಿಗದಿತ ಅರ್ಜಿ ಶುಲ್ಕವನ್ನು ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್/ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಬಹುದು. ವಹಿವಾಟು/ಸಂಸ್ಕರಣಾ ಶುಲ್ಕ, ಅನ್ವಯವಾಗುವುದು ಯಾವುದಾದರೂ ಇದ್ದರೆ, ಅಭ್ಯರ್ಥಿಯು ಬ್ಯಾಂಕಿಗೆ ಪಾವತಿಸಬೇಕು.
- ಅರ್ಜಿ ಶುಲ್ಕ ಒಮ್ಮೆ ಪಾವತಿಸಿದ ನಂತರ, ಯಾವುದೇ ಕಾರಣಕ್ಕೂ ಮರುಪಾವತಿಸಲಾಗುವುದಿಲ್ಲ.
- ನಿಗದಿತ ಶುಲ್ಕವನ್ನು ಪಾವತಿಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಸಂಪೂರ್ಣವಾಗಿ ತಿರಸ್ಕರಿಸಲಾಗುವುದು.
- ಪರೀಕ್ಷೆಗೆ ಹಾಜರಾಗುವ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳ ಅರ್ಜಿ ಶುಲ್ಕವನ್ನು ಸೂಕ್ತ ಸಮಯದಲ್ಲಿ ಫಲಿತಾಂಶ ಘೋಷಣೆಯ ಬಳಿಕ ಮರುಪಾವತಿಸಲಾಗುವುದು.

ಸೂಚನೆ : ವಿವರವಾದ ಮಾಹಿತಿಗಾಗಿ ವೆಬ್‌ಸೈಟ್ www.aiimsexams.ac.in ಅಥವಾ ಸಂಬಂಧಿತ ಭಾಗವಹಿಸುವ ಸಂಸ್ಥೆ/ಆಸ್ಪತ್ರೆಗೆ ಭೇಟಿ ನೀಡಿ.
- ಅರ್ಹ ಅಭ್ಯರ್ಥಿಗಳ ಅರ್ಜಿಯ ಸ್ಥಿತಿ ಮತ್ತು ಪ್ರವೇಶ ಪತ್ರಗಳನ್ನು AIIMS ವೆಬ್‌ಸೈಟ್ www.aiimsexams.ac.in ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ.
- ಅರ್ಜಿ ಸಲ್ಲಿಸುವಾಗ ಯಾವುದೇ ಅಭ್ಯರ್ಥಿಗಳಿಗೆ ತೊಂದರೆಯಾದರೆ, ಮೈ ಪೇಜ್‌ನಲ್ಲಿ (ಡ್ಯಾಶ್‌ಬೋರ್ಡ್) ರುಜುವಾತುಗಳೊಂದಿಗೆ ಲಾಗಿನ್ ಮಾಡುವ ಮೂಲಕ ಪ್ರಶ್ನೆಯನ್ನು ಕೇಳಬಹುದು.
- ಎಲ್ಲಾ ಅರ್ಜಿದಾರರು ವೆಬ್‌ಸೈಟ್‌ಗೆ ನಿಯಮಿತವಾಗಿ ಭೇಟಿ ನೀಡಬೇಕಾಗುತ್ತದೆ. ಏಕೆಂದರೆ ನಂತರದ ಎಲ್ಲಾ ತಿದ್ದುಪಡಿ / ಸೇರ್ಪಡೆ / ಸೂಚನೆಗಳು / ನವೀಕರಣಗಳನ್ನು ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ.

ಸಹಿ/-
ಸಹಾಯಕ ನಿಯಂತ್ರಕರು (ಪರೀಕ್ಷೆಗಳು)
CBC 17112/11/0023/2627

ಕಾರ್ಯಪಾಲಕ ಇಂಜಿನಿಯರ್, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ (ನಿ), ತುರುವೇಕೆರೆ. ತುಮಕೂರು ಜಿಲ್ಲೆ, ಪಿನ್-572227
ಸಂ:05/2026-27 ದಿನಾಂಕ: 17.05.2026
ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.04 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿನಿ, ತುರುವೇಕೆರೆ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ನ ಕಾಮಗಾರಿಗಳಿಗೆ KW - 1 & KW - 2 " ಏಕ – ಲಕೋಟೆ " ಪದ್ಧತಿಯಲ್ಲಿ & ನಬಂಧನೆಗಳೊಂದಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
General Works:-
1. Indent No:CNNL/2026-27/OW/WORK_INDENT 5084 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.20.59ಲಕ್ಷ, ಇ.ಎಂ.ಡಿ. ಮೊತ್ತ ರೂ.50000/- KPWD Class IV ಮತ್ತು Electrical License Class II & ಮೇಲ್ಪಟ್ಟ ಗುತ್ತಿಗೆದಾರರು. 2. Indent No:CNNL/2026-27/OW/WORK_INDENT 5085 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ: 15.43 ಲಕ್ಷ, ಇ.ಎಂ.ಡಿ. ಮೊತ್ತ: ರೂ.39000/– KPWD Class IV ಮತ್ತು Electrical License Class II & ಮೇಲ್ಪಟ್ಟ ಗುತ್ತಿಗೆದಾರರು. 3. Indent No:CNNL/2026-27/OW/WORK_INDENT5086 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.12.62 ಲಕ್ಷ, ಇ.ಎಂ.ಡಿ. ಮೊತ್ತ ರೂ.32000/– KPWD Class IV ಮತ್ತು Electrical License Class II & ಮೇಲ್ಪಟ್ಟ ಗುತ್ತಿಗೆದಾರರು. 4. Indent No:CNNL/2026-27/OW/WORK_INDENT 5087 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ: 12.06 ಲಕ್ಷ, ಇ.ಎಂ.ಡಿ. ಮೊತ್ತ ರೂ.30500/– KPWD Class IV ಮತ್ತು Electrical License Class II & ಮೇಲ್ಪಟ್ಟ ಗುತ್ತಿಗೆದಾರರು. 5. Indent No:CNNL/2026-27/OW/WORK_INDENT 5146 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.7.06 ಲಕ್ಷ, ಇ.ಎಂ.ಡಿ. ಮೊತ್ತ ರೂ.18000/–KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 6. Indent No:CNNL/2026-27/OW/WORK_ INDENT 5145 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ. 7.65 ಲಕ್ಷ, ಇ.ಎಂ.ಡಿ. ಮೊತ್ತ ರೂ.19500/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 7. Indent No:CNNL/2026-27/OW/WORK_INDENT5142 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.3.01 ಲಕ್ಷ, ಇ.ಎಂ.ಡಿ. ಮೊತ್ತ ರೂ.8000/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು
SC Reserved Works:- 1. Indent No:CNNL/2026-27/OW/WORK_INDENT 5147 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.5.82 ಲಕ್ಷ, ಇ.ಎಂ.ಡಿ. ಮೊತ್ತ ರೂ.7500/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 2. Indent No:CNNL/2026-27/OW/WORK_INDENT 5144 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ: 3.94 ಲಕ್ಷ, ಇ.ಎಂ.ಡಿ. ಮೊತ್ತ ರೂ.5000/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 3. Indent No:CNNL/2026-27/OW/WORK_INDENT 5143 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.3.47 ಲಕ್ಷ, ಇ.ಎಂ.ಡಿ. ಮೊತ್ತ ರೂ.4500/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು
ST Reserved Works:- 1. Indent No:CNNL/2026-27/OW/WORK_INDENT 5083 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.24.60ಲಕ್ಷ, ಇ.ಎಂ.ಡಿ. ಮೊತ್ತ ರೂ.25000/– KPWD Class IV ಮತ್ತು Electrical License Class II & ಮೇಲ್ಪಟ್ಟ ಗುತ್ತಿಗೆದಾರರು
Category 2(A) Reserved Works:- 1. Indent No:CNNL/2026-27/OW/WORK_INDENT 5141 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.3.30 ಲಕ್ಷ, ಇ.ಎಂ.ಡಿ. ಮೊತ್ತ ರೂ.4500/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 2. Indent No:CNNL/2026-27/OW/WORK_INDENT 5186 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.2.99 ಲಕ್ಷ, ಇ.ಎಂ.ಡಿ. ಮೊತ್ತ ರೂ.4000/– KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು
* ಇ-ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 25-06-2026 ಸಂಜೆ 17.00 ಗಂಟೆವರೆಗೆ. * ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:- 18-06-2026 ಸಂಜೆ 5:00 ಗಂಟೆಯಿಂದ ದಿನಾಂಕ: 04-07-2026 ರವರೆಗೆ ಬೆಳ್ಳಿಗ್ಗೆ 11:00 ಗಂಟೆಯವರೆಗೆ. * ಟೆಂಡರ್ ತೆರೆಯುವ ದಿನಾಂಕ:- 06-07-2026 ಬೆಳ್ಳಿಗ್ಗೆ 11:30 ಗಂಟೆಗೆ
ಕಾಮಗಾರಿ ವಿವರ, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ತುರುವೇಕೆರೆ.
DIPR/TUM/112/KSMCA/2026-27

ನೈಋತ್ಯ ರೈಲ್ವೆ
ಪ್ರೊಫಾರ್ಮಾ 10-01
ಭಾರತೀಯ ರೈಲ್ವೆ
ಸಾರ್ವಜನಿಕ ಅಧಿಸೂಚನೆ
ನೈಋತ್ಯ ರೈಲ್ವೆಯ ಕೆಳಗಿನ ವಿಭಾಗದಲ್ಲಿ ಪೂರ್ಣಗೊಂಡ ರೈಲು ಮಾರ್ಗಗಳು ಮತ್ತು ಆವರಣಗಳನ್ನು ಬಳಸುವ ಎಲ್ಲಾ ಬಳಕೆದಾರರಿಗೆ ತಿಳಿಸಲಾಗುತ್ತಿದೆ. 25000 ವೋಲ್ಟ್, 50 ಹರ್ಟ್ಜ್ ಎಸಿ ಸಿಂಗಲ್ ಫೇಸ್ ಓವರ್ ಹೆಡ್ ಟ್ರಾಕ್ಷನ್ ತಂತಿಗಳನ್ನು ನಿರ್ದಿಷ್ಟ ದಿನಾಂಕ ಅಥವಾ ನಂತರ ವಿದ್ಯುತ್ ಸಂಪರ್ಕ ಮಾಡಲಾಗುವುದು. ಆ ದಿನಾಂಕದಿಂದ ಓವರ್‌ಹೆಡ್ ಟ್ರಾಕ್ಷನ್ ಲೈನ್ ಯಾವಾಗಲೂ ಸಜೀವ (ಲೈವ್) ಆಗಿ ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಅನಧಿಕೃತ ವ್ಯಕ್ತಿಗಳು ಈ ಓವರ್‌ಹೆಡ್ ಲೈನ್ ಹತ್ತಿರ ಹೋಗಬಾರದು ಅಥವಾ ಅದರ ಬಳಿಯಲ್ಲಿ ಯಾವುದೇ ಕೆಲಸ ಮಾಡಬಾರದು.

ವಿಭಾಗ	ಸಂಭವನೀಯ ವಿದ್ಯುತೀಕರಣ ದಿನಾಂಕ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಬೆಂಗಳೂರು ಯಾರ್ಡ್ ನಲ್ಲಿ ಮೈಸೂರು ದಿಕ್ಕಿನತ್ತ ಸಮಕಾಲಿಕ ಆಗಮನ ಮತ್ತು ನಿರ್ಗಮನ ಸೌಲಭ್ಯಗಳೊಂದಿಗೆ, 25 ಕೆವಿ, 50 ಹರ್ಟ್ಜ್, ಎಸಿ, ಸಿಂಗಲ್ ಫೇಸ್ ಓವರ್ ಹೆಡ್ ವಿದ್ಯುತ್ ಉಪಕರಣಗಳ ವಿದ್ಯುತೀಕರಣವು, ರಸ್ತೆ 10 (ಪ್ಲಾಟ್ ಫಾರ್ಮ ಸಂಖ್ಯೆ 7)ರ, ಸಿಎಸ್‌ಆರ್ ಹೆಚ್ಚಿಸಲು ಮಾಡಲಾದ ಬದಲಾವಣೆಗೆ ಸಂಬಂಧಿಸಿದ ಕಾರ್ಯಗಳು.	31.07.2026

ಉಪ ಮುಖ್ಯ ವಿದ್ಯುತ್ ಇಂಜಿನಿಯರ್
ಗತಿ ಶಕ್ತಿ ಘಟಕ, ಬೆಂಗಳೂರು
PUB/233/AAF/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ಪ್ರಾದೇಶಿಕ ಉಪ-ವಿಭಾಗ, ಚಿತ್ರದುರ್ಗ-577501
ದೂ. ಸಂಖ್ಯೆ: 08194-230402 ಇಮೇಲ್:acfchitradurga@gmail.com
ಸಂಖ್ಯೆ: ಎ2-ಬಿಜಿಟಿ-ಟೆಂಡರ್-ಸಿಆರ್-01/2026-27 ದಿನಾಂಕ: 17.06.2026
ಟೆಂಡರ್ ಪ್ರಕಟಣೆ
ಚಿತ್ರದುರ್ಗ ವಿಭಾಗದಲ್ಲಿ "ಕಾಂಪಾ". "ರೂಟ್ ಸ್ಟಾಕ್", "ಎಟಿಎ", ಯೋಜನೆಯಡಿಯಲ್ಲಿ 2026-27ನೇ ಸಾಲಿನಲ್ಲಿ ಮುಂದುವರೆದ/ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಸಕ್ತಿ ಅರಣ್ಯ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ರೂ. 294.803 ಲಕ್ಷಗಳ ಮೊತ್ತದ ಒಟ್ಟು 10 ಯೂನಿಟ್‌ಗಳಿಗೆ ದಿನಾಂಕ: 17.06.2026 ರಿಂದ 30.06.2026 ರವರೆಗೆ ನಿಗಧಿಪಡಿಸಿ ಮರು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.06.2026 ರಂದು 16:00 ಗಂಟೆಗೆ [ಸಂಜೆ: 04:00 ಗಂಟೆ] ನಿಗಧಿಪಡಿಸಲಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 01.07.2026 ರಂದು ಸಂಜೆ 04:00 ಗಂಟೆಯ ನಂತರ ತೆರೆಯಲಾಗುತ್ತದೆ. ಕಾಮಗಾರಿಗಳ ಹೆಚ್ಚಿನ ವಿವರಗಳಿಗೆ: https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.
RO.No.183:DIPR/CTA/KSMCA/2026-27
ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ

PM SHRI SCHOOL
JAWAHAR NAVODAYA VIDYALAYA
(A Unit of Navodaya Vidyalaya Samiti)
Ministry of Education Dept. of School Education & Literacy. Govt. of India.
D.M.G Halli Post, Mysore-570 026, Karnataka.
Tel : 0821-2970040, e-mail: jnvmys@gmail.com
SHORT TENDER NOTICE
F NO.1-13(00)/JNVM/2026-27/ Date: 20-06-2026
Sealed tender applications are hereby invited from reputed firms/dealers/suppliers for the supply of water through tankers to Jawahar Navodaya Vidyalaya, Mysore.
Tender forms can be obtained from the Office of the Principal, JNV Mysore, on payment of Rs. 200/- (Rupees Two Hundred only) from 22.06.2026 to 28.06.2026 on all working days except Sundays during office hours.
The completed tender forms, duly filled in all respects, shall be submitted by hand in a sealed cover to the Office of the Principal, JNV Mysore, on or before 29.06.2026 up to 4:00 PM.
An Earnest Money Deposit (EMD) of Rs. 1,000/- (Rupees One Thousand only) in the form of a Demand Draft/Through online mode must be paid along with the tender application. The Demand Draft shall be drawn in favour of Principal, JNV Mysore, payable at Union Bank of India, Bogadi, Mysore.
The undersigned reserves the right to accept or reject any or all tenders without assigning any reason thereof.
The Tenders will be opened at 11 a.m. on 30/06/2026 at the Chamber of Principal JNV, DMG Halli, Mysuru.
Sd/- Principal, PM SHRI SCHOOL, JNV-MYSURU

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ : 08472/ 278675 ಫ್ಯಾಕ್ಸ : 08472 / 260776 ಇ ಮೇಲ್ -itstaff_ulb_gulbarga@yahoo.com
ಸಂಖ್ಯೆ/ಕಮನಪಾ/ಸಿಬ್ಬಂದಿ-ಬಿ/17/2024-25 ದಿನಾಂಕ: 18.06.2026
-: ಅಧಿಸೂಚನೆ :-
ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು-2022 ರಂತೆ ಕಲಬುರಗಿ ಜಿಲ್ಲೆಯ ಕಲಬುರಗಿ ಮಹಾನಗರಪಾಲಿಕೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ದಿನಾಂಕ:29.06.2026 ರಿಂದ ದಿನಾಂಕ: 28.07.2026 ರವರೆಗೆ, ಕಲಬುರಗಿ ಮಹಾನಗರ ಪಾಲಿಕೆಯ ಆಡಳಿತ ಶಾಖೆಯಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು, ದಿನಾಂಕ: 28.07.2026ರ ಸಂಜೆ 5.30 ಗಂಟೆಯೊಳಗೆ ಕಛೇರಿಗೆ ಸಲ್ಲಿಸತಕ್ಕದ್ದು.

ಕ್ರ ಸಂ	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ	ಅರ್ಹತೆ
01	27000-46675	427	1. ಕನ್ನಡ ಭಾಷೆ ಮಾತನಾಡಲು ಗೊತ್ತಿರಬೇಕು. 2. ಮಹಾನಗರ ಪಾಲಿಕೆಗಳಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ಸ್ ಅಥವಾ ಕ್ಲೀನರ್ಸ್ ಆಧಾರದಲ್ಲಿ ಎರಡು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿ ಬಂದ ದಿನಾಂಕದಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆಯನ್ನು ನೀಡಲಾಗುವುದು. 3. ದಿನಾಂಕ: 23.11.2022ಕ್ಕೆ ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರಿರಬಾರದು.

ಖಾಲಿ ಇರುವ 371(ಜೆ) ಸ್ಥಳೀಯ ವೃಂದದ ಹುದ್ದೆಗಳು ಮತ್ತು ಮೀಸಲಾತಿ ವಿವರ

ಮಿಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಸೈ	ಯೋನಿ	ಕಮಾಅ	ಅಂ.ವಿ	ತೃಲಿಂ	ಒಟ್ಟು
ಪ.ಜಾ	8	19	14	5	2	3	3	1	55
ಪ.ಪಂ	2	4	3	1	0	0	1	0	11
ಪ್ರ-1	2	6	4	1	0	1	1	0	15
ಪ್ರ-2(ಎ)	8	19	14	5	2	3	3	1	55
ಪ್ರ-2(ಬಿ)	2	6	4	1	0	1	1	0	15
ಪ್ರ-3(ಎ)	2	5	4	1	0	1	1	0	14
ಪ್ರ-3(ಬಿ)	2	6	5	1	1	1	1	0	17
ಸಾ.ಅ	30	59	45	18	9	9	9	2	181
ಒಟ್ಟು	**56**	**124**	**93**	**33**	**14**	**19**	**20**	**4**	**363**

ಪರಿಶಿಷ್ಟ ಜಾತಿ ಒಟ್ಟು 55 ಹುದ್ದೆಗಳಿಗೆ ಸರ್ಕಾರದ ಆದೇಶ ಸಂ.ಸಿಆಸುಇ 02 ಸೇಹಿಮ 2026, ಬೆಂಗಳೂರು, ದಿನಾಂಕ: 13.05.2026ರ ಅನುಬಂಧ-2 ರಲ್ಲಿ ತಿಳಿರುವಂತೆ ಈ ಕೆಳಕಂಡಂತೆ ಒಳಮಿಸಲಾತಿಯನ್ನು ಅಳವಡಿಸಿಕೊಂಡಿರುತ್ತದೆ. ಪ.ಜಾ. ಪ್ರವರ್ಗ-ಎ-20, ಪ.ಜಾ. ಪ್ರವರ್ಗ-ಬಿ-19, ಪ.ಜಾ. ಪ್ರವರ್ಗ-ಸಿ-16 **ಒಟ್ಟು = 55.**

ಖಾಲಿ ಇರುವ ಮಿಕ್ಕುಳಿದ ವೃಂದದ ಹುದ್ದೆಗಳು ಮತ್ತು ಮೀಸಲಾತಿ ವಿವರ

ಮಿಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಸೈ	ಯೋನಿ	ಕಮಾಅ	ಅಂ.ವಿ	ತೃಲಿಂ	ಒಟ್ಟು
ಪ.ಜಾ	2	3	3	1	0	0	1	0	10
ಪ.ಪಂ	1	1	0	0	0	0	0	0	2
ಪ್ರ-1	1	1	1	0	0	0	0	0	3
ಪ್ರ-2(ಎ)	2	3	3	1	0	0	1	0	10
ಪ್ರ-2(ಬಿ)	1	1	1	0	0	0	0	0	3
ಪ್ರ-3(ಎ)	1	1	0	0	0	0	0	0	2
ಪ್ರ-3(ಬಿ)	1	1	0	0	0	0	0	0	2
ಸಾ.ಅ	5	11	8	3	1	1	2	1	32
ಒಟ್ಟು	**14**	**22**	**16**	**5**	**1**	**1**	**4**	**1**	**64**

ಪರಿಶಿಷ್ಟ ಜಾತಿ ಒಟ್ಟು 10 ಹುದ್ದೆಗಳಿಗೆ ಸರ್ಕಾರದ ಆದೇಶ ಸಂ.ಸಿಆಸುಇ 02 ಸೇಹಿಮ 2026, ಬೆಂಗಳೂರು, ದಿನಾಂಕ: 13.05.2026ರ ಅನುಬಂಧ-2 ರಲ್ಲಿ ತಿಳಿರುವಂತೆ ಈ ಕೆಳಕಂಡಂತೆ ಒಳಮಿಸಲಾತಿಯನ್ನು ಅಳವಡಿಸಿಕೊಂಡಿರುತ್ತದೆ. ಪ.ಜಾ. ಪ್ರವರ್ಗ-ಎ-04, ಪ.ಜಾ. ಪ್ರವರ್ಗ-ಬಿ-03, ಪ.ಜಾ. ಪ್ರವರ್ಗ-ಸಿ-03 **ಒಟ್ಟು = 10**
ವಿಶೇಷ ಸೂಚನೆ: 1. ಅಧಿಸೂಚನೆಯನ್ನು ಪಾಲಿಕೆಯ ವೆಬ್ ಸೈಟ್ www.kalaburagicity.mrc.gov.inನಲ್ಲಿ ಹಾಗೂ ಪಾಲಿಕೆ ಕಚೇರಿಯ ಸೂಚನಾ ಫಲಕದಲ್ಲಿ ವೀಕ್ಷಿಸಬಹುದು. 2. ಈ ನೇಮಕಾತಿಯು ಸರ್ಕಾರ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶ ಮತ್ತು ಸುತ್ತೋಲೆಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ.
ಸಹಿ/- ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಆಯುಕ್ತರು ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/238/ಕೆ.ಎಸ್.ಎಂ.ಸಿ.&ಎ/2026-27

ಲೆಬನಾನ್ ಮೇಲೆ ಇಸ್ರೇಲ್ ದಾಳಿಗೆ ಪ್ರತೀಕಾರ | ಮತ್ತಷ್ಟು ಆಕ್ರಮಣಕಾರಿ ನಿಲುವಿನ ಸೂಚನೆ ನೀಡಿದ ಟೆಹರಾನ್

ಹರ್ಮುಜ್ ಸಂಧಿಗೆ ಮತ್ತೆ ಇರಾನ್ ನಿರ್ಬಂಧ

ಟೆಹರಾನ್: ಅಮೆರಿಕ ಜತೆಗಿನ ಶಾಂತಿ ಒಪ್ಪಂದದ ಹೊರತಾಗಿಯೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿದ ಹಿನ್ನೆಲೆಯಲ್ಲಿ ಹರ್ಮುಜ್ ಜಲಸಂಧಿಯನ್ನು ಇರಾನ್ ಮತ್ತೊಮ್ಮೆ ಬಂದ್ ಮಾಡಿದೆ.

''ಅಮೆರಿಕ, ಇಸ್ರೇಲ್ ದೇಶಗಳು ಶಾಂತಿ ಹಾಗೂ ಕದನ ವಿರಾಮ ಒಪ್ಪಂದ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಜಲಮಾರ್ಗದಲ್ಲಿ ಸಂಚಾರವನ್ನು ನಿರ್ಬಂಧಿಸಲಾಗಿದೆ,'' ಎಂದು ಇರಾನಿಯನ್ ಹಿರಿಯ ಮಿಲಿಟರಿ ಕಮಾಂಡರ್ ಮಾಹಿತಿ ನೀಡಿದ್ದಾರೆ.

''ಯಹೂದಿ ಆಡಳಿತ ಲೆಬನಾನ್‌ನಲ್ಲಿ ಮಾರಣ ಹೋಮ ಮುಂದುವರಿಸಿದೆ. ಅಮಾಯಕ ಜನರನ್ನು ನಿರ್ದಯವಾಗಿ ಕೊಲ್ಲುತ್ತಿದೆ. ಸಾವಿರಾರು ಜನರನ್ನು ನಿರಾಶ್ರಿತರನ್ನಾಗಿ ಮಾಡಿದೆ. ಒಪ್ಪಂದದ ಪ್ರಕಾರ ಲೆಬನಾನ್ ದಕ್ಷಿಣ ಪ್ರದೇಶದಿಂದ ಇಸ್ರೇಲ್ ರಕ್ಷಣಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡಿಲ್ಲ. ಆಕ್ರಮಣಕಾರಿ ನೀತಿ ಮುಂದುವರಿಸಿದ ನಿಲುವು ಖಂಡಿಸಿ, ಹರ್ಮುಜ್ ಜಲಮಾರ್ಗದ ಮೇಲೆ ನಿರ್ಬಂಧ ವಿಧಿಸಲಾಗಿದೆ,'' ಎಂದು ಇರಾನ್ ಮಿಲಿಟರಿ ಕೇಂದ್ರ ಕಚೇರಿ ತಿಳಿಸಿದೆ.

''ಒಪ್ಪಂದದ ಉಲ್ಲಂಘನೆಗೆ ಪ್ರತಿಕ್ರಿಯೆಯ ಮೊದಲ ಹೆಜ್ಜೆಯಾಗಿ ಜಲಮಾರ್ಗದ ಸಂಚಾರ ನಿಯಂತ್ರಿಸಲಾಗಿದೆ. ಆಕ್ರಮಣಕಾರಿ ನೀತಿ ಮುಂದುವರಿಸಿದರೆ ಮತ್ತಷ್ಟು ಕಠಿಣ ಕ್ರಮಗಳು ಎದುರಾಗಲಿವೆ,'' ಎಂದು ಇರಾನ್ ಆಡಳಿತ ಎಚ್ಚರಿಕೆ ನೀಡಿದೆ.

34 ಜನರ ಸಾವು: ಅಮೆರಿಕ-ಇರಾನ್ ಒಪ್ಪಂದದ ಬಳಿಕವೂ ಲೆಬನಾನ್ ಮೇಲೆ ದಾಳಿ ಮುಂದುವರಿಸಿದ ಇಸ್ರೇಲ್ ರಕ್ಷಣಾ ಪಡೆಗಳ ದಾಳಿಗೆ ಕಳೆದ 36 ಗಂಟೆ ಅವಧಿಯಲ್ಲಿ 34 ನಾಗರಿಕರು ಸಾವಿಗೀಡಾಗಿದ್ದಾರೆ. ಶುಕ್ರವಾರ ಲೆಬನಾನ್‌ನ ಹೆಜ್ಬೊಲ್ಲಾ ಪಡೆ ಕೇಂದ್ರ ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ 18 ಜನ ಮೃತಪಟ್ಟಿದ್ದರೆ, ಶನಿವಾರ ಮುಂದುವರಿದ ದಾಳಿಯಲ್ಲಿ ಮತ್ತೆ 16 ಮಂದಿ ಸಾವಿಗೀಡಾಗಿದ್ದಾರೆ. ಶಾಂತಿ ಒಪ್ಪಂದ ಧಿಕ್ಕರಿಸಿರುವ ಇಸ್ರೇಲ್, ಲೆಬನಾನ್‌ನಿಂದ ರಕ್ಷಣಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಲು ನಿರಾಕರಿಸಿದೆ ಎಂದು ವರದಿಯಾಗಿದೆ.

ಜಿನೇವಾದಲ್ಲಿ ಮಾತುಕತೆ?

ಅಮೆರಿಕ-ಇರಾನ್ ನಡುವಿನ ಶಾಂತಿ ಒಪ್ಪಂದ ಅಂತಿಮಗೊಳಿಸಲು ಸ್ವಿಡ್ಜರ್ಲೆಂಡ್‌ನ ಜಿನೇವಾದಲ್ಲಿ ಮಾತುಕತೆಗೆ ವೇದಿಕೆ ಸಜ್ಜಾಗಿದೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ ಮಾತುಕತೆ ನಡೆಸಲು ಸ್ವಿಡ್ಜರ್ಲೆಂಡ್‌ಗೆ ತೆರಳಲಿದೆ. ಒಪ್ಪಂದದ 14 ಅಂಶಗಳ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ ಎಂದು ವರದಿಯಾಗಿದೆ.

ಲೆಬನಾನ್ ಮೇಲಿನ ಇಸ್ರೇಲ್ ದಾಳಿ ಬಳಿಕ ಮಾತುಕತೆಗೆ ಹಿಂದೇಟು ಹಾಕಿದ್ದ ಇರಾನ್ ಮನವೊಲಿಕೆ ಪ್ರಯತ್ನ ಮಾಡಲಾಗಿದೆ. ಅಮೆರಿಕ ಅಧ್ಯಕ್ಷರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಟ್ರಂಪ್ ಅಳಿಯ ಜೆರೇಡ್ ಕುಶ್ನರ್ ಜತೆಗೂಡಿ ಇರಾನ್ ಆಡಳಿತದ ಮನವೊಲಿಸುತ್ತಿದ್ದಾರೆ ಎನ್ನಲಾಗಿದೆ.

''ಇರಾನ್ ಜತೆಗಿನ ಸಂಧಾನ ಮಾತುಕತೆ ಧನಾತ್ಮಕ ದಿಕ್ಕಿನಲ್ಲಿ ಸಾಗಿವೆ. ಸ್ವಿಡ್ಜರ್ಲೆಂಡ್‌ನಲ್ಲಿ ಅಂತಿಮ ಸುತ್ತಿನ ಮಾತುಕತೆಯಲ್ಲಿ ಇರಾನಿಯನ್ ನಿಯೋಗ ಪಾಲ್ಗೊಳ್ಳುವ ವಿಶ್ವಾಸವಿದೆ. ಮುಂದಿನ 48 ಗಂಟೆ ಅವಧಿಯಲ್ಲಿ ನಾನು ಸಹ ಮಾತುಕತೆಯಲ್ಲಿ ಭಾಗಿಯಾಗುವೆ,'' ಎಂದು ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ.

ಭಾರತದ 9 ಹಡಗು ಗುರುತು: ಸಂಘರ್ಷ ಪೀಡಿತ ಹರ್ಮುಜ್ ಜಲಸಂಧಿ ಸಮೀಪ ಸಿಲುಕಿದ ಭಾರತದ 9 ಹಡಗುಗಳನ್ನು ಗುರುತಿಸಲಾಗಿದೆ. ಪರ್ಷಿಯನ್ ಕೊಲ್ಲಿಯಲ್ಲಿ ಭಾರತಕ್ಕೆ ಸಂಬಂಧಿಸಿದ ಒಂದು ಎಲ್‌ಪಿಜಿ, 8 ಕಚ್ಚಾತೈಲ ಹೊತ್ತ 9 ಹಡಗುಗಳಿವೆ. ಎಲ್ಲಾ ವಾಣಿಜ್ಯ ಹಡಗುಗಳು, ನಾವಿಕರು ಸೇರಿದಂತೆ ಭಾರತೀಯ ಸಿಬ್ಬಂದಿಯನ್ನು ಸ್ಥಳಾಂತರಿಸಲು ಕೇಂದ್ರ ಸರಕಾರ ಮುಂದಾಗಿದೆ.

ಬಿಕ್ಕಟ್ಟಿನ ಪರಿಸ್ಥಿತಿ ಹಾಗೂ ಪರ್ಷಿಯನ್ ಕೊಲ್ಲಿಯಲ್ಲಿರುವ ಸ್ವತ್ತುಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ವಾಣಿಜ್ಯ ಹಡಗುಗಳು ಸುರಕ್ಷಿತ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಬಂದರು, ಹಡಗು, ಜಲಮಾರ್ಗ ಸಚಿವಾಲಯ ತಿಳಿಸಿದೆ.

ಎಫ್‌ಎಟಿಎಫ್ ಉಪಾಧ್ಯಕ್ಷ ಸ್ಥಾನ ಭಾರತಕ್ಕೆ

ಹೊಸದಿಲ್ಲಿ: ಹಣ ಅಕ್ರಮ ವರ್ಗಾವಣೆ, ಭಯೋತ್ಪಾದನೆಗೆ ಹಣದ ನೆರವು ತಡೆಯುವ ಜಾಗತಿಕ ಹಣಕಾಸು ಕ್ರಿಯಾ ಕಾರ್ಯ ಪಡೆಯ (ಎಫ್‌ಎಟಿಎಫ್) ಉಪಾಧ್ಯಕ್ಷ ಸ್ಥಾನ ಮೊದಲ ಬಾರಿಗೆ ಭಾರತಕ್ಕೆ ಒಲಿದಿದೆ. ಹಿರಿಯ ಐಎಎಸ್ ಅಧಿಕಾರಿ ವಿವೇಕ್ ಅಗರ್ವಾಲ್ ಅವರು ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿರುವ ಎಫ್‌ಎಟಿಎಫ್ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ವಿವೇಕ್ ಅಗರ್ವಾಲ್ ಆಯ್ಕೆಯಾದರು. ಪ್ರಸ್ತುತ ಎಫ್‌ಎಟಿಎಫ್ ಉಪಾಧ್ಯಕ್ಷರಾಗಿರುವ ಬ್ರಿಟನ್‌ನ ಗೈಲ್ ಥಾಮ್ಸನ್ ಉತ್ತರಾಧಿಕಾರಿಯಾಗಿ ನೇಮಕಗೊಂಡಿರುವ ಅಗರ್ವಾಲ್ ಅವರು, 2026ರ ಜುಲೈನಿಂದ 2027ರ ಜೂನ್‌ವರೆಗೆ ಅಧಿಕಾರದ ಕಾರ್ಯಭಾರ ನಿರ್ವಹಿಸಲಿದ್ದಾರೆ. ಹಣ ಅಕ್ರಮ ವರ್ಗಾವಣೆ, ಭಯೋತ್ಪಾದನೆಗೆ ಹಣದ ಹರಿವು ಮತ್ತು ಅಂತಾರಾಷ್ಟ್ರೀಯ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ತನಿಖೆಗೆ 1989ರಲ್ಲಿ ಎಫ್‌ಎಟಿಎಫ್ ಸ್ಥಾಪಿಸಲಾಯಿತು. 2010ರಲ್ಲಿ ಭಾರತ ಸಂಸ್ಥೆಯ ಸದಸ್ಯತ್ವ ಪಡೆಯಿತು.

> ಹಣ ಅಕ್ರಮ ವರ್ಗಾವಣೆ ತಡೆ ಸಂಬಂಧ ಭಾರತದ ಸಾಮೂಹಿಕ ಪ್ರಯತ್ನಕ್ಕೆ ಸಿಕ್ಕ ಯಶಸ್ಸು. ಜಾಗತಿಕ ಹಣಕಾಸು ವ್ಯವಸ್ಥೆಯನ್ನು ಸುರಕ್ಷಿತವಾಗಿಡಲು ಎಫ್‌ಎಟಿಎಫ್ ಜತೆಗೂಡಿ ಕೆಲಸ ಮಾಡುವೆ.
>
> **-ವಿವೇಕ್ ಅಗರ್ವಾಲ್**
> ಎಫ್‌ಎಟಿಎಫ್ ಉಪಾಧ್ಯಕ್ಷ

ವಿವೇಕ್ ಯಾರು?: ವಿವೇಕ್ ಅಗರ್ವಾಲ್ 1994ರ ಬ್ಯಾಚ್‌ನ ಮಧ್ಯಪ್ರದೇಶ ಕೇಡರ್ ಐಎಎಸ್ ಅಧಿಕಾರಿ. ಹಿಂದೆ ಎಫ್‌ಎಟಿಎಫ್‌ನ ಭಾರತೀಯ ನಿಯೋಗದ ಮುಖ್ಯಸ್ಥರಾಗಿ ಭಾರತದ ಆರ್ಥಿಕ ಗುಪ್ತಚರ ದಳದ ಯೂನಿಟ್ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಕೇಂದ್ರ ಸರಕಾರದ ಹಣಕಾಸು, ಕೃಷಿ, ನಗರಾಭಿವೃದ್ಧಿ, ಮೂಲಸೌಕರ್ಯ ಇಲಾಖೆಗಳಲ್ಲಿ ಪ್ರಮುಖ ಹುದ್ದೆ ನಿರ್ವಹಿಸಿದ್ದಾರೆ. ಪಿಎಂ-ಕಿಸಾನ್, ಡಿಜಿಟಲ್ ಕೃಷಿ ಮತ್ತು ಕೃಷಿ ಮೂಲಸೌಕರ್ಯ ಅಭಿವೃದ್ಧಿ ನಿಧಿ ಸೇರಿದಂತೆ ಹಲವು ಮಹತ್ವದ ಯೋಜನೆ ಅನುಷ್ಠಾನದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

''ವಿವೇಕ್ ಅಗರ್ವಾಲ್ ನೇಮಕ ಮಾಡಿರುವುದು ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಸಂದ ರಾಜತಾಂತ್ರಿಕ ಯಶಸ್ಸಾಗಿದೆ,'' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಮಹಾರಾಷ್ಟ್ರ ವಿದ್ಯಾರ್ಥಿಗೆ ಅಬುಧಾಬಿ ಕೇಂದ್ರ: ಆರೋಪ ನಿರಾಕರಿಸಿದ ಎನ್‌ಟಿಎ

ಹೊಸದಿಲ್ಲಿ: ನೀಟ್ ಮರು ಪರೀಕ್ಷೆಯ ಮುನ್ನಾ ದಿನ ವಿದ್ಯಾರ್ಥಿಯೊಬ್ಬರ ಪರೀಕ್ಷಾ ಕೇಂದ್ರ ವಿವಾದದ ಬಿರುಗಾಳಿ ಸೃಷ್ಟಿಸಿದೆ. ಭಾರತದಲ್ಲಿರುವ ವಿದ್ಯಾರ್ಥಿಗೆ ದೂರದ ಯುಎಇಯ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರ ನಿಗದಿಪಡಿಸಿರುವ ಆರೋಪ ಕೇಳಿ ಬಂದಿದ್ದು, ಎನ್‌ಟಿಎ ಇದನ್ನು ನಿರಾಕರಿಸಿದೆ.

ಮಹಾರಾಷ್ಟ್ರದ ನಾಗಪುರ ಮೂಲದ ವಿದ್ಯಾರ್ಥಿ ಅಬ್ದುಲ್ಲಾ ಮೊಹಮ್ಮದ್ ತಾಲಿಬ್‌ಗೆ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರ ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ''ನಮ್ಮ ಮಗ ನಾಗಪುರ ಕೇಂದ್ರ ಆಯ್ಕೆ ಮಾಡಿಕೊಂಡಿದ್ದರು. ಆದರೆ, ಎನ್‌ಟಿಎ ದೂರದ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರ ಹಂಚಿಕೆ ಮಾಡಿದೆ. ನಮ್ಮ ಬಳಿ ಪಾಸ್‌ಪೋರ್ಟ್ ಇಲ್ಲ, ವಿದೇಶಕ್ಕೆ ತೆರಳುವಷ್ಟು ಸಾಮರ್ಥ್ಯ, ಸಮಯವೂ ಇಲ್ಲ, ಮುಂದೇನು ಮಾಡಬೇಕು ಎಂಬುದು ತೋಚುತ್ತಿಲ್ಲ,'' ಎಂದು ವಿದ್ಯಾರ್ಥಿ ತಂದೆ ಮೊಹಮ್ಮದ್ ತಾಲಿಬ್ ಹೇಳಿದ್ದಾರೆ.

ಪರೀಕ್ಷಾ ಕೇಂದ್ರ ವಿದ್ಯಾರ್ಥಿ ಆಯ್ಕೆ

ನಾಗಪುರ ವಿದ್ಯಾರ್ಥಿ ಪರೀಕ್ಷಾ ಕೇಂದ್ರದ ವಿವಾದದ ಬಗ್ಗೆ ಸ್ಪಷ್ಟನೆ ನೀಡಿರುವ ಎನ್‌ಟಿಎ, ವಿದ್ಯಾರ್ಥಿಯ ಬಯಕೆಯಂತೆ ಕೇಂದ್ರ ಹಂಚಿಕೆ ಮಾಡಲಾಗಿದೆ. ಮೇ 21ರಂದು ಎನ್‌ಟಿಎ ವೆಬ್‌ಗೆ ಲಾಗ್ ಇನ್ ಆದ ವಿದ್ಯಾರ್ಥಿ, ಎರಡು ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಬುಧಾಬಿ ಮೊದಲ ಹಾಗೂ ದುಬೈ ಕೇಂದ್ರವನ್ನು ಎರಡನೇ ಕೇಂದ್ರವಾಗಿ ಆಯ್ಕೆ ಮಾಡಿಕೊಂಡಿದ್ದರು. ವಿದ್ಯಾರ್ಥಿ ಅಪೇಕ್ಷೆಯಂತೆ ಕೇಂದ್ರ ಹಂಚಿಕೆ ಮಾಡಲಾಗಿತ್ತು. ಆದರೂ, ಜೂನ್ 19 ರಂದು ವಿದ್ಯಾರ್ಥಿಯ ಕೋರಿಕೆಯಂತೆ ಪರೀಕ್ಷಾ ಕೇಂದ್ರವನ್ನು ನಾಗಪುರಕ್ಕೆ ಬದಲಿಸಲಾಗಿದೆ,'' ಎಂದು ಎನ್‌ಟಿಎ ಸ್ಪಷ್ಟಪಡಿಸಿದೆ.

ನೀಟ್ ಆಕಾಂಕ್ಷಿಗಳೇ ಗಮನಿಸಿ

- ಭಾನುವಾರ (ಜೂನ್ 21) ಮಧ್ಯಾಹ್ನ 1.30ಕ್ಕೂ ಮೊದಲು ಪರೀಕ್ಷಾ ಕೇಂದ್ರ ತಲುಪಬೇಕು
- ಮಧ್ಯಾಹ್ನ 2 ಗಂಟೆಗೆ ಪರೀಕ್ಷೆ ಆರಂಭವಾಗಲಿದ್ದು, ಸಂಜೆ 5.15ರವರೆಗೆ ಸಮಯ ಅವಕಾಶ ನೀಡಲಾಗಿದೆ
- ದಿವ್ಯಾಂಗ ವಿದ್ಯಾರ್ಥಿಗಳಿಗೆ ಸಂಜೆ 6.20ರ ತನಕ ಸಮಯ ನೀಡಲಾಗಿದೆ

> ಭಾರತದಲ್ಲಿರುವ ವಿದ್ಯಾರ್ಥಿಗೆ ಯುಎಇಯ ಅಬುಧಾಬಿ ಪರೀಕ್ಷಾ ಕೇಂದ್ರ ಹಂಚಿಕೆ ಮಾಡಿದ ಎನ್‌ಟಿಎ ಯುವ ಜನರ ಬದುಕಿನ ಜತೆ ಚೆಲ್ಲಾಟವಾಡುತ್ತಿದೆ. ಕೇಂದ್ರ ಸರಕಾರ ಮೂಕ ಪ್ರೇಕ್ಷಕನಂತೆ ವರ್ತಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ವಿದ್ಯಾರ್ಥಿಗಳ ಬದುಕನ್ನು ಕತ್ತಲೆಗೆ ದೂಡುತ್ತಿದ್ದಾರೆ.
>
> **-ರಾಹುಲ್ ಗಾಂಧಿ**
> ಲೋಕಸಭೆ ಪ್ರತಿಪಕ್ಷ ನಾಯಕ

ಬಾಂಗ್ಲಾದಲ್ಲಿ ಹಿಂದೂಗಳ ಬೃಹತ್ ಪ್ರತಿಭಟನೆ

ಢಾಕಾ: ಭಗವಾನ್ ಶ್ರೀರಾಮನ ಮೂರ್ತಿಗೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಹಿಂದೂ ಸಮುದಾಯ ಬಾಂಗ್ಲಾದೇಶ ರಾಜಧಾನಿ ಢಾಕಾದಲ್ಲಿ ಭಾರಿ ಪ್ರತಿಭಟನೆ ನಡೆಸಿದೆ.

ರಾಮನ ಮೂರ್ತಿಗೆ ಮಾಡಲಾದ ಅವಮಾನ ಖಂಡಿಸಿ ಶುಕ್ರವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಕೃತ್ಯ ಎಸಗಿದ ದುಷ್ಕರ್ಮಿಗಳ ವಿರುದ್ಧ ಕೂಡಲೇ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಉತ್ತರ ಬಾಂಗ್ಲಾದೇಶದ ಗೈಬಾಂಧಾ ಜಿಲ್ಲೆಯ ಪಲಾಶ್‌ಬಾರಿಯಲ್ಲಿರುವ ಶ್ರೀರಾಮನ ಮೂರ್ತಿ ಹಾಗೂ ಭಾವಚಿತ್ರಕ್ಕೆ ಕೆಲವು ಇಸ್ಲಾಮಿಕ್ ಮೂಲಭೂತವಾದಿ ದುಷ್ಕರ್ಮಿಗಳು ಅವಮಾನ ಮಾಡಿದ್ದಾರೆ. ಮೂರ್ತಿಗೆ ಚಪ್ಪಲಿ ಎಸೆದು ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಲಾಗಿದೆ.

ರಾಮನ ಮೂರ್ತಿಗೆ ಮಾಡಿದ ಅವಮಾನ ಕೃತ್ಯಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಹಿಂದೂ ಸಂಘಟನೆಗಳ ಸದಸ್ಯರು, ಢಾಕಾದ ಶಾಹ್ ಬಾಗ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ನಡೆಸುತ್ತಿರುವ ಹಿಂದೂ ಸಮುದಾಯದ ವಿದ್ಯಾರ್ಥಿಗಳೂ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜಂತರ್‌ಮಂತರ್‌ನಲ್ಲಿ ತಟ್ಟೆ ಸದ್ದು

ಹೊಸದಿಲ್ಲಿ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ಕೇಂದ್ರದ ಉತ್ತರದಾಯಿತ್ವಕ್ಕೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಜಂತರ್‌ಮಂತರ್‌ನಲ್ಲಿ ಶನಿವಾರ ನಡೆಸಿದ ಎರಡನೇ ಪ್ರತಿಭಟನೆಯಲ್ಲಿ, ಬೃಹತ್ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಬೆಂಬಲಿಗರು ಭಾಗಿಯಾಗಿದ್ದರು. ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ನೀಡಿದ್ದ ಕರೆ ಮೇರೆಗೆ ಪ್ರತಿಭಟನಕಾರರು, ಚಮಚದಿಂದ ತಟ್ಟೆಗೆ ಬಡಿಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಪಾರದರ್ಶಕವಾಗಿ ಪರೀಕ್ಷೆ ನಡೆಸುವಂತೆ, ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡುವಂತೆ ಮತ್ತು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂಬ ಬರಹಗಳಿದ್ದ ಭಿತ್ತಿಫಲಕಗಳನ್ನು ಅವರು ಪ್ರದರ್ಶಿಸಿದರು. ''ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಲು ಹೋರಾಡುವುದಾಗಿ,'' ಎಂದು ದೀಪ್ಕೆ ತಿಳಿಸಿದರು. ಹೋರಾಟಗಾರ ಸೋನಂ ವಾಂಗ್ಚುಕ್ ಅವರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ದೇಗುಲದ ಚಾವಣಿ ಕುಸಿದು ಆರು ಭಕ್ತರ ದುರ್ಮರಣ

ಮುಂಬಯಿ: ಮಹಾರಾಷ್ಟ್ರದ ಪರ್ಭಾಣಿ ಜಿಲ್ಲೆಯ ಯಶವಾಡಿಯಲ್ಲಿ ಮಾರುತಿ ದೇವಾಲಯದ ನಿರ್ಮಾಣ ಹಂತದ ಸಭಾಮಂಟಪದ ಚಾವಣಿ ಕುಸಿದು ಬಿದ್ದು, ಆರು ಭಕ್ತರು ಮೃತಪಟ್ಟಿದ್ದಾರೆ.

ಸುಮಾರು 40 ಮಂದಿ ಅವಶೇಷಗಳಡಿ ಸಿಲುಕಿದ್ದಾರೆ. ಮಾರುತಿ ಮಂದಿರದ ಮುಂಭಾಗ ನಿರ್ಮಿಸಲಾಗುತ್ತಿದ್ದ ಸಭಾಮಂಟಪದ ಚಾವಣಿ ಶನಿವಾರ ಮಧ್ಯಾಹ್ನ 3.30ರ ಸಮಯದಲ್ಲಿ ದಿಢೀರ್ ಕುಸಿದು ಬಿದ್ದಿದೆ. ದೇವರ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತಿದ್ದ ಭಕ್ತರು ಅವಶೇಷಗಳ ಅಡಿಯಲ್ಲಿ ಸಿಲುಕಿದರು. ಶನಿವಾರದ ವಿಶೇಷ ಪೂಜೆಗೆ ಹೆಚ್ಚಿನ ಭಕ್ತರು ದೇವಾಲಯದಲ್ಲಿ ಸೇರಿದ್ದರು. ಚಾವಣಿ ಕುಸಿಯುತ್ತಿದ್ದಂತೆ ಆತಂಕಗೊಂಡ ಜನ ಓಡಿಹೋಗಲು ಯತ್ನಿಸಿದರು. ಸ್ಥಳದಲ್ಲೇ ಆರು ಮಂದಿ ಮೃತಪಟ್ಟಿದ್ದಾರೆ. ಅವಶೇಷಗಳ ಅಡಿಯಲ್ಲಿ ಸಿಲುಕಿದ ಸುಮಾರು 40 ಮಂದಿ ರಕ್ಷಣೆಗೆ ಕಾರ್ಯಾಚರಣೆ ನಡೆಸಲಾಗಿದೆ.

ಮಹಾರಾಷ್ಟ್ರದಲ್ಲಿ ರಿಲಯನ್ಸ್ ಖಾಸಗಿ ವಿವಿ

ಮುಂಬಯಿ: ''ಮಹಾರಾಷ್ಟ್ರದಲ್ಲಿ ಖಾಸಗಿ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು. ಇದಕ್ಕೆ ಈಗಾಗಲೇ ಅನುಮೋದನೆ ಪಡೆಯಲಾಗಿದೆ. ದ್ರೋಣಗಿರಿಯಲ್ಲಿ 410 ಎಕರೆ ವ್ಯಾಪ್ತಿಯಲ್ಲಿ ಹೊಸ ವಿವಿ ತಲೆಯೆತ್ತಲಿದೆ. ಇದು ಕೃತಕ ಬುದ್ಧಿಮತ್ತೆ (ಎಐ) ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಮೇಲೆ ಕೇಂದ್ರೀಕರಿಸುವ ಏಳು ವಿಶ್ವ ದರ್ಜೆಯ ಕಾಲೇಜುಗಳಿಗೆ ನೆಲೆಯಾಗಲಿದೆ. ಇದು ಪದವಿ ಹಾಗೂ ಸ್ನಾತಕೋತ್ತರ ವಿಭಾಗಗಳಲ್ಲಿ ವಿಭಿನ್ನವಾದ ಕೋರ್ಸ್‌ಗಳಿಗೆ ಅವಕಾಶ ಕಲ್ಪಿಸಲಿದೆ,'' ಎಂದು ರಿಲಯನ್ಸ್ ಪ್ರತಿಷ್ಠಾನದ ಸಂಸ್ಥಾಪಕಿ ಹಾಗೂ ಅಧ್ಯಕ್ಷೆ ನೀತಾ ಅಂಬಾನಿ ಹೇಳಿದ್ದಾರೆ.

ಇದಲ್ಲದೆ, ''ರಿಲಯನ್ಸ್ ಸಂಸ್ಥೆಯು ವೈದ್ಯಕೀಯ ನಗರಿಯನ್ನು ಸ್ಥಾಪಿಸಲಿದೆ. ಸೆವೆನ್ ಹಿಲ್ಸ್ ಆಸ್ಪತ್ರೆಯನ್ನು ನವೀಕರಿಸಲಿದೆ. 'ಸೆವೆನ್ ಹಿಲ್ಸ್ ಆಸ್ಪತ್ರೆಯನ್ನು ಮುಂಬಯಿಯ ಅತಿ ದೊಡ್ಡ ಆಸ್ಪತ್ರೆಗಳಲ್ಲಿ ಒಂದನ್ನಾಗಿ ಮಾಡಲು ಯೋಜಿಸಲಾಗಿದೆ. ಇದು 1,500 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಲಿದೆ. ಇಲ್ಲಿ ಕ್ಲಿನಿಕಲ್ ರಿಸರ್ಚ್, ಕ್ಯಾನ್ಸರ್ ಆರೈಕೆ, ತುರ್ತು ಮತ್ತು ಆಘಾತ (ಟ್ರಾಮಾ) ಸೇವೆಗಳು, ಅಂಗಾಂಗ ಕಸಿಯಂತಹ ಚಿಕಿತ್ಸೆ ಒದಗಿಸಲಾಗುತ್ತದೆ,'' ಎಂದೂ ನೀತಾ ಅಂಬಾನಿ ತಿಳಿಸಿದ್ದಾರೆ.

ಮಾಲಿನ್ಯ ಮುಕ್ತಿ: ''ಮುಂಬಯಿನಲ್ಲಿ ಬೃಹತ್ ಉದ್ಯಾನವನ್ನೂ ನಿರ್ಮಿಸುತ್ತೇವೆ. ಇಲ್ಲಿ ಕ್ರೀಡಾ ಸೌಲಭ್ಯ, ಟ್ರೀ ಮ್ಯೂಸಿಯಂ ಇರುತ್ತದೆ. ಇದು ಮುಂಬಯಿ ಜನತೆಗೆ ಮಾಲಿನ್ಯದಿಂದ ಮುಕ್ತಿ ನೀಡಿ, ಆರೋಗ್ಯಕರವಾಗಿರುವ ಅವಕಾಶ ಕಲ್ಪಿಸುತ್ತದೆ,'' ಎಂದು ನೀತಾ ಅಂಬಾನಿ ತಿಳಿಸಿದ್ದಾರೆ. ''130 ಎಕರೆ ವ್ಯಾಪ್ತಿಯಲ್ಲಿ ಕೋಸ್ಟಲ್ ರೋಡ್ ಗಾರ್ಡನ್ಸ್ ತಲೆಯೆತ್ತುತ್ತದೆ. 60 ಸಾವಿರಕ್ಕೂ ಹೆಚ್ಚು ಮರಗಳಿಗೆ 'ಆಶ್ರಯ ತಾಣ'ವಾಗುತ್ತದೆ. ಇದು ನ್ಯೂಯಾರ್ಕ್‌ನ ಸೆಂಟ್ರಲ್ ಪಾರ್ಕ್, ಲಂಡನ್‌ನ ಹೈಡ್ ಪಾರ್ಕ್ ಹಾಗೂ ಸಿಂಗಪುರದ ಬೊಟಾನಿಕ್ ಗಾರ್ಡನ್ಸ್ ರೀತಿಯಲ್ಲಿ ಮುಂಬಯಿಗೆ ಕೋಸ್ಟಲ್ ರೋಡ್ ಗಾರ್ಡನ್ ಇರುತ್ತದೆ,'' ಎಂದು ಹೇಳಿದ್ದಾರೆ.

ಫೋಟೋಗಾಗಿ ಮೆಲೋನಿ ದುಂಬಾಲು ಎಂದು ಮತ್ತೆ ಹೇಳಿದ ಟ್ರಂಪ್!

ವಾಷಿಂಗ್ಟನ್: ''ಫ್ರಾನ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯಲ್ಲಿ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ನನ್ನೊಂದಿಗೆ ಫೋಟೊ ತೆಗೆದುಕೊಳ್ಳಲು ಪದೇಪದೆ ಬೇಡಿದ್ದರು,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿರುವ ಆರೋಪಕ್ಕೆ ಇಟಲಿ ಪ್ರಧಾನಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೂ ಸುಮ್ಮನಾಗದ ಟ್ರಂಪ್ ಮತ್ತೆ ತಮ್ಮ ಹಠದ ಚಾಳಿ ಮುಂದುವರಿಸಿದ್ದಾರೆ. ತಮ್ಮ ಸಾಮಾಜಿಕ ಮಾಧ್ಯಮವಾದ 'ಟ್ರುತ್'ನಲ್ಲಿ ಈ ಕುರಿತು ಬರೆದುಕೊಂಡಿರುವ ಡೊನಾಲ್ಡ್ ಟ್ರಂಪ್,

''ಜಿ7 ಸಭೆಯುದ್ದಕ್ಕೂ ಇಟಲಿ ಪ್ರಧಾನಿ ಮೆಲೋನಿ ನನ್ನ ಹಿಂದೆ ಬಿದ್ದು ಫೋಟೋಗಾಗಿ ವಿನಂತಿಸುತ್ತಿದ್ದರು. ಇಟಲಿಯಲ್ಲಿ ಮೆಲೋನಿ ಅವರ ಜನಪ್ರಿಯತೆ ದಿನದಿಂದ ದಿನಕ್ಕೆ ಕುಸಿಯುತ್ತಿದೆ,'' ಎಂದು ಕುಟುಕಿದ್ದಾರೆ.

ಖಡಕ್ ತಿರುಗೇಟು

ಟ್ರಂಪ್ ಅವರ ಸರಣಿ ಆರೋಪಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ''ಡೊನಾಲ್ಡ್ ಟ್ರಂಪ್ ಹೇಳುತ್ತಿರುವುದೆಲ್ಲಾ ಸಂಪೂರ್ಣ ಸುಳ್ಳು ಮತ್ತು ಅವರೇ ಸೃಷ್ಟಿಸಿದ ಕಥೆ. ಅಮೆರಿಕದ ಅಧ್ಯಕ್ಷರು ತಮ್ಮದೇ ಮಿತ್ರ ದೇಶಗಳ ನಾಯಕರೊಂದಿಗೆ ಈ ರೀತಿ ಹಗುರವಾಗಿ ವರ್ತಿಸುತ್ತಿರುವುದು ನನಗೆ ತೀವ್ರ ಆಶ್ಚರ್ಯ ತಂದಿದೆ ಮತ್ತು ಅವರು ಈ ರೀತಿ ನಡೆದುಕೊಳ್ಳುತ್ತಿರುವುದು ಇದೇ ಮೊದಲೇನಲ್ಲ,'' ಎಂದು ಮೆಲೋನಿ ತಿರುಗೇಟು ನೀಡಿದ್ದಾರೆ.

ಪ್ರಜಾಸತ್ತಾತ್ಮಕ ಆಡಳಿತದಿಂದ ಜನರ ಬದುಕು ಸುಧಾರಣೆ

'ಪ.ಬಂಗಾಳದಲ್ಲಿ ಪರಿವರ್ತನೆ ಗಾಳಿ'

ಕೋಲ್ಕೊತಾ: ''ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ ಪಶ್ಚಿಮ ಬಂಗಾಳ ಪರಿವರ್ತನೆಯ ಹಾದಿಯಲ್ಲಿ ಸಾಗುತ್ತಿದೆ. ಪ್ರಜಾಸತ್ತಾತ್ಮಕ ಆಡಳಿತ ಜನರ ಬದುಕನ್ನು ಸುಧಾರಿಸುವ ಕೆಲಸ ಮಾಡುತ್ತಿದೆ,'' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಶನಿವಾರ ಪಶ್ಚಿಮ ಬಂಗಾಳ ದಿವಸದ ಅಂಗವಾಗಿ ಹೂಗ್ಲಿಯಲ್ಲಿ ನಡೆದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ''ಸಾರ್ವಜನಿಕರ ಹಣವನ್ನು ಲೂಟಿ ಮಾಡಿದವರನ್ನು ಬಿಡುವುದಿಲ್ಲ. ಭ್ರಷ್ಟಾಚಾರ, ಹಗರಣದ ಮೂಲಕ ಜನರ ಹಣ ನುಂಗಿದವರು ಜೈಲು ಸೇರುವುದು ಖಚಿತ,'' ಎಂದು ಹೇಳಿದರು.

''ಹಿಂದೆ ಆಡಳಿತ ನಡೆಸಿದ ಪಕ್ಷ ಅಭಿವೃದ್ಧಿಯನ್ನು ಕಡೆಗಣಿಸಿತು. ಲೂಟಿ ಆಡಳಿತದಿಂದ ರಾಜ್ಯದ ಖಜಾನೆಯನ್ನು ಬರಿದು ಮಾಡಿತು. ಉದ್ಯೋಗ ಅರಸಿ ಜನತೆ ವಲಸೆ ಹೋಗುವಂಥ ವಾತಾವರಣ ಸೃಷ್ಟಿಸಿತು,'' ಎಂದು ಟಿಎಂಸಿ ಹೆಸರು ಹೇಳದೇ ಮೋದಿ ವಾಗ್ದಾಳಿ ನಡೆಸಿದರು. ''ಬಿಜೆಪಿ ನೇತೃತ್ವದ ಸರಕಾರ ಬಂಗಾಳದಲ್ಲಿ ಅಭಿವೃದ್ಧಿಯ ಹೊಸ ಮಾರ್ಗ ತೆರೆದಿದೆ. ಪಶ್ಚಿಮಬಂಗಾಳ ದಿನ ರಾಜ್ಯದ ಅಭಿವೃದ್ಧಿಗೆ ಸ್ಫೂರ್ತಿ ನೀಡಲಿದೆ,'' ಎಂದು ಮೋದಿ ಹೇಳಿದರು.

23ನೇ ಪಿಎಂ ಕಿಸಾನ್ ಕಂತು ಬಿಡುಗಡೆ

ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ 23ನೇ ಕಂತಿನ ಹಣವನ್ನು ಮೋದಿ ಬಿಡುಗಡೆ ಮಾಡಿದರು. ಒಟ್ಟು 9.44 ಕೋಟಿ ರೈತರ ಖಾತೆಗಳಿಗೆ 18,800 ಕೋಟಿ ರೂ. ಹಣವನ್ನು ಜಮೆ ಮಾಡಲಾಯಿತು. ಇದೇ ವೇಳೆ ರಾಜ್ಯದಲ್ಲಿ ತಡೆ ಹಿಡಿಯಲಾಗಿದ್ದ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗಳಿಗೆ ಚಾಲನೆ ನೀಡಲಾಯಿತು.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

VIKAS SCHOOL BSK 3rd Stage Bangalore-85 Require B.Ed TEACHERS to Teach I Language ENGLISH for High School and Primary Classes, Diploma ARTS & CRAFTS for PRIMARY & NURSERY. Contact: 9448110651 / 96204-48778 between 11- 1 pm

ADMINISTRATION

EXECUTIVES

ಪಾರ್ಟ್ ಟೈಮ್ ಕೆಲಸ ಬಯಸುವವರು ನೀವು ಇರುವ ಜಾಗದಲ್ಲಿ 1 ಗಂಟೆ ಕೆಲಸಮಾಡಿ ಪ್ರತಿದಿನ 500 ಗಳಿಂದ ಸಾವಿರ ರೂ ಹಣ ಗಳಿಸುವ ಅವಕಾಶ ಇದೆ. 97433 09498

MARKETING, ADVERTISING & SALES

SALES

WANTED Sales Managers (M/F) Sales Executives, Tele callers for a reputed real estate company. Opportunity to earn up to 40,000 P.M. Ph 8867627879

GENERAL

ಎಳನೀರು ಕತ್ತರಿಸುವ ಕಾರ್ಮಿಕರು ಬೇಕಾಗಿದ್ದಾರೆ



ಬೆಂಗಳೂರಿನಾದ್ಯಂತ ಮಳಿಗೆಗಳಿಗೆ

ಎಳನೀರು ಕತ್ತರಿಸುವ ಕಾರ್ಮಿಕರು (ಅನುಭವವಿರುವವರು) ಬೇಕಾಗಿದ್ದಾರೆ / ಕುಟುಂಬಕ್ಕೆ ಆದ್ಯತೆ. ಪಾರ್ಟ್ ಟೈಮ್ ವಿದ್ಯಾರ್ಥಿಗಳಿಗೂ ಅವಕಾಶ. ವಾಸತಿಯೊಂದಿಗೆ ಉತ್ತಮ ಸಂಬಳ ಜೊತೆಗೆ ಇನ್ಸೆಂಟಿವ್ಸ್ ಇರುತ್ತದೆ. 8884488887 / 9035813667

OTHER VACANCIES

CALL CENTRES

DYUTI technologies

DYUTI Hiring

MORTGAGE & TITLE PROCESS

Freshers & Experienced

1. Title Examiner/ Searcher/ QC Associate-with 1 to 4 yrs. exp.in US title industry.
2. Title Associate/ Processor with 0 to 2 years' experience.
3. Title Abstractors and commitment typing with 0 to 2 year' experience with good knowledge in real estate documents
4. US Tax Searchers and Lien Certification (Voice Process) with 0 to 4 years' experience US accent & good knowledge in US Tax Lien certificates

Eligibility:
- Graduates with good communication & typing skills
- (BE./B. Tech/PG not preferred)

"Male Candidate should be flexible to work in shifts"

Interested send resume to: careers@dyutitech.com

OR WALK-IN
Betn. 11 am to 5 pm

At #25/1, Lotus, 2nd Floor, Bull Temple Rd, Basvanagudi, Bangalore- 560004. Ph: 99019-07776 / 99161-97775

DRIVERS

WANTED experienced driver for office & personal requirements. Person residing in and around Sheshadri puram, should have a valid Driving License and should know to speak Kannada, English & Hindi. Salary based on their experience. Contact : 98452 49184.

MULTIPLE VACANCIES

ಬೆಂಗಳೂರಿನಲ್ಲಿ ಕೆಲಸ ಮಾಡಲು 18 ವರ್ಷ ಮೇಲ್ಪಟ್ಟ ಯುವಕರು ಬೇಕಾಗಿದ್ದಾರೆ. Drivers(Goods)-18k, Electrician-18k, Carpenter-18k, Helpers-15k ಉಚಿತ ವಸತಿ Contact:9845026220

WANTED Electricians Helpers for UPS Battery company and Female office assistant in JP Nagar 7th phase. 9900069030 / 7788990666

JOB WANTED

WANTED Exp Field officer near doddbalapura and office accountant near Bangalore contact: 9845044293

ಆಸ್ತಿಗಳು PROPERTY

BUNGALOW & VILLA

LUXURY 4BHK Villa For Sale in Goa, Pvt Swimming Pool, Fully furnished Rs 13.50 cre call: 9881931111 Broker Excuse.

LAND FOR SALE

SITE for Sale in KHB Bagepalli Baghayanagar 1472 sq ft expecting 32 lakhs Contact No : 9972533323

BANGALORE PROPERTIES

HOSUR ROAD

EXCELLENT Villa Plot For Sale, 30×50, West Facing, The Imperial Address, Hosur Road, Chandapura Main Road, Bmrda Approved, E Katha, Price Rs.7000/Sft, For Details, Please Contact, Krishna Murthy, 9845465339.

FOR SALE

BANGALORE

2-BHK For Sale in RR Nagar, behind Nimishamba temple.Car park,Lift,Balconies north entrc. Cont-9739378789

INDEPENDENT HOUSES

ತಿರುವಣ್ಣಾಮಲೈನಲ್ಲಿರುವ ಆಸ್ತಿ 2 BHK ಇಂಡಿಪೆಂಡೆಂಟ್ ಮನೆ ಮಾರಾಟಕ್ಕಿದೆ ಸಂಪರ್ಕ - 9490751280

ವ್ಯಾಪಾರ BUSINESS

BUSINESS OFFERS

ವಾಂಟೆಡ್ ಐಸ್ ಕ್ರೀಮ್ ಡಿಸಟ್ರಿಬ್ಯೂಟರ್ ಇನ್ ಗೌರಿಬಿಡನುಟ್, ಕಾಂಟಾಕ್ಟ್ ಮೊಬೈಲ್ ನಂಬರ್ - 9738038133 / 9901972771

BUSINESS PROPOSALS

INVESTORS WANTED Educational institute setup in Jayanagar, Bengaluru seeks financial partners/investors. High growth potential. Call: 9845677100.

DEALERS

ಗ್ರ್ಯಾಂಡ್ ಟೀ ಫ್ಯಾಕ್ಟರಿ ಅಸ್ಸಾಂ ಹೋಟೆಲ್ ಬ್ಲೆಂಡ್ ಡೀಲರ್/ ಏಜೆಂಟ್‌ಗಳು ಬೇಕಾಗಿದ್ದಾರೆ ಕರೆ ಮಾಡಿ.9445822946

INVESTMENT

LOOKING for Business Investment Partners for SDT Computer Education, Jayanagar 4th Block. For more information, please Contact: 79756 82244

CAUTION NOTICE

Notice is hereby given to the general public that the following properties are the subject matter of **O.S. No. 773/2026** pending before the court of **PRL. SENIOR CIVIL JUDGE, BENGALURU RURAL** FR No : **O.S/778/2026**

By an Interim Order dated **April 09th 2026** passed in the said suit, the Hon'ble Court has restrained the defendants and/or any person claiming through them from alienating, transferring, selling, mortgaging, creating third-party interests, or otherwise encumbering the properties described below, pending disposal of the suit and/or until further orders of the Court.

PROPERTY DETAILS

1. Amogaya Adorit – by Amogaya Projects – Kattamanallur Old Madras Road, Survey number 46/9 & 46/10 (1 acre 20 guntas) Bangalore East taluk, Bidarahalli hobli, Huskuru village, Bangalore www.amogayaadorit.in

2. SLN Nidhi Palms – by SLN Projects
Survey number 99/2, 99/6 & 99/7 (4 acres 31 guntas) Bangalore East taluk, Biidarahalli 2 Hobli, Baiyyappanahalli village, Bangalore www.slnnidhipalms.co.in

3. Survey number 46/6, 46/7 & 46/8 (28 guntas)
Bangalore East taluk, Bidarahalli hobli, Huskuru village, Bangalore

Accordingly, all members of the public, Prospective purchasers, Investors, Financial institutions and any other interested persons are hereby cautioned not to enter into any transaction whatsoever in respect of the above properties.

Any person dealing with the aforesaid properties shall do so at their own risk, cost, and consequences, subject to the outcome of the said proceedings and the orders of the Hon'ble Court. Any attempt to alienate, transfer, or create third-party rights in violation of the Interim Order may attract appropriate legal proceedings and consequences under applicable law.

This notice is issued in the interest of safeguarding the rights of the parties and to inform the general public of the subsisting Interim Order of the Hon'ble Court.

Issued by: C Rudresh | Date: 21-06-2026
Address & Ph : Pruksa Silvana, Ph - 99809 18985 | Place: Bengaluru
Advocate's Name: M D Raghunath – Legal Axis

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ

ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ

ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು

ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.

ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು

ಪ್ರವಾಸ TRAVEL

PACKAGE TOURS

28.06.2026, 1ದಿನ 3 ಆಂಜನೇಯ ಬ್ರಾಂತೇಶ, ಶಾಂತೇಶ, ಕಾಂತೇಶ. 11.07.2026, 2 ದಿನಗಳು ಹಂಪಿ, ಅಂಜನಾದ್ರಿ ಬೆಟ್ಟ, ನವಬೃಂದಾವನ, ಟಿ.ಬಿ. ಡ್ಯಾಂ, ಇತ್ಯಾದಿ. 94814 33157.

TOURS & TRAVELS

***ಶ್ರೇಯಸ್** ಟೂರ್ಸ್* 25.06.26 6ದಿನ ಸಂಪೂರ್ಣ ಅಹೋಬಲಂ ನವನಾರಸಿಂಹ, ಶ್ರೀಶೈಲಂ, ನವನಂದಿ, ಮಂತ್ರಾಲಯ, ಯಾಗಂಟಿ, ಬೇಲಂ ಗುಹೆ,ಗಂಡಿಕೋಟ. 03.07.26 10ದಿನ ಅಖಂಡ ಆಂಧ್ರ ತೆಲಂಗಾಣ ರಾಜ್ಯ ಪ್ರವಾಸ ಪಂಚರಾಮಿ, ಭದ್ರಾಚಲಂ, ಶ್ರೀಕೂರ್ಮಂ, ವಿಶಾಖಪಟ್ಟಣ. 15.07.2026 15ದಿನ ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ ಅಮರಕಂಟಕ ಮಯ್ಯಾರ್ ಸಹಿತ. 22.07.2026 10ದಿನ ಕೊಟ್ಟಿಯಾರ್ ಸಹಿತ ಅಖಂಡ ಕೇರಳ ರಾಜ್ಯ ಪ್ರವಾಸ. 25.06.2026 4ದಿನ ಮದುರೈ, ರಾಮೇಶ್ವರಂ, ಕನ್ಯಾಕುಮಾರಿ, ಅಲೆಪ್ಪಿ, ತಿರುವನಂತಪುರಂ, 21.07.26 3ದಿನ KAMAKYA ಪ್ರವಾಸ. 21.07.26 7ದಿನ ಅಸ್ಸಾಂ, ಮೇಘಾಲಯ. 8073824856, 9606032154

14/8/2026 ರಿಂದ 4 ದಿನಗಳು ವಿಮಾನದಲ್ಲಿ ಕಾMaಕ್ಯದೇವಿ ವಿಐಪಿ ದರ್ಶನ ಮೇಘಾಲಯ ಶಿಲ್ಲೊಂಗ್ ಚಿರಪುಂಜಿ ರೂ 37000/ ಶ್ರೀ ರಾಮ್ ಟೂರ್ಸ್ 9108933383 /9606600383

3/07/2026 ರಾಮೇಶ್ವರಂ ಮತ್ತು ಕನ್ಯಾಕುಮಾರಿ 6 ದಿನಗಳ ರೂ 7500 & ಕಾಶಿ ಮತ್ತು ಅಯೋಧ್ಯ 16 ದಿನಗಳ, ವೆಂಕಟೇಶ್ವರ ಟೂರ್ಸ್ ಪಾವಗಡ ರಾಮಾಂಜಿನಪ್ಪ 6362710105

ಶಿಕ್ಷಣ EDUCATION

OTHER PROFESSIONAL COURSES

FINANCIAL ASSISTANCE is given to Students who have passed UPSC Prelim's 2026. Contact: Yogi Nareyana Education Trust 9986043027

ಸೇವೆಗಳು SERVICES

ASTROLOGY

SRI KANAKA JYOTHISHYA
Kanakadurga M
M.A. in Astrology, Ph.D. in Astrology (Pursuing)

HOROSCOPE Analysis, Career & Job Guidance, Gemology Consultation, Dosha Analysis & Remedies. Call: 88677 13329

REPAIRS/ WATERPROOFING

WATER PROOFING HERE IS THE SOLUTION FOR LEAKAGE ... LEAKAGE ...

OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

personal

CHANGE OF NAME

I, ANTHONY MARY.D, R/o D-49, 5th Main Road, Dommasandra, Chandapura, Road, SN Nager Phase 1, Chokkasandra, Bengaluru-560099 declare that ANTHONY MARY.D & ANTHONIY AMMA. D are one and the same person. Henceforth, my correct name shall be ANTHONY MARY.D and my correct Date of Birth is 31/01/1958. Vide Affidavit Dated 19/06/2026 Sworn Before Notary & Advocate Mohammed Hussain Bengaluru.

WE, Srinivasa H.S aged 30 years & Sneha R, W/o Srinivasa H S Aged 26 Years R/o No.10/90, 7th cross, Bovipalya, Mahalakshmi Layout, B'lore-86.my daughter name mentioned as Charvi H.S Instead of Lucky Sri.S in Birth certificate Vide Affidavit dt 19/6/26. Henceforth, My daughter shall be known as Lucky Sri.S Further for all Purposes Notary BS Geetha Bangalore

WE, Mr. RAKSHITH SHETTY and Mrs. SHREYA SHETTY, residing at No.292, Saish, 5th Main, 8th Cross, S T Bed, 4th Block, Koramangala, Bangalore - 560034, Both are Parents of SAMVEDYAA SHETTY, We have Changed our minor daughter name from SAMVEDYAA to SAMVEDYAA SHETTY, Vide affidavit, dated: 19.06.2026. Sworn before Notary Ganesh Gowda M.V. Bangalore-

I, Parmar Chandresh Nanji R/o: 402, 1247, 25th A Cross Rd, Sector 2, HSR Layout, Bengaluru - 560102, have changed my name as Parmar Chandresh Nanjibhai or all future purposes.

I, Rahimunnisa R/O #128, Ward 4, Tank Bund Road, Chintamani-563125, Have Changed My Name To Raheem Unnisa W/O Syed Chand Pasha

I, KISHORE LAKSHMICHANDCH MIRGHA residing at 201, Thakuralal Royal Apts, 6th Cross, Bhuvaneshwarinagar, Karnataka 560024, have changed my name to KISHORE L vide affidavit dated 15/06/2026 sworn before notary, T V Bhadravijaya Bangalore

I, SAIF ULLA S/O SYED JALEEL, R/O H NO 804,JP NAGAR 9TH PHASE AVALAHALLI,NEAR GURUKUL SCHOOL,ALAHALLI ANJANAPURA BENGALURU 560062. HAVE CHANGED MY NAME TO SYED SAIF ULLA FOR ALL FUTURE PURPOSES.

I, RITHIKA, residing at 07, RR School Road, Dodda bommasandra,Vidyaranyapura , Bengaluru, Karnataka-560097, have changed my name to RITHIKA MAHESH vide affidavit dated 20/06/2026 sworn before notary, T V Bhadravijaya Bangalore

I Amit Kumar Gupta S/O Ashok Kumar Gupta R/O C 803, Veracious Vanivillas Apartment, Doddaballapura Main Road, Near CRPF, Yelahanka, Bengaluru 560064 have changed my name from Amit Kumar to Amit Kumar Gupta for all future purposes

I, Hidayathulla Mohamed Hanif, S/o Mohammed Hanif, R/at #13, 2nd cross, Gangamma Temple road, Bommanahalli, Manganapalya, Bommanahalli Post, Bengaluru-68, have changed my name to Hidayathulla, vide affidavit dated: 19.06.2026 Notary Meer Hassan, B.lore.

WE, Sanjay Bara and Renuka Kawa Bara, r/at No.1, Marathahalli, Munnekolala, Bangalore 560037 have changed our daughter's name from Snigdha Bara to Snigdha Mary Bara for all purposes vide affidavit dt. 20.06.2026 sworn before Notary J Anand Kumar, Bangalore

I, Jeshila Banu Peer Sindha W/o Mohideen Batcha Jinna Batcha R/o No 242 Flat No 301, Central Excise Layout Phase 2,Doddakammanahalli, Bengaluru-560076.Have Changed My Name to Jeshila Banu for All Purposes.

I, Naval Agrawal, S/o. Gulabrai, r/at 2594, BSK 2nd Stage, Bangalore - 70 have changed my name from Naval Kumar Gulabrai Agrawal to Naval Agrawal for all future purposes vide affidavit dt. 15.06.2026 sworn before Notary S N Madhu,Bangalore

I, Dilip Kumar Jain R/at MH1202, ParkWest, Binnypete, Blore 23 hereby declare that my son Shlok D Jain shall be known as Shlok Jain vide affidavit dtd 19/06/2026 before notary Bharati Patil, Blore.

I, Shabanu Banu (Old Name), Aadhaar No. 4781 0972 4376, DOB : 01-06-1990, W/o Arif Pasha.J, residing at No. 113, Fort Street, Yelahanka, Bangalore - 560064, have changed my name from Shabanu Banu to FOUZIYA for all purposes vide Affidavit sworn before V.S.Masnika, Advocate and Notary Public, Dated : 20-01-2015.

I, Sayeeda Banu W/O, Ansar Pasha R/o #460,shameer Mohalla, Mulbagal 563131 have changed my name to Sayeda Banu for all purposes.

I, Swarajya Lakshmi Jasti R/o B.31, 3rd Floor, Century corbel, B-block, Sahakarnagar, 60ft road, Bengaluru 560092 have changed my name to Swarajya Laxmi Jasti. I shall be called by this name for all purposes

I, Fareed Ahmed Pasha S/o Hussain Pasha R/o #1967 SLV near Tch Kolar District, Karnataka. Bangarpet - 563114 have changed my name to Fareed Pasha for all purposes.

I, Khantikaben Patel, R/o D-1119, PSR Krish Kamal, Neeladri Road, Electronic City Phase -1 , Bangalore-560100 , have changed my name to Patel Khantika Dhruvkumar

I, AKSHAY, Residing at No 554, 20th Main, 36th Cross, 4th T Block, Jayanagar, Bangalore-560041, Have changed my name to AKSHAY ANAND vide affidavit dated 20/6/2026 sworn before Notary Aravind Patil G.G Bangalore

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

ಜೀವನ ಸಂಗಾತಿ

Love finds it's match.



WANTED BRIDES

ವೈವಾಹಿಕ MATRIMONIALS

WANTED BRIDES

BY CASTE

VOKKALIGA

ಒಕ್ಕಲಿಗ, 45 ವರ್ಷ. ಎಂ.ಎಸ್ಸಿ., ಎಂ.ಟೆಕ್. 5.8". ಅನುಕೂಲವಂತ ಮಕ್ಕಳಿಲ್ಲದ, ವಿಚ್ಛೇದಿತ ವ್ಯಾಪಾರಸ್ಥ ವರನಿಗೆ ವಧು ಬೇಕಾಗಿದೆ. ಸಂಪರ್ಕಿಸಿ: 80957 32067.

GENERAL

CASTE NO BAR

44 ವರ್ಷ ದೇವಾಂಗ ವಿಚ್ಛೇದಿತ, ಸ್ವಂತ ಬಿಸಿನೆಸ್ ಮಾಡುತ್ತಿರುವ ವರನಿಗೆ ಸೂಕ್ತ ವಧು ಬೇಕಾಗಿದ್ದಾರೆ, ಜಾತಿ ಅಭ್ಯಂತರವಿಲ್ಲ. ಸಂಪರ್ಕಿಸಿ 9448656997

ಬ್ರಾಹ್ಮಣ ವರನಿಗೆ ವಧು ಬೇಕಾಗಿದೆ. ಜಾತಿಯ ಅಭ್ಯಂತರವಿಲ್ಲ. (ದಲ್ಲಾಳಿಗಳಿಗೆ ಅವಕಾಶವಿಲ್ಲ). ಮೊ.: 9535535532

40 ವರ್ಷದ ಕ್ರಿಶ್ಚಿಯನ್ ವಿಚ್ಛೇದಿತ ವರನಿಗೆ, ವಧು ಬೇಕಾಗಿದ್ದಾರೆ. ಜಾತಿಯ ಅಭ್ಯಂತರವಿಲ್ಲ. ಸಂಪರ್ಕಿಸಿ: 99004 26772.

BY LANGUAGE

GUJARATI

JULY 1999 B.TECH IT 5'.8" Software Engineer MNC Bengaluru 65+LPA Mumbai family seeks working-Educated girl-9224449011.

CAUTION

This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.

ADVERTISEMENT MANAGER

MARRIAGE BUREAUS

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಹಿರೇಮಠ್ ಗುರೂಜಿ
94482 29184
78996 25268

WANTED GROOMS

BY CASTE

BRAHMIN

(ಬ್ರಾಹ್ಮಣ): ವಯಸ್ಸು 18 ರಿಂದ 50 ವರ್ಷದೊಳಗಿನ PUC, Degree, Diploma ಕಲಿತಿರುವ ವಧುಗಳಿಗೆ ಗುಣವಂತ ವರಗಳು ಬೇಕಾಗಿದ್ದಾರೆ. (ಸಪ್ತಪದಿ ಬ್ರಾಹ್ಮಣ ವಿವಾಹ ವೇದಿಕೆ, ಶಿವಮೊಗ್ಗ): 8884794406

GENERAL

CASTE NO BAR

KAYASTHA 39/5'4" SW engg. Pro Manager top MNC B'lore, mutual dvc no kids, seeks boy wkg in B'lore/Pune High caste no bar 9795320972

GALLERIA

Max Fresh™
PRESENCE IN INDIA & ACROSS 75 COUNTRIES & ALL STAR YOUR TRUST OUR IDENTITY IS PROUD TO SPONSOR MiHS 2026

MiHS
From Team with 10 year Experience in Exhibition Present
MARCELLUS INTERNATIONAL HOUSEWARE SHOW
You are invited to India's most anticipated home trade exhibition
July 24th - 26th 2026
Bharat Mandapam, New Delhi

500+ brands & exhibitors from India & overseas | 50,000+ visitors expected in 3 days | International exhibitors from Europe & China Machine Suppliers

Houseware Dinning / Living

Home Decor & Furniture



Gifts / Giving's

If you want to Exhibit Please Contact

SACHIN MISHRA : 9920831533 : sachin@mihs.co.in
ASHU MALHOTRA : 9930087849 : ashu@mihs.co.in

VISITOR REGISTRATION : https://mihs.co.in/visitor-registration

Co sponsor : Prestige

www.mihs.co.in www.maxfresh.com

*Copyright ©2026. MIHS Exhibition All Rights Reserved.

ADMISSION OPEN

AVIATION TRAINING THROUGH SIMULATION and Artificial Intelligence Technologies

BUILD YOUR CAREER IN AVIATION

B.Com | BBA AVIATION MANAGEMENT | BBA | B.Sc. AIRCRAFT MAINTENANCE | BCA

GLOBAL CAREERS | INDUSTRY READY | ARTIFICIAL INTELLIGENCE TECHNOLOGY

Learn with advanced simulation & Artificial Intelligence Technologies for real-world aviation careers.

HINDUSTAN BUSINESS SCHOOL

HBS HINDUSTAN BUSINESS SCHOOL (A unit of EveHans Academy)
Approved by AICTE & Affiliated to Bengaluru North University

8971404357 / 9740037853
Ashwathnagar, Chinnappanahalli, Marathahalli, Bengaluru - 560037
E: admissions@hindustanacademy.edu.in
www.hindustanacademy.edu.in

AUTHORIZED TRAINING CENTER IATA

ದೇಣಿಗೆ ಅಕ್ರಮ ಆರೋಪಗಳ ತನಿಖೆ ಚುರುಕು | ಚಂಪತ್ ರಾಯ್ ಆಪ್ತನ ಬಂಧನ ಸಾಧ್ಯತೆ

ರಾಮಮಂದಿರ ಪದಾಧಿಕಾರಿಗಳ ವಜಾ ಸಾಧ್ಯತೆ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆಯ ರಾಮ ಮಂದಿರದ ದೇಣಿಗೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎನ್ನುವ ಆರೋಪಕ್ಕೆ ಸಂಬಂಧಿಸಿದಂತೆ ಎಸ್ಐಟಿ ತನಿಖೆ ಚುರುಕುಗೊಳಿಸಿದೆ.

ಭಕ್ತರು ಸಮರ್ಪಿಸಿದ್ದ ಚಿನ್ನ, ಬೆಳ್ಳಿ ಮತ್ತು ವಜ್ರಾಭರಣಗಳ ಜಾಗದಲ್ಲಿ ನಕಲಿ ಆಭರಣಗಳನ್ನು ಇರಿಸಲಾಗಿದೆ ಹಾಗೂ ಹಣವನ್ನು ಕದಿಯಲಾಗಿದೆ ಎಂಬ ಗಂಭೀರ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರ ಆಪ್ತ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ವಿರುದ್ಧ ಕಾನೂನು ಕ್ರಮ ಆರಂಭವಾಗಿದೆ.

ಎಸ್ಐಟಿ, ರಾಮಶಂಕರ್ ಯಾದವ್ ಹಾಗೂ ದೇಣಿಗೆ ಎಣಿಕೆಯಲ್ಲಿ ತೊಡಗಿದ್ದ ಸಿಬ್ಬಂದಿ ಮತ್ತು ಕೆಲವು ಬ್ಯಾಂಕ್ ಅಧಿಕಾರಿಗಳ ಸುತ್ತ ಕಾನೂನು ಉರುಳನ್ನು ಬಿಗಿಗೊಳಿಸುವ ಸಾಧ್ಯತೆಯಿದೆ. ಅವರ ವಿರುದ್ಧ ಪ್ರಕರಣ ದಾಖಲಾಗುವ ಸಾಧ್ಯತೆಯಿದ್ದು, ಸದ್ಯದಲ್ಲೇ ಬಂಧನವಾಗುವ ನಿರೀಕ್ಷೆ ಇದೆ ಎಂದು ಮೂಲಗಳು ಹೇಳಿವೆ.



ದೇಣಿಗೆ ಎಣಿಕೆಯಲ್ಲಿ ತೊಡಗಿದ್ದ ಸಿಬ್ಬಂದಿ ಮೇಲೆ ಎಸ್ಐಟಿ ಉರುಳು ಬಿಗಿ

ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟಿ ಡಾ. ಅನಿಲ್ ಮಿಶ್ರಾ ಅವರ ವಿರುದ್ಧವೂ ಕ್ರಮ ಕೈಗೊಳ್ಳುವ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ಇವರಿಬ್ಬರನ್ನೂ ಅವರ ಹುದ್ದೆಗಳಿಂದ ಮುಕ್ತಗೊಳಿಸುವ ಸಾಧ್ಯತೆಯಿದೆ. ಇದರೊಂದಿಗೆ ರಾಮ ಮಂದಿರ ನಿರ್ಮಾಣ ಉಸ್ತುವಾರಿ ಗೋಪಾಲ್ ರಾವ್ ಕೂಡ ಇದೇ ರೀತಿಯ ಕ್ರಮ ಎದುರಿಸಬೇಕಾಗಬಹುದು ಎಂದು ಮೂಲಗಳನ್ನು ಉಲ್ಲೇಖಿಸಿ ಆಂಗ್ಲ ಮಾಧ್ಯಮವೊಂದು ವರದಿ ಮಾಡಿದೆ. ಚಂಪತ್ ರಾಯ್ ಸೇರಿ ಕೆಲವು ಪದಾಧಿಕಾರಿಗಳನ್ನು ಎಸ್ಐಟಿ ಈಗಾಗಲೇ ಹಲವು ಗಂಟೆಗಳ ಕಾಲ ವಿಚಾರಣೆ ನಡೆಸಿದೆ.

ಗೋಪಾಲ್ ರಾವ್ ಅವರ ಸೋದರ ಸಂಬಂಧಿ ಆನಂದ್ ಮತ್ತು ಮಂದಿರದ ಉದ್ಯೋಗಿ ಸೋಮೇಶ್ ಆನಂದ್ ಅವರನ್ನು ವಿಚಾರಣೆ ನಡೆಸಲು ತನಿಖಾಧಿಕಾರಿಗಳು ಪ್ರಯತ್ನಿಸಿದರಾದರೂ, ಅವರಿಬ್ಬರೂ ಪತ್ತೆಯಾಗಿಲ್ಲ ಮತ್ತು ಅವರ ಮೊಬೈಲ್ ಫೋನ್‌ಗಳು ಸ್ವಿಚ್ ಆಫ್ ಆಗಿವೆ ಎಂದು ತಿಳಿದುಬಂದಿದೆ.

150 ಶಂಕಿತರ ಗುರುತು: ತನಿಖೆ ಚುರುಕುಗೊಳಿಸಿರುವ ಎಸ್ಐಟಿ ಸುಮಾರು 150 ಶಂಕಿತರನ್ನು ಗುರುತಿಸಿದೆ. ಇವರಲ್ಲಿ ಕನಿಷ್ಠ 25 ವ್ಯಕ್ತಿಗಳು ಶೀಘ್ರದಲ್ಲೇ ಕಾನೂನು ಕ್ರಮ ಎದುರಿಸುವ ಸಾಧ್ಯತೆಯಿದೆ. ಎಸ್ಐಟಿ ವಿಚಾರಣೆಗೆ ಒಳಪಟ್ಟಿರುವ ಎಲ್ಲಾ ವ್ಯಕ್ತಿಗಳಿಗೆ ಮುಂದಿನ ಆದೇಶದವರೆಗೆ ನಗರವನ್ನು ಬಿಟ್ಟು ಹೋಗದಂತೆ ಸೂಚಿಸಲಾಗಿದೆ. ಮೂಲಗಳ ಪ್ರಕಾರ, ತನಿಖಾ ತಂಡವು ಮುಂಬರುವ ಸೋಮವಾರದಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ತನಿಖಾ ವರದಿ ಸಲ್ಲಿಸಲಿದೆ.

2 ಕೋಟಿ ರೂ. ವಶ: ಮಂದಿರದಲ್ಲಿ ದೇಣಿಗೆ ಎಣಿಕೆ ಕಾರ್ಯದಲ್ಲಿ ನಿರತರಾಗಿದ್ದ ಐವರು ಆರೋಪಿಗಳಾದ ಲವಕುಶ್, ಅವನೀಶ್, ಅನುಕಲ್ಪ್, ಕರುಣ್ ಮತ್ತು ರಾಮಶಂಕರ್ ಅಲಿಯಾಸ್ ಟಿನ್ನು ನೀಡಿದ ಮಾಹಿತಿಯ ಆಧಾರದ ಮೇಲೆ ಎಸ್ಐಟಿ, ಇದುವರೆಗೂ 2 ಕೋಟಿ ರೂ.ಗೂ ಹೆಚ್ಚಿನ ನಗದನ್ನು ವಶಪಡಿಸಿಕೊಂಡಿದೆ.

ಮಾಜಿ ಶಾಸಕ ಪವನ್ ಪಾಂಡೆ ಸುಮಾರು 7 ಕೋಟಿ ರೂ. ದೇಣಿಗೆ ದುರುಪಯೋಗವಾಗಿದೆ ಎಂದು ಆರೋಪಿಸಿದ ನಂತರ ಈ ವಿವಾದ ಭುಗಿಲೆದ್ದಿದೆ. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸೇರಿ ಪ್ರತಿಪಕ್ಷದ ನಾಯಕರು ಹಾಗೂ ಕೆಲವು ಬಿಜೆಪಿ ನಾಯಕರು ಕೂಡ ಈ ಬಗ್ಗೆ ನ್ಯಾಯಾಲಯದ ತನಿಖೆ ಮತ್ತು ಹಣಕಾಸಿನ ಪಾರದರ್ಶಕತೆಗೆ ಒತ್ತಾಯಿಸಿದ್ದರು.

ಆಡಳಿತ ಮಂಡಳಿ ಬದಲಾವಣೆಗೆ ಆಗ್ರಹ: ಮಿಶ್ರಾ



ಲಖನೌ: ''ರಾಮ ಮಂದಿರದ ದೇಣಿಗೆ ಹಣ ದುರುಪಯೋಗದ ಆರೋಪಗಳು ಭಕ್ತರ ನಂಬಿಕೆಗೆ ಧಕ್ಕೆ ತಂದಿವೆ. ಈಗಿರುವ ವ್ಯವಸ್ಥೆಯನ್ನು ತೆಗೆದುಹಾಕಿ, ಅನುಭವಿ ವೃತ್ತಿಪರರನ್ನೊಳಗೊಂಡ ಆಡಳಿತ ಮಂಡಳಿಯನ್ನು ರಚಿಸಬೇಕು,'' ಎಂದು ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ನಿರ್ಮಾಣ ಸಮಿತಿ ಅಧ್ಯಕ್ಷ ಮತ್ತು ಮಾಜಿ ಐಎಎಸ್ ಅಧಿಕಾರಿ ನೃಪೇಂದ್ರ ಮಿಶ್ರಾ ಒತ್ತಾಯಿಸಿದ್ದಾರೆ. ಅಲ್ಲದೇ, ''ತಿರುಪತಿಯ ತಿಮ್ಮಪ್ಪನ ದೇವಸ್ಥಾನದ ಆಡಳಿತ ನೋಡಿಕೊಳ್ಳುವ ಟಿಟಿಡಿಯಂಥ (ತಿರುಮಲ ತಿರುಪತಿ ದೇವಸ್ಥಾನಂ) ಮಾದರಿಯಲ್ಲಿ ಇಲ್ಲಿ ಕೂಡ ಆಡಳಿತ ವ್ಯವಸ್ಥೆ ಜಾರಿಯಾಗಬೇಕು,'' ಎಂದು ಆಗ್ರಹಿಸಿದ್ದಾರೆ. ''2023ರಿಂದ 2025ರ ಅವಧಿಯಲ್ಲಿ ದೇಣಿಗೆ ಎಣಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು ರೂಪಿಸಲಾಗಿತ್ತು. ನಿಯಮಗಳನ್ನು ಸಮರ್ಪಕವಾಗಿ ಪಾಲಿಸದಿರುವುದೇ ಬಿಕ್ಕಟ್ಟಿಗೆ ಕಾರಣ,'' ಎಂದು ಹೇಳಿದ್ದಾರೆ.

ಜೂನ್ 21 ವಿಕ ಈ ದಿನ ವಿಶೇಷ



ವಿಶ್ವ ಮೋಟಾರ್ ಸೈಕಲ್ ದಿನ

ಜಗತ್ತಿನ ಪ್ರಪ್ರಥಮ ಮೋಟಾರ್ ಸೈಕಲ್ ಅನ್ನು ಪ್ಯಾರಿಸ್‌ನ ಪಿಯರೆ ಮಿಕಾಕ್ಸ್ 1860ರಲ್ಲಿ ಅಭಿವೃದ್ಧಿ ಪಡಿಸಿದರು. ಮೊದಲ ಮೋಟಾರ್ ಸೈಕಲ್ ಉಗಿ ಶಕ್ತಿಯಿಂದ ಚಲಿಸುತ್ತಿತ್ತು. ಸಾರಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಮೋಟಾರ್ ಸೈಕಲ್ ಮಹತ್ವ ಸಾರುವ ಉದ್ದೇಶದಿಂದ ಜೂನ್ 21ರಂದು ವಿಶ್ವ ಮೋಟಾರ್‌ಸೈಕಲ್ ದಿನವನ್ನಾಗಿ ಆಚರಿಸಲಾಗುತ್ತದೆ.

ವಿಶ್ವ ಸಂಗೀತ ದಿನ

ಜಗತ್ತಿನಾದ್ಯಂತ ಸಂಗೀತವನ್ನು ಪ್ರಚಾರಪಡಿಸುವ ಉದ್ದೇಶದಿಂದ ಪ್ರತಿ ವರ್ಷ ಜೂನ್ 21ರಂದು ವಿಶ್ವ ಸಂಗೀತ ದಿನವನ್ನಾಗಿ ಆಚರಿಸಲಾಗುತ್ತದೆ. ಸಂಗೀತ ದಿನವನ್ನು ಮೊದಲು 1982ರ ಜೂನ್ 21ರಂದು ಫ್ರಾನ್ಸ್‌ನಲ್ಲಿ ಆಚರಿಸಲಾಯಿತು.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 14/2026–27 ದಿನಾಂಕ: 18.06.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಪರಿಶಿಷ್ಟ ಜಾತಿ (SC) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: INDENT 59488 & 59456
2) ಪರಿಶಿಷ್ಟ ಪಂಗಡ (ST) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: INDENT 59713
3) ಪ್ರವರ್ಗ – 1 ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: INDENT 58900
4) ಪ್ರವರ್ಗ – II (A) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: INDENT 58911, 58916 & 57347/CALL-2
5) ಇತರೆ ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು : INDENT 59027,59195,59447,58498, 59426, 59678 & 59688
6) ಕೆಪಿಪಿ ಪೋರ್ಟಲ್ ಮೂಲಕ ಇಂಡೆಂಟ್ ಸಂಖ್ಯೆ : 59488,59207, 59195, 58900, 59447, 58916, 59456, 58498, 59426, 59713, 59678, 59688 & 57347/CALL–2, ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03.07.2026 (ಸಂಜೆ: 4.00 ಗಂಟೆಗೆ) ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:04.07.2026 (ಸಂಜೆ: 04.30 ಗಂಟೆಗೆ). ಇಂಡೆಂಟ್ ಸಂಖ್ಯೆ: 59488 &57347/CALL-2 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.07.2026 (ಅಪರಾಹ್ನ: 12.00 ಗಂಟೆಗೆ)
7) ಕೆಪಿಪಿ ಪೋರ್ಟಲ್ ಮೂಲಕ ಇಂಡೆಂಟ್ ಸಂಖ್ಯೆ :58911 ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:25.06.2026 (ಸಂಜೆ: 4.00 ಗಂಟೆಗೆ) ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:29.06.2026 (ಅಪರಾಹ್ನ: 04.30 ಗಂಟೆಗೆ).
8) ಅನುದಾನ: 2026–27 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ ಹಾಗೂ ಪಾಲಿಕೆ ಉದ್ಯಮ ನಿಧಿ

ಸೂಚನೆ: ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ವಾ.ಸಾ.ಸಂ.ಇ./ಶಿ/ನಂ.92.06/ ಝೇಂಕಾರ್/2026–27

ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/ ದಿನಾಂಕ 18–06–2026

ಅಲ್ಪಾವಧಿ ಟೆಂಡರು ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಪಿ ಯೋಜನೆ ಮತ್ತು 2025–26 ನೇ ಸಾಲಿನ ಸಿ.ಐ.ಎಮ್.ಡಿ.ಪಿ ಯೋಜನೆ ಒಟ್ಟು 02 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2026-27/BD/WORK_INDENT27413
2.RDPR/2026-27/BD/WORK_INDENT27143

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 18–06–2026** ರಿಂದ **ದಿನಾಂಕ 25–06–2026** ರಂದು **ಬೆಳ್ಳಗೆ 10.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 25–06–2026 ರ ಬೆಳ್ಳಗೆ 10.30** ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 29–06–2026 ರಂದು ಬೆಳ್ಳಗೆ 10.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/264

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

NAAC A+ ACCREDITED WITH GRADE — KARNATAKA STATE OPEN UNIVERSITY
nirf 2ND RANK 2025 KSOU

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.

ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 86905 44544. ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/168/2026–27 ದಿನಾಂಕ: 20–06–2026

ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ

ಯುಜಿಸಿ ನಿಯಮಗಳ ಪ್ರಕಾರ ಎರಡು ಶೈಕ್ಷಣಿಕ ಕಾರ್ಯಕ್ರಮಗಳನ್ನು (ಪ್ರೋಗ್ರಾಂಗಳನ್ನು) ಏಕ ಕಾಲದಲ್ಲಿ ಓದಲು ಅವಕಾಶವಿದ್ದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳುವುದು.

ಯುಜಿಸಿ ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳಿಗೆ 2026-27 ರ ಜುಲೈ ಆವೃತ್ತಿಗೆ ನೇರ ಪ್ರವೇಶಾತಿಯನ್ನು ಒಳಗೊಂಡಂತೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಎಲ್ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯೂ.
- ಬಿ.ಎಸ್‌ಸಿ. – ಜನರಲ್ ಕಾಂಬಿನೇಷನ್ಸ್

(• PCM • PMCs • CBZ • CZEs • CBEs)
[• P-Physics • C-Chemistry • M-Mathematics • Cs-Computer Science • B-Botany • Z-Zoology • Es-Environmental Science

- ಬಿ.ಎಸ್‌ಸಿ. – ಇನ್‌ಫರ್‌ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

- **ಎಂ.ಎ.**
  • ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
- **ಎಂ.ಎಸ್.ಡಬ್ಲ್ಯೂ**
- **ಎಂ.ಬಿ.ಎ.** – ಆನ್‌ಲೈನ್ ಪ್ರವೇಶ ಪರೀಕ್ಷೆ ಮೂಲಕ
  ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್‌ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ರಕ್ಷಣೆ ನಿರ್ವಹಣೆ.
- **ಎಂ.ಕಾಂ.**
  ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್
- **ಎಂ.ಸಿ.ಎ.**
- **ಎಂ.ಎಲ್ಐ.ಎಸ್‌ಸಿ.**
- **ಎಂ.ಎಸ್‌ಸಿ.**
  • ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್ • ಲೈಫ್ ಸೈನ್ಸ್

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)

• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಭಾಷಾ ವಿಜ್ಞಾನ

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ • ಫಲ ಜ್ಯೋತಿಷ್ಯ • ಮೇಧಿನಿ ಜ್ಯೋತಿಷ್ಯ • ವಾಸ್ತು ಶಾಸ್ತ್ರ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಆರು ತಿಂಗಳು)

• ಪಂಚಾಯತ್ ರಾಜ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ • ಜ್ಯೋತಿರ್ ವಿಜ್ಞಾನ

ONLINE PROGRAMMES • B.A. • B.Com
• M.A. ♦ Kannada ♦ Hindi ♦ Sanskrit ♦ Economics ♦ English
• M.Com • M.B.A. • M.Sc Mathematics



ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದ್ದು, NIRF ನಿಂದ 2ನೇ ರ್‍ಯಾಂಕ್ ಪಡೆದಿರುತ್ತದೆ. UGC-DEB ಪತ್ರ ಸಂಖ್ಯೆ. F.No.39-2/2023 (DEB-1) ದಿನಾಂಕ: 17-08-2023, F.No.30-30/2023 (DEBIII) ದಿನಾಂಕ: 11-09-2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾನಿಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ ನೀಡುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಶೈಕ್ಷಣಿಕ ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು. ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು KSOU Online Admission Portal ಗೆ ಭೇಟಿ ನೀಡುವುದು. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: www.ksoumysuru.ac.in ಅನ್ನು ವೀಕ್ಷಿಸುವುದು.
   - ಪ್ರವೇಶಪೂರ್ವ ಸಮಾಲೋಚನೆಗೆ (Pre Admission Counselling) ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ವಿದ್ಯಾರ್ಥಿಗಳು ಪಾವತಿಸಬೇಕಾದ ನಿಗದಿತ ಶುಲ್ಕವನ್ನು (ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ) ಮಾತ್ರ ಪಾವತಿಸಬೇಕು. ಹೆಚ್ಚುವರಿ ಪಾವತಿಗೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.
   - ಪ್ರವೇಶಾತಿ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರವೇ ಪಾವತಿಸತಕ್ಕದ್ದು.
   - ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಗುರುತಿನ ಚೀಟಿ ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು (Study Materials) ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಈ ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಷಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು / ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು / ಆಟೋ / ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ / ಮಕ್ಕಳಿಗೆ / ಕೆಎಸ್‌ಆರ್‌ಟಿಸಿ / ಬಿಎಂಟಿಸಿ / ಎನ್‌ಡಬ್ಲ್ಯೂಕೆಆರ್‌ಟಿಸಿ / ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ **ಶೇಕಡ 10% ರಷ್ಟು ರಿಯಾಯಿತಿಯನ್ನು** ಪಡೆಯಬಹುದು.
   - **ತೃತೀಯ ಲಿಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ** ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಸರ್ಕಾರವು ಆಗಿಂದ್ದಾಗ್ಗೆ ನಿಗದಿಪಡಿಸಿರುವ ಸೂಚನೆಗಳು ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ಶೇಕಡ 50ಕ್ಕೂ ಹೆಚ್ಚಿನ ದೃಷ್ಠಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ).
3. ಪ್ರಥಮ / ದ್ವಿತಿಯ ಯುಜಿ/ಪಿಜಿ ಶಿಕ್ಷಣ ಕ್ರಮ ಪೂರೈಸಿ ಕಾರಣಾಂತರದಿಂದ ಪದವಿಯನ್ನು ಪೂರ್ಣಗೊಳಿಸಿಕೊಂಡಿಲ್ಲದ ವಿದ್ಯಾರ್ಥಿಗಳು ಕರಾಮುವಿಯ ನಿಯಮಗಳಿಗೆ ಒಳಪಟ್ಟು ಹಾಗೂ ಸೂಚಿತ ವಿಷಯಗಳನ್ನು ಕಡ್ಡಾಯವಾಗಿ ಹೆಚ್ಚುವರಿಯಾಗಿ ವ್ಯಾಸಂಗ ಮಾಡುವ ಷರತ್ತಿಗೊಳಪಟ್ಟು ದ್ವಿತೀಯ/ತೃತೀಯ ಯುಜಿ/ಪಿಜಿ ಶಿಕ್ಷಣ ಕ್ರಮಗಳಿಗೆ ನೇರ ಪ್ರವೇಶಾತಿ ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಈ ಸಂಬಂಧ ಅಂತರ್‌ಜಾಲದಲ್ಲಿ ಪ್ರಕಟಿಸಿರುವ ಸುತ್ತೋಲೆಯನ್ವಯ ಕ್ರಮಗಳನ್ನು ಅನುಸರಿಸುವುದು.
4. ಪ್ರವೇಶಾತಿಯನ್ನು ರಜಾ ದಿನಗಳಲ್ಲಿಯು (2ನೇ ಮತ್ತು 4ನೇ ಶನಿವಾರ ಹಾಗೂ ಭಾನುವಾರಗಳಂದು) ಮಾಡಲಾಗುವುದು. ವಿದ್ಯಾರ್ಥಿಗಳು ಈ ಅವಕಾಶವನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ) :** ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ (ಕ): 0821–2500981, ಮೊಬೈಲ್: 9945366062 / 9113512565 / 9611418726 / 9686576399 / 9035395137 / 8123469017 / 9844010407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, **ಬಾಪೂಜಿನಗರ,** ಬೆಂಗಳೂರು–560026. ದೂ: 080–26603664, ಮೊಬೈಲ್: 9880526439/ 9019526439.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ :** ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, **ಮಲ್ಲೇಶ್ವರಂ,** ಬೆಂಗಳೂರು–560 003. ದೂ: 080–23448811, ಮೊಬೈಲ್ : 8453458238.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ :** ಆಕ್ಸ್‌ಫರ್ಡ್ ಎಜುಕೇಷನಲ್ ಟ್ರಸ್ಟ್, ಶ್ರೀನಿವಾಸಪುರ, ಕೋಗಿಲು ಮುಖ್ಯ ರಸ್ತೆ, **ಯಲಹಂಕ,** ಬೆಂಗಳೂರು–560 064, ಮೊಬೈಲ್: 9008540090/7337718249.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, **ಮಡಿವಾಳ** ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560068. ದೂ: 080–23158888, ಮೊಬೈಲ್ : 8904036090.
6. **ಬೆಂಗಳೂರು–5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣ, **ಕೆ.ಆರ್. ಪುರಂ,** ಬೆಂಗಳೂರು–560 036. ಮೊಬೈಲ್: 8970223247.
7. **ಬೆಂಗಳೂರು–6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಆವರಣ, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, **ಸುಂಕದಕಟ್ಟೆ,** ಬೆಂಗಳೂರು–560 091. ಮೊಬೈಲ್: 9741197921.
8. **ಬೆಂಗಳೂರು–7 ಪ್ರಾದೇಶಿಕ ಕೇಂದ್ರ : ಹಜ್ ಭವನ, ತಿರುಮೇನಹಳ್ಳಿ ಕ್ರಾಸ್, ಹೆಗ್ಗಡೆ ನಗರ ಮೈನ್ ರೋಡ್,** ಬೆಂಗಳೂರು–560 064. ಮೊಬೈಲ್ : 9448668880.
9. **ಬೆಳಗಾವಿ ಪ್ರಾದೇಶಿಕ ಕೇಂದ್ರ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾವಿ–590010. ದೂ. 0831–2002815, ಮೊಬೈಲ್: 8088716236.
10. **ಬಳ್ಳಾರಿ ಪ್ರಾದೇಶಿಕ ಕೇಂದ್ರ :** ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊಬೈಲ್: 9986696487.
11. **ಚಾಮರಾಜನಗರ ಪ್ರಾದೇಶಿಕ ಕೇಂದ್ರ :** ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನ್ಯುಯೆಲ್ ಕ್ರಿಶ್ಚಿಯನ್ ಪಬ್ಲಿಕ್ ಸ್ಕೂಲ್ ಹತ್ತಿರ, ಚಾಮರಾಜನಗರ–571342, ಮೊಬೈಲ್: 9980302686
12. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ :** ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 101, ಮೊಬೈಲ್: 9686619555.
13. **ದಾವಣಗೆರೆ ಪ್ರಾದೇಶಿಕ ಕೇಂದ್ರ :** ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆ, ದಾವಣಗೆರೆ–577 004, ಮೊಬೈಲ್: 7406612788 / 8095939359.
14. **ಧಾರವಾಡ ಪ್ರಾದೇಶಿಕ ಕೇಂದ್ರ :** ಅಮರಗೋಳ 2ನೇ ಹಂತ, ಕೆ.ಹಚ್.ಬಿ. ಬಡಾವಣೆ, ಜಡ್ಜ್ ಕಾಲೋನಿ ಹತ್ತಿರ, ಕಡೆಯ ಬಸ್ ನಿಲ್ದಾಣ, ನವನಗರ, ಹುಬ್ಬಳ್ಳಿ–580025. ದೂ: 0836–2441199, ಮೊಬೈಲ್: 7019314679.
15. **ಹಾಸನ ಪ್ರಾದೇಶಿಕ ಕೇಂದ್ರ :** ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಬಿ. ಟಿ. ಕೊಪ್ಪಲು, ಹಾಸನ–573 118, ಮೊಬೈಲ್: 8618929376.
16. **ಕಲ್ಬುರ್ಗಿ ಪ್ರಾದೇಶಿಕ ಕೇಂದ್ರ :** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106, ಮೊಬೈಲ್: 8722588675.
17. **ಕಾರವಾರ ಪ್ರಾದೇಶಿಕ ಕೇಂದ್ರ :** ಯು.ಎಸ್.ಕೆ.ವಿ. ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301, ಮೊಬೈಲ್: 9008588675.
18. **ಕೋಲಾರ ಪ್ರಾದೇಶಿಕ ಕೇಂದ್ರ :** ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ದೂ. 0815–2243301, ಮೊಬೈಲ್: 8722788788.
19. **ಮಂಡ್ಯ ಪ್ರಾದೇಶಿಕ ಕೇಂದ್ರ :** # ನಂ. 11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಕೆರ ಅಂಗಳ, ಸಂತೆಮಾಳದ ಎದುರು, ಮೇಲುಕೋಟೆ ರಸ್ತೆ, ಮಂಡ್ಯ–571402. ಮೊಬೈಲ್: 9632346618/9916894579.
20. **ಮಂಗಳೂರು ಪ್ರಾದೇಶಿಕ ಕೇಂದ್ರ :** ಕಸ್ಟಮ್ ಕ್ವಾಟರ್ಸ್ ಎದುರು, 4ನೇ ಕ್ರಾಸ್, ದತ್ತನಗರ, ಮಂಗಳೂರು–575 016, ದೂ. 0824–2454697, ಮೊಬೈಲ್: 9902638643 / 7204428361.
21. **ರಾಮನಗರ ಪ್ರಾದೇಶಿಕ ಕೇಂದ್ರ :** ನಂ. 103, 'ಇ' ಬ್ಲಾಕ್, ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562159, ಮೊಬೈಲ್: 9980740048.
22. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ :** ಅಲ್ಕೋಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367, ಮೊಬೈಲ್: 9900667916.
23. **ತುಮಕೂರು ಪ್ರಾದೇಶಿಕ ಕೇಂದ್ರ :** ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೇಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು–572 105, ದೂ: 0816–2955580, ಮೊಬೈಲ್: 9986458055.
24. **ಉಡುಪಿ ಪ್ರಾದೇಶಿಕ ಕೇಂದ್ರ :** ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊಬೈಲ್: 8197818807.
25. **ಬೀದರ್–1 ಪ್ರಾದೇಶಿಕ ಕೇಂದ್ರ :** ಸರ್ಕಾರಿ ಪ್ರ.ದ. ಕಾಲೇಜು, **ನೌಬಾದ್,** ಬೀದರ್–585402, ದೂ: 08482–232020, ಮೊಬೈಲ್: 9916783555.
26. **ಬೀದರ್–2 ಪ್ರಾದೇಶಿಕ ಕೇಂದ್ರ :** ಕರ್ನಾಟಕ ಪಬ್ಲಿಕ್ ಸ್ಕೂಲ್, **ಗೊರಟ (ಬಿ) ಗ್ರಾಮ,** ಹಲಸೂರು ತಾ||. ಬೀದರ್–585327, ಮೊಬೈಲ್: 9916783555.
27. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ :** ಬಿ.ವಿ.ವಿ.ಎಸ್. ಜನಶಿಕ್ಷಣ ಸಂಸ್ಥೆ ಕ್ಯಾಂಪಸ್, ಬಸವೇಶ್ವರ ಸ್ವತಂತ್ರ ಪಿ.ಯು. ಕಾಲೇಜ್ ಪಕ್ಕ, ವಿದ್ಯಾಗಿರಿ, ಬಾಗಲಕೋಟೆ–587103, ಮೊಬೈಲ್: 9743276734.
28. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಇಂಡೋರ್ ಸ್ಟೇಡಿಯಂ, ಮಡಿಕೇರಿ–571 201, ಮೊಬೈಲ್: 8762551115.
29. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೆಡ್, 2ನೇ ಮಹಡಿ, ಸೌತ್ ಎಕ್ಸ್‌ಟೆನ್‌ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ–571 440. ಮೊಬೈಲ್: 8095695590.
30. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕರೆ ರಸ್ತೆ, ಚಿತ್ರದುರ್ಗ–577501. ಮೊಬೈಲ್: 9972526647.
31. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ–581110. ಮೊಬೈಲ್: 9916894944.
32. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ–562101. ದೂ: 08156 272044, ಮೊಬೈಲ್: 8618821417.
33. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸಗೂರು ರಸ್ತೆ, ರಾಯಚೂರು–584101. ಮೊಬೈಲ್: 9164300299.
34. **ಯಾದಗಿರಿ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪದವಿ ಕಾಲೇಜು, ಚಿತ್ತಾಪುರ ರಸ್ತೆ, ಯಾದಗಿರಿ–585202 ಮೊಬೈಲ್: 7892597159.
35. **ವಿಜಯಪುರ ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣದ ಹತ್ತಿರ, ಅಂಬಾ ಭವಾನಿ ದೇವಸ್ಥಾನದ ಎದುರು, ವಿಜಯಪುರ–586 101, ಮೊಬೈಲ್: 9945171920.
36. **ಕೊಪ್ಪಳ ಪ್ರಾದೇಶಿಕ ಕೇಂದ್ರ :** ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯದ ಕಟ್ಟಡ, ಮೊದಲನೇ ಮಹಡಿ, ಗೋವನಕೊಪ್ಪ ಆಸ್ಪತ್ರೆ ಎದುರು, ಹೊಸಪೇಟೆ ರಸ್ತೆ, ಕೊಪ್ಪಳ–583 231, ಮೊಬೈಲ್: 8861040975.
37. **ಗದಗ ಪ್ರಾದೇಶಿಕ ಕೇಂದ್ರ :** ಡಾ|| ಪಂಡಿತ್ ಪುಟ್ಟರಾಜ ಕವಿ ಗವಾಯಿ ಐ.ಟಿ.ಐ. ಕಾಲೇಜು, ಎಲ್.ಎಲ್. ಬಿಲ್ಡಿಂಗ್, (ಹಳೆ ಡಿಸಿ ಆಫೀಸ್ ಸರ್ಕಲ್), ಜನರಲ್ ಕಾರ್ಯಪ್ಪ ಸರ್ಕಲ್, ಗದಗ–582 101. ಮೊಬೈಲ್: 9663451169.
38. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ :** ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ–583 276, ಮೊಬೈಲ್: 9483628267.
39. **ಪಿರಿಯಾಪಟ್ಟಣ ಪ್ರಾದೇಶಿಕ ಕೇಂದ್ರ :** ಡಿ.ಪಿ.ಬಿ.ಎಸ್. ಸರ್ಕಾರಿ ಬಾಲಕರ ಪಿಯು ಕಾಲೇಜು ಕ್ಯಾಂಪಸ್ (ಪ್ರೌಢಶಾಲಾ ವಿಭಾಗ), ಬಿ.ಎಂ. ರಸ್ತೆ, ಬೆಟ್ಟದಪುರ ಸರ್ಕಲ್ ಹತ್ತಿರ, ಪಿರಿಯಾಪಟ್ಟಣ – 571107. ಮೊಬೈಲ್: 9901423273.

ಪ್ರವೇಶಾತಿಯ ಪ್ರಾರಂಭದ ದಿನಾಂಕ	22.06.2026
ಪ್ರವೇಶಾತಿಯ ಅಂತಿಮ ದಿನಾಂಕ	15.09.2026

ಸಹಿ/–, ಕುಲಸಚಿವರು

ರಾಜ್ಯ ಬಿಜೆಪಿ ಕಿರೀಟಕ್ಕೆ ಮತ್ತೊಂದು ಗರಿ!

ರಾಜ್ಯಕಾರಣ
ಶಶಿಧರ ಹೆಗಡೆ
shashidhar.nandikal@timesofindia.com

ವಿಭಿನ್ನತೆಯಲ್ಲೇ ಅತಿ ವಿಭಿನ್ನವಾದ ರಾಜ್ಯ ಬಿಜೆಪಿಯ ವಿಕ್ರಮ, ತ್ರಿವಿಕ್ರಮಗಳ ಸರಣಿಗೆ ಮೇಲ್ಮನೆ ಚುನಾವಣೆ ಬೆಳವಣಿಗೆ ಮತ್ತೊಂದು ಸೇರ್ಪಡೆಯಷ್ಟೆ. ಇದನ್ನು ಇನ್ನೂ ಚೆನ್ನಾಗಿ ವರ್ಣಿಸಲು ಪದಗಳೇ ಸಿಗುತ್ತಿಲ್ಲ!

ರಾಷ್ಟ್ರಮಟ್ಟದಲ್ಲಿ ನರೇಂದ್ರ ಮೋದಿ-ಅಮಿತ್ ಶಾ ಸಾರಥ್ಯ ವಹಿಸಿಕೊಂಡ ಮೇಲೆ ಬಿಜೆಪಿ ಸೋಲನ್ನೇ ಕಂಡಿಲ್ಲ. 2014ರಿಂದ ಪ್ರಾರಂಭವಾಗಿರುವ ಈ ಜೋಡಿಯ ಗೆಲುವಿನ ಅಭಿಯಾನ ಅಪ್ರತಿಹತ. ಇದರರ್ಥ ಏಳುಬೀಳು ಆಗಿಲ್ಲವೆಂದಲ್ಲ. 2024ರ ಸಂಸತ್ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಪ್ರಯಾಸಕರ ಜಯ ಕಂಡಿತ್ತು. ಅದಾದ ನಂತರ ನಾನಾ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮೇಲುಗೈ ಕಂಡಿದೆ.

ಬಿಜೆಪಿಯ ರಾಷ್ಟ್ರೀಯ ನಾಯಕತ್ವದ್ದು ಫಲಿತಾಂಶ ಆಧಾರಿತವಾದ ಮಾದರಿ. ಅದೇನಿದ್ದರೂ ಸದ್ಯದ ಪ್ರಸಂಗಾವಧಾನ ಕರ್ನಾಟಕ ಬಿಜೆಪಿಯ ಕುರಿತಾದದ್ದು. ದೇಶ ಮಟ್ಟದಲ್ಲಿ ಬಿಜೆಪಿಯ ವರ್ಚಸ್ಸು ಮಜಬೂತಾಗಿದ್ದರೆ ಕರ್ನಾಟಕದಲ್ಲಿ ಅದರ ತೂಕವೇ ಬೇರೆ ತೆರನಾದದ್ದು. ಇಲ್ಲಿನದು ಅತಿ ವಿಶಿಷ್ಟ ಮಾಡೆಲ್! ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ವರ್ತಮಾನದ ರಾಜ್ಯ ಬಿಜೆಪಿಯ ವಿಕ್ರಮ ಮತ್ತು ತ್ರಿವಿಕ್ರಮದ ಬಗ್ಗೆ ಕ್ಷಕಿರಣ ಬೀರುವ ಶುಭಾವಸರ ಒದಗಿ ಬಂದಿದೆ. ಇದನ್ನು ದಾಖಲಿಸದೆ ಹೋದರೆ ಅಪಚಾರ ಎಸಗಿದಂತಾಗುತ್ತದೆ. ಇಲ್ಲಿ ಪಕ್ಷದ ನೊಗ ಹೊತ್ತವರನ್ನು ವಿನಾಕಾರಣ ನಗಣ್ಯ ಮಾಡಿದಂತಾಗುತ್ತದೆ. ಹಾಗೆ ಅಲಕ್ಷಿಸುವುದು ಪ್ರಮಾದವಲ್ಲ; ಅಕ್ಷಮ್ಯವೆನಿಸಿಕೊಳ್ಳುತ್ತದೆ.



ಅಷ್ಟಕ್ಕೂ ಅಡಿಗೆ ಬಿದ್ದವರ ಮೇಲೆ ಆಳಿಗೊಂದರಂತೆ ಕಲ್ಲೆಸೆಯಬಾರದು. ಸಾಂತ್ವನ, ಸಮಾಧಾನ ಹೇಳುವ ವಿಶಾಲ ಹೃದಯವಿಲ್ಲದಿದ್ದರೆ ತುಟಿಪಿಟಿಕ್ ಎನ್ನದೇ ಬಾಯಿ ಮುಚ್ಚಿಕೊಂಡಾದರೂ ಇರಬೇಕು. ನಾಲಿಗೆ ಇದೆಯೆಂದು ಅದನ್ನು ಅಡ್ಡಡ್ಡ ಉದ್ದುದ್ದ ಹರಿಯ ಬಿಡಬಾರದು. ಈಗೇನೂ ಆಕಾಶವೇ ಕಳಚಿ ಬಿದ್ದು ಹೋಗಿಲ್ಲ. ಬದಲಾಗಿ ಸಮರ್ಥರೂ, ಕಾರ್ಯತಂತ್ರ ಕುಶಲಿಗಳೂ, ಶಸ್ತ್ರ ಹಿಡಿಯದೇ ಯುದ್ಧ ಮಾಡಬಲ್ಲವರ ಹೆಗಲ ಮೇಲೆ ಪಕ್ಷವಿದೆ ಎಂಬುದನ್ನು ಈ ಚುನಾವಣೆ ಮತ್ತೊಮ್ಮೆ ಶ್ರುತಪಡಿಸಿದೆ. ಪಕ್ಷದ್ರೋಹಿಗಳ ವಿರುದ್ಧ ಕ್ರಮವಾಗುತ್ತದೆ ಎಂದು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆರ್. ಅಶೋಕ್ ತತ್‌ಕ್ಷಣದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯದ ಜನ ಬಹಳ ಚಾಣಕ್ಯರನ್ನು ನೋಡಿದ್ದಾರೆಂದು ಅರ್ಥಗರ್ಭಿತವಾಗಿ ಮಾತನಾಡಿದ್ದಾರೆ. ಇವರಿಬ್ಬರು ಈ ಆಣಿಮುತ್ತುಗಳನ್ನು ಅದೆಷ್ಟು ಸರಾಗವಾಗಿ ಉದುರಿಸಿದ್ದಾರೆಂದರೆ, ಆಲಿಸಲು ಖಂಡಿತವಾಗಿಯೂ ಕರ್ಣಾನಂದಕರವಾಗಿದೆ. ಹಾಗಿರುವಾಗ ಪಕ್ಷದ ಕಾರ್ಯಕರ್ತರು ಪಾವನರೂ ಪುನೀತರೂ ಆದರೆಂದೇ ಅರ್ಥ. ಇಂಥ ಅಪರೂಪದ ನಾಯಕರನ್ನು ಪಡೆದ ಕಾರ್ಯಕರ್ತರು ಧನ್ಯರಾದರು ಎಂದು ಬೇರೆ ಹೇಳಬೇಕಾಗಿಲ್ಲ.

ಹಿಂದೊಮ್ಮೆ ಬೆಂಗಳೂರಿನ ಸ್ಟೇಡಿಯಂ ಒಂದರಲ್ಲಿ ಬಾಂಬ್ ಸ್ಫೋಟವಾದಾಗ, ''ಅಪರಾಧಿಗಳು ಈ ಭೂಮಿ ಮೇಲಲ್ಲ; ಪಾತಾಳದಲ್ಲೇ ಅಡಗಿದ್ದರೂ ಹಿಡಿದುತಂದು ಶಿಕ್ಷಿಸಲಾಗುವುದು,'' ಎಂದು ಪೊಲೀಸ್ ಅಧಿಕಾರಿಯೊಬ್ಬರು ಜಬರ್‌ದಸ್ತಿ ಮಾಡಿದ್ದರು. ಮೇಲ್ಮನೆ ಚುನಾವಣೆ ಕ್ರಾಸ್ ವೋಟಿಂಗ್ ಪ್ರಕರಣದಲ್ಲೂ ಅಷ್ಟೇ. ಘಟನೆ ನಡೆದ 24 ಗಂಟೆಯೊಳಗೇ ರಾಜ್ಯ ಬಿಜೆಪಿಯ ನಾಯಕದ್ವಯರು ಖಡಕ್ ಸಂದೇಶ ಕೊಟ್ಟಿದ್ದಾರಲ್ಲ? ಇಷ್ಟರ ಮೇಲೂ ವಿಜಯೇಂದ್ರ, ಅಶೋಕ್ ಮುಂತಾದವರನ್ನು ಟೀಕೆಗೊಳಪಡಿಸಿದರೆ ಅದು ಮನುಷ್ಯತ್ವ ಎನಿಸಿಕೊಳ್ಳುವುದಿಲ್ಲ. ಪ್ರಾಯಶಃ ಅದನ್ನು ಆ ದೇವರು ಕೂಡ ಮೆಚ್ಚಲಾರ!

ಪರಿಷತ್ ಚುನಾವಣೆಗೆ ಕಾಂಗ್ರೆಸ್‌ನಿಂದ 5ನೇ ಅಭ್ಯರ್ಥಿ ಹೂಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುಮ್ಮನೇ ಕೂದ್ರಲಿಲ್ಲ. ಆಡಳಿತ ಪಕ್ಷದ ಶಾಸಕರನ್ನೆಲ್ಲ ಹಿಡಿದಿಟ್ಟುಕೊಳ್ಳಲು ರೆಸಾರ್ಟ್ ವಾಸ್ತವ್ಯ ಮಾಡಿಸಲಾಯ್ತು. ಅಣಕು ಮತದಾನ ಮಾಡಿಸಿ ಸಿದ್ಧತೆ ಕೈಗೊಳ್ಳಲಾಯ್ತು. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಗಲೂ ರಾತ್ರಿ ಪಹರೆ ಕಾಯ್ದರು. ವೋಟಿಂಗ್ ದಿನ ರೆಸಾರ್ಟ್‌ನಿಂದ ವಿಧಾನಸೌಧಕ್ಕೆ ಬಂದಿಳಿದಾಗಲೂ ಮತ್ತೊಂದು ಸುತ್ತಿನ ಸಭೆ ನಡೆಸಲಾಯ್ತು. ಅಲ್ಲಿ ಇಡೀ ಕಾಂಗ್ರೆಸ್ ಪಕ್ಷವೇ ಒಂದು ಕೂಡು ಕುಟುಂಬದಂತೆ ಕಂಡಿತು. ಬಿಜೆಪಿ ಮತ್ತು ಅದರ ಮಿತ್ರಪಕ್ಷದಲ್ಲಿ ಇಂಥದ್ದೆಲ್ಲ ಟಂಡಾ ಟಂಡಾ ಕೂಲ್ ಕೂಲ್ ದೃಶ್ಯಾವಳಿಗಳು ಕಾಣಿಸಲೇ ಇಲ್ಲ ಎನ್ನುವವರಿದ್ದಾರೆ. ಬಹುಶಃ ಬಿಜೆಪಿಗರ ಮೇಲೆ ಬಂಡೆಗಲ್ಲನ್ನೇ ಎತ್ತಿ ಹಾಕಬೇಕೆಂದು ಸಮಯ ಕಾಯುತ್ತಿದ್ದವರು ಹೀಗೆಲ್ಲ ಅಪಪ್ರಚಾರದಲ್ಲಿ ತೊಡಗಿದ್ದಾರೆಂದು ವಿಧಿಯಿಲ್ಲದೆ ಹೇಳಬೇಕಾಗುತ್ತದೆ. ಜತೆಗೆ ಅತ್ಯುಗ್ರ ಮಾತುಗಳಲ್ಲಿ ಖಂಡಿಸಲು ಮರೆಯಬಾರದು.

ನಕಲು ಮಾಡಬಾರದಲ್ಲ?: ತಲೆಯಲ್ಲಿ ಮಸ್ತಿಷ್ಕವಿದ್ದವರು ಯೋಚಿಸಿ ನೋಡಿ. ಕಾಂಗ್ರೆಸ್‌ನವರಂತೆ ಬಿಜೆಪಿಯವರೂ ಕೈ ಕೈ ಹಿಡಿದುಕೊಂಡು ಓಡಾಡಿದ್ದರೆ ಅವರಿಗೂ ಇವರಿಗೂ ಫರಕ್ ಏನಿರುತ್ತಿತ್ತು ಹೇಳಿ? 'ಪಾರ್ಟಿ ವಿತ್ ಡಿಫರೆನ್ಸ್' ಎನ್ನುವುದು ಬಿಜೆಪಿಯ ಜನಪ್ರಿಯ ಸ್ಲೋಗನ್. ಇದನ್ನು ಬಹಳ ಲಕ್ಷಣವಾಗಿ ಅಳವಡಿಸಿಕೊಂಡ ಶ್ರೇಯಸ್ಸು ರಾಜ್ಯ ಬಿಜೆಪಿಯದ್ದು. ಅದಕ್ಕಾಗಿ ದೊಡ್ಡ ಪಾರಿತೋಷಕವನ್ನೇ ಹೈಕಮಾಂಡ್ ನೀಡಬೇಕಿತ್ತು. ಕಡೆಪಕ್ಷ ಸಮಾಧಾನಕರ ಬಹುಮಾನವನ್ನಾದರೂ ಕೊಡಬಹುದಿತ್ತು. ಬಹುಶಃ ಮೇಲ್ಮನೆ ಚುನಾವಣೆ ಬೆಳವಣಿಗೆ ನಿಮಿತ್ತ ಇಲ್ಲಿನ ನಾಯಕರನ್ನು ದಿಲ್ಲಿಗೆ ಕರೆಸಿಕೊಳ್ಳುತ್ತಿರುವ ವರಿಷ್ಠರು ಕಪ್ ಹಸ್ತಾಂತರಿಸಿಯಾರು. ಕಾಂಗ್ರೆಸ್‌ನ ಪಡಿಯಚ್ಚಿನಂತೆ ನಡೆದುಕೊಳ್ಳಬಾರದು. ಹಾಗೆ ವ್ಯವಹರಿಸುವುದು ಪರೀಕ್ಷೆಯಲ್ಲಿ ಕಾಪಿ ಹೊಡೆಯುವುದಕ್ಕೆ ಸಮ. ಕಾರಣ ತಮ್ಮತನ ಉಳಿಸಿಕೊಳ್ಳಬೇಕೆಂಬ ಬಿಜೆಪಿಗರ ನಿಲುವನ್ನು ಮೆಚ್ಚಬೇಕು. ಈ ನಿಟ್ಟಿನಲ್ಲಿ ಅಚಲ ನಿಷ್ಠೆ ತೋರಿದ್ದಕ್ಕೆ ಕಂಜೂಶ್‌ತನ ಬಿಟ್ಟು ಚಪ್ಪಾಳೆ ತಟ್ಟಬೇಕು. ಹಾಗಾಗಿ ಈ ವಿಚಾರದಲ್ಲಿ ಕಾಂಗ್ರೆಸ್‌ನವರಂತೆ ತಾಲೀಮು, ವಗೈರೆ ನಡೆಸಲಿಲ್ಲವೆಂದು ಅರಿತುಕೊಳ್ಳುವವರೇ ಜಾಣರು. ಇಲ್ಲವಾದರೆ ಬಿಜೆಪಿಗರ ಔದಾರ್ಯದ ಪ್ರತೀಕವಾದ 'ದಡ್ಡರು' ಎಂಬ ಬಿರುದಾವಳಿ ಸ್ವೀಕರಿಸಲು ಸಿದ್ಧರಾಗಬೇಕಾಗುತ್ತದೆ.

ಪರಿಷತ್ ಚುನಾವಣೆಗೆ ತೆರೆಬಿದ್ದು ಅಡ್ಡ ಮತದಾನದ ವಾರ್ತೆ ದಶದಿಕ್ಕುಗಳಿಗೆ ಪಸರಿಸುತ್ತಿದ್ದಂತೆ ಅಶೋಕ್, ವಿಜಯೇಂದ್ರ ಪರಸ್ಪರ ಕಲೆತು ಚರ್ಚಿಸಿದ್ದಾರೆ. ಮುಂದಿನ ಮಾರ್ಗೋಪಾಯ, ಪರಿಹಾರೋಪಾಯಗಳ ಬಗ್ಗೆ ಗಹನವಾಗಿ ಸಮಾಲೋಚಿಸಿದ್ದಾರೆ. ವಿಭಿನ್ನತೆಯಲ್ಲೇ ಕರ್ನಾಟಕ ಬಿಜೆಪಿ ಘಟಕ ಅತಿ ವಿಭಿನ್ನವೆನ್ನಲು ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ವಿಜಯೇಂದ್ರ ಮತ್ತು ಅಶೋಕ್ ಪರಸ್ಪರ ವಿರುದ್ಧ ದಿಕ್ಕಿಗೆ ಮುಖ ತಿರುಗಿಸುತ್ತಾರೆ. ಪಕ್ಷದ ಸಂಘಟನೆ, ಸರಕಾರದ ವಿರುದ್ಧದ ಹೋರಾಟದ ಸಂಬಂಧದಲ್ಲಿ ಒಟ್ಟಿಗೆ ಕುಳಿತು ಮಾತನಾಡುವುದಿಲ್ಲ ಎಂದು ವೃಥಾ ಆರೋಪಿಸುವವರಿಗೂ ಇದು ಉತ್ತರ. ಈ ಆಪಾದನೆಯೇ ನಿಜವೆಂದಾಗಿದ್ದರೆ ಕ್ರಾಸ್ ವೋಟಿಂಗ್ ವಿದ್ಯಮಾನದ ಬಳಿಕ ವಿಧಿವತ್ತಾಗಿ ಕುಳಿತು ಏಕೆ ಮಾತನ್ನಾಡುತ್ತಿದ್ದರು? ಆದ್ದರಿಂದ ಇವರಿಬ್ಬರ ರಾಜಕೀಯ ಉತ್ಕರ್ಷವನ್ನು ಕಂಡು ಹೊಟ್ಟೆಕಿಚ್ಚು ಪಡುವವರು ಇಲ್ಲಸಲ್ಲದ ಕಥನ ಕಟ್ಟುವುದು ಶೋಭೆ ತರುವುದಿಲ್ಲ. ಅಶೋಕ್, ವಿಜಯೇಂದ್ರ ಹೆಸರು ಹೇಳಿ ಅಕ್ಕಿಯಿಟ್ಟರೆ ಅದು ಬೇಯುವುದಿಲ್ಲವೆಂದು ಅಪಪ್ರಚಾರ ಮಾಡುವವರು ಇನ್ನಾದರೂ ಕಹಿ ಸತ್ಯವನ್ನು ಅರಗಿಸಿಕೊಳ್ಳಬೇಕು. ಮೃದು ಮಧುರವಾದ ಬಾಂಧವ್ಯದಲ್ಲಿ ಹುಳಿ ಹಿಂಡುವುದು ಸರ್ವಥಾ ಸಲ್ಲ. ಒಟ್ಟಾರೆ ಇವರಿಬ್ಬರನ್ನು ಒಳಗೊಂಡಂತೆ ರಾಜ್ಯ ಬಿಜೆಪಿ ನಾಯಕರ ನಡುವಿನ ಸ್ನೇಹ, ಸಮ್ಮಿಲನ ವರ್ಣನೆಗೂ ಮೀರಿದ್ದು. ಅಷ್ಟರ ಮಟ್ಟಿಗೆ ಶಬ್ದ ದಾರಿದ್ರ್ಯ ಉಂಟಾಗಿದ್ದಕ್ಕೆ ಅನ್ಯಥಾ ಭಾವಿಸಬಾರದು.

ಅಸಲಿಗೆ ಮೇಲ್ಮನೆ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕೆ ಕೈಹಾಕುವುದು ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಂಡಂತೆ ಎಂಬುದು ಬಿಜೆಪಿಗರಿಗೆ ಗೊತ್ತಿತ್ತು. ಆದರೆ, ತಿರುವಿಲ್ಲದ ಪಿಚ್‌ನಲ್ಲಿ ದೂಸ್ರಾ ಎಸೆಯಲು ನೋಡಿದವರು ಎಚ್.ಡಿ.ಕುಮಾರಸ್ವಾಮಿ. ಅದರ ಒಟ್ಟಾರೆ ಪರಿಣಾಮ ರಾಜ್ಯ ಬಿಜೆಪಿಯ ವಿರಾಟ್ ದರ್ಶನ! ಅದಕ್ಕಾಗಿ ಎಚ್‌ಡಿಕೆ ಅವರಿಗೆ ಬಿಜೆಪಿಗರು ಥ್ಯಾಂಕ್ಸ್ ಹೇಳಿದರೋ ಇಲ್ಲವೋ ಮಾಹಿತಿಯಿಲ್ಲ! ■

ಮಧ್ಯೆ ಮಧ್ಯೆ ಹ್ಞೂಂ ಅನ್ನುತ್ತಾ ಈ ಕತೆ ಕೇಳಿ...

ತಿಳಿಜಲ
ಪ್ರೊ.ಎಂ. ಕೃಷ್ಣೇಗೌಡ
editor@vijaykarnataka.com

ಕತೆಗೆ ಕಾಲಿಲ್ಲ ಅನ್ನುತ್ತಾರೆ. ಕಾಲೇ ಏನು? ಎಷ್ಟೋ ಸಲ ಅದಕ್ಕೆ ತಲೆ, ಬಾಲ, ಮೂಗು, ಮುಸುಡಿ ಏನೂ ಇರುವುದಿಲ್ಲ. ಎಷ್ಟೋ ಕತೆಗಳು ಹಾಗೆಯೇ. ಕಾಲೇ ಇಲ್ಲದೆ ನಡೆಯುತ್ತವೆ, ಬಾಯೇ ಇಲ್ಲದೆ ಮಾತಾಡುತ್ತವೆ. ನೀವು ಮಧ್ಯೆ ಮಧ್ಯೆ ಹ್ಞೂಂ ಅನ್ನಿ ಸಾಕು, ಕತೆ ಆರಾಮವಾಗಿ ನಡೆಯುತ್ತಾ ಹೋಗುತ್ತದೆ. ಆಮೇಲೆ ಕತೆಯು ಏನು ಹೇಳುತ್ತದೆಯೋ ಅಷ್ಟನ್ನೇ ಕೇಳಿಸಿಕೊಳ್ಳುವವರು ಸಾಧಾರಣ ಜನ. ಕತೆಯು ಹೇಳದೇ ಬಿಟ್ಟಿದ್ದನ್ನು ಕೇಳಿಸಿಕೊಳ್ಳುವವರು ಜಾಣರು. ಕತೆಯು ಹೀಗೆ ನಡೆಯಿತಾ? ಹೀಗೆ ನಡೆಯುವುದು ಸಾಧ್ಯವಾ? ಅಂತ ಅತಿ ಜಾಣರಾದವರು ಆಲೋಚಿಸಲಿ. ಆದರೆ, ನೀವು ದಯವಿಟ್ಟು ಈ ಕತೆಯನ್ನು ಆರಾಮವಾಗಿ ಕೇಳಿ. ಮಧ್ಯೆ ಮಧ್ಯೆ ಹ್ಞೂಂ ಅನ್ನುತ್ತಿರಿ ಅಷ್ಟೆ.

ಈ ಕತೆ ನನ್ನದಲ್ಲ, ನಾನು ಯಾವಾಗಲೋ ಓದಿದ್ದ ಪ್ರಪಂಚದ ಖ್ಯಾತ ಕತೆಗಾರ, ಕಾದಂಬರಿಕಾರ ಲಿಯೊ ಟಾಲ್‌ಸ್ಟಾಯ್ ಅವರದು.

ಏನಪ್ಪಾ ಅಂದರೆ, ಹಿಂದಾನೊಂದು ಕಾಲದಲ್ಲಿ ಹೀಗೆ ಒಂದು ದಿನ ಆಡೋ ಮಕ್ಕಳ ಕೈಗೆ ಒಂದು ಗುಂಡಗಿನ ಪದಾರ್ಥ ಸಿಕ್ಕಿತು. ಅದು ಸುಮಾರಾಗಿ ಒಂದು ಕೋಳಿ ಮೊಟ್ಟೆಯ ಗಾತ್ರ ಇತ್ತು. ಮಕ್ಕಳು ಆ ವಸ್ತುವನ್ನು ಹಿಡಿದು ಆಟ ಆಡುತ್ತಿದ್ದರು. ನೋಡುವುದಕ್ಕೆ ಅದು ಜೋಳದ ಕಾಳಿನ ಹಾಗಿತ್ತು. ಆಗ ಆ ದಾರಿಯಲ್ಲಿ ಹೋಗುತ್ತಿದ್ದ ಮನುಷ್ಯನೊಬ್ಬನು ಅದನ್ನು ನೋಡಿ ಮಕ್ಕಳಿಗೆ ಒಂದೆರಡು ಕಾಸು ಕೊಟ್ಟು ಅದನ್ನು ಕೊಂಡುಕೊಂಡನು. ಅಲ್ಲಿಂದ ತೆಗೆದುಕೊಂಡು ರಾಜಧಾನಿಗೆ ಹೋಗಿ ಅದನ್ನು ರಾಜನಿಗೆ ಮಾರಿದನು. ಅದನ್ನು ನೋಡಿ ರಾಜನಿಗೂ ಅಚ್ಚರಿಯಾಯಿತು. ಆಸ್ಥಾನದ ಪಂಡಿತರುಗಳನ್ನೆಲ್ಲಾ ಕರೆಸಿ ಅದನ್ನು ತೋರಿಸಿ ಅದೇನೆಂದು ಕೇಳಿದನು. ಪಂಡಿತರು ಅದೆಷ್ಟು ತಿಣುಕಿ, ತಿರುಗಿಸಿ ನೋಡಿದರೂ ಅವರಿಗೆ ಅದೇನೆಂದು ತಿಳಿಯಲಿಲ್ಲ. ಹೀಗಿರುವಾಗ ಎಲ್ಲಿಂದಲೋ ಒಂದು ಕೋಳಿ ಹಾರಿ ಬಂದು ಅದನ್ನು ಕುಕ್ಕಿ ಕುಕ್ಕಿ ತೂತು ಮಾಡಿತು. ಆಗ ಅದು ಜೋಳದ ಕಾಳೇ ಎಂದು ಎಲ್ಲರಿಗೂ ಗೊತ್ತಾಯಿತು.

ರಾಜನಿಗೆ ಕುತೂಹಲವಾಯಿತು. ಇಂಥ ಜೋಳದ ಕಾಳನ್ನು ಎಲ್ಲಿ ಯಾವಾಗ ಬೆಳೆಯುತ್ತಿದ್ದರು ಎಂಬುದನ್ನು ತಿಳಿದುಕೊಳ್ಳಲು ಒಬ್ಬ ತುಂಬಾ ಮುದುಕನಾದ ರೈತನನ್ನು ಕರೆಸಿದನು. ಅವನೋ ಅಜ್ಜಜ್ಜ ಮುದುಕ. ಜರಾಜೀರ್ಣವಾದ ಶರೀರ, ಗೂನಾದ ಬೆನ್ನು, ಬಿಲ್ಲಿನಂಥ ಕೈಕಾಲುಗಳು, ಹಲ್ಲಿಲ್ಲದ ಬೋಡು ಬಾಯಿ. ಕೈಯಲ್ಲಿ ಊರುಗೋಲುಗಳನ್ನು ಹಿಡಿದುಕೊಂಡು ಹಾಗೂ ಹೀಗೂ ಬಂದು ರಾಜನ ಮುಂದೆ ನಿಂತ. ಅವನಿಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ಕಿವಿ ಕೂಡಾ ಮಧ್ಯಸ್ಥ.

ರಾಜ ಅವನ ಕೈಗೆ ಆ ಜೋಳದ ಕಾಳನ್ನು ಕೊಟ್ಟು, ''ಅಯ್ಯಾ, ವೃದ್ಧನೇ, ಇಂಥ ಜೋಳದ ಕಾಳನ್ನು ನೀನು ಎಲ್ಲಾದರೂ ಕಂಡಿದ್ದೀಯಾ? ನಿಮ್ಮ ಕಡೆ ಹಿಂದೆ ಎಂದಾದರೂ ಇದನ್ನು ಬೆಳೆಯುತ್ತಿದ್ದಿರಾ?,'' ಅಂತ ಕೇಳಿದ. ಆಗ ಆ ಮುದುಕ ''ಇಂಥ ಜೋಳದ ಕಾಳನ್ನು ನಾನೆಲ್ಲೂ ಕಂಡಿಲ್ಲ ಮಹಾಸ್ವಾಮಿ. ನೀವು ನಮ್ಮಪ್ಪನನ್ನು ಕೇಳಿದರೆ ಅವನು ಏನಾದರೂ ಹೇಳಬಹುದು,'' ಅಂದ.



ರಾಜ ಈ ಮುದುಕನ ಅಪ್ಪ ಇನ್ನೂ ಬದುಕಿದ್ದಾನಾ? ಅಂತ ಆಶ್ಚರ್ಯಪಟ್ಟು ಅವರಪ್ಪನನ್ನೇ ಕರೆಸಿದ. ಅವರಪ್ಪ ಇನ್ನೂ ಹೆಚ್ಚು ವಯಸ್ಸಾದವನು. ಆದರೆ ಅವನಿಗೆ ಕಣ್ಣು ಕಾಣಿಸುತ್ತಿತ್ತು. ಬೆನ್ನು ಬಾಗಿರಲಿಲ್ಲ, ಕೈಯಲ್ಲೊಂದು ಊರುಗೋಲಿತ್ತು. ರಾಜ ಅವನಿಗೂ ಆ ಜೋಳದ ಕಾಳನ್ನು ತೋರಿಸಿ, ಅವನ ಮಗನಿಗೆ ಕೇಳಿದ್ದ ಪ್ರಶ್ನೆಯನ್ನೇ ಕೇಳಿದ. ಆಗ ಆ ಮುದುಕ, ನಾನು ಇಷ್ಟು ದೊಡ್ಡ ಕಾಳನ್ನು ನೋಡಿಲ್ಲ ಮಹಾಸ್ವಾಮಿ, ಆದರೆ ನಮ್ಮ ಕಾಲದಲ್ಲಿ ಬೆಳೆಯುತ್ತಿದ್ದ ಕಾಳುಗಳು ಇದಕ್ಕಿಂತ ಸ್ವಲ್ಪ ಸಣ್ಣ ಇದ್ದವು. ನಮ್ಮಪ್ಪ ಅವನ ಕಾಲದಲ್ಲಿ ಇನ್ನೂ ದಪ್ಪ ದಪ್ಪ ಜೋಳದ ಕಾಳುಗಳನ್ನು ಬೆಳೆಯುತ್ತಿದ್ದುದಾಗಿ ಹೇಳುತ್ತಿದ್ದ. ನೀವು ನಮ್ಮಪ್ಪನನ್ನು ಕೇಳುವುದು ಒಳ್ಳೆಯದು ಅಂದ. ರಾಜನಿಗೆ ಪರಮಾಶ್ಚರ್ಯವಾಯಿತು. ಇವನಪ್ಪ ಕೂಡಾ ಇದ್ದಾನಾ? ಅಂದುಕೊಂಡು ಅವನ ಅಪ್ಪನನ್ನು ಕೂಡಾ ಕರೆಸಿದ. ಅವನಪ್ಪ ಬಂದ. ಅವನು ಇನ್ನೂ ಸದೃಢವಾಗಿದ್ದ. ಅವನ ಕಣ್ಣು ಕಿವಿಗಳೆಲ್ಲ ಚುರುಕಾಗಿದ್ದವು. ನೆಟ್ಟಗೆ ನಡೆದುಕೊಂಡು ಬಂದು ರಾಜನ ಮುಂದೆ ನಿಂತ. ರಾಜ ಅವನಿಗೂ ಅದೇ ಪ್ರಶ್ನೆ ಕೇಳಿದ. ಆಗ ಆ ವ್ಯಕ್ತಿ ಹೇಳಿದ.

''ಮಹಾಪ್ರಭು, ನಮ್ಮ ಕಾಲದಲ್ಲಿ ಇಂಥ ಜೋಳವನ್ನೇ ಯಥೇಚ್ಛವಾಗಿ ಬೆಳೆಯುತ್ತಿದ್ದೆವು. ನಾನು ಚಿಕ್ಕಂದಿನಲ್ಲಿ ಇಂಥ ಕಾಳಿನ ಹಿಟ್ಟನ್ನೇ ಉಂಡು ಬೆಳೆದವನು,'' ಅಂತ ಹೇಳಿದ.

ಆಗ ರಾಜ, ''ಅಯ್ಯಾ ಇಂಥ ಕಾಳುಗಳನ್ನು ನಿನ್ನ ಹೊಲದಲ್ಲಿಯೂ ಬೆಳೆಯುತ್ತಿದ್ದೆಯಾ? ನಿನಗೆ ಆಗಿ ಉಳಿದುದನ್ನು ಎಲ್ಲಿಯಾದರೂ ಮಾರುತ್ತಿದ್ದೆಯಾ? ಅಥವಾ ನಿನಗೆ ಹೆಚ್ಚು ಬೇಕಾದರೆ ಎಲ್ಲಿಂದಾದರೂ ಕೊಳ್ಳುತ್ತಿದ್ದೆಯಾ?,'' ರಾಜನ ಪ್ರಶ್ನೆಗೆ ಆ ವ್ಯಕ್ತಿ ಉತ್ತರಿಸಿದ, ''ಮಹಾಸ್ವಾಮಿ, ಆಗ ನನ್ನ ಹೊಲ ಅಂತೇನೂ ಇರಲಿಲ್ಲ, ನಾನೆಲ್ಲಿ ಉಳುತ್ತೇನೆಯೋ ಅದೇ ನನ್ನ ಹೊಲ. ಈ ಭೂಮಿಯ ಸಣ್ಣದೊಂದು ಚೂರಿಗೂ ಮನುಷ್ಯ ಮಾಲೀಕನಾಗಿರಲಿಲ್ಲ, ಭೂಮಿಯ ಮಾಲೀಕ ಭಗವಂತ ಮಾತ್ರ ಎಂದು ನಂಬಿ ನಡೆದವರು ನಾವು. ಮತ್ತೆ ನಾನು ಉಂಡು ಉಳಿದದ್ದನ್ನು ಮಾರುವುದು ಯಾರಿಗೆ? ಆಗ ಕೊಳ್ಳುವವರೂ ಇರಲಿಲ್ಲ, ಮಾರುವವರೂ ಇರಲಿಲ್ಲ, ದುಡ್ಡು ಎನ್ನುವುದೂ ಇರಲಿಲ್ಲ.''

ರಾಜನಿಗೆ ಮತ್ತು ಸೋಜಿಗವಾಯಿತು. ''ಹಾಗಾದರೆ ಈಗ ಏಕೆ ಭೂಮಿಯಲ್ಲಿ ಇಷ್ಟು ದೊಡ್ಡ ಕಾಳು ಬೆಳೆಯುವುದಿಲ್ಲ? ನಿನ್ನ ಮೊಮ್ಮಗನಿಗಿಂತ ನಿನ್ನ ಮಗ, ನಿನ್ನ ಮಗನಿಗಿಂತ ನೀನು ಗಟ್ಟಿಮುಟ್ಟಾಗಿದ್ದೀಯಲ್ಲ, ಅದು ಹೇಗೆ?,'' ಅಂತ ಕೇಳಿದ ರಾಜ. ಅದಕ್ಕೆ ಆ ಮನುಷ್ಯ ಹೇಳಿದ, ''ಪ್ರಭೂ, ಮನುಷ್ಯರು ತಮ್ಮ ಕೆಲಸದಿಂದ ತಾವು ಜೀವಿಸುವುದನ್ನು ಬಿಟ್ಟು ಬೇರೆಯವರ ಕೆಲಸಕ್ಕೆ ಅಧೀನರಾಗಿ ಜೀವಿಸುತ್ತಿರುವುದರಿಂದ, ಇಂದಿಗೆ, ನಾಳೆಗೆ ಎಂದು ಇಟ್ಟುಕೊಳ್ಳದೆ ಪ್ರಕೃತಿಯ, ಭಗವಂತನ ಕಟ್ಟಳೆಗಳಿಗೆ ಅಧೀನರಾಗಿ, ಆಸೆಯಿಲ್ಲದೆ, ಲೋಭವಿಲ್ಲದೆ, ಆಳುವವರಿಲ್ಲದೆ, ಆಳಿಸಿಕೊಳ್ಳುವವರಿಲ್ಲದೆ ಬದುಕುತ್ತಿದ್ದುದರಿಂದ ಹಾಗಿದ್ದಿರಬಹುದು''.

ಆ ಮುದುಕನ ಅಪ್ಪ, ಅವರಪ್ಪ ಬದುಕಿದ್ದಾನಾ? ಅದು ಸಾಧ್ಯವಾ? ಎಂದೆಲ್ಲಾ ಯೋಚಿಸಬೇಡಿ. ಟಾಲ್‌ಸ್ಟಾಯ್ ಈ ಕತೆಯ ಮುಖಾಂತರ ಬೇರೇನೋ ಹೇಳುತ್ತಿದ್ದಾನಲ್ಲವಾ? ■

ಯಶಸ್ಸೆಂದರೆ ಎಂದಿಗೂ ಬೀಳದಿರುವುದಲ್ಲ, ಎಷ್ಟೇ ಬಾರಿ ಬಿದ್ದರೂ ಮತ್ತೆ ಎದ್ದೇಳುವುದು!

ವಿಕ ಟರ್ನಿಂಗ್ ಪಾಯಿಂಟ್
ಹ.ಚ. ನಟೇಶ ಬಾಬು
nateshababu.hc@timesofindia.com

ಒಮ್ಮೆ ಊಹಿಸಿಕೊಳ್ಳಿ. ನಿಮ್ಮ ಬಳಿ ಬಹಳಷ್ಟು ಹಣವಿದೆ. ಎಷ್ಟಿದೆ ಎಂದರೆ, ಪ್ರತಿ ಗಂಟೆಗೆ 10 ಲಕ್ಷ ಡಾಲರ್ (ಸುಮಾರು ಒಂಬತ್ತೂವರೆ ಕೋಟಿ ರೂಪಾಯಿ) ಖರ್ಚು ಮಾಡಿದರೂ 114 ವರ್ಷಗಳವರೆಗೆ ನಿಮ್ಮಲ್ಲಿನ ಹಣ ಮುಗಿಯುವುದಿಲ್ಲ! ಆದರೂ, ನೀವು ಅರಮನೆಯಂತಹ ಬಂಗಲೆ ಬದಲಿಗೆ, ಕೇವಲ 400 ಚದರ ಅಡಿ ವಿಸ್ತೀರ್ಣದ ಸಿಂಪಲ್ ಅಂದ್ರೆ ಸಿಂಪಲ್ ಮನೆಯಲ್ಲಿ ವಾಸಿಸುತ್ತೀರಿ! ''ಎಲ್ಲಾದರೂ ಉಂಟಾ?'' ಎಂದು ನೀವು ಪ್ರಶ್ನಿಸಬಹುದು. ಇಂದು ಕಾಸಿಲ್ಲದಿದ್ದರೂ, ಮನೆಯಲ್ಲಿ ಇಬ್ಬರೇ ಇದ್ದರೂ ಸಾಲ ಮಾಡಿ 'ದೊಡ್ಡ ಮನೆ'ಯಲ್ಲಿ ನೆಲೆ ನಿಲ್ಲುವ ಜನ ಸಾಕಷ್ಟಿದ್ದಾರೆ. ಹೀಗಾಗಿಯೇ, ಇವರ್‍ಯಾರ ಬಗೆಗೂ ಯಾರಿಗೂ ಆಸಕ್ತಿಯಿಲ್ಲ. ಆದರೆ, ಇಷ್ಟೆಲ್ಲ ವೈಭೋಗವಿದ್ದರೂ ಒಬ್ಬಾತ 400 ಚದರ ಅಡಿ ವಿಸ್ತೀರ್ಣದ ಪುಟ್ಟ ಮನೆಯಲ್ಲಿದ್ದಾರೆ. ಇದು ಕಾಲ್ಪನಿಕ ಕತೆಯಲ್ಲ, ಜಗತ್ತಿನ ಮೊದಲ ಟ್ರಿಲಿಯನೇರ್ ಎಲಾನ್ ಮಸ್ಕ್ ರ ಬದುಕಿನ ವಾಸ್ತವ.

ಸುಮಾರು 1.4 ಟ್ರಿಲಿಯನ್ ಡಾಲರ್ (ಸುಮಾರು 121 ಲಕ್ಷ ಕೋಟಿ ರೂಪಾಯಿ) ಸಂಪತ್ತನ್ನು ಹೊಂದಿರುವ ಜಗತ್ತಿನ ಕುಬೇರ ಮಸ್ಕ್, ಐಷಾರಾಮಿ ಅರಮನೆಗಳಲ್ಲಿ ವಾಸಿಸುವುದಿಲ್ಲ. ಟೆಕ್ಸಾಸ್‌ನ ಬೋಕಾ ಚಿಕಾದಲ್ಲಿರುವ ಸ್ಪೇಸ್ ಎಕ್ಸ್ ಸ್ಟಾರ್‌ಬೇಸ್ ಸಮೀಪದ 400 ಚದರ ಅಡಿ ವಿಸ್ತೀರ್ಣದ ಸಣ್ಣ ಮನೆಯಲ್ಲಿ ವಾಸಿಸುತ್ತಾರೆ. ಮನೆಯ ಬೆಲೆ ಸುಮಾರು 50,000 ಡಾಲರ್(ಸುಮಾರು 47 ಲಕ್ಷ ರೂ.). ಮನೆಯಲ್ಲಿ ಒಂದು ಮಲಗುವ ಕೋಣೆ, ಅಡುಗೆಮನೆ ಮತ್ತು ಸ್ನಾನಗೃಹ ಮಾತ್ರ ಇವೆ. ಈ ಮನೆ ಹೇಗಿದೆ ಅನ್ನುವುದನ್ನು ಮಸ್ಕ್‌ರ ತಾಯಿ ಮಯೆ ಮಸ್ಕ್‌ರ ಮಾತಿನಲ್ಲೇ ಕೇಳಬೇಕು. ಅವರು ಇತ್ತೀಚೆಗೆ ಮಗನ ಮನೆಗೆ ಹೋಗಿದ್ದರಂತೆ. ''ಫ್ರಿಡ್ಜ್ ತೆರೆದು ನೋಡಿದರೆ ತಿನ್ನಲು ಏನೂ ಇರಲಿಲ್ಲ. ಸ್ನಾನಗೃಹದಲ್ಲಿ ಒಂದೇ ಟವೆಲ್ ಇತ್ತು,'' ಎಂಬುದಾಗಿ ಸೋಷಿಯಲ್ ಮೀಡಿಯಾದಲ್ಲಿ ಅವರೇ ಬರೆದುಕೊಂಡಿದ್ದಾರೆ. ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಯ ಮನೆಯಲ್ಲಿ ಆಹಾರವೇ ಇಲ್ಲ ಎನ್ನುವುದು ವಿಚಿತ್ರವಾಗಿ ಕಾಣಬಹುದು. ಆದರೆ, ಅದೇ ಮಸ್ಕ್.

ಸಂಶೋಧಕ, ಎಂಜಿನಿಯರ್, ಭೌತಶಾಸ್ತ್ರಜ್ಞ, ಸೀರಿಯಲ್ ಎಂಟರ್‌ಪ್ರೆನರ್ ಎಲ್ಲವೂ ಆಗಿರುವ ಮಸ್ಕ್‌ರ ಲೈಫ್‌ಸ್ಟೈಲ್ ಬಹಳ ಸಿಂಪಲ್. ವೈಯಕ್ತಿಕ ಸೌಕರ್ಯಕ್ಕಿಂತ ಕೆಲಸಕ್ಕೆ ಹೆಚ್ಚು ಆದ್ಯತೆ. ಟೆಸ್ಲಾದ ಸಂಕಷ್ಟದ ದಿನಗಳಲ್ಲಿ ಅವರು ಕಾರ್ಖಾನೆಯ ನೆಲದ ಮೇಲೆಯೇ ಮಲಗುತ್ತಿದ್ದರು. ಉದ್ಯೋಗಿಗಳಿಗೆ ಹೇಳುವ ಕೆಲಸವನ್ನು ಮೊದಲು ತಾವೇ ಮಾಡುತ್ತಿದ್ದರು. ವಿಶ್ವದ ಈ ನಂ.1 ಶ್ರೀಮಂತ ವ್ಯಕ್ತಿಯ ಬದುಕಿನ ಕತೆ ಹಣದಿಂದ ಆರಂಭವಾಗುವುದಿಲ್ಲ, ಅದು ಕನಸು, ಕುತೂಹಲ, ಅವಮಾನ, ಸೋಲು ಮತ್ತು ಅಚಲ ನಂಬಿಕೆಯಿಂದ ಆರಂಭವಾಗುತ್ತದೆ.

1971ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಜನಿಸಿದ ಮಸ್ಕ್ ಬಾಲ್ಯದಿಂದಲೇ ಸ್ವಲ್ಪ ಭಿನ್ನ. ಸಹಪಾಠಿಗಳು ಕಾಡಿಸುತ್ತಿದ್ದರು. ಮನೆಯಲ್ಲಿ ಎಲ್ಲವೂ ಸರಿ ಇರಲಿಲ್ಲ. ಅಪ್ಪ-ಅಮ್ಮನ ಜಗಳ ಡಿವೋರ್ಸ್‌ನಲ್ಲಿ ಮುಕ್ತಾಯವಾಯಿತು. ಅವರ ವಯಸ್ಸಿನ ಇತರ ಮಕ್ಕಳು ಆಟವಾಡುತ್ತಿದ್ದರೆ, ಅವರು ಪುಸ್ತಕದ ಹುಳು. ವಿಜ್ಞಾನ ಕಾದಂಬರಿಗಳು, ಬಾಹ್ಯಾಕಾಶದ ಪುಸ್ತಕಗಳು ಮತ್ತು ತಂತ್ರಜ್ಞಾನದ ಲೇಖನಗಳು ಅವರ ಸುತ್ತಲಿನ ಪ್ರಪಂಚವಾಗಿತ್ತು. 10ನೇ ವಯಸ್ಸಿನಲ್ಲಿ ತಮ್ಮ ಉಳಿತಾಯದ ಹಣದಿಂದಲೇ ಮೊದಲ ಕಂಪ್ಯೂಟರ್ ಖರೀದಿಸಿ, ಪ್ರೋಗ್ರಾಮಿಂಗ್ ಸಹ ಕಲಿತರು. 12ನೇ ವಯಸ್ಸಿನಲ್ಲೇ ಅವರು 'Blastar' ಎಂಬ ವಿಡಿಯೊ ಗೇಮ್ ನಿರ್ಮಿಸಿ ಮಾರಾಟ ಮಾಡಿದರು. ಹುಡುಗನಾಗಿದ್ದಾಗಲೇ ಉದ್ಯಮಶೀಲತೆಯ ಬೀಜ ಅವರೊಳಗೆ ಮೊಳಕೆಯೊಡೆದಿತ್ತು.

ನಂತರ ಕೆನಡಾ ಮತ್ತು ಅಮೆರಿಕಕ್ಕೆ ತೆರಳಿದ ಅವರು ಪಿಎಚ್.ಡಿ ಅಧ್ಯಯನಕ್ಕೆ ಮುಂದಾದರು. ಆದರೆ, ಎರಡು ದಿನಗಳಲ್ಲಿಯೇ ಇದೆಲ್ಲವನ್ನೂ ಬಿಟ್ಟು ಉದ್ಯಮ ಜಗತ್ತಿಗೆ ಧುಮುಕಿದರು.

1995ರಲ್ಲಿ ತಮ್ಮ ಸಹೋದರ ಕಿಂಬಲ್ ಮಸ್ಕ್ ಜತೆ ಸೇರಿ 'ಜಿಪ್2' ಸಂಸ್ಥೆ ಕಟ್ಟಿದರು. ಕಚೇರಿಯನ್ನೇ ಮನೆ ಮಾಡಿಕೊಂಡರು, ಸೋಫಾವೇ ಬೆಡ್ ಆಯಿತು. ಸಮೀಪದ ಯೂತ್ ಹಾಸ್ಟೆಲ್‌ನಲ್ಲಿ ಸ್ನಾನ ಸೇರಿದಂತೆ ನಿತ್ಯಕರ್ಮಗಳು ನಡೆದವು. ಬಳಿಕ 'ಪೇಪಾಲ್' ಎನ್ನುವ ಇನ್ನೊಂದು ಕಂಪನಿಯನ್ನು ಸ್ಥಾಪಿಸಿ ಅಲ್ಲೂ ಯಶಸ್ಸು ಕಂಡರು. ಮುಂದೆ ಅದನ್ನು ಮಾರಾಟ ಮಾಡಿದಾಗ ಸುಮಾರು 180 ಮಿಲಿಯನ್ ಡಾಲರ್ ದೊರೆಯಿತು. ಹೆಚ್ಚಿನವರು ಅಲ್ಲಿಯೇ ಉಳಿದು, ನೆಮ್ಮದಿಯ ಜೀವನವನ್ನು ಆಯ್ಕೆ ಮಾಡುತ್ತಿದ್ದರು. ಆದರೆ, ಮಸ್ಕ್ ಹಾಗೆ ಮಾಡಲಿಲ್ಲ. ಸಿಕ್ಕಿದ ಹಣವನ್ನು ಬಾಹ್ಯಾಕಾಶ, ವಿದ್ಯುತ್ ವಾಹನ ಮತ್ತು ನವೀಕರಿಸಬಹುದಾದ ಶಕ್ತಿ - ಇಂಥ ಮೂರು ಅಪಾಯಕಾರಿ ಕನಸುಗಳಿಗೆ ಹೂಡಿಕೆ ಮಾಡಿದರು. ಸ್ನೇಹಿತರು ''ಇಂಥ ಬಿಸಿನೆಸ್ ಮಾಡುವುದೂ, ಆತ್ಮಹತ್ಯೆ ಮಾಡಿಕೊಳ್ಳುವುದೂ ಎರಡೂ ಒಂದೇ,'' ಎಂದರು. ತಜ್ಞರು ''ಇದೆಲ್ಲ ಪ್ರಾಕ್ಟಿಕಲ್ ಆಗಿ ಅಸಾಧ್ಯ,'' ಎಂದರು. ಹೂಡಿಕೆದಾರರು ''ಹಣವನ್ನು ಬೆಂಕಿಗೆ ಹಾಕಿ ಸುಟ್ಟಂತೆ ಆಗುತ್ತದೆ,'' ಎಂದು ನೂರು ಸಲ ಹೇಳಿದರು. ಆದರೆ, ಮಸ್ಕ್ ಕೇಳಲಿಲ್ಲ.

2008ರಲ್ಲಿ ಅವರ ಬದುಕಿನ ಅತ್ಯಂತ ಕಠಿಣ ಘಟ್ಟ ಎದುರಾಯಿತು. ಸ್ಪೇಸ್‌ಎಕ್ಸ್‌ನ ಮೊದಲ ಮೂರು ರಾಕೆಟ್‌ಗಳು ವಿಫಲವಾದವು. ಟೆಸ್ಲಾ ದಿವಾಳಿಯಾಗುವ ಅಂಚಿನಲ್ಲಿತ್ತು. ವೈಯಕ್ತಿಕ ಜೀವನವೂ ಸಂಕಷ್ಟದಲ್ಲಿತ್ತು. ಆ ಸಮಯದಲ್ಲಿ ನಾಲ್ಕನೇ ರಾಕೆಟ್ ಕೂಡ ವಿಫಲವಾಗಿದ್ದರೆ ಸ್ಪೇಸ್‌ಎಕ್ಸ್ ಅನ್ನು ಮುಚ್ಚಬೇಕಾಗುತ್ತಿತ್ತು. ಆದರೆ, ನಾಲ್ಕನೇ ಪ್ರಯತ್ನ ಯಶಸ್ವಿಯಾಯಿತು. ಅದೇ ಅವರ ಬದುಕಿನ ದೊಡ್ಡ 'ಟರ್ನಿಂಗ್ ಪಾಯಿಂಟ್'. ಆ ಯಶಸ್ಸಿನ ಬಳಿಕ ಒಪ್ಪಂದಕ್ಕೆ ನಾಸಾ ಕೈಚಾಚಿತು. ಸ್ಪೇಸ್ ಎಕ್ಸ್ ಉಳಿಯಿತು. ಟೆಸ್ಲಾ ಚೇತರಿಸಿಕೊಂಡಿತು. ಬಳಿಕ ಜಗತ್ತು ಮಸ್ಕ್ ಅವರನ್ನು ಗಂಭೀರವಾಗಿ ಪರಿಗಣಿಸಿತು. ಸೋಲಾರ್ ಎನರ್ಜಿ, ಇ-ವೆಹಿಕಲ್, ಬಾಹ್ಯಾಕಾಶ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ನ್ಯೂರೋಟೆಕ್ನಾಲಜಿ ವಲಯಗಳಲ್ಲಿ ಮಸ್ಕ್ ಉದ್ಯಮ ಹರಡಿಗೊಂಡಿದೆ.

''ಸೋಲು ಅನ್ನುವುದು ಒಂದು ಆಯ್ಕೆಯೇ ಆಗಿದೆ. ನೀವು ಸೋಲುತ್ತಿಲ್ಲ ಎಂದರೆ ಸಾಕಷ್ಟು ಹೊಸತನಕ್ಕೆ ತೆರೆದುಕೊಂಡಿಲ್ಲ, ಪ್ರಯತ್ನಿಸುತ್ತಿಲ್ಲ ಎಂದರ್ಥ,'' ಎನ್ನುವ ಮಸ್ಕ್ ಅವರ ಮಾತು, ಸೋಲಿನ ಭಯದಿಂದ ಕೈಕಟ್ಟಿ ಕೂತವರಿಗೆ ಸ್ಫೂರ್ತಿಸೆಲೆ. ''ಒಂದು ಕೆಲಸ ಸಾಕಷ್ಟು ಮಹತ್ವದ್ದಾಗಿದ್ದರೆ, ಯಶಸ್ಸಿನ ಸಾಧ್ಯತೆ ಕಡಿಮೆ ಇದ್ದರೂ ಅದನ್ನು ಮಾಡಲೇಬೇಕು,'' ಎನ್ನುವ ಮಸ್ಕ್‌ರ ಇನ್ನೊಂದು ಮಾತೂ ಮಹತ್ವವನ್ನು ಪಡೆದಿದೆ.

ಮಸ್ಕ್‌ಗೆ ವೈಯಕ್ತಿಕ ವೈಭೋಗಕ್ಕಿಂತ ಕೆಲಸ ಮುಖ್ಯ, ಗುರಿ ಮುಖ್ಯ. ಅವರಿಗೆ ಅರಮನೆಗಿಂತ ಮಂಗಳ ಗ್ರಹವೇ ಮುಖ್ಯ. ಇದೇ ಚಿಂತನೆ ಅವರನ್ನು ಇತರರಿಗಿಂತ ವಿಭಿನ್ನಗೊಳಿಸಿದೆ. ಇಂದು ಅವರ ಸಂಪತ್ತನ್ನು ನೋಡಿ ಜನರು ಅಚ್ಚರಿಗೊಳ್ಳುತ್ತಾರೆ. ಆದರೆ, ಅವರ ನಿಜವಾದ ಶಕ್ತಿ ಹಣವಲ್ಲ. ಸೋಲನ್ನು ಒಪ್ಪಿಕೊಳ್ಳುವ ಧೈರ್ಯ ಮತ್ತು ಮತ್ತೆ ಎದ್ದು ನಿಲ್ಲುವ ಸಾಮರ್ಥ್ಯದಲ್ಲಿದೆ. ಕನಸುಗಳು ದೊಡ್ಡದಾಗಿದ್ದರೆ, ಸೋಲುಗಳು ಯಶಸ್ಸಿನ ದಾರಿಯಲ್ಲಿ ಸಿಗುವ ತಾತ್ಕಾಲಿಕ ತಿರುವುಗಳಷ್ಟೇ.

ಯಶಸ್ಸು ಎಂದರೆ ಎಂದಿಗೂ ಬೀಳದಿರುವುದು ಅಲ್ಲ, ಎಷ್ಟೇ ಬಾರಿ ಬಿದ್ದರೂ ಮತ್ತೆ ಎದ್ದು ನಿಲ್ಲುವುದು. ಜಗತ್ತಿನ ಮೊದಲ ಟ್ರಿಲಿಯನೇರ್ ಆದರೂ, ಎಲಾನ್ ಮಸ್ಕ್ ಇನ್ನೂ ತಮ್ಮನ್ನು ಶ್ರೀಮಂತ ವ್ಯಕ್ತಿಯಾಗಿ ಅಲ್ಲ, ದೊಡ್ಡ ಕನಸುಗಳ ಬೆನ್ನಟ್ಟುವ ವ್ಯಕ್ತಿಯಾಗಿಯೇ ನೋಡಿಕೊಳ್ಳುತ್ತಾರೆ. ಅವರ ಬದುಕು ವಿರೋಧಾಭಾಸಗಳ ಸಂಗಮ. ಈ ಉದ್ಯಮಿಯ ಬದುಕಿನ ಪಾಠಗಳು ಲಕ್ಷಾಂತರ ಮಂದಿಗೆ ಸ್ಟ್ರೀಟ್ ಲೈಟ್‌ಗಳು. ■

ತಿಳಿದುಕೊಳ್ಳುವ ಪಯಣವೇ ಈ ಬಂಧನ...

ಮುಗಿಲ ಹಕ್ಕಿ
ವಿದ್ಯಾರಶ್ಮಿ ಪೆಲ್ತತ್ತಡ್ಕ
vidyarashmi.bhat@timesofindia.com

ಈ ಮನೆಯಲ್ಲಿ ಅಪ್ಪಣ್ಣ ಭಟ್ಟ, ಪಕ್ಕದಲ್ಲೇ ಕುಪ್ಪಣ್ಣ ಭಟ್ಟ. ಘಟ್ಟದ ಕೆಳಗಿನಿಂದ ಬಂದು ನೆಲೆಸಿದ ಈ ಇಬ್ಬರಲ್ಲಿ ಅಪ್ಪಣ್ಣ ಭಟ್ಟ ವ್ಯವಹಾರಸ್ಥ, ಮಾತುಗಾರ. ಕುಪ್ಪಣ್ಣ ಭಟ್ಟ ಕಡುಕೋಪಿ, ಅಂತರ್ಮುಖಿ, ವ್ಯವಹಾರ ಜ್ಞಾನವಿಲ್ಲದವನು. ಇಬ್ಬರ ಮಧ್ಯೆಯೂ ಸದಾ ಏನೋ ಘರ್ಷಣೆ, ಕೋರ್ಟ್ ಕದನ. ಅಪ್ಪಣ್ಣ ಭಟ್ಟ ತನ್ನ ವ್ಯವಹಾರ ನೋಡಿಕೊಳ್ಳುವುದರ ಜತೆಗೆ ಕುಪ್ಪಣ್ಣ ಭಟ್ಟನ ಅವನತಿಗೂ ಪ್ರಯತ್ನ ಮಾಡುತ್ತಲೇ ಇರುವವನು. ಕೊನೆಗೆ ಕುಪ್ಪಣ್ಣ ಭಟ್ಟನ ಸಾಲದ ಬಾಧ್ಯತೆಗಾಗಿ ಅವನ ತೋಟವು ಜಪ್ತಿಯಾಗಿ ಅಪ್ಪಣ್ಣನ ಪಾಲು. ಆಗ ಗೆದ್ದೆನೆಂದು ಬೀಗುತ್ತ ಕುಪ್ಪಣ್ಣ ಭಟ್ಟನನ್ನು ಮಾತಾಡಿಸಲು ಹೋದ ಅಪ್ಪಣ್ಣ ಭಟ್ಟನಲ್ಲಿ ಕುಪ್ಪಣ್ಣ ಭಟ್ಟ ಜಗಳವಾಡುವುದಿರಲಿ, ಒಂದು ಶಬ್ದವನ್ನೂ ಆಡುವುದಿಲ್ಲ. ಸರಿಯಾಗಿ ಅವನನ್ನು ನೋಡುವುದೂ ಇಲ್ಲ. ನೋಡಿದರೂ ಎದುರಿಗೆ ವ್ಯಕ್ತಿಯೇ ಇಲ್ಲ, ಏನೂ ನಡೆದೇ ಇಲ್ಲವೆಂಬ ನಿರ್ಲಿಪ್ತಿ. ಕುಪ್ಪಣ್ಣ ಭಟ್ಟನ ಈ ಕಡುಮೌನ ಮತ್ತು ನಿರ್ಲಿಪ್ತಿಯಿಂದ ಅಪ್ಪಣ್ಣ ಭಟ್ಟನಿಗೆ ಗೆಲುವಿರಲಿ, ಅವನಲ್ಲಿ ಮೂಡುವುದು ನಡುಕ...

ಯು.ಆರ್. ಅನಂತಮೂರ್ತಿಯವರ 'ಮೌನಿ' ಕಥೆಯಿದು. ಕುಪ್ಪಣ್ಣ ಭಟ್ಟ ತನ್ನೊಂದಿಗೆ ಜಗಳವಾಡುತ್ತಾನೆ, ಖಡಾಕಡಿ ಕದನವಾಗುತ್ತದೆ, ಆಗ ಊರವರೆಲ್ಲರ ಬೆಂಬಲದಿಂದ ತಾನು ನಿಜವಾದ ವಿಜಯೋತ್ಸವವನ್ನೇ ಆಚರಿಸಬಹುದು ಅಂದುಕೊಂಡಿದ್ದನೇನೋ ಅಪ್ಪಣ್ಣ ಭಟ್ಟ. ಆದರೆ, ಹಾಗಾಗುವುದಿಲ್ಲ. ಕುಪ್ಪಣ್ಣ ಭಟ್ಟ ಹಾಗೆ ವರ್ತಿಸುತ್ತಾನೆಂಬುದು ಅಪ್ಪಣ್ಣನ ಊಹೆಗೆ ನಿಲುಕದೆ ಹೋಗುವುದು ಈ ಕಥೆಯ ಚೋದ್ಯ.

ಬಹಳಷ್ಟು ಬಾರಿ ಹೀಗಾಗುತ್ತದೆ. ಎದುರಿಗಿರುವವರು ಹೀಗೆ, ಇಷ್ಟೇ ಎಂದೆಲ್ಲ ಲೆಕ್ಕಾಚಾರ ಹಾಕಿರುತ್ತೇವೆ. ಆದರೆ, ಅವರು ಅದನ್ನು ಮೀರಿ ತಮ್ಮ ಹೆಜ್ಜೆ ಇಟ್ಟಿರುತ್ತಾರೆ. ಆಗ ಅವರ ಬಗೆಗೆ ನಮ್ಮಲ್ಲಿ ಹುಟ್ಟುವುದು ಮಿಶ್ರಭಾವ. ಹಾಗೆ ಅನೂಹ್ಯವಾಗಿ ನಡೆದವರು ನಮ್ಮ ಆಪ್ತರಾದರೆ ಮೂಡುವುದು ಇನ್ನಷ್ಟು ಕುತೂಹಲ, ಪ್ರೀತಿ; ವೈರಿಯಾದರೆ ಭಯ- ಆಘಾತದ ಸೆಳಕು.

ಇಷ್ಟಕ್ಕೂ ಇನ್ನೊಬ್ಬರ ಭಾವ-ಸ್ವಭಾವಗಳನ್ನು ಅಂದಾಜಿಸಲು ನಾವೇಕೆ ಹೋಗುತ್ತೇವೆ? ವ್ಯಾವಹಾರಿಕ ಸರಾಗತೆಗೆ ಇದು ಅಗತ್ಯವೇನೋ. ಸರಕಾರಿ ಅಧಿಕಾರಿಗೆ ಅರ್ಜಿ ಕೊಟ್ಟರೆ ಅವರು ಅದಕ್ಕೆ ಸಹಿ ಹಾಕಿ ಮುಂದಿನ ಹಂತಕ್ಕೆ ದಾಟಿಸುತ್ತಾರೆ ಎಂಬುದು ಸಾಮಾನ್ಯ ಊಹೆ. ಆದರೆ, ಅವರು ಅದನ್ನು ಇದ್ದಕ್ಕಿದ್ದಂತೆ ಹರಿದು ಹಾಕಿದರೆ ಏನಾಗಬಹುದು? ಓ, ಈತ ವಿಚಿತ್ರ ವ್ಯಕ್ತಿ ಎಂದು ದೂರ ಉಳಿಯಬಹುದು, ಮುಂದಿನ ಬಾರಿ ಹೋಗುವಾಗ ಮುನ್ನೆಚ್ಚರಿಕೆ ವಹಿಸಿಯೇ ಹೋಗಬಹುದು, ಸಹವಾಸ ಸಾಕೆಂದು ದೂರ ಉಳಿಯಬಹುದು, ಕಾನೂನಿನ ಕುಣಿಕೆಯಲ್ಲಿ ಸಿಲುಕಿಸಬಹುದೇ ಎಂದು ನೋಡಬಹುದು... ಅದೇನನ್ನೇ ಮಾಡಲಿ, ಆದರೆ ನಮ್ಮೆದುರಿಗಿರುವವರು ಏನು ಮಾಡುತ್ತಾರೆ, ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ನಮಗೆ ಸದಾ ಮುಖ್ಯ. ಬಹಳಷ್ಟು ಬಾರಿ ಎದುರಿನಲ್ಲಿರುವವರು ಇಂಥವರು, ನಮ್ಮ ಜತೆಗೆ ಅವರ ಒಡನಾಟ ಹೀಗಿರುತ್ತದೆ ಎಂಬ ಲೆಕ್ಕಾಚಾರದ ಮೇಲೆಯೇ ನಮ್ಮ ಸಂಬಂಧಗಳ ಸಮೀಕರಣಗಳು ನಿರ್ಧಾರಗೊಳ್ಳುತ್ತವೆ. ನಮ್ಮ ಮಾತಿಗೆ ಪೂರಕವಾಗಿ ಆಡಿದರೆ ಅವರು ಸ್ನೇಹಿತರು, ಹಿತೈಷಿಗಳು, ನೇರ-ನಿಷ್ಠುರಿಯಾದರೆ ಕೊಂಚ ದೂರದವರೇ.

ಕೆಲವೊಮ್ಮೆ ಯಾರದೋ ನಡೆನುಡಿಯನ್ನು ನಾಲ್ಕು ದಿನ ನೋಡುವಷ್ಟರಲ್ಲಿ ಪ್ರೀತಿ ಮೂಡುವುದುಂಟು. ಅದಕ್ಕೆ ಇಂಬು ನೀಡುವುದು ಅವರ ಬಗ್ಗೆ ನನಗೆ ಎಲ್ಲ ತಿಳಿದಿದೆ ಅನ್ನುವ ಭಾವ. ನಿಜಕ್ಕಾದರೂ ಅವರ ಸ್ವಭಾವದ ವಿಶ್ವರೂಪ ದರ್ಶನವಾಗುವುದು ಸದಾ ಜತೆಯಲ್ಲಿದ್ದಾಗ. ಹಾಗೆ ನೋಡಿದರೆ, ಆರಂಭಿಕ ಹಂತದಲ್ಲಿ ಪ್ರೀತಿ ಎಂದರೆ ಅವರ ಬಗೆಗೆ ತಿಳಿಯುವ ಕುತೂಹಲ. ಇಬ್ಬರೂ ವಿವಾಹವಾಗಿ ಜತೆಗಿರುವುದೆಂದರೆ ಪರಸ್ಪರ ಹೆಚ್ಚು ಅರಿಯುತ್ತ ಹೋಗುವುದು ಎಂದರ್ಥ. ಈ ತಿಳಿದುಕೊಳ್ಳುವ ಪಯಣವೇ ಆ ಬಂಧವನ್ನು ಗಟ್ಟಿಮಾಡಲೂಬಹುದು, ಅಳ್ಳಕಗೊಳಿಸಲೂಬಹುದು. 'ವ್ಯಕ್ತಿಯ ಬಗ್ಗೆ ಶೇ.25ರಷ್ಟು ತಿಳಿದಿದ್ದರೆ ಏನೋ ಕುತೂಹಲ. ಅರ್ಧ ತಿಳಿದರೆ ಪ್ರೀತಿ. ಮುಕ್ಕಾಲು ತಿಳಿದರೆ ನಿರಾಸೆ, ಶೇ.100ಕ್ಕೆ ನೂರು ತಿಳಿದರೆ ತಿರಸ್ಕಾರ'-ಇದು ಟಿ.ಎನ್.

ಸೀತಾರಾಮ್ ಅವರ 'ಮಾಯಾಮೃಗ' ಧಾರಾವಾಹಿಯ ಪಾತ್ರವೊಂದು ಆಡುವ ಮಾತು. ನಿಜವದು, ವ್ಯಕ್ತಿಯ ನಿಜ ಅಂತರಂಗವನ್ನು ಹೆಚ್ಚು ತಿಳಿದಷ್ಟೂ ನಿರಾಸೆ, ತಿರಸ್ಕಾರಗಳು ಉಂಟಾಗುವ ಸಾಧ್ಯತೆಯೇ ಬಹಳಷ್ಟು. ಅದಕ್ಕೇ ಅಲ್ಲವೇ, ವಿವಾಹ ಬಂಧಗಳಿಗೆ ವರ್ಷಗಳುರುಳಿದಂತೆ ಶೀತಲತೆ ಕವಿಯುವುದು; ಅಭಿಮಾನಿಸುವ ವ್ಯಕ್ತಿಯ ಬಗೆಗೂ ಭ್ರಮನಿರಸನ ಉಂಟಾಗುವುದು... ಗುಸ್ತಾವ್ ಫ್ಲೋಬರ್ಟ್‌ನ 'ಮೇಡಂ ಬೋವರಿ' ಕಾದಂಬರಿಯಲ್ಲಿ ಎಮ್ಮಾ ವಿವಾಹವಾಗುವವನ ಬಗ್ಗೆ ತುಂಬ ಕಲ್ಪನೆಗಳನ್ನು ಮಾಡಿಕೊಂಡಿದ್ದವಳು. ಆದರೆ, ಚಾರ್ಲ್ಸ್ ಎಂಬ ವೈದ್ಯನನ್ನು ವಿವಾಹವಾದ ಬಳಿಕ ಅವನ ವ್ಯಕ್ತಿತ್ವ ಅಭ್ಯಾಸಗಳ ಸೀಮಿತತೆ ಅವಳಿಗೆ ಎಷ್ಟು ನಿರಾಸೆಯನ್ನುಂಟು ಮಾಡುತ್ತದೆಂದರೆ ಅವಳು ತನ್ನ ಕಲ್ಪನಾ ಲೋಕದ ಕಥೆಗಳನ್ನು ಬೇರೆಡೆ ಹುಡುಕಲು ಹೋಗಿ ದುರಂತ ಅಂತ್ಯ ಕಾಣುವಂತಾಗುತ್ತದೆ. ಅದು ಸದಾ ಹಾಗೆಯೇ ಅಲ್ಲವೇ, ದೂರದ ಬೆಟ್ಟ ನುಣ್ಣಗೆ. ಆದರೂ, ಹತ್ತಿರ ಬಂದು ಭೂತಗನ್ನಡಿಯಲ್ಲಿ ನೋಡಿದಾಗಲೂ ವ್ಯಕ್ತಿತ್ವ ನುಣ್ಣಗೇ ಇದ್ದರೆ ಅಲ್ಲೊಂದು ಆರಾಧನಾ ಭಾವ ಮೂಡುವುದೂ ಅಸಾಧ್ಯವೇನಲ್ಲ, ಹಾಗೆಂದು, ಯಾರನ್ನೇ ಆಗಲಿ ಪೂರ್ತಿ ತಿಳಿದಿದ್ದೇನೆಂದರೆ ಅದು ಹುಸಿಯೇ. ವ್ಯಕ್ತಿಯ ಹತ್ತಾರು-ನೂರಾರು ಮುಖಗಳು ನೂರಾರು ವ್ಯಕ್ತಿಗಳ ಎದುರು ಭಿನ್ನವೇ.

ಒಂದು ರೀತಿಯಲ್ಲಿ ಹೀಗೆ ಪ್ರತಿಯೊಂದು ವ್ಯಕ್ತಿತ್ವವೂ ಅನೂಹ್ಯವಾಗಿರುವುದರಿಂದಲೇ ಬದುಕು ತುಂಬ ಸ್ವಾರಸ್ಯಕರ. ಇಲ್ಲದಿದ್ದರೆ ಬದುಕಿನ ಪ್ರತಿ ಹೆಜ್ಜೆಯೂ ಏಕತಾನತೆಯಿಂದ ಕೂಡಿರುತ್ತಿತ್ತು. ವ್ಯಕ್ತಿಗಳಷ್ಟೇ ಅಲ್ಲ, ನಾಳಿನ ನಮ್ಮ ದಿನಗಳು ಹೇಗಿರಬಹುದು ಎಂಬುದನ್ನೂ ನಾವು ಊಹಿಸಲಾರೆವು. ಭವಿಷ್ಯವನ್ನು ಜ್ಯೋತಿಷ್ಯಶಾಸ್ತ್ರದ ಮೂಲಕ ಊಹಿಸಬಹುದಷ್ಟೇ ಹೊರತು ಹೀಗೇ ಎಂದು ಕಂಡವರಿಲ್ಲ. ನಮ್ಮ ಇಂದಿನ ನಡೆ ನಿಂತಿರುವುದೇ ಈ ನಾಳೆಯೆಂಬ ಅನೂಹ್ಯದ ಮೇಲೆ.

ನೂರಕ್ಕೆ ನೂರು ಯಾವುದನ್ನೋ ಏನನ್ನೋ ಖಚಿತವಾಗಿ ಅರಿತಿದ್ದೇನೆ ಅನ್ನುವುದಾದರೆ ಅದು ವಿಜ್ಞಾನದಲ್ಲಿ ಅನ್ನಬಹುದೇನೋ. ಅದೂ ಎಲ್ಲ ಸಂದರ್ಭಗಳಲ್ಲೂ ಅಲ್ಲ. ಹೊಸ ಹೊಸ ಅನ್ವೇಷಣೆಗಳಾಗುತ್ತಿದ್ದಂತೆ ವೈಜ್ಞಾನಿಕ ಸತ್ಯಗಳೂ ಬದಲಾಗದೆ ಉಳಿಯುವುದಿಲ್ಲ. ಗಣಿತದಲ್ಲೂ ಎಲ್ಲವೂ ಪ್ರತಿಬಾರಿಯೂ ಒಂದೇ ಆಗಿರದು. ಒಂದು ಶಾಖೆಯ ಪ್ರಮೇಯವನ್ನು ಇನ್ನೊಂದು ಶಾಖೆಯಲ್ಲಿ ಭಿನ್ನವೆಂದು ಸಾಧಿಸಿ ತೋರಿಸಬಹುದು. ಬೀಜಗಣಿತದಲ್ಲಿ ಸಿಕ್ಕ ಉತ್ತರ ಮಾತೃಕೆಗಳಲ್ಲಿ ಬೇರೆಯೇ ಆಗಬಹುದು.

ನಮ್ಮ ಸೃಜನಶೀಲ ಕಾರ್ಯಗಳಂತೂ ನಿಂತಿರುವುದೇ ಈ ಅನೂಹ್ಯತೆ, ಅಸ್ಪಷ್ಟತೆಗಳ ಮೇಲೆಯೇ. ಆ ಕಥೆಗಾರ್ತಿಗೆ ನಿತ್ಯವೂ ವಾಕಿಂಗ್‌ನಲ್ಲಿ ಎದುರಿಗೆ ಸಿಗುವ ಆ ಹೆಣ್ಣುಮಗಳ ಬಗ್ಗೆ ಏನೂ ತಿಳಿದಿಲ್ಲ ಅಥವಾ ಅಲ್ಪಸ್ವಲ್ಪ ತಿಳಿದಿದೆ ಎಂದಾದರೆ ಅವಳ ಬಗೆಗೆ ಕಥೆ ಮೂಡಬಹುದು. ಎಲ್ಲವೂ ತಿಳಿದಿದೆ ಅನಿಸಿದ ಕ್ಷಣದಿಂದ ಊಹೆಗೆ ಆಸ್ಪದವಿಲ್ಲ, ಕಥೆಯ ಸಾಧ್ಯತೆಗೂ ಸಾವು. ಕಥೆಗಾರ ಮತ್ತು ಸಹೃದಯನ ನಡುವಿನ ನಂಟನ್ನು ಜೀವಂತ ಇಡುವುದೂ ಇದುವೇ ಅನೂಹ್ಯತೆಯ ಶಕ್ತಿ. ಕಥೆಯೋ ಸಿನಿಮಾವೋ ಹೀಗೆಯೇ ಇರುತ್ತದೆ ಎಂದು ಸಹೃದಯ ತರ್ಕಿಸಿಬಿಟ್ಟ ಕ್ಷಣದಿಂದ ಆ ಕಥೆಗಾರ/ನಿರ್ದೇಶಕ ಸಹೃದಯನ ಹೃದಯದಲ್ಲಿ ಜಾಗ ಕಳೆದುಕೊಳ್ಳುವುದು ಖಂಡಿತ.

ಹಾಗೆ ನೋಡಿದರೆ ನಮ್ಮ ಅಸ್ತಿತ್ವ ನಿಂತಿರುವುದೇ ಈ ಊಹೆಯ ಮೇಲೆ. ಅಸ್ತಿತ್ವವಾದದ ಪ್ರತಿಪಾದಕ ಜೀನ್ ಪಾಲ್ ಸಾರ್ತ್ರೆಯ 'ನೊ ಎಕ್ಸಿಟ್' ಎಂಬ ನಾಟಕದಲ್ಲಿ ಮೂರು ಆತ್ಮಗಳು ಒಂದು ಕೋಣೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತವೆ. ಅವರು ಮೂವರೇ ಅಲ್ಲಿ ಬಹುಸಮಯ ಇದ್ದು ಕ್ರಮೇಣ ಒಬ್ಬರು ಇನ್ನೊಬ್ಬರನ್ನು ಪೂರ್ಣ ಅರಿತಾಗ ಆ ಕೋಣೆಯೇ ಅವರಿಗೆ ನರಕವಾಗಿ ಭಾಸವಾಗುತ್ತದೆ. ಆಗ ಗಾರ್ಸಿನ್ ಎಂಬ ಪಾತ್ರ, ನರಕ ಇನ್ನೆಲ್ಲೋ ಇಲ್ಲ, ಇತರರಲ್ಲಿದೆ ಎಂಬರ್ಥದಲ್ಲಿ 'ಹೆಲ್ ಈಸ್ ಅದರ್ ಪೀಪಲ್' ಎಂದು ಉದ್ಗರಿಸುತ್ತದೆ. ಹೀಗೆ ಬದುಕು ನರಕವಾಗಬಾರದು ಎಂದಾದರೆ ರಹಸ್ಯ, ಊಹೆ, ಅಸ್ಪಷ್ಟತೆಗಳೆಲ್ಲ ನಮ್ಮ ಬದುಕಿಗೆ ಬೇಕು. "The very essence of romance is uncertainty" ಎಂಬ ಆಸ್ಕರ್ ವೈಲ್ಡ್‌ನ ಮಾತಿನಂತೆ ಅನೂಹ್ಯತೆ ಎಂಬ ಬೆರಗು ನಮ್ಮನ್ನೂ ನಮ್ಮ ಜತೆಗಿರುವವನ್ನೂ ಸದಾ ಜತೆಗಿದ್ದು ಪೊರೆಯಲಿ ಎಂದು ಹಾರೈಸುತ್ತಿರಬೇಕು ಅಷ್ಟೆ. ■

ಬುದ್ಧನ ಹೆಜ್ಜೆಯಲ್ಲಿ ಹೊರಟ ಸನ್ಯಾಸಿ ಶ್ವಾನ

ಬಣ್ಣದ ಕಿಟಕಿ
ಪ್ರಭಾತ್ ಶೆಣೈ
prabhatshenvi@timesofindia.com

'ಬೊಗಳುವ ನಾಯಿ ಕಚ್ಚುವುದಿಲ್ಲ, ಕಚ್ಚುವ ನಾಯಿ ಬೊಗಳುವುದಿಲ್ಲ' ಎಂಬ ಮಾತೇ ಇದೆ. ಆದರೆ, ಇಲ್ಲೊಂದು ನಾಯಿ ಬೊಗಳಿ ನೆಮ್ಮದಿ ಕೆಡಿಸುವುದಿಲ್ಲ, ಕಚ್ಚುವ ಚಾಳಿಯಂತೂ ಇಲ್ಲವೇ ಇಲ್ಲ. ಪ್ರಸ್ತುತ ಇದು ವಿಶ್ವವೇ ಮೆಚ್ಚುವ ಶಾಂತಿದೂತ ಶ್ವಾನ.

ಇದರ ಹೆಸರು ಅಲೋಕಾ. ಅಪ್ಪಟ ಭಾರತೀಯ ಪರಿಯ ತಳಿಯ ಈ ಗಂಡು ನಾಯಿ ಹುಟ್ಟಿದ್ದು ಎಲ್ಲಿ, ಯಾವಾಗ ಎಂಬುದು ಯಾರಿಗೂ ಗೊತ್ತಿಲ್ಲ. ಆದರೆ, ಇದರ ಯಶಸ್ವಿ ಜೀವನ ಆರಂಭವಾದದ್ದು ಕೋಲ್ಕೊತಾದ ಬೀದಿಯಿಂದ. ದಯೆ, ಶಾಂತಿಯ ಸಂದೇಶ ಹೊತ್ತು ಬೌದ್ಧ ಭಿಕ್ಷುಗಳೊಂದಿಗೆ ಜಗತ್ತಿನ ಬೇರೆಬೇರೆ ದೇಶಗಳಲ್ಲಿ ಅಸಂಖ್ಯಾತ ಹೆಜ್ಜೆಗಳನ್ನಿಟ್ಟ ಅಲೋಕಾ, ಇವತ್ತಿಗೆ ಸಾಮಾಜಿಕ ಜಾಲತಾಣಗಳಲ್ಲಿ ಇಡೀ ವಿಶ್ವದ ಪ್ರೀತಿ ಸಂಬಂಧ ಬೆಸೆದ ಸೆಲೆಬ್ರಿಟಿ ಶ್ವಾನ.

ಅದು 2022. ಮಾಜಿ ಎಂಜಿನಿಯರ್ ಭಿಕ್ಕು ಪನ್ನಾಕರ ಅವರ ನೇತೃತ್ವದ ವಿಯೆಟ್ನಾಂ- ಅಮೆರಿಕನ್ ಬೌದ್ಧ ಭಿಕ್ಕುಗಳ ತಂಡ ಭಾರತದಲ್ಲಿ 112 ದಿನ ಬರಿಗಾಲಲ್ಲಿ ಶಾಂತಿಯಾತ್ರೆ ಕೈಗೊಂಡಿತ್ತು. ನಡಿಗೆಯ ಆರನೇ ದಿನ ಈ ತಂಡ ಕೋಲ್ಕೊತ್ತಾ ಏರ್‌ಪೋರ್ಟ್ ಬಳಿ ತಲುಪಿದಾಗ ಎದುರಾಗಿದ್ದು ಹಣೆಯ ಮೇಲೆ ಬಿಳಿ ಬಣ್ಣದ ಹೃದಯದ ಚಿಹ್ನೆ ಹೊಂದಿದ ಬೀದಿಶ್ವಾನ. ಅದ್ಯಾವ ಪ್ರೇರಣೆಯೋ, ಸೆಳೆತವೋ, ಪವಾಡವೋ, ಶಾಂತ, ತಾಳ್ಮೆಯ ನಿರಾಳ ಮುಖ ಚಹರೆಯ ಈ ಶ್ವಾನ ಬೌದ್ಧ ಭಿಕ್ಕುಗಳ ಬೆನ್ನನ್ನು ಬಿಡಲೇ ಇಲ್ಲ, ಅವರೊಂದಿಗೆ ನೇಪಾಳ ಗಡಿವರೆಗೆ ಹೆಜ್ಜೆಯಿಡುತ್ತ 100 ದಿನಗಳನ್ನು ಕಳೆದು ತಂಡದ ಅಧಿಕೃತ ಸದಸ್ಯನಾಯಿತು. 'ಅಲೋಕಾ' ಎಂದು ನಾಮಕರಣವೂ ಆಯಿತು. ಅಲೋಕಾ ಎಂದರೆ ಪಾಲಿ ಭಾಷೆಯಲ್ಲಿ ಜ್ಞಾನೋದಯ ಅಥವಾ ಬೆಳಕು ಎಂದರ್ಥ.

ಏತನ್ಮಧ್ಯೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಅಲೋಕಾ ಕಾಲಿಗೆ ತೀವ್ರ ಏಟು ಬಿತ್ತು. ಚಿಕಿತ್ಸೆ ಬಳಿಕವೂ ಅಲೋಕಾ ನಡಿಗೆ ತಂಡವನ್ನು ತೊರೆಯಲಿಲ್ಲ, ನಡಿಗೆ ತಂಡ ಕೂಡ ಅಲೋಕಾ ಜತೆ ಬಿಟ್ಟು ಹೋಗಲು ಮನಸ್ಸು ಮಾಡಲಿಲ್ಲ. ಭಿಕ್ಕುಗಳೊಂದಿಗೆ ಯುನೈಟೆಡ್ ಸ್ಟೇಟ್ಸ್‌ಗೆ ಪಯಣ ಬೆಳೆಸಿತು. 2025ರ ಅಕ್ಟೋಬರ್ 26ರಂದು ಟೆಕ್ಸಾಸ್‌ನ ಫೋರ್ಟ್ ದಾವೋ ವಿಪಸ್ಸನ ಕೇಂದ್ರದಿಂದ ವಾಷಿಂಗ್ಟನ್ ಡಿಸಿಗೆ 19 ಭಿಕ್ಕುಗಳಿದ್ದ ತಂಡದೊಂದಿಗೆ 10 ರಾಜ್ಯಗಳ ಮೂಲಕ 2300 ಮೈಲುಗಳಷ್ಟು ದೂರ 108 ದಿನಗಳ ನಡಿಗೆಯಲ್ಲೂ ಹೆಜ್ಜೆಯಿಟ್ಟಿತು. ಮಾರ್ಗದುದ್ದಕ್ಕೂ ವಿಶೇಷ ಗೌರವ ಪಡೆದು ಪಾದಯಾತ್ರೆಯ ಪ್ರಮುಖ ಆಕರ್ಷಣೆಯಾಯಿತು.

2026ರ ಜನವರಿಯಲ್ಲಿ ದಕ್ಷಿಣ ಕೆರೊಲಿನಾ ಮೂಲಕ ಸಾಗುವಾಗ ಹಿಂಗಾಲಿನ ಸಮಸ್ಯೆಯಿಂದ ಬಳಲಿದ ಅಲೋಕಾಗೆ ವಿಶೇಷ ಶಸ್ತ್ರಚಿಕಿತ್ಸೆ ಒಳಪಡಿಸಲಾಗಿತ್ತು. ಈ ತಂಡ ವಾಷಿಂಗ್ಟನ್ ನ್ಯಾಷನಲ್ ಕ್ಯಾಥೆಡ್ರಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಫೋರ್ಟ್ ವರ್ಥ್‌ಗೆ ಹಿಂತಿರುಗಿ ನಡಿಗೆ ಮುಗಿಸುವ ಹೊತ್ತಿಗೆ 'ವಾಕ್ ಫಾರ್ ಪೀಸ್'ನ ಫೇಸ್‌ಬುಕ್ ಪುಟ 1ಮಿಲಿಯನ್ ಮೀರಿ ಫಾಲೋವರ್‌ಗಳನ್ನು ಸಂಗ್ರಹಿಸಿತ್ತು. ಅಲೋಕಾ ಹೆಸರಿನಲ್ಲೇ ತೆರೆಯಲಾದ 'ಅಲೋಕಾ ದ ಪೀಸ್ ಡಾಗ್' ಪುಟ ಲಕ್ಷಾಂತರ ಫಾಲೋವರ್‌ಗಳನ್ನು ಹೊಂದಿದೆ.

2026ರ ಏಪ್ರಿಲ್ 21ರಂದು, ಪನ್ನಾಕರ ಅವರು ಶ್ರೀಲಂಕಾದ ಅಧ್ಯಕ್ಷ ಅನುರ ಕುಮಾರ ದಿಸಾನಾಯಕೆಯವರ ಆಹ್ವಾನದ ಮೇರೆಗೆ ನಡೆಸಿದ ಶಾಂತಿಗಾಗಿ ನಡಿಗೆಯಲ್ಲೂ ಅಲೋಕಾ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು. ಪ್ರಮಾಣೀಕೃತ ಸೇವಾ ಪ್ರಾಣಿಯಾಗಿ ಅದಕ್ಕೆ ವಿಮಾನದ ಪ್ರಯಾಣಿಕರ ಕ್ಯಾಬಿನ್‌ನಲ್ಲಿ ಪನ್ನಾಕರ ಅವರ ಪಕ್ಕದಲ್ಲೇ ಕುಳಿತು ಪ್ರಯಾಣಿಸಲು ಅನುಮತಿ ನೀಡಲಾಯಿತು. ಶ್ರೀಲಂಕಾದಲ್ಲಿನ ಅಭಿಯಾನ ಬಹುವರ್ಷಗಳಿಂದ ನನೆಗುದಿಯಲ್ಲಿದ್ದ ಪ್ರಾಣಿ ಕಲ್ಯಾಣ ಅಧಿಸೂಚನೆಯನ್ನು ಅಲ್ಲಿನ ಸರಕಾರ ಜಾರಿಗೊಳಿಸಲು ಪ್ರೇರೇಪಿಸಿತು. ಆ ಮೂಲಕ 2.5 ಮಿಲಿಯನ್‌ಗೂ ಅಧಿಕ ಬೀದಿ ನಾಯಿಗಳು ಸೇರಿದಂತೆ ಸಾಕು ಪ್ರಾಣಿಗಳ ರಕ್ಷಣೆಗೆ ನಾಂದಿಯಾಯಿತು. ಇದರ ಹಿಂದಿನ ಪ್ರೇರಣಾ ಶಕ್ತಿಯಾದ ಅಲೋಕಾಗೆ ಶ್ರೀಲಂಕಾ ಜನತೆ ಬುದ್ಧನ ಪ್ರತಿನಿಧಿಯಂತೆ ಕಂಡು ಗೌರವಿಸಿತು.

ಥಾಯ್ಲೆಂಡ್, ನೇಪಾಳ ಸಹಿತ ಐದು ರಾಷ್ಟ್ರಗಳಲ್ಲಿ ಶಾಂತಿ ಸಂದೇಶ ಬಿತ್ತರಿಸುತ್ತ ಅಲೆದ ಅಲೋಕಾ, ಜೂನ್ 16ರಂದು ಭಾರತಕ್ಕೆ ಮರಳಿದೆ. ತನ್ನ ಬಹುರಾಷ್ಟ್ರಗಳ ಪರ್ಯಟನದುದ್ದಕ್ಕೂ ಜನಸಾಮಾನ್ಯರಿಂದ ಹಿಡಿದು ಗಣ್ಯಾತಿಗಣ್ಯರ ಗೌರವ, ಪ್ರೀತಿ ಪಡೆದ ಅಲೋಕಾಗೆ ಮೊನ್ನೆ ತಾಯ್ನೆಲದ ಗುರುಗ್ರಾಮದಲ್ಲಿ ದೊರೆತ ಸ್ವಾಗತ ಅಭೂತಪೂರ್ವ. ಸಾವಿರಾರು ಜನ ಅದರೊಂದಿಗೆ ಸೆಲ್ಫಿ, ಆತ್ಮೀಯ ಅಪ್ಪುಗೆಗೆ ಮುಗಿಬೀಳುವ ಪರಿ ಯಾವುದೋ ಸಿನಿ ಸ್ಟಾರ್, ಕ್ರಿಕೆಟಿಗ, ರಾಜಕೀಯ ಧುರೀಣರನ್ನೂ ಮೀರಿಸುವಂತಿತ್ತು.

ಶ್ವಾನಸಹಜ ಗುಣಧರ್ಮಗಳಿಂದ ಹೊರತಾದ ಅಲೋಕಾ ಪವಿತ್ರ ಆತ್ಮ. ಅದು ತನ್ನ ಮುಖಮುದ್ರೆಯಲ್ಲಿನ ಶಾಂತತೆ, ಸ್ಥಿತಪ್ರಜ್ಞತೆಯನ್ನು ಎಂದೂ ಬಿಟ್ಟುಕೊಟ್ಟಿಲ್ಲ, ಬಸವಳಿದಾಗಲೂ ನೋವಿನ ಭಾವ ತೋರ್ಪಡಿಸಲಿಲ್ಲ. ನಗ್ನ ಪಾದಗಳ ಸದ್ದಿಲ್ಲದ ಹೆಜ್ಜೆಗಳು, ಮಾತಿಲ್ಲದ ಮೌನಯಾನದಿಂದಲೇ ಅದು ಮನುಕುಲದ ಹೃದಯಗಳಲ್ಲಿ ದಯೆ, ಶಾಂತಿಯ ನಗಾರಿಯ ಮೊಳಗಿಸುತ್ತಿರುವ ಸನ್ಯಾಸಿ ಶ್ವಾನ. ಸಾರ್ಥಕ ಜನ್ಮ ಸವೆಸಲು ಮನುಷ್ಯನಾಗಿಯೇ ಹುಟ್ಟಬೇಕಿಲ್ಲ, ಅಂತರಾತ್ಮ ಪವಿತ್ರವಾಗಿದ್ದರೆ ಆ ಅಲೌಕಿಕ ಶಕ್ತಿ ಹೇಳಹೆಸರಿಲ್ಲದ ಶ್ವಾನದ ಹಣೆಯ ಮೇಲೂ ಹೃದಯದ ಚಿಹ್ನೆ ಬರೆದು ಅಲೋಕಾ ಆಗಿಸಬಹುದು. ■

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಭಾನುವಾರ,21 ಜೂನ್ 2026
ಇಂದಿನ ತಾಪಮಾನ 22° ಕನಿಷ್ಠ 31° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ಫುಟ್‌ಪಾತ್ ನಡಿಗೆ: ಹೆಜ್ಜೆಹೆಜ್ಜೆಗೂ ಭೀತಿ!
»11

ಕಳಪೆ ಡಾಂಬರೀಕರಣ: ಪಾಲಿಕೆ ಎಇ ಅಮಾನತು

ಬೆಂಗಳೂರು: ಕಳಪೆ ಡಾಂಬರೀಕರಣ ಕಾಮಗಾರಿ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಸಂಪಂಗಿರಾಮನಗರ ವಾರ್ಡ್‌ನ ಸಹಾಯಕ ಎಂಜಿನಿಯರ್ ಪೂಜಾರಪ್ಪ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶಿಸಲಾಗಿದೆ. ಸಂಪಂಗಿರಾಮನಗರ ವ್ಯಾಪ್ತಿಯ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿ ಕೈಗೊಂಡಿದ್ದು, ಕ್ರಿಯಾಯೋಜನೆ ಅನುಸಾರ ಕಾರ್ಯ ನಿರ್ವಹಿಸಿಲ್ಲ, ಕಡಿಮೆ ಪ್ರಮಾಣದಲ್ಲಿ ಡಾಂಬರು ಹಾಕಿರುವುದು ಕಂಡುಬಂದಿದೆ. ಹೀಗಾಗಿ, ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನದಂತೆ ಕಳಪೆ ಕಾಮಗಾರಿಗೆ ಕಾರಣವಾಗಿರುವ ಸಹಾಯಕ ಎಂಜಿನಿಯರ್ ಪೂಜಾರಪ್ಪ ಅವರನ್ನು ಸೇವೆಯಿಂದ ಅಮಾನುತುಗೊಳಿಸಲಾಗಿದೆ. ಅಲ್ಲದೇ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಆದೇಶಿಸಲಾಗಿದೆ.

ನೀಟ್ ಪರೀಕ್ಷೆ: ಬೇಗನೆ ಕೇಂದ್ರ ತಲುಪಲು ಸಲಹೆ

ಬೆಂಗಳೂರು: ನಗರದಲ್ಲಿ ಭಾನುವಾರ (ಜೂ.21) ನೀಟ್ (ಯುಜಿ)-2026 ಮರು ಪರೀಕ್ಷೆ ನಡೆಯಲಿದ್ದು, ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ತಲುಪಲು ಬೇಗನೆ ತಮ್ಮ ಪ್ರಯಾಣ ಆರಂಭಿಸಬೇಕು ಎಂದು ಪೊಲೀಸರು ಸಲಹೆ ನೀಡಿದ್ದಾರೆ. ನಗರದ ಹಲವೆಡೆ ಭಾನುವಾರ ವಿಶ್ವ ಯೋಗ ದಿನಾಚರಣೆ, ಮ್ಯಾರಥಾನ್ ಹಾಗೂ ಕೆಪಿಸಿಸಿ ನೂತನ ಅಧ್ಯಕ್ಷ ಪದಗ್ರಹಣ ಸಮಾರಂಭ ನಿಗದಿಯಾಗಿದೆ. ಈ ಕಾರ್ಯಕ್ರಮಗಳು ನಡೆಯಲಿರುವ ಸ್ಥಳಗಳ ಸುತ್ತಮುತ್ತಲಿನ ರಸ್ತೆಗಳು ಸೇರಿದಂತೆ ನಗರದ ಬಹುತೇಕ ಕಡೆ ವಾಹನ ದಟ್ಟಣೆ ಉಂಟಾಗುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ, ಸುಗಮ ಸಂಚಾರದ ಹಿತದೃಷ್ಟಿಯಿಂದ ವಾಹನ ಸಂಚಾರ ವ್ಯವಸ್ಥೆಯಲ್ಲಿ ಸಾಕಷ್ಟು ಮಾರ್ಪಾಡು ಮಾಡಲಾಗಿದೆ. ಸಂಭಾವ್ಯ ವಾಹನ ದಟ್ಟಣೆಯಿಂದ ನೀಟ್ ಪರೀಕ್ಷೆ ಅಭ್ಯರ್ಥಿಗಳ ಪ್ರಯಾಣಕ್ಕೆ ಸಮಸ್ಯೆಯಾಗಬಹುದು ಎಂದು ಪೊಲೀಸರು ಮುನ್ನೆಚ್ಚರಿಕೆ ನೀಡಿದ್ದಾರೆ. ಸಂಚಾರದ ವಿಷಯದಲ್ಲಿ ಯಾವುದೇ ಸಮಸ್ಯೆ ಎದುರಾದಲ್ಲಿ ಸಹಾಯಕ್ಕಾಗಿ ಸಂಚಾರ ನಿಯಂತ್ರಣ ಕೊಠಡಿಯ 080-22943131 ಅಥವಾ 080-22943030 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಇ ಖಾತಾ ಅಭಿಯಾನ: 802 ಅರ್ಜಿ ವಿಲೇವಾರಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ವ್ಯಾಪ್ತಿಯ 50 ಸ್ಥಳಗಳಲ್ಲಿ ಕೈಗೊಂಡಿದ್ದ 'ನನ್ನ ಇ-ಖಾತಾ, ನನ್ನ ಹಕ್ಕು' ಅಭಿಯಾನದಲ್ಲಿ ಶನಿವಾರ ಒಂದೇ ದಿನ 802 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.ರಾಜ್ಯ ಸರಕಾರದ 6ನೇ ಗ್ಯಾರಂಟಿ ಭೂ ಗ್ಯಾರಂಟಿ ಯೋಜನೆಯಡಿ ಆರಂಭಿಸಿರುವ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನದಲ್ಲಿ 6 ವಾರಗಳಲ್ಲಿ 13,835 ಮಂದಿ ಭೇಟಿ ನೀಡಿದ್ದಾರೆ. ಈ ಪೈಕಿ ಈ ಪೈಕಿ 6,169 ಅರ್ಜಿಗಳ ವಿಲೇವಾರಿ ಮಾಡಲಾಗಿದೆ. ಶಿಬಿರಗಳಲ್ಲಿ ಅರ್ಜಿಗಳ ಪರಿಶೀಲನೆ, ದಾಖಲೆಗಳ ತಪಾಸಣೆ, ತಾಂತ್ರಿಕ ದೋಷಗಳ ನಿವಾರಣೆ, ಮಾಹಿತಿ ತಿದ್ದುಪಡಿ ಹಾಗೂ ಇತರೆ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಥಳದಲ್ಲಿಯೇ ಪರಿಹಾರ ನೀಡುತ್ತಿದ್ದಾರೆ.

ನಿಮ್ಹಾನ್ಸ್‌ನಲ್ಲಿ ಪರಿಣಾಮಕಾರಿ ಚಿಕಿತ್ಸೆ | ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಯೋಗ ಸೇವೆ ಪಡೆಯುವವರ ಸಂಖ್ಯೆ

ಮಾನಸಿಕ ರೋಗಕ್ಕೆ ಯೋಗ ಥೆರಪಿ

■ **ಮಯೂರ್ ಹೆಗಡೆ** ಬೆಂಗಳೂರು
mayur.hegde@timesofindia.com

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ(ನಿಮ್ಹಾನ್ಸ್)ಯಲ್ಲಿ ಸಂಯೋಜಿತ ಚಿಕಿತ್ಸಾ ಪದ್ಧತಿ ವಿಭಾಗ (ಐಎಂಡಿ-ಡಿಪಾರ್ಟ್‌ಮೆಂಟ್ ಆಫ್ ಇಂಟಿಗ್ರೇಟೆಡ್ ಮೆಡಿಸಿನ್)ದ ಮೂಲಕ ನೀಡುತ್ತಿರುವ ಯೋಗ ಥೆರಪಿಯನ್ನು ಪಡೆದುಕೊಳ್ಳುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಹಲವರಲ್ಲಿ ಸಕಾರಾತ್ಮಕ ಬದಲಾವಣೆ

ನಿಮ್ಹಾನ್ಸ್ ಐಎಂಡಿಯು ಮಾನಸಿಕ ಮತ್ತು ನರರೋಗ ಸಮಸ್ಯೆಗೆ ಯೋಗ, ಆಯುರ್ವೇದ ಹಾಗೂ ಆಧುನಿಕ ವೈದ್ಯಕೀಯ ಪದ್ಧತಿಯ ತಜ್ಞ ವೈದ್ಯರು ಜಂಟಿಯಾಗಿ ಚಿಕಿತ್ಸೆ ನೀಡುವ ದೇಶದ ಏಕೈಕ ಚಿಕಿತ್ಸಾ ಕೇಂದ್ರವಾಗಿದೆ. ಸಂಸ್ಥೆಯು ಈ ಕಾಯಿಲೆಗಳಿಗೆ ಪೂರಕ ಚಿಕಿತ್ಸೆಯಾಗಿ ಯೋಗವನ್ನು ಹೇಗೆ ಬಳಸಬಹುದು ಎಂಬುದರ ಕುರಿತು ವ್ಯಾಪಕ ಸಂಶೋಧನೆ ನಡೆಸಿ, ನಿರ್ದಿಷ್ಟ ಕಾಯಿಲೆಗಳಿಗೆ ವಿಶೇಷ ಯೋಗ ಮಾಡ್ಯೂಲ್‌ಗಳನ್ನು ರೂಪಿಸಿದೆ.

ಬೇರೆ ರಾಜ್ಯಗಳಲ್ಲಿನ ಆರೋಗ್ಯ ಸಂಸ್ಥೆಗಳಲ್ಲಿ ಅಲೋಪತಿ ಮತ್ತು ಆಯುಷ್ ಸೇವೆ ಇದ್ದರೂ ಅವು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ, ನಿಮ್ಹಾನ್ಸ್‌ನ ಈ ಕೇಂದ್ರವು ಮೂರೂ ಪದ್ಧತಿಯ ದೃಷ್ಟಿಕೋನ ಒಳಗೊಂಡಿದ್ದು, ರೋಗದ ಸಮಗ್ರ ಮೌಲ್ಯಮಾಪನ ಸಾಧ್ಯವಾಗುತ್ತಿದೆ. ಈ ಸಮನ್ವಯದ ಮೂಲಕ ಚಿಕಿತ್ಸೆ ಯೋಜಿಸುತ್ತಿರುವುದು ರೋಗಿಗಳಿಗೆ ವರದಾನವಾಗಿದೆ.

ಯಾವ್ಯಾವ ಸಮಸ್ಯೆ?: ''ಖಿನ್ನತೆ, ಉದ್ವೇಗ, ನಿದ್ರಾಹೀನತೆ, ಸ್ಕಿಜೋಫ್ರಿನಿಯಾ, ಮೈಗ್ರೇನ್, ಮಕ್ಕಳಲ್ಲಿ ಎಡಿಎಚ್‌ಡಿ, ಬೈಪೋಲಾರ್ ಅಫೆಕ್ಟಿವ್ ಡಿಸಾರ್ಡರ್, (ಖಿನ್ನತೆ ಮತ್ತು ಅತ್ಯುತ್ಸಾಹ ಏರಿಳಿತ), ಅಬ್ಸೆಸಿವ್ ಕಂಪಲ್ಸಿವ್ ಡಿಸಾರ್ಡರ್(ಅನಿಯಂತ್ರಿತ ಯೋಚನೆ ಮತ್ತು ವರ್ತನೆ)... ಇಂತಹ ಮಾನಸಿಕ ಸಮಸ್ಯೆಗಳಿಗೆ ನಿಗದಿತ ಯೋಗಾಸನ, ಪ್ರಾಣಾಯಾಮಗಳನ್ನು ಒಳಗೊಂಡ ಮಾಡ್ಯುಲ್‌ಗಳನ್ನು ರೂಪಿಸಲಾಗಿದೆ. ಸೌಮ್ಯ ಸ್ವಭಾವದ ಅಥವಾ ಆರಂಭಿಕ ಹಂತದ ಮಾನಸಿಕ ಸಮಸ್ಯೆಗೆ ಹಾಗೂ ತೀವ್ರವಾಗಿರುವ ಸಮಸ್ಯೆಗಳಿಗೆ ಭಿನ್ನವಾದ ಯೋಗಾಭ್ಯಾಸಗಳಿವೆ. ಈ ಮಾಡ್ಯೂಲ್‌ಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ಸಕಾರಾತ್ಮಕ ಪರಿಣಾಮ ಬೀರುತ್ತಿವೆ,'' ಎಂದು ಐಎಂಡಿ ಮುಖ್ಯಸ್ಥ ಡಾ. ಕಿಶೋರ್‌ಕುಮಾರ್ ರಾಮಕೃಷ್ಣ ತಿಳಿಸಿದರು.

ವೈದ್ಯಕೀಯ ಯೋಗ ಸೇವೆ ಪಡೆದವರ ವಿವರ

ವರ್ಷ	ಸಂಖ್ಯೆ
2021	11,203
2022	19,319
2023	27,442
2024	30,085
2025	28,614

ಶೇ.63ರಷ್ಟು ಏರಿಕೆ

2019ರಲ್ಲಿ ಈ ವಿಭಾಗ ಆರಂಭವಾದಾಗ ತಿಂಗಳಿಗೆ ಸರಾಸರಿ 1500 ರೋಗಿಗಳು ಚಿಕಿತ್ಸೆ ಪಡೆದಿದ್ದರು. ಈಗ ತಿಂಗಳಿಗೆ 2500ಕ್ಕೂ ಅಧಿಕ ಮಂದಿ ಭೇಟಿ ನೀಡುತ್ತಿದ್ದಾರೆ. ಕಳೆದ ಆರು ವರ್ಷಗಳಲ್ಲಿ 1.33 ಲಕ್ಷಕ್ಕೂ ಅಧಿಕ ಜನರು ನಿಮ್ಹಾನ್ಸ್‌ನಲ್ಲಿ ಕ್ಲಿನಿಕಲ್ ಯೋಗ ಸೇವೆ ಪಡೆದಿದ್ದಾರೆ. ತಿಂಗಳಿಗೆ ಸುಮಾರು 680ಕ್ಕೂ ಅಧಿಕ ಯೋಗಾಭ್ಯಾಸ ಸೆಷನ್‌ಗಳು ನಡೆಯುತ್ತಿವೆ. 2025ರಲ್ಲಿ ಐಎಂಡಿ ವಿಭಾಗದಲ್ಲಿ ಚಿಕಿತ್ಸೆ ಪಡೆದವರ ಸಂಖ್ಯೆ ಶೇ.63ರಷ್ಟು ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.



ನಿರ್ದಿಷ್ಟ ಮಾನಸಿಕ ಸಮಸ್ಯೆಗೆ ಯೋಗ, ಧ್ಯಾನ, ಪ್ರಾಣಾಯಾಮ ಸೇರಿದಂತೆ ಯಾವುದು ಪರಿಣಾಮಕಾರಿ ಚಿಕಿತ್ಸಾಕ್ರಮವಾಗಿದೆ ಎಂಬುದನ್ನು ಪ್ರಾಯೋಗಿಕವಾಗಿ ಕಂಡುಕೊಂಡಿದ್ದೇವೆ. ಸಂಯೋಜಿತ ಚಿಕಿತ್ಸೆಯಡಿ ಯೋಗ ಥೆರಪಿ ಪಡೆದವರಲ್ಲಿ ಸಕಾರಾತ್ಮಕ ಬದಲಾವಣೆ ಕಂಡುಬಂದಿದೆ.
- ಡಾ. ಕಿಶೋರ್‌ಕುಮಾರ್ ರಾಮಕೃಷ್ಣ
ಮುಖ್ಯಸ್ಥ, ನಿಮ್ಹಾನ್ಸ್ (ಸಂಯೋಜಿತ ಚಿಕಿತ್ಸಾ ವಿಭಾಗ)

ಯೋಧರಿಗೂ ಯೋಗಾಭ್ಯಾಸ

ರೋಗಿಗಳು ಮಾತ್ರವಲ್ಲದೆ, ಮಾನಸಿಕ ಆರೋಗ್ಯಕ್ಕಾಗಿ ಇಲ್ಲಿ ಭಾರತೀಯ ವಾಯುಪಡೆ ಅಧಿಕಾರಿಗಳು, ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಪಿಬಿ) ಹಾಗೂ ತಮಿಳುನಾಡು ಪೊಲೀಸರಿಗೂ ಇಲ್ಲಿ ಯೋಗದ ತರಬೇತಿ ನೀಡಲಾಗಿದೆ. ಜತೆಗೆ, ಸರಕಾರಿ ಸಾಮ್ಯದ ಬಿಎಚ್‌ಇಎಲ್ ಕಂಪನಿಯ ಉದ್ಯೋಗಿಗಳಿಗೆ ಯೋಗಾಭ್ಯಾಸ ಕಲಿಸಲಾಗುತ್ತಿದೆ.

ಟೆಲಿಯೋಗ

ಆಸ್ಪತ್ರೆಗೆ ಬರಲು ಸಾಧ್ಯವಾಗದವರು ಮನೆಯಲ್ಲೇ ಯೋಗಾಭ್ಯಾಸ ಮಾಡಲು ಅನುಕೂಲವಾಗುವಂತೆ ಆನ್‌ಲೈನ್ ಮೂಲಕ 'ಟೆಲಿಯೋಗ' ಹೆಸರಲ್ಲಿ ಯೋಗಾಭ್ಯಾಸ ಮಾಡಿಸಲಾಗುತ್ತಿದೆ. ಹೀಗೆ ಸುಮಾರು 60 ಸಾವಿರಕ್ಕಿಂತ ಹೆಚ್ಚು ಮಂದಿಗೆ ಆನ್‌ಲೈನ್ ಮೂಲಕ ಯೋಗಾಭ್ಯಾಸ ಮಾಡಿಸಲಾಗಿದೆ. 20 ಮಂದಿ ಯೋಗ ತರಬೇತುದಾರರು ಇದ್ದಾರೆ ಎಂದು ನಿಮ್ಹಾನ್ಸ್ ತಿಳಿಸಿದೆ.

ಗಾಂಧಿಬಜಾರ್‌ನಲ್ಲಿ ವ್ಯಾಪಾರ ಜಾಗ ನಿಗದಿಗೆ ಮಾರ್ಕಿಂಗ್

■ **ವಿಕ ಸುದ್ದಿಲೋಕ** ಬೆಂಗಳೂರು

ಹೈಕೋರ್ಟ್ ಕಳೆದ ಫೆಬ್ರವರಿಯಲ್ಲಿ ನೀಡಿದ್ದ ನಿರ್ದೇಶನದಂತೆ ಗಾಂಧಿಬಜಾರ್ ಮುಖ್ಯರಸ್ತೆಯ ಎರಡೂ ಬದಿಯಲ್ಲೂ ಮಳಿಗೆಗಳ ಮುಂಭಾಗದ ಜಾಗ, ಪಾದಚಾರಿ ಮಾರ್ಗ ಹಾಗೂ ಬೀದಿ ವ್ಯಾಪಾರಿಗಳಿಗೆ ನಿರ್ದಿಷ್ಟ ಸ್ಥಳ ಗುರುತಿಸುವ ಕೆಲಸವನ್ನು ಬೆಂಗಳೂರು ಕೇಂದ್ರ ಮಹಾನಗರ ಪಾಲಿಕೆ ಆರಂಭಿಸಿದೆ.

ಪಾಲಿಕೆಯ ಸಿಬ್ಬಂದಿ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ಅಂಗಡಿ-ಮುಂಗಟ್ಟುಗಳ ಮುಂಭಾಗ ಪಾದಚಾರಿ ಮಾರ್ಗ ಗುರುತಿಸಿ, ಮಾರ್ಕಿಂಗ್ ಮಾಡುತ್ತಿದ್ದಾರೆ. ಆ ಮೂಲಕ ಬೀದಿ ವ್ಯಾಪಾರಿಗಳಿಗೆ ಕಡಿವಾಣ ಹಾಕಲಾಗುತ್ತಿದೆ. ಫುಟ್‌ಪಾತ್ ಹೊರತುಪಡಿಸಿ, ಗುರುತಿಸಿರುವ ಜಾಗದಲ್ಲಷ್ಟೇ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಲಾಗುತ್ತಿದೆ.

'ಬೀದಿ ಬದಿ ವ್ಯಾಪಾರಿಗಳು ಮುಖ್ಯರಸ್ತೆಯ ಜಾಗವನ್ನು ಅತಿಕ್ರಮಿಸಿರುವುದರಿಂದ ಹಲವು ವರ್ಷಗಳಿಂದ ವಾಣಿಜ್ಯ ಮಳಿಗೆ ಇಟ್ಟುಕೊಂಡಿರುವ ತಮಗೆ ತೊಂದರೆ ಆಗುತ್ತಿದೆ ಎಂದು ಗಾಂಧಿ ಬಜಾರ್‌ನ ಮಳಿಗೆಯೊಂದರ ಮಾಲೀಕ ಗುಂಡೂರಾವ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಆಗ ಪ್ರಕರಣದ ಎಲ್ಲಾ ಅಂಶಗಳನ್ನು ಅವಲೋಕಿಸಿದ ನ್ಯಾ. ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯಪೀಠ 2026ರ ಫೆ.21ರಂದು 'ಮೂಲ ಅಂಗಡಿ ಮಳಿಗೆಗಳ ಮಾಲೀಕರು, ಪಾದಚಾರಿಗಳು ಮತ್ತು ಬೀದಿ ಬದಿ ವ್ಯಾಪಾರಿಗಳು ಮೂವರ ಹಿತಾಸಕ್ತಿಯನ್ನೂ ಸಹ ಕಾಯಬೇಕಾಗುತ್ತದೆ' ಎಂದು ಹೇಳಿತ್ತು. ''ಈಗಾಗಲೇ ಇರುವ ಅಂಗಡಿ ಮುಂಗಟ್ಟುಗಳ ಮುಂದಿನ ಜಾಗ, ಫುಟ್‌ಪಾತ್ ಹಾಗೂ ಬೀದಿಬದಿ ವ್ಯಾಪಾರಿಗಳಿಗೆ ವ್ಯಾಪಾರಕ್ಕೆ ನಿಗದಿಪಡಿಸಿರುವ ಜಾಗಕ್ಕೆ ಮಾರ್ಕಿಂಗ್ ಮಾಡಬೇಕೆಂದು ಹೈಕೋರ್ಟ್ ಆದೇಶ ನೀಡಿತ್ತು. ಅದರಂತೆ ಮಾರ್ಕಿಂಗ್ ಕಾರ್ಯವನ್ನು ಪಾಲಿಕೆ ಕೈಗೊಂಡಿದೆ'', ಎಂದು ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್ ತಿಳಿಸಿದ್ದಾರೆ.

ಕೇರಳ ಉದ್ಯಮಿಯ ಲೂಟಿ: ಸಿಐಡಿ ಇನ್‌ಸ್ಪೆಕ್ಟರ್ ಅಮಾನತು

■ **ವಿಕ ಸುದ್ದಿಲೋಕ** ಬೆಂಗಳೂರು

ಕೇರಳದ ಉದ್ಯಮಿಗಳನ್ನು ಬೆದರಿಸಿ 20 ಲಕ್ಷ ರೂ. ದರೋಡೆ ಮಾಡಿದ್ದ ಪ್ರಕರಣದಲ್ಲಿ ಬಂಧಿತರಾಗಿರುವ ಸಿಐಡಿ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಸೇರಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಹೆಚ್ಚಿನ ವಿಚಾರಣೆಗಾಗಿ ಸೋಮವಾರದವರೆಗೆ ಕಸ್ಟಡಿಗೆ ತೆಗೆದುಕೊಂಡಿದ್ದು, ಮಹೇಶ್‌ರನ್ನು ಅಮಾನತು ಮಾಡಲಾಗಿದೆ.

ಬಂಧಿತರು ಪೊಲೀಸ್ ಕಸ್ಟಡಿಗೆ

ಆರೋಪಿಗಳಿಂದ 14 ಲಕ್ಷ ರೂ. ಜಪ್ತಿ

ಮಡಿವಾಳ ಉಪ ವಿಭಾಗದ ಎಸಿಪಿ ವಿ.ಕೆ.ವಾಸುದೇವ್ ಅವರನ್ನು ಪ್ರಕರಣದ ತನಿಖಾಧಿಕಾರಿಯಾಗಿ ನೇಮಿಸಲಾಗಿದ್ದು, ಬಂಧಿತ ಆರೋಪಿಗಳಾದ ಇನ್‌ಸ್ಪೆಕ್ಟರ್ ಮಹೇಶ್, ಕುಪೇಂದ್ರ ರೆಡ್ಡಿ ಮತ್ತು ವಸಂತ್‌ಕುಮಾರ್‌ನಿಂದ ಈವರೆಗೆ 14 ಲಕ್ಷ ರೂ. ಜಪ್ತಿ ಮಾಡಲಾಗಿದೆ. ಬಂಧನ ಭೀತಿಯಲ್ಲಿ ತಲೆಮರೆಸಿಕೊಂಡಿರುವ ಪ್ರಕರಣದ ಇತರೆ ಆರೋಪಿಗಳಾದ ಷಫಿ, ಶಾನಿ ಮತ್ತು ಹ್ಯಾರಿಸ್‌ರ ಪತ್ತೆ ಕಾರ್ಯ ಚುರುಕುಗೊಂಡಿದೆ.

ಪ್ರಕರಣದ ಮಾಸ್ಟರ್ ಮೈಂಡ್ ಮಹೇಶ್, ಈ ಹಿಂದೆ ಬಂಡೇಪಾಳ್ಯ ಪೊಲೀಸ್ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಆಗ ಅವರಿಗೆ ಕುಪೇಂದ್ರ ರೆಡ್ಡಿ ಮತ್ತು ವಸಂತ್‌ಕುಮಾರ್‌ನ ಪರಿಚಯವಾಗಿತ್ತು. ಮಹೇಶ್ ಅವರು ಬಂಡೇಪಾಳ್ಯ ಠಾಣೆಯಿಂದ ಸಿಐಡಿಗೆ ವರ್ಗಾವಣೆಯಾದ ನಂತರವೂ ಕುಪೇಂದ್ರ ರೆಡ್ಡಿ ಮತ್ತು ವಸಂತ್‌ಕುಮಾರ್ ಜತೆ ಸಂಪರ್ಕದಲ್ಲಿದ್ದರು ಎಂದು ಉನ್ನತ ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣದ ದೂರುದಾರರಾದ ಕೇರಳದ ಉದ್ಯಮಿ ಜುನೀಶ್ ಬಾಬು, ಇಬ್ಬರು ಸ್ನೇಹಿತರೊಂದಿಗೆ ಟ್ರೇಡಿಂಗ್ (ವ್ಯಾಪಾರ) ಉದ್ದೇಶಕ್ಕಾಗಿ ಜೂ.15ರಂದು ಬೆಂಗಳೂರಿಗೆ ಬಂದು ಮಡಿವಾಳದ ವೈಟ್ ಸ್ಟೋನ್ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಆರೋಪಿಗಳಾದ ಷಫಿ, ಶಾನಿ ಮತ್ತು ಹ್ಯಾರಿಸ್ ಅವರೇ ಜುನೀಶ್ ಬಾಬುರನ್ನು ಸಂಪರ್ಕಿಸಿ ಟ್ರೇಡಿಂಗ್ ನೆಪದಲ್ಲಿ ಬೆಂಗಳೂರಿಗೆ ಕರೆಸಿಕೊಂಡಿದ್ದರು. ಜುನೀಶ್ ಬಾಬು ಹಣದೊಂದಿಗೆ ಬೆಂಗಳೂರಿಗೆ ಬರುವ ವಿಚಾರ ತಿಳಿದಿದ್ದ ಆ ಮೂವರು ಆ ಬಗ್ಗೆ ಇನ್‌ಸ್ಪೆಕ್ಟರ್ ಮಹೇಶ್‌ಗೆ ಮೊದಲೇ ಮಾಹಿತಿ ಕೊಟ್ಟಿದ್ದರು. ನಂತರ ಮಹೇಶ್ ಮತ್ತು ಆರೋಪಿಗಳೆಲ್ಲಾ ಸೇರಿ ದರೋಡೆ ಸಂಚು ರೂಪಿಸಿ ಕಾರ್ಯಗತಗೊಳಿಸಿದ್ದರು ಎಂದು ಮೂಲಗಳು ಹೇಳಿವೆ.

ದರೋಡೆ ಬಳಿಕ ಕುಪೇಂದ್ರ ರೆಡ್ಡಿ ಮತ್ತು ವಸಂತ್‌ಕುಮಾರ್‌ನನ್ನು ಬಂಧಿಸುತ್ತಿದ್ದಂತೆ ಮಹೇಶ್, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಬೆಂಗಳೂರಿನಲ್ಲೇ ತಲೆಮರೆಸಿಕೊಂಡಿದ್ದರು. ಅವರು ಬೇರೆ ರಾಜ್ಯಕ್ಕೆ ಪರಾರಿಯಾಗುವ ಪ್ರಯತ್ನದಲ್ಲಿದ್ದಾಗಲೇ ಪತ್ತೆ ಮಾಡಿ ಬಂಧಿಸಲಾಯಿತು. ಇತರೆ ಮೂವರು ಆರೋಪಿಗಳು 6 ಲಕ್ಷ ರೂ. ಹಣದೊಂದಿಗೆ ತಲೆಮರೆಸಿಕೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವೈದ್ಯ ಸೀಟಿನ ಆಮಿಷ: ₹1.4 ಕೋಟಿ ವಂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಎಂಬಿಬಿಎಸ್ ಸೀಟು ಕೊಡಿಸುವುದಾಗಿ ನಂಬಿಸಿ 1.40 ಕೋಟಿ ರೂ. ವಂಚಿಸಿದ ಬಗ್ಗೆ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಮಿತಾ ಎಂಬುವರ ದೂರು ಆಧರಿಸಿ ಡಾ.ಶಿಲ್ಪಾ ಅರವಳಿ ಹಾಗೂ ಕಿರಣ್‌ಕುಮಾರ್ ಎಂಬುವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುತ್ತಿದ್ದಾರೆ. ಸ್ಮಿತಾ ಅವರು ವೆಲ್ನೆಸ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ. ಅವರ ಪತಿ ರಾಜೀವ್ ರಂಜನ್ ಕುಮಾರ್, ಕೆನರಾ ಬ್ಯಾಂಕ್‌ನಲ್ಲಿ ಸಹಾಯಕ ವ್ಯವಸ್ಥಾಪಕರಾಗಿದ್ದಾರೆ. ಸ್ಮಿತಾ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಈ ಪೈಕಿ ಹಿರಿಯ ಮಗಳನ್ನು ಎಂಬಿಬಿಎಸ್ ಓದಿಸಲು ದಂಪತಿ ನಿರ್ಧರಿಸಿದ್ದರು. ಆದರೆ, ನೀಟ್ ಅಂಕದ ಆಧಾರದಲ್ಲಿ ದಂಪತಿಯ ಮಗಳಿಗೆ ಎಂಬಿಬಿಎಸ್ ಸೀಟು ಸಿಕ್ಕಿರಲಿಲ್ಲ, ಹೀಗಾಗಿ, ದಂಪತಿ ಮ್ಯಾನೇಜ್‌ಮೆಂಟ್ ಕೋಟಾದಡಿ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಸೀಟಿಗಾಗಿ ಹುಡುಕಾಟ ನಡೆಸಿದ್ದರು.

ಖಾಸಗಿ ಆಸ್ಪತ್ರೆ ವೈದ್ಯೆ ವಿರುದ್ಧ ದೂರು

ಈ ಮಧ್ಯೆ ಸ್ಮಿತಾ ಅವರು ಅನಾರೋಗ್ಯದ ಕಾರಣ ಚಿಕಿತ್ಸೆಗಾಗಿ ತುಮಕೂರು ರಸ್ತೆಯ ಎಂಟನೇ ಮೈಲಿಯ ಆಸ್ಪತ್ರೆಯೊಂದಕ್ಕೆ ಹೋಗಿದ್ದರು. ಆಗ ಅದೇ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಸಹೋದರನ ಮೂಲಕ ಅವರಿಗೆ ಶಿಲ್ಪಾರ ಪರಿಚಯವಾಗಿತ್ತು. ಸ್ಮಿತಾ ತಮ್ಮ ಹಿರಿಯ ಮಗಳಿಗೆ ಮ್ಯಾನೇಜ್‌ಮೆಂಟ್ ಕೋಟಾದ ಎಂಬಿಬಿಎಸ್ ಸೀಟಿನ ಹುಡುಕಾಟದಲ್ಲಿರುವ ಸಂಗತಿ ತಿಳಿದ ಶಿಲ್ಪಾ, ಖಾಸಗಿ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಹೇಳಿ ಮುಂಗಡವಾಗಿ 35 ಲಕ್ಷ ರೂ. ಪಡೆದಿದ್ದರು. ನಂತರ ಆರೋಪಿ ಕಿರಣ್‌ಕುಮಾರ್, ಸ್ಮಿತಾ ಅವರಿಗೆ 1.5 ಕೋಟಿ ರೂ. ಕೊಡುವಂತೆ ಸೂಚಿಸಿದ್ದರು. ಹೀಗೆ ಆರೋಪಿಗಳು ಸ್ಮಿತಾ ದಂಪತಿಯಿಂದ ಹಂತ ಹಂತವಾಗಿ 1.40 ಕೋಟಿ ರೂ. ಪಡೆದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಹಣ ಪಡೆದ ನಂತರ ಆರೋಪಿಗಳು, ಸೀಟು ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ಹೇಳಿ ಹೆಚ್ಚುವರಿ ಸಮಯ ಕೇಳಿದ್ದರು. ಬಳಿಕ ಸ್ಮಿತಾ ಅವರು 2024ರ ಫೆಬ್ರುವರಿಯಲ್ಲಿ ಹಣ ವಾಪಸ್ ಕೊಡುವಂತೆ ಆರೋಪಿಗಳಿಗೆ ಕೇಳಿದ್ದರು. ಆದರೆ, ಆರೋಪಿಗಳು ಹಣ ವಾಪಸ್ ಕೊಟ್ಟಿಲ್ಲ, ಮತ್ತೊಂದೆಡೆ ಎಂಬಿಬಿಎಸ್ ಸೀಟು ಸಹ ಕೊಡಿಸದೆ ಮೋಸ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

39 ಲಕ್ಷ ರೂ. ದೋಖಾ

ಮತ್ತೊಂದು ಪ್ರಕರಣದಲ್ಲಿ ರಮೇಶ್‌ಬಾಬು ಎಂಬಾತ ಕೆ.ಎಂ.ಗೋಪಾಲಪ್ಪ ಎಂಬುವರ ಮೊಮ್ಮಗಳಿಗೆ ತುಮಕೂರಿನ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ನಂಬಿಸಿ 39 ಲಕ್ಷ ರೂ. ಪಡೆದು ಮೋಸ ಮಾಡಿದ್ದು, ಬಾಗಲಗುಂಟೆ ಠಾಣೆಯಲ್ಲಿ ದೂರು ದಾಖಲಾಗಿದೆ. ರಿಯಲ್ ಎಸ್ಟೇಟ್ ಉದ್ಯಮಿಯಾದ ಗೋಪಾಲಪ್ಪ, ತಮ್ಮ ಮೊಮ್ಮಗಳನ್ನು ಎಂಬಿಬಿಎಸ್‌ಗೆ ಸೇರಿಸಲು ಕಾಲೇಜಿನ ಹುಡುಕಾಟದಲ್ಲಿದ್ದರು. ಆಗ ಅವರಿಗೆ ಶಿವಕುಮಾರ್ ಎಂಬುವರ ಮೂಲಕ ಪರಿಚಯವಾಗಿದ್ದ ರಮೇಶ್ ಬಾಬು, ತುಮಕೂರಿನ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಹೇಳಿ ಖಾಲಿ ಚೆಕ್ ಪಡೆದಿದ್ದ. ನಂತರ ಚೆಕ್ ಮೇಲೆ 39 ಲಕ್ಷ ರೂ. ಎಂದು ತಾನೇ ನಮೂದಿಸಿಕೊಂಡು ಬ್ಯಾಂಕ್‌ಗೆ ಹಾಕಿ ಹಣ ಡ್ರಾ ಮಾಡಿಕೊಂಡಿದ್ದ. ಈ ಸಂಬಂಧ ಬ್ಯಾಂಕ್‌ನಿಂದ ಗೋಪಾಲಪ್ಪರ ಮೊಬೈಲ್‌ಗೆ ಸಂದೇಶ ಬಂದಿತ್ತು. ಅನುಮಾನಗೊಂಡ ಅವರು ಬ್ಯಾಂಕ್‌ಗೆ ಹೋಗಿ ವಿಚಾರಿಸಿದಾಗ ರಮೇಶ್‌ಬಾಬುನ ಕಳ್ಳಾಟ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಅಟ್ರಾಸಿಟಿ ಕೇಸ್ ಕಿರುಕುಳ: ಹಣ್ಣಿನ ವ್ಯಾಪಾರಿ ಆತ್ಮಹತ್ಯೆ

ಬೆಂಗಳೂರು: ನೆರೆಯವರ ಕಿರುಕುಳದಿಂದ ಮನನೊಂದು ಪಾಪಣ್ಣ (42) ಎಂಬುವರು ಕಾಡುಗೋಡಿಯಲ್ಲಿ ಶುಕ್ರವಾರ ರಾತ್ರಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಪಾಪಣ್ಣ

ಚನ್ನಸಂದ್ರದ ಎಕೆಜಿ ಬಡಾವಣೆ ನಿವಾಸಿಯಾದ ಪಾಪಣ್ಣ, ಹಣ್ಣಿನ ವ್ಯಾಪಾರ ಮಾಡುತ್ತಿದ್ದರು. ಪಾಪಣ್ಣ ವಿರುದ್ಧ ಸ್ಥಳೀಯರೊಬ್ಬರು 2021ರಲ್ಲಿ ಜಾತಿನಿಂದನೆ ಪ್ರಕರಣ ದಾಖಲಿಸಿದ್ದರು. ಈ ಮಧ್ಯೆ ನಯನಾ ಎಂಬುವರು ಪಾಪಣ್ಣ ವಿರುದ್ಧ ಜಾತಿನಿಂದನೆ ಸಂಬಂಧ ಮತ್ತೊಂದು ಸುಳ್ಳು ದೂರು ದಾಖಲಿಸಿ, ದೂರು ಹಿಂಪಡೆಯಲು 10 ಲಕ್ಷ ರೂ. ಕೊಡುವಂತೆ ಬೆದರಿಕೆ ಹಾಕುತ್ತಿದ್ದರು. ಈ ಎರಡೂ ಪ್ರಕರಣಗಳ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ.

ನಯನಾ ಮತ್ತು ಕೆಲ ವ್ಯಕ್ತಿಗಳ ಕಿರುಕುಳದಿಂದ ಮನನೊಂದಿದ್ದ ಪಾಪಣ್ಣ, ಶುಕ್ರವಾರ ರಾತ್ರಿ ತಮ್ಮ ಕಾರಿನಲ್ಲಿ ಕಾಡುಗೋಡಿಯ ನಿರ್ಜನ ಪ್ರದೇಶಕ್ಕೆ ಹೋಗಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೂ ಮುನ್ನ ಅವರು ತಮ್ಮ ಆತ್ಮಹತ್ಯೆಗೆ ನಯನಾ ಹಾಗೂ ಜಾತಿನಿಂದನೆಯ ದೂರು ದಾಖಲಿಸಿದ್ದ ವ್ಯಕ್ತಿಗಳ ಕಿರುಕುಳವೇ ಕಾರಣವೆಂದು ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಮಾಡಿ ಸಹೋದರಿ ಭಾಗ್ಯಮ್ಮ ಮತ್ತು ಕುಟುಂಬ ಸದಸ್ಯರಿಗೆ ಕಳುಹಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಾಡುಗೋಡಿ ಠಾಣೆ ಪೊಲೀಸರು ನಯನಾ ಮತ್ತಿತರರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಪ್ರಕರಣ ದಾಖಲಿಸಿ, ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯೇ ಎಸ್‌ಇಎ ಗುರಿ

ದೂರದೃಷ್ಟಿ, ಸಾಮಾಜಿಕ ಕಳಕಳಿ ಹೊಂದಿದ್ದ ಮುತ್ಸದ್ದಿ, ಶಾಸಕ, ಸಚಿವರಾಗಿದ್ದ ಎ.ಕೃಷ್ಣಪ್ಪ ಅವರು ಶಾಲೆಯೊಂದರಿಂದ ಆರಂಭಿಸಿದ ಶಿಕ್ಷಣ ಸಂಸ್ಥೆ ಈಗ ಹೆಮ್ಮರವಾಗಿ ಬೆಳೆದಿದ್ದು, ಬಡ ವಿದ್ಯಾರ್ಥಿಗಳ ಕನಸು ನನಸು ಮಾಡುತ್ತಿದೆ.

ಸಾಮಾನ್ಯ ವ್ಯಕ್ತಿಯೊಬ್ಬರು ತಮ್ಮೂರಿಗೊಂದು ಶಾಲೆ ಕಟ್ಟಿಸಿಕೊಡಿ ಎಂದು ಜನಪ್ರತಿನಿಧಿಗಳಿಗೆ ಮೊರೆಯಿಟ್ಟರೂ ಪ್ರಯೋಜನವಾಗದೇ ಇದ್ದಾಗ ಎ.ಕೃಷ್ಣಪ್ಪ ಅವರು ಜನರ ಸಹಕಾರದೊಂದಿಗೆ 'ಭಾರತೀಯ ವಿದ್ಯಾನಿಕೇತನ' ಎಂಬ ಶಾಲೆ ಆರಂಭಿಸಿದ್ದರು. ಬಳಿಕ ಸೌತ್ ಈಸ್ಟ್ ಏಷಿಯನ್ ಎಜುಕೇಷನ್ (ಎಸ್‌ಇಎ) ಟ್ರಸ್ಟ್ ಅಡಿ ಇನ್ನಷ್ಟು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು. ಪಿಯು, ಪದವಿ, ಡಿಪ್ಲೊಮಾ, ಐಟಿಐ, ಎಂಜಿನಿಯರಿಂಗ್ , ನರ್ಸಿಂಗ್ ಸೇರಿದಂತೆ ಹತ್ತಾರು ಕೋರ್ಸ್‌ಗಳನ್ನು ಪರಿಚಯಿಸಲಾಯಿತು. ಆ ಮೂಲಕ ಒಂದು ಮಗು ಈ ಶಿಕ್ಷಣ ಸಂಸ್ಥೆಯಲ್ಲಿನ ನರ್ಸರಿಗೆ ಪ್ರವೇಶ ಪಡೆದರೆ, ಪಿಎಚ್‌ಡಿ ಮುಗಿಯುವವರೆಗೂ ಇಲ್ಲೇ ವ್ಯಾಸಂಗ ಮಾಡುವಂತಹ ಕಲಿಕಾ ಪೂರಕ ವಾತಾವರಣವನ್ನು ಎಸ್‌ಇಎ ಸಮೂಹ ಶಿಕ್ಷಣ ಸಂಸ್ಥೆ ನಿರ್ಮಿಸಿತು. ಕೃಷ್ಣಪ್ಪ ಅವರ ಅಗಲಿಕೆ ಬಳಿಕ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಈ ಶಿಕ್ಷಣ ಸಂಸ್ಥೆಯನ್ನು ಆಧುನಿಕ ಕಾಲಕ್ಕೆ ಅನುಗುಣವಾಗಿ ಮಾರ್ಪಾಡು ಮಾಡಿ ಮುನ್ನಡೆಸುತ್ತಿದ್ದಾರೆ.

VK & BM EDUCATION EXCELLENCE & HONOR 2026

ಶಾಲೆಯಲ್ಲಿ ರಾಜ್ಯ ಪಠ್ಯಕ್ರಮ, ಕೇಂದ್ರ ಪಠ್ಯಕ್ರಮ ಇದೆ. ಕಾಲೇಜಿನಲ್ಲಿ ಇಂತಹ ಕೋರ್ಸ್ ಇಲ್ಲ ಎನ್ನುವಂತಿಲ್ಲ. ಐಟಿಐ, ಬಿಇಡಿ, ಎಲ್‌ಎಲ್‌ಬಿ, ಅಲೈಡ್ ಸೈನ್ಸ್ ಸೇರಿದಂತೆ ವಿವಿಧ ಕೋರ್ಸ್‌ಗಳಿವೆ. ಎಲ್ಲ ಕೋರ್ಸ್‌ಗಳಿಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ.. ಹೀಗೆ ಎಲ್ಲ ಅರ್ಹ ಮಂಡಳಿಗಳಿಂದ ಮಾನ್ಯತೆ ಇದೆ. ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

ಯೋಗ, ಎನ್‌ಎಸ್‌ಎಸ್, ಎನ್‌ಸಿಸಿ, ಕ್ರೀಡಾ ತರಬೇತಿ ನೀಡಲಾಗುತ್ತಿದೆ. ಅಲ್ಲದೆ, ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಿಗೆ ಕ್ರಿಕೆಟ್, ಫುಟ್‌ಬಾಲ್, ಬ್ಯಾಡ್ಮಿಂಟನ್ ಕ್ರೀಡೆಗಳಿಗೆ ತರಬೇತಿ ನೀಡಲಾಗುತ್ತಿದೆ. 25 ವರ್ಷಗಳಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಿಕೊಂಡು ಬರುತ್ತಿದ್ದು, ಶಾಲೆಯಿಂದ ಕಾಲೇಜಿನವರೆಗೆ ಎಲ್ಲ ವಿದ್ಯಾರ್ಥಿಗಳು ಪಥಸಂಚಲನದಲ್ಲಿ ಪಾಲ್ಗೊಳ್ಳುವುದು ವಿಶೇಷವಾಗಿದೆ.

ಎಂಜಿನಿಯರಿಂಗ್ ವಿಭಾಗ: ಎಸ್‌ಇಎ ಟ್ರಸ್ಟ್‌ನ ಎಂಜಿನಿಯರಿಂಗ್ ಕಾಲೇಜಿನಲ್ಲಿ ತಂತ್ರಜ್ಞಾನಕ್ಕೆ ತಕ್ಕಂತೆ ಬೋಧನಾ ವಿಧಾನ ಅಳವಡಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಸಂವಹನ ಕಲೆ ಕಲಿಸಲಾಗುತ್ತಿದೆ. ಪ್ರಾಜೆಕ್ಟ್ ತಯಾರಿಗೆ ಮಾರ್ಗದರ್ಶನ, ಇಂಟರ್ನ್‌ಶಿಪ್ ವ್ಯವಸ್ಥೆ ಕಲ್ಪಿಸಿಕೊಡುವ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಸಿದ್ಧವಾಗುವ ರೀತಿಯಲ್ಲಿ ರೂಪಿಸುತ್ತಿದೆ.

ಎಸ್‌ಇಎ ವಿದ್ಯಾಸಂಸ್ಥೆ ಪರವಾಗಿ ಸಂಸ್ಥೆಯ ಸಿಬ್ಬಂದಿ 'ವಿಕ-ಬಿಎಂ ಎಜುಕೇಶನ್ ಎಕ್ಸಲೆನ್ಸ್ 2025-26' ಪ್ರಶಸ್ತಿ ಸ್ವೀಕರಿಸಿದರು.

ಪ್ರಮುಖ ಸೌಲಭ್ಯಗಳು

- ಸಾರಿಗೆ ಸೌಲಭ್ಯ
- ಅಟಲ್ ಟಿಂಕರಿಂಗ್ ಲ್ಯಾಬ್
- ಉತ್ತಮ ಪ್ಲೇಸ್‌ಮೆಂಟ್
- ಕ್ರೀಡಾ ತರಬೇತಿ, ಮ್ಯೂಸಿಕ್ ಸ್ಕೂಲ್
- ಪಿಯು ಇಂಟಿಗ್ರೇಟೆಡ್ ಕೋರ್ಸ್
- ವಿದೇಶಿ ಭಾಷಾ ಕಲಿಕೆ
- ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ

25 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ

ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಎ.ಕೃಷ್ಣಪ್ಪ ಅವರ ಸ್ಮರಣಾರ್ಥ ಪ್ರತಿ ವರ್ಷ 25 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ಎ.ಕೃಷ್ಣಪ್ಪಜೀ ಫೌಂಡೇಶನ್' ವತಿಯಿಂದ ಉಚಿತ ಶಿಕ್ಷಣದ ಸ್ಕಾಲರ್ ಶಿಪ್ ಒದಗಿಸಲಾಗುತ್ತಿದೆ. ಎಸ್‌ಇಎ ಟ್ರಸ್ಟ್ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುವ 'ಡಿ' ಗ್ರೂಪ್ ನೌಕರರ ಮಕ್ಕಳಿಗೆ ಉಚಿತ ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ರಿಯಾಯಿತಿ ಸಹ ನೀಡಲಾಗುತ್ತಿದೆ.

ದಿ.ಎ.ಕೃಷ್ಣಪ್ಪ ಅವರ ದೂರದೃಷ್ಟಿಯಿಂದ ವಿದ್ಯಾಸಂಸ್ಥೆ ಆರಂಭವಾಗಿದೆ. ವಿದ್ಯಾರ್ಥಿಯು ಕೇವಲ ಓದು ಒಂದರಲ್ಲೇ ಮುಂದಿರಬೇಕು ಎಂಬ ಆಸೆ ನಮ್ಮದಲ್ಲ. ಸರ್ವತೋಮುಖ ಬೆಳವಣಿಗೆ ಸಾಧಿಸಿ. ಸಮಾಜದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿಯಾಗುವಂತಹ ಬದ್ಧತೆ ಇಟ್ಟುಕೊಂಡು ನಾವು ಶಿಕ್ಷಣ ನೀಡುತ್ತಿದ್ದೇವೆ.

- ಕೆ.ಅನುಪಮ ಖಜಾಂಚಿ ಮತ್ತು ಜಂಟಿ ಕಾರ್ಯದರ್ಶಿ, ಎಸ್‌ಇಎ ವಿದ್ಯಾಸಂಸ್ಥೆ

ಖಾಸಗಿ ವಿವಿ ಕನಸು

ಎಸ್‌ಇಎ ಕಾಲೇಜು ಸದ್ಯ ನಾನಾ ಮಂಡಳಿಗಳ ಮಾನ್ಯತೆಯಲ್ಲಿ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಸ್ವಾಯತ್ತತೆ ಪಡೆದುಕೊಂಡು ಭವಿಷ್ಯದಲ್ಲಿ ಖಾಸಗಿ ವಿವಿ ಮಾಡುವ ಕನಸನ್ನು ಎಸ್‌ಇಎ ಖಜಾಂಚಿ ಮತ್ತು ಜಂಟಿ ಕಾರ್ಯದರ್ಶಿ ಕೆ.ಅನುಪಮ ಹೊಂದಿದ್ದಾರೆ. ''ನಾವು ಪ್ರತಿ ಶಿಕ್ಷಣ ಸಂಸ್ಥೆಯಲ್ಲೂ ಹಂತ ಹಂತವಾಗಿ ಬೆಳವಣಿಗೆ ಸಾಧಿಸುತ್ತಿದ್ದೇವೆ. ಭವಿಷ್ಯದಲ್ಲಿ ಕಾಲೇಜನ್ನು ವಿಶ್ವವಿದ್ಯಾಲಯವಾಗಿ ಮಾರ್ಪಾಡು ಮಾಡುವ ಕನಸು ಹೊಂದಿದ್ದೇವೆ'' ಎಂದರು.

PROGRESS THROUGH QUALITY EDUCATION · SOUTH EAST ASIAN EDUCATION TRUST (R) · S.E.A.E.T · BANGALORE · KNOWLEDGE IS SUPREME

ಎಸ್.ಇ.ಎ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್
ಏಕ್ತಾ ನಗರ ಅಂಚೆ, ಬಸವನಪುರ ರಸ್ತೆ, ಲೂರ್ದು ನಗರ, ವಿರ್ಗೋನಗರ, ಕೃಷ್ಣರಾಜಪುರಂ, ಬೆಂಗಳೂರು-560 049
ಫೋನ್ : 73539 45999
ವೆಬ್‌ಸೈಟ್: https://seacet.edu.in/

ಎರವಲು ಸೇವೆ ಆದೇಶ ಹಿಂಪಡೆಯಲು ಜಿಬಿಎ ನೌಕರರ ಸಂಘದ ಒತ್ತಾಯ

ಬೆಂಗಳೂರು: ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀಕ್ಷಕ ಜಿ.ಚಿದಾನಂದಮೂರ್ತಿ ಅವರನ್ನು ಕಾನೂನುಬಾಹಿರವಾಗಿ ಪಾಲಿಕೆಗೆ ಎರವಲು ಸೇವೆ ಮೇಲೆ

ನಿಯೋಜಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಒತ್ತಾಯಿಸಿದೆ.

ಈ ಸಂಬಂಧ ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ''ಜಿ.ಚಿದಾನಂದ ಮೂರ್ತಿ ಅವರನ್ನು ಎರವಲು ಸೇವೆ ಮೇಲೆ ಪಶ್ಚಿಮ ನಗರ ಪಾಲಿಕೆಯಲ್ಲಿ ಖಾಲಿ ಇದ್ದ ವ್ಯವಸ್ಥಾಪಕರ ಹುದ್ದೆಗೆ ನಿಯೋಜಿಸಿರುವುದು ಸರಿಯಲ್ಲ. ಕೂಡಲೇ ಅವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಬೇಕು. ಇಲ್ಲವಾದಲ್ಲಿ ಸಂಘದಿಂದ ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಕೆ ನೀಡಿದ್ದಾರೆ.

ಪದ್ಮನಾಭನಗರದಲ್ಲಿ ಇನ್ನೊಂದು ಗೃಹಲಕ್ಷ್ಮಿ ಕ್ಯಾಂಟೀನ್‌ಗೆ ಚಾಲನೆ

ಬೆಂಗಳೂರು: ಪದ್ಮನಾಭನಗರ ಕ್ಷೇತ್ರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹಾಗೂ ಯುವ ಮುಖಂಡ ಪ್ರಮೋದ್ ಶ್ರೀನಿವಾಸ್ ಅವರ ಮಾರ್ಗದರ್ಶನದಲ್ಲಿ ಮತ್ತೊಂದು 'ಗೃಹಲಕ್ಷ್ಮಿ ಕ್ಯಾಂಟೀನ್'ಗೆ ಚಾಲನೆ ನೀಡಲಾಗಿದೆ.

ಗೃಹಲಕ್ಷ್ಮಿ ಯೋಜನೆಯ ಹಣವನ್ನು ಕೂಡಿಟ್ಟುಕೊಂಡು ಮಹಿಳೆಯೊಬ್ಬರು ಆರಂಭಿಸಿದ (ಪದ್ಮನಾಭ ನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಚೇರಿ ಎದುರುಗಡೆ) ಗೃಹಲಕ್ಷ್ಮಿ ಕ್ಯಾಂಟೀನ್‌ಗೆ ಪ್ರಮೋದ್ ಶ್ರೀನಿವಾಸ್ ಚಾಲನೆ ನೀಡಿದರು. ಪದ್ಮನಾಭ ನಗರದ ಹಲವು ಮುಖಂಡರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರು, ಸಾರ್ವಜನಿಕರು ಪಾಲ್ಗೊಂಡಿದ್ದರು.

ಮನೆಯಂಗಳದಲ್ಲಿ ಮಾತುಕತೆಯಲ್ಲಿ ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಒತ್ತಾಯ

ಲಿಂಗತ್ವ ಅಲ್ಪಸಂಖ್ಯಾತರ ಮಂಡಳಿ ರಚಿಸಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರ ಲಿಂಗತ್ವ ಅಲ್ಪಸಂಖ್ಯಾತ ಕಲ್ಯಾಣ ಮಂಡಳಿ ರಚಿಸಬೇಕು. ಅದಕ್ಕೆ ನಮ್ಮ ಸಮುದಾಯದವರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಒತ್ತಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಯನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಮನೆಯಂಗಳದಲ್ಲಿ ಮಾತುಕತೆ-248' ಕಾರ್ಯಕ್ರಮದ ತಿಂಗಳ ಅತಿಥಿಯಾಗಿ ಅವರು ಮಾತನಾಡಿದರು. ''ದೇವಸ್ಥಾನಗಳ ನಿರ್ಮಾಣಕ್ಕೆ ಯಾವ ಬ್ಯಾಂಕ್ ಕೂಡ ಸಾಲ ಕೊಡುವುದಿಲ್ಲ. ದೇಣಿಗೆ ಸಂಗ್ರಹಿಸಿ ದೇವಾಲಯಗಳನ್ನು ನಿರ್ಮಿಸಲಾಗುತ್ತದೆ. ಅದು ಸಂಪ್ರದಾಯ ಎನಿಸಿಕೊಳ್ಳುತ್ತದೆ. ಆದರೆ, ನಾವು ಹೊಟ್ಟೆಪಾಡಿಗೆ ಭಿಕ್ಷೆ ಬೇಡಿದರೆ ತಪ್ಪೇನು ? ದಬ್ಬಾಳಿಕೆ ಅಥವಾ ಕೆಟ್ಟ ನಡವಳಿಕೆಯ ಭಿಕ್ಷಾಟನೆಗೆ ನಮ್ಮ ಸಹಮತವಿಲ್ಲ. ಅದನ್ನು ಮಾಡಬಾರದೆಂದು ತಿಳಿ ಹೇಳಲಾಗುತ್ತಿದೆ,'' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಮಾತನಾಡಿದರು.

''ಆದಾಗ್ಯೂ, ಕೆಲವರು ಆ ರೀತಿ ಮಾಡುತ್ತಾರೆ. ಅಂತಹವರನ್ನು ಶಿಕ್ಷಿಸಲು ಕಾನೂನು ಇದೆ. ಸರಕಾರ ಲಿಂಗತ್ವ ಅಲ್ಪಸಂಖ್ಯಾತ ಕಲ್ಯಾಣ ಮಂಡಳಿ ರಚಿಸಿ, ಅದಕ್ಕೆ ನಮ್ಮ ಸಮುದಾಯದವರನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು. ಜತೆಗೆ 20 ಕೋಟಿ ರೂ. ಅನುದಾನ ನೀಡಬೇಕು. ಆಗ ನಮ್ಮ ಸಮುದಾಯವನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತೇವೆ,'' ಎಂದು ಸಂವಾದದಲ್ಲಿ ಸಭಿಕರ ಭಿಕ್ಷಾಟನೆಯ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

''ಲಿಂಗತ್ವ ಅಲ್ಪಸಂಖ್ಯಾತ ಎಂದರೆ, ಅದೊಂದು ಬಹುದೊಡ್ಡ ವೈವಿಧ್ಯಮಯ ಸಮುದಾಯ. ಅದನ್ನು ಸಮಾಜವು ಸಾಂಸ್ಕೃತಿಕವಾಗಿ ಒಪ್ಪಿಕೊಂಡರೂ, ಸಾಮಾಜಿಕವಾಗಿ ಬಹಿಷ್ಕರಿಸಿರುವುದು ಮತ್ತು ಶೈಕ್ಷಣಿಕ ನೆಲೆಗಟ್ಟು ಸಿಗದಿರುವುದು, ಈ 21ನೇ ಶತಮಾನಕ್ಕೆ ಮಾಡಿದ ಬಹುದೊಡ್ಡ ಅಪಮಾನ,'' ಎಂದು ಹೇಳಿದರು. ''ಸರಕಾರ ನಮ್ಮನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಗಳನ್ನು ಮಾಡುತ್ತಿದ್ದರೂ, ಸಮಾಜ ಈ ಬದಲಾವಣೆಗಳಿಗೆ ಒಪ್ಪುತ್ತಿಲ್ಲ, ಹೀಗಾಗಿ, ನಮ್ಮ ನೋವು, ದುಃಖವನ್ನು ಸೀರೆ ನೀವಾಳಿಸುವ ಹಾಗೂ ಚಪ್ಪಾಳೆ ತಟ್ಟುವ ಮೂಲಕ ವ್ಯಕ್ತಪಡಿಸಲಾಗುತ್ತಿದೆ,'' ಎಂದು ತಿಳಿಸಿದರು.

ರಾಜಕೀಯ ಪ್ರಾತಿನಿಧ್ಯ ಅಗತ್ಯ: ಮೀಸಲಾತಿ, ರಾಜಕೀಯ ಪ್ರಾತಿನಿಧ್ಯ, ಭಿಕ್ಷಾಟನೆ ಕುರಿತು ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ''2019ರ ಕೋವಿಡ್ ಸಂದರ್ಭದಲ್ಲಿ ಟ್ರಾನ್ಸ್‌ಜೆಂಡರ್ ಪ್ರೊಟೆಕ್ಷನ್ ರೈಟ್ಸ್ ಆಕ್ಟ್ ಕುರಿತಂತೆ ಯಾರು ನಮ್ಮ ಪರ ಮಾತನಾಡಲಿಲ್ಲ. ''ನಾವು ಶಾಸನದ ಭಾಗವಾದರೆ, ಸಂವಿಧಾನ ಚೌಕಟ್ಟಿಗೆ ತಲೆ ಭಾಗಬೇಕು. ಯಾವ ಸಮುದಾಯಕ್ಕೆ ರಾಜಕೀಯ ಅಧಿಕಾರ ಇರುವುದಿಲ್ಲವೋ, ಅಲ್ಲಿಯವರೆಗೂ ಬದಲಾವಣೆ ಸಾಧ್ಯವಿಲ್ಲ. ಎಲ್ಲ ಸ್ಥಳೀಯ ಸಂಸ್ಥೆಗಳು, ವಿಧಾನ ಪರಿಷತ್, ವಿಧಾನಸಭೆ, ರಾಜ್ಯಸಭೆ ಮತ್ತು ಲೋಕಸಭೆಗಳಲ್ಲಿ ನಮಗೆ ಪ್ರಾತಿನಿಧ್ಯಬೇಕು. ನಮ್ಮ ಮುಂದಿನ ಗುರಿ ಮೀಸಲಾತಿ ಪಡೆಯುವುದಾಗಿದೆ. ಈಗಾಗಲೇ ನಡೆಸಿದ ಹೋರಾಟದ ಫಲವಾಗಿ ತೀರ್ಪುಗಳು ನಮ್ಮ ಪರವಾಗಿ ಬಂದಿವೆ,'' ಎಂದರು.

ಇದಲ್ಲದೆ, ತಾವು ಬಾಲ್ಯದಿಂದಲೂ ಅನುಭವಿಸಿದ ನೋವು, ಅಪಮಾನ, ತಲ್ಲಣಗಳು, ವೈವಾಹಿಕ ಜೀವನ, ವಿಚ್ಛೇದನ, ಹೋರಾಟಗಾರ್ತಿಯಾಗಿ ರೂಪುಗೊಂಡ ಬಗೆ ಸೇರಿದಂತೆ ಎಲ್ಲ ಸಂಗತಿಗಳನ್ನು ಹಂಚಿಕೊಂಡರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮಂಜುನಾಥಸ್ವಾಮಿ ಇದ್ದರು.

ಎಸ್‌ಐಆರ್‌ಗೆ ವಿರೋಧ

''ಸಾಮಾನ್ಯರ ಮತದ ಹಕ್ಕಿಗೆ ಎಸ್‌ಐಆರ್ ಅಡ್ಡಿಯಾಗಲಿದೆ. ದೇವದಾಸಿಯರು, ಲೈಂಗಿಕ ಕಾರ್ಯಕರ್ತೆಯರು, ಅವರ ಮಕ್ಕಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಮತದಾನದ ಹಕ್ಕಿನಿಂದ ವಂಚಿತರಾಗಲಿದ್ದಾರೆ. ಯಾವಾಗಲೋ ಮನೆ ತೊರೆದಿರುವ ನಮಗೆ, ಕುಟುಂಬಸ್ಥರು ಸತ್ತರೂ ಭಾಗಿಯಾಗಲು ಅವಕಾಶವಿಲ್ಲ. ಪರಿಸ್ಥಿತಿ ಹೀಗಿರುವಾಗ ನಮಗೆ ಜಾತಿ, ಹುಟ್ಟು ಇತ್ಯಾದಿಗೆ ಸಂಬಂಧಿಸಿದ ದಾಖಲೆ ಸಿಗುವುದಾದರೂ ಹೇಗೆ? ಪಿತೃಪ್ರಧಾನ ವ್ಯವಸ್ಥೆಯ ಭಾಗವಾಗಿರುವ ಎಸ್‌ಐಆರ್‌ಗೆ ನಮ್ಮ ವಿರೋಧವಿದ್ದು, ಇದನ್ನು ಕೈಬಿಡಬೇಕು,'' ಎಂದು ಅಕ್ಕೈ ಪದ್ಮಶಾಲಿ ಆಗ್ರಹಿಸಿದರು.

ಹೆಬ್ಬಗೋಡಿ ಪಾರ್ಕ್ ಸುಸ್ಥಿತಿಗೆ ಕ್ರಮ: ಪೌರಾಯುಕ್ತರ ಭರವಸೆ

ಹೆಬ್ಬಗೋಡಿ ಕೆರೆ ಪಕ್ಕದ ಮಕ್ಕಳ ಪಾರ್ಕ್‌ನಲ್ಲಿ ಪೈಪ್‌ಗಳನ್ನು ತೆರವುಗೊಳಿಸಿ, ಬಳಕೆಗೆ ಮುಕ್ತಗೊಳಿಸಲಾಗಿದೆ.

16.06.2026
ವಿಜಯ ಕರ್ನಾಟಕ
ಮಕ್ಕಳ ಪಾರ್ಕ್ ದುರವಸ್ಥೆ

■ **ವಿಕ ಸುದ್ದಿಲೋಕ** ಬೆಂಗಳೂರು

ಹೆಬ್ಬಗೋಡಿ ಕೆರೆ ಪಕ್ಕದ ಮಕ್ಕಳ ಪಾರ್ಕ್‌ನಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ, ಈ ಹಿಂದಿನಂತೆಯೇ ಉದ್ಯಾನ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೆಬ್ಬಗೋಡಿ ನಗರಸಭೆ ಪೌರಾಯುಕ್ತರು ಭರವಸೆ ನೀಡಿದ್ದಾರೆ.

ವಿಜಯ ಕರ್ನಾಟಕವು ಜೂ.16ರಂದು 'ಮಕ್ಕಳ ಪಾರ್ಕ್ ದುರವಸ್ಥೆ' ಶೀರ್ಷಿಕೆಯಡಿ ಸುದ್ದಿ ಪ್ರಕಟಿಸಿತ್ತು. ಈ ವರದಿ ಆಧರಿಸಿ ಉದ್ಯಾನದ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ, ತ್ವರಿತವಾಗಿ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ಅದರಂತೆ, ಪರಿಶೀಲನೆ ನಡೆಸಿದ ಅಧಿಕಾರಿಗಳು, ಶೀಘ್ರವೇ ಕಾಮಗಾರಿ ಪೂರ್ಣಗೊಳಿಸಿ ಮಕ್ಕಳ ಆಟೋಟಕ್ಕೆ ಅನುಕೂಲ ಕಲ್ಪಿಸಲಾಗುವುದು ಎಂದು ಸ್ಪಷ್ಟನೆ ನೀಡಿದ್ದಾರೆ.

'ಆನೇಕಲ್ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 15ರಲ್ಲಿನ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಒದಗಿಸುವ ಸಲುವಾಗಿ ಉದ್ಯಾನದಲ್ಲಿ ಕೊಳವೆಬಾವಿ ಕೊರೆಸಿ, ಆರ್‌ಒ ಘಟಕ ಸ್ಥಾಪಿಸಲಾಗುತ್ತಿದೆ. ಕಾಮಗಾರಿ ಸ್ಥಳದಲ್ಲಿ ಯಾವುದೇ ಅನಾಹುತ ಸಂಭವಿಸದಂತೆ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದ್ಯಾನದಲ್ಲಿ ತಾತ್ಕಾಲಿಕವಾಗಿ ಸಂಗ್ರಹಿಸಿಟ್ಟಿದ್ದ ನೀರಿನ ಪೈಪ್‌ಗಳನ್ನು ತೆರವುಗೊಳಿಸಲಾಗಿದೆ. ಮಕ್ಕಳ ಆಟದ ಚಟುವಟಿಕೆಗಳಿಗೆ ಯಾವುದೇ ಅಡ್ಡಿಯಾಗದಂತೆ ಕ್ರಮ ವಹಿಸಲಾಗಿದೆ. ಉದ್ಯಾನದ ಬಹುಭಾಗವನ್ನು ಸಾರ್ವಜನಿಕರ ಬಳಕೆಗೆ ಲಭ್ಯಗೊಳಿಸಲಾಗಿದೆ,'' ಎಂದು ತಿಳಿಸಿದ್ದಾರೆ.

''ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಂಡಿರುವ ಕಾಮಗಾರಿಯನ್ನು 10 ದಿನದೊಳಗೆ ಪೂರ್ಣಗೊಳಿಸಲಾಗುವುದು. ನಂತರ ಉದ್ಯಾನವನ್ನು ಹಿಂದಿನ ಸ್ಥಿತಿಗೆ ಪುನಃ ಅಭಿವೃದ್ಧಿಪಡಿಸಿ, ಸಾರ್ವಜನಿಕರ ಬಳಕೆಗೆ ಒದಗಿಸಲಾಗುವುದು,'' ಎಂದು ಹೆಬ್ಬಗೋಡಿ ನಗರಸಭೆ ಪೌರಾಯುಕ್ತರು, ಸಿಎಂ ವಿಶೇಷ ಕರ್ತವ್ಯಾಧಿಕಾರಿಗೆ ವರದಿ ಸಲ್ಲಿಸಿದ್ದಾರೆ.

ನಾಳೆ ಹಲವೆಡೆ ಕರೆಂಟಿಲ್ಲ

ಬೆಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಜೂ.22ರಂದು ನಗರದ ಹಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಲೊಟ್ಟೆಗೊಲ್ಲಹಳ್ಳಿ, ಮುನಿಹನುಮಯ್ಯ ಕಾಲೋನಿ, ಆರ್.ಕೆ.ಉದ್ಯಾನ, ಸಂಜೀವಪ್ಪ ಕಾಲೋನಿ, ಎಐಎಲ್ಎ ಲೇಔಟ್, ನೇತಾಜಿ ನಗರ, ಪೈಪ್‌ಲೈನ್ ರಸ್ತೆ, ಮತ್ತಿಕೆರೆ, ಮೋಹನ್‌ಕುಮಾರ್ ನಗರ, ಜೆಪಿ ಪಾರ್ಕ್, ಅಕ್ಕಿಯಪ್ಪ ಉದ್ಯಾನ, ಬಿ.ಕೆ ನಗರ, ಎಲ್‌ಐಸಿ ಕಾಲೋನಿ, ಪಂಪ ನಗರ, ಯಶವಂತಪುರ 1ನೇ ಮುಖ್ಯರಸ್ತೆ, ಎಚ್‌ಎಂಟಿ ಲೇಔಟ್, ಎಲ್ಲಿಆರ್ ಶಾಲಾ ರಸ್ತೆ, ಗೋಕುಲ 1ನೇ ಹಂತ, ಗುರುಮೂರ್ತಿ ರೆಡ್ಡಿ ಕಾಲೋನಿ, ಕೆಇಬಿ ವಿಸ್ತರಣೆ, ಎಸ್‌ಬಿಎಂ ಕಾಲೋನಿ, ಬೃಂದಾವನ ನಗರ, ಎಚ್‌ಎಂಟಿ ಮುಖ್ಯರಸ್ತೆ, ಎಂಆರ್‌ಜೆ ಕಾಲೋನಿ, ಮತ್ತಿಕೆರೆ 2ನೇ ಮುಖ್ಯರಸ್ತೆಯಿಂದ 10ನೇ ಮುಖ್ಯರಸ್ತೆ, ವಿಆರ್ ಲೇಔಟ್, ಟ್ಯಾಂಕ್ ಬಂಡ್ ರಸ್ತೆ, ಐಐಎಸ್ಸಿ, ಎಂ.ಡಿ.ಬ್ಲಾಕ್, ವೈಯಾಲಿ ಕಾವಲ್, ರಂಗನಾಥಪುರ, ಬಿಇಎಲ್, ಐಐಎಸ್ಸಿ ಬ್ರೈನ್ ಸೆಂಟರ್, ಅಂಬೇಡ್ಕರ್ ನಗರ, ಯಶವಂತಪುರ ಪೈಪ್‌ಲೈನ್ ರಸ್ತೆ, ಎಲ್‌ಎನ್ ಕಾಲೋನಿ, ದಿವಾನರ ಪಾಳ್ಯ, ಎಚ್‌ಎಂಟಿ. ಮುಖ್ಯರಸ್ತೆ, ಮಾಡೆಲ್ ಕಾಲೋನಿ, ಶರೀಫ್ ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ.

ಅಲ್ಲದೇ ಬೆಳಗ್ಗೆ 10.30 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ಶೋಭಾ ಕ್ರೈಸಾಂಥೆಮಮ್, ದಿವ್ಯ ಶಾಂತಿ, ಗೋಪಿಂದಪುರ, ಕಾರ್ಲೆ, ಬೃಂದಾವನ ನಗರ, ಟೈಟಾನ್ ಗ್ಯಾರೇಜ್, ಗಾಂಧಿನಗರ, ಭೈರಪ್ಪ ಅಪಾರ್ಟ್‌ಮೆಂಟ್, ಹೆಗಡೆನಗರ, ಚಂದ್ರಿಕಾ ಸೋಪ್ ಫ್ಯಾಕ್ಟರಿ ಹಾಗೂ ಡಿಪೋ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

2 ದಿನ ವಿದ್ಯುತ್ ವ್ಯತ್ಯಯ: ಸೋಲದೇವನಹಳ್ಳಿ ಉಪಕೇಂದ್ರ ವ್ಯಾಪ್ತಿಯಲ್ಲಿ ಜೂ.22 ಮತ್ತು 23ರಂದು ಬೆಳಗ್ಗೆ 9 ರಿಂದ ರಾತ್ರಿ 8 ಗಂಟೆವರೆಗೆ ತರಬನಹಳ್ಳಿ, ಮರುಳಿಚಿಕ್ಕನಹಳ್ಳಿ, ಟಿಬಿ ಕ್ರಾಸ್, ಹೆಸರಘಟ್ಟ, ಬಿಳಿಜಾಜಿ, ದ್ವಾರಕಾನಗರ, ಚಿಕ್ಕಬಾಣಾವರ, ಮಾರುತಿ ನಗರ, ಗಣಪತಿ ನಗರ, ಶಾಂತಿನಗರ, ಬ್ರದರ್ಸ್ ಕಾಲೋನಿ, ಕೃಷ್ಣಾ ಕಾಲೇಜು ರಸ್ತೆ, ರಾಘವೇಂದ್ರ ಲೇಔಟ್, ಸಾಸುವೆಘಟ್ಟ, ಬಜ್ಜಪ್ಪ ಲೇಔಟ್, ಗುಡ್ಡದಹಳ್ಳಿ, ದಾಸೇನಹಳ್ಳಿ, ತೋಟಗೆರೆ ಬಸವಣ್ಣ ದೇವಸ್ಥಾನ, ಹೊಸಹಳ್ಳಿ ಪಾಳ್ಯ, ಸಿಡಿಪಿಒ, ಡ್ಯಾನಿಶ್ ಫಾರ್ಮ್, ಕೆಎಫ್, ಗುಣಿ ಅಗ್ರಹಾರ, ಗಾಣಿಗರಹಳ್ಳಿ, ಕೆ.ಟಿ.ಪುರ, ಐಐಎಚ್‌ಆರ್ ಐವರಕೊಂಡಪುರ, ಸೀತಕೆಂಪನಹಳ್ಳಿ, ಲಿಂಗನಹಳ್ಳಿ, ಮಾದಪ್ಪನಹಳ್ಳಿ, ಕಾಳೇನಹಳ್ಳಿ, ಶಿವಕೋಟೆ, ಮಾವಳ್ಳಿಪುರ, ಕೊಂಡಶೆಟ್ಟಿಹಳ್ಳಿ, ಕುರುಬರಹಳ್ಳಿ, ಪಾಕೆಗೌಡನಪಾಳ್ಯ, ರಾಘವೇಂದ್ರ ಧಾಮ, ಬೈಲಕೆರೆ, ಆಚಾರ್ಯ ಕಾಲೇಜು ಮುಖ್ಯ ರಸ್ತೆ, ಅಚ್ಯುತ್ ನಗರ, ಸೋಲದೇವನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳ್ಳಲಿದೆ.

ಜೂ.10ರಿಂದ ಔಷಧೀಯ ಸಸ್ಯ ಕುರಿತ ಸಮ್ಮೇಳನ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಜೂ.16 ರಿಂದ 18ರವರೆಗೆ ಔಷಧೀಯ ಮತ್ತು ಸುಗಂಧಿತ ಸಸ್ಯಗಳ ಕುರಿತು ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದೆ.

ವಿದ್ಯಾರಣ್ಯಪುರದಲ್ಲಿರುವ ಅಕಾಡೆಮಿಯ ಪ್ರೊ.ಯು.ಆರ್.ರಾವ್ ವಿಜ್ಞಾನ ಭವನದ ಕಚೇರಿಯಲ್ಲಿ ಸಮ್ಮೇಳನ ನಡೆಯಲಿದೆ. ನಾನಾ ಪ್ರತಿಷ್ಠಿತ ಸಂಸ್ಥೆಗಳ ವಿಜ್ಞಾನಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ತಾಂತ್ರಿಕ ವಿಶೇಷ ಉಪನ್ಯಾಸಗಳನ್ನು ನೀಡಲಿದ್ದಾರೆ.

ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ತಮ್ಮ ಸಂಶೋಧನಾ ಪ್ರಬಂಧ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ. ಅತ್ಯುತ್ತಮ ಸಂಶೋಧನಾ ಪ್ರಬಂಧಗಳಿಗೆ ನಗದು ಬಹುಮಾನ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು ಜೂ.10ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ಜಾಲತಾಣದ ವಿಳಾಸ- https://kstacademy.in

ಕರ್ನಾಟಕ ಸ್ವಾಭಿಮಾನಿ ವೇದಿಕೆ ವತಿಯಿಂದ ಕಸಾಪ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಹೋರಾಟಗಾರ ಸಾ.ರಾ.ಗೋವಿಂದ್ ಅವರಿಗೆ 2026ನೇ ಸಾಲಿನ ಚಂಪಾ ಸಿರಿಗನ್ನಡ ಪ್ರಶಸ್ತಿಯನ್ನು ವಿಮರ್ಶಕ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿದರು. ನಟ ಸುಂದರ್‌ರಾಜ್. ಕಾರ್ಮಿಕ ಇಲಾಖೆಯ ಉಪ ಆಯುಕ್ತೆ ಮೀನಾ ಪಾಟೀಲ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಉಪಸ್ಥಿತರಿದ್ದರು.

ಜ್ವಲಿಸುವ ಕೆಂಡ ಹೊತ್ತ ಕಾರವಾನು

ಇಸ್ಮತ್ ಚುಗ್ತಾಯಿ ಉರ್ದು ಸಾಹಿತ್ಯದ ಅತ್ಯಂತ ಧೈರ್ಯಶಾಲಿ ಮತ್ತು ವಿವಾದಾತ್ಮಕ ಬರಹಗಾರ್ತಿಯಾಗಿ ಗುರುತಿಸಿ ಕೊಂಡವರು. ಪರಂಪರೆಯ ಸಿದ್ಧಮಾದರಿಯ ಬರಹದ ಕಡುವಿರೋಧಿಯಾದ ಇವರ ಆತ್ಮಕಥನ 'ಕಾಗ್ಜೀ ಹೈ ಪೈರಹನ್' ಪ್ರೊ.ಎಂ.ಅಸಾದುದ್ದೀನ್ ಅವರಿಂದ ಇಂಗ್ಲಿಷ್‌ಗೆ ಅನುವಾದಗೊಂಡು ಈಗ ಚೇತನಾ ತೀರ್ಥಹಳ್ಳಿಯವರ ಮೂಲಕ 'ನೆನಪಿನ ಕಾರವಾನು' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಬಂದಿದೆ.



ನೆನಪಿನ ಕಾರವಾನು; ಲೇ: ಇಸ್ಮತ್ ಚುಗ್ತಾಯಿ **ಇಂಗ್ಲಿಷ್ ಮೂಲ:** ಪ್ರೊ. ಎಂ.ಅಸಾದುದ್ದೀನ್ **ಕನ್ನಡಕ್ಕೆ:** ಚೇತನಾ ತೀರ್ಥಹಳ್ಳಿ **ಪ್ರ:** ನುಡಿ ಪುಸ್ತಕ, ಬೆಂಗಳೂರು **ಪುಟ:** 352; **ಬೆಲೆ:** 499 ರೂ.

ಸಾಂಪ್ರದಾಯಿಕ ರೀತಿಯ ಆತ್ಮಕಥನಗಳಂತೆ ಕಾಲಾನುಕ್ರಮಣಿಕೆಯಲ್ಲಿ ಇಲ್ಲಿನ ಕಥನ ಸಾಗುವುದಿಲ್ಲ, ಇಸ್ಮತ್ ತಮ್ಮ ಬದುಕಿನ ವಿವರಗಳನ್ನು ನೆನಪುಗಳು ಉಕ್ಕಿ ಬಂದಂತೆ ದಾಖಲಿಸುತ್ತ ಹೋಗಿದ್ದಾರೆ. ಆದರೂ, 15 ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಈ ಕೃತಿ ಅವರ ಜೀವನ, ಬರವಣಿಗೆಯ ದಿಸೆಯಲ್ಲಿ ಸಾಗಿದ ರೀತಿ, ಕೌಟುಂಬಿಕ ವಿವರಗಳನ್ನು ನೀಡುತ್ತದೆ. ಲೇಖಕಿಯ ಜೀವನದ ಸಮಗ್ರ ನೋಟ ಇಲ್ಲಿ ಸಿಗದೇ ಹೋದರೂ, ಉರ್ದು ಸಾಹಿತ್ಯದಲ್ಲಿ ಮಹಿಳೆಯರ ಜೀವನ- ಬರವಣಿಗೆಯ ಒಂದು ಹತ್ತಿರದ ನೋಟ ಇಲ್ಲಿ ಲಭ್ಯವಿದೆ.

1915ರಿಂದ 1991ರ ಕಾಲಘಟ್ಟದಲ್ಲಿ ಬದುಕಿದ ಇಸ್ಮತ್ ತಮ್ಮ ಬದುಕು-ಬರಹದ ಹಾದಿಯಲ್ಲಿ ಬೆಳವಣಿಗೆಗೆ ಎದುರಾಗಿ ಏನೇ ಬಂದರೂ ಧೈರ್ಯವಾಗಿ ಎದುರಿಸಿ ನಿಂತವರು. ಅವರ 'ಲಿಹಾಫ್' ಕಥೆಯ ವಿರುದ್ಧ ಅಂದಿನ ಬ್ರಿಟಿಷ್ ಸರಕಾರ ಅಶ್ಲೀಲತೆಯ ಆರೋಪ ಹೊರಿಸಿ ನ್ಯಾಯಾಲಯಕ್ಕೆಳೆದಾಗ ಅದನ್ನು ಸಮರ್ಥಿಸಿ ಗೆದ್ದವರು. ಇದರ ವಿವರವೂ ಸೇರಿದಂತೆ ಬದುಕಿನ ಹಲಕೆಲವು ಏರಿಳಿತಗಳು, ತಮ್ಮ ಬದುಕಿನಲ್ಲಿ ಪ್ರಮುಖ ಪಾತ್ರವಹಿಸಿದ ಪಾತ್ರಗಳು, ಘಟನೆಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಹೀಗಾಗಿ ಕೃತಿ ಓದಿದವರಿಗೆ ಅವರ ಕೆಚ್ಚು, ಗಟ್ಟಿತನಗಳೇ ಸ್ಫೂರ್ತಿ ಆಗುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯ ದ್ವಂದ್ವಗಳು, ಸಮಾಜ ಹಾಕಿಕೊಂಡಿರುವ ಒಳ-ಹೊರಗು ನೀತಿ ಎಲ್ಲವನ್ನೂ ಖಂಡಿಸುವಲ್ಲಿಯೂ ಅವರು ಹಿಂಜರಿದಿಲ್ಲ.

ಇದು ಕೇವಲ ಒಬ್ಬ ವ್ಯಕ್ತಿಯ ಕಥೆಯಲ್ಲ, ಮಹಿಳಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾಜದ ಸಂಕೋಲೆಗಳನ್ನು ಮುರಿದು ತನ್ನದೇ ಆದ ಧ್ವನಿಯನ್ನು ಕಂಡುಕೊಂಡ ಒಬ್ಬ ಅಪ್ರತಿಮ ಲೇಖಕಿಯ ಬಂಡಾಯದ ಸಂಕೇತ. ಇದು ಪುರುಷಶಾಹಿ ಧೋರಣೆಗೆ ವಾಹಕರಾಗುವ ಹೆಣ್ಣುಗಳು, ಸಮಾಜ ಎಲ್ಲವನ್ನೂ ಟೀಕಿಸುತ್ತದೆ, ಇದರಲ್ಲೇ ಮುದುಡಬೇಡಿ ಎಂದು ಇತರ ಹೆಣ್ಣುಗಳನ್ನೂ ಎಚ್ಚರಿಸುತ್ತದೆ. ಬಹಳಷ್ಟು ಕಡೆ ಆ ಕಾಲ ಸಾಮಾಜಿಕ, ಸಾಮುದಾಯಿಕ, ಸಾಂಸ್ಕೃತಿಕ ವಿವರಗಳೂ ದಾಖಲಾಗುತ್ತವೆ. ಪ್ರೊ. ಅಸಾದುದ್ದೀನ್ ಅವರು ನೀಡಿರುವ ಪ್ರಸ್ತಾವನೆ ಲೇಖಕಿ ಹಾಗೂ ಕೃತಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಪೂರಕವಾಗಿದೆ.

ಕಾಗಜೀ ಹೈ ಪೈರಹನ್ ಎಂದರೆ ಮುದುರಿ ಬಿಡಬಹುದಾದ ಕಾಗದದ ಅಂಗಿ ಎಂದರ್ಥ. ಕಾಗದ ಮುದುರಬಹುದು, ಆದರೆ ಅಕ್ಷರಗಳಲ್ಲ. ಅವು ಜ್ವಲಿಸುವ ಕೆಂಡದಂಥ ಸತ್ಯವಾಗಿ ಉಳಿಯುವಂಥವು. ಇಂಥ ಸತ್ಯವನ್ನು ಅಕ್ಷರಗಳಲ್ಲಿ ಕೊಟ್ಟಿರುವ ಲೇಖಕಿಯ ಒಳ ತುಮುಲಗಳು, ವಿಷಾದ, ಪ್ರವಾಹಕ್ಕೆದುರಾಗಿ ಈಜುವ ಗುಣ, ಹರಿತ ಬಾಷೆ, ಚುರುಕು ನಿರೂಪಣೆ ಎಲ್ಲವನ್ನೂ ಕನ್ನಡದ್ದೇ ಎಂಬಂತೆ ಅನುವಾದಿಸಿರುವ ಚೇತನಾ ತೀರ್ಥಹಳ್ಳಿ ಒಳ್ಳೆಯ ಕೃತಿಯೊಂದನ್ನು ಕನ್ನಡ ಸಾಹಿತ್ಯಲೋಕಕ್ಕೆ ಕೊಟ್ಟಿದ್ದಾರೆ. ■

📖 ನ್ಯೂ ಬುಕ್

ಅವಳು ಕಂಡರಿದ ಅವನ ಸಾಲು

ಫ್ರೆಂಚ್ ಕವಿ ಬೋದಿಲೇರ್ ಜಗತ್ತಿನ ಕವಿಗಳನ್ನೆಲ್ಲ ಅತ್ಯಂತ ಪ್ರಭಾವಿಸಿದವನು. ತನ್ನದೇ ಜನರಿಂದ ಶಾಪಗ್ರಸ್ತ ಕವಿ ಎನಿಸಿಕೊಂಡ ಈ ಕವಿಯನ್ನು ಈ ಹಿಂದೆ ಪಿ.ಲಂಕೇಶರು ಕನ್ನಡಕ್ಕೆ ತಂದಿದ್ದರು. ಬಳಿಕ ಯೋಗಪ್ಪನವರೂ ಅವನ ಕವನಗಳನ್ನು ಅನುವಾದಿಸಿದ್ದರು. ಈಗ ಪ್ರತಿಭಾ ನಂದಕುಮಾರ್ 'ಶಾಪಗ್ರಸ್ತ ಕವಿ' ಎಂಬ ಶೀರ್ಷಿಕೆಯಲ್ಲಿ ಬೋದಿಲೇರನ ಕವನಗಳನ್ನು ಮತ್ತೆ ಕನ್ನಡಕ್ಕೆ ಅನುವಾದಿಸಿದ್ದಾರೆ.



ಶಾಪಗ್ರಸ್ತ ಕವಿ ಬೋದಿಲೇರ್; ಅನು: ಪ್ರತಿಭಾ ನಂದಕುಮಾರ್ **ಪ್ರ:** ಎಂ.ಮುನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು **ಪುಟ:** 90; **ಬೆಲೆ:** 100 ರೂ.

'ಸದಾ ಕುಡಿದು ಮತ್ತನಾಗಿರು' ಎನ್ನುತ್ತ ವೈನ್, ಕಾವ್ಯ, ಶೀಲ ಯಾವುದಾದರೂ ಸರಿಯೇ ಮತ್ತಿನಲ್ಲಿರು ಎಂದ ಬೋದಿಲೇರನ ಜಗತ್ಪ್ರಸಿದ್ಧ 'ಸದಾ ಮತ್ತನಾಗಿರು' ಕವನದಿಂದ ತೊಡಗಿ ಅವನ 30 ಕವನಗಳು ಇಲ್ಲಿವೆ. ಹೆಣ್ಣಿನ ದೇಹ ಸೌಂದರ್ಯದ ಕಡು ಮೋಹದಲ್ಲಿ ಅವಳ ಆತ್ಮದ ಚೆಲುವನ್ನು ಕಾಣುವ, ಕೊಳಕಿನಲ್ಲಿಯೂ ಸೌಂದರ್ಯ ಗುರುತಿಸುವ ನಿಗಿನಿಗಿಸುವ ಕವನಗಳನ್ನು ನೀಡಿದವನು ಬೋದಿಲೇರ್. ಅವನ ಬಗೆಗೆ ಪ್ರತಿಭಾ ನಂದಕುಮಾರ್ ಕೃತಿಯ ಆರಂಭದಲ್ಲಿ ಬರೆದ ಮಾತುಗಳು ಹಾಗೂ ಕೃತಿಯ ಅಂತ್ಯದಲ್ಲಿ ಕೊಟ್ಟಿರುವ ಬೋದಿಲೇರನ ಟಿಪ್ಪಣಿಗಳು ಅವನ ಕಾವ್ಯವನ್ನು ಇನ್ನಷ್ಟು ಅರಿಯಲು ನೆರವಾಗುತ್ತವೆ. 150 ವರ್ಷಗಳ ಬಳಿಕವೂ ಈ ಕವಿ ಏಕೆ ಜಗತ್ತಿನ ಭಾಷೆಗಳಿಂದ ಅನುವಾದಿಸಲ್ಪಡುತ್ತಾನೆ, ಮತ್ತೆ ಮತ್ತೆ ಕಾವ್ಯಪ್ರಿಯರಿಂದ ಓದಿಸಿಕೊಳ್ಳುತ್ತಾನೆ ಎಂಬುದಕ್ಕೆ ಉತ್ತರ ಈ ಕೃತಿ. ಅಳಿಸಲಾರದ ಕಾವ್ಯ ಬರೆದುಹೋದ ಆ ಕವಿಯನ್ನು ಒಂದು ಹೆಣ್ಣು ಕಂಡ ಬಗೆಯೂ ಇದು ಹೌದು. ■

ಚರಿತ್ರೆಯ ಪುಟಗಳು

ಲೇಖಕಿ ಗೀತಾ ಕುಂದಾಪುರ ತಮ್ಮ 'ಕಲ್ಲುಗಳೂ ಕಥೆ ಹೇಳುವ ಕಾಂಬೋಡಿಯಾ ಮತ್ತು ವಿಸ್ಮಯದ ವಿಯೆಟ್ನಾಂ' ಪ್ರವಾಸಕಥನದಲ್ಲಿ ಆಗ್ನೇಯ ಏಷ್ಯಾದ ಎರಡು ದೇಶಗಳ ಬಗ್ಗೆ ಬರೆದಿದ್ದಾರೆ. ನೀರು, ಸಮುದ್ರ, ದ್ವೀಪಗಳಿಂದಾವೃತವಾದ ವಿಯೆಟ್ನಾಂನ ಹಚ್ಚಹಸಿರು ನಿಸರ್ಗ, ನೀರಿನ ನಡು ನಡುವೆ ಇರುವ ಸುಣ್ಣದ ಕಲ್ಲಿನ ಬೆಟ್ಟಗಳು, ಮರಗಳಿಗೆ ಪುಟ್ಟ ದ್ವೀಪಗಳು, ನಿಗೂಢ ಗುಹೆಗಳಿರುವ ಹಲೋಂಗ್ ಬೇ ಮೊದಲಾದವುಗಳ ಸೌಂದರ್ಯವನ್ನು ಲೇಖಕಿ ಅಕ್ಷರಗಳಲ್ಲಿ ಹಿಡಿದುಕೊಟ್ಟಿದ್ದಾರೆ. ಪ್ರವಾಸಿಗರ ಪಾಲಿಗೆ ಇತಿಹಾಸದ ಪುಸ್ತಕವೇ ಆಗಿರುವ ಕಾಂಬೋಡಿಯಾದ ಚರಿತ್ರೆಯ ಪುಟಗಳೂ ಇಲ್ಲಿ ತೆರೆದುಕೊಳ್ಳುತ್ತವೆ. ■



ಕಲ್ಲುಗಳೂ ಕಥೆ ಹೇಳುವ ಕಾಂಬೋಡಿಯಾ ಮತ್ತು ವಿಸ್ಮಯದ ವಿಯೆಟ್ನಾಂ; ಲೇ: ಗೀತಾ ಕುಂದಾಪುರ **ಪ್ರ:** ತೇಜು ಪಬ್ಲಿಕೇಷನ್ಸ್, ಬೆಂ. **ಪುಟ:** 124; **ಬೆಲೆ:** 150 ರೂ.

ಪುಸ್ತಕ ಟಿಪ್ಪಣಿ

ಶಿಕ್ಷಣದ ಒಳನೋಟ



ಶಿಕ್ಷಕರಿಗೆ, ಶಿಕ್ಷಣ ತಜ್ಞರಿಗೆ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣದ ಸಮಾಜಶಾಸ್ತ್ರದಲ್ಲಿ ಆಸಕ್ತಿ ಹೊಂದಿರುವ ಸಾಮಾನ್ಯ ಓದುಗರಿಗೂ ಉಪಯುಕ್ತ ವಾಗುವಂತಹ ಲೇಖನಗಳು 'ಸವಾಲುಗಳ ನಡುವೆ ಶಿಕ್ಷಣ' ಪುಸ್ತಕದಲ್ಲಿವೆ. ನಮ್ಮ ಕಾಲದಲ್ಲಿ ನಡೆಯುತ್ತಿರುವ ಬದಲಾವಣೆಗಳು ಶಿಕ್ಷಣಕ್ಕೆ ಹೊಸ ಸವಾಲುಗಳನ್ನು ತಂದೊಡ್ಡಿವೆ. ಅನೇಕ ಬದಲಾವಣೆಗಳು ಹಳೆಯ ರೀತಿ-ನೀತಿಗಳನ್ನು ಪ್ರಶ್ನಿಸುತ್ತವೆ; ಕೆಲವು ಬದಲಾವಣೆಗಳು ಹೊಸ ಸಮಸ್ಯೆಗಳನ್ನೂ ಉಂಟುಮಾಡುತ್ತಿವೆ. ಈ ಪುಸ್ತಕ ಇಂತಹ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. **ಸವಾಲುಗಳ ನಡುವೆ ಶಿಕ್ಷಣ- ಭಾಗ 1; ಲೇ:** ಅಮನ್ ಮದಾನ್; **ಪ್ರ:** ಅಮೂಲ್ಯ ಪುಸ್ತಕ, ಬೆಂ; **ಪುಟ:** 264; **ಬೆಲೆ:** 350 ರೂ. ■

ಮನಸಿಗಿಳಿಯುವ ಕಥೆಗಳು



ಇಹಲೋಕವನ್ನು ತ್ಯಜಿಸಿರುವ ರೇಣುಕಾ ಶರಣ ಅವರು ಬರೆದಿರುವ ಸಣ್ಣ ಕಥೆಗಳನ್ನು ಒಟ್ಟುಗೂಡಿಸಿರುವ ಸುಲೋಚನಾ ಸಂಗನಬಸವ ಮಟ್ಟಿ 'ಅವ್ವ ಮತ್ತು ಇತರ ಕಥೆಗಳು' ಹೆಸರಿನಲ್ಲಿ ಕಥಾ ಸಂಕಲನ ಪ್ರಕಟಿಸಿದ್ದಾರೆ. 'ಅನಿರೀಕ್ಷಿತ ಮಿಲನ', 'ಕೂಸಿನ ಕನಸು', 'ಗೊಂಬೆ ಮಾತಾಡಿತು' ಸೇರಿದಂತೆ ಒಟ್ಟು ಆರು ಕಥೆಗಳು ಈ ಸಂಕಲನದಲ್ಲಿವೆ. ಸರಳ ಭಾಷೆ ಹಾಗೂ ಆಕರ್ಷಕ ನಿರೂಪಣೆಯಿಂದ ಕಥೆಗಳನ್ನು ಓದುವಾಗ ದೃಶ್ಯಗಳು ಕಣ್ಣಿಗೆ ಕಟ್ಟಿದಂತಾಗುತ್ತವೆ. **ಅವ್ವ ಮತ್ತು ಇತರ ಕಥೆಗಳು; ಲೇ:** ರೇಣುಕಾ ಶರಣ; **ಸಂ.-ಪ್ರ:** ಡಾ. ಸುಲೋಚನಾ ಸಂಗನಬಸವ ಮಟ್ಟಿ, ಧಾರವಾಡ; **ಪುಟ:** 80; **ಬೆಲೆ:** 100 ರೂ. ■

ಪೆಪ್ಪರಮೆಂಟಿನಂಥ ಕಥೆಗಳು

ಮಕ್ಕಳ ಮುಖ ಮನಸ್ಸುಗಳನ್ನು ಅರಳಿಸುವ, ಎಂ.ಎಸ್. ನರಸಿಂಹಮೂರ್ತಿಯವರ 'ಬಂಟಿ ಹೇಳಿದ ಕತೆಗಳು' ಮಕ್ಕಳ ಕಥಾ ಸಂಕಲನದಲ್ಲಿ 50 ಪುಟ್ಟ ಕಥೆಗಳಿವೆ. ಮಕ್ಕಳು ಅವರ ಬಾಲ್ಯವನ್ನು ಸಂತೋಷಿಸುವ ಮತ್ತು ದೊಡ್ಡವರೂ ಕೆಲವು ಹೊತ್ತು ಅವರ ಬಾಲ್ಯಕ್ಕೆ ಹಿಂತಿರುಗುವ ಸುಖವನ್ನು ಪ್ರಸಾದಿಸುವ ಸವಿ ಪೆಪ್ಪರುಮೆಂಟುಗಳಂತಹ ಕಥೆಗಳು ಇಲ್ಲಿವೆ. ಹಾಸ್ಯದ ಜತೆಗೆ ಸಾಮಾಜಿಕ, ಸಾಂಸ್ಕೃತಿಕ ಅರಿವು ಮೂಡಿಸುವುದು ಲೇಖಕರ ಹೆಚ್ಚುಗಾರಿಕೆ. **ಬಂಟಿ ಹೇಳಿದ ಕತೆಗಳು; ಲೇ:** ಎಂ.ಎಸ್. ನರಸಿಂಹಮೂರ್ತಿ; **ಪ್ರ:** ಸಂಸ್ಕೃತಿ ಪಬ್ಲಿಷಿಂಗ್ ಹೌಸ್, ಮೈಸೂರು; **ಪುಟ:** 168; **ಬೆಲೆ:** 200 ರೂ. ■

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕಟಕ ರಾಶಿಯವರಿಗೆ ಧನ ಯೋಗ

ಮೇಷ: ಈಗಾಗಲೇ ನಿಮ್ಮಿಂದ ನಡೆದ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿ ಯಾವುದೇ ಅವ್ಯವಹಾರ ನಡೆಯದಂತೆ ಜಾಗ್ರತೆ ವಹಿಸಿ. ತಂದೆಯವರ ಮಾತಿನಂತೆ ನಡೆಯುವುದು ಶ್ರೇಯಸ್ಕರ. **ಅದೃಷ್ಟ ಸಂಖ್ಯೆ** 7, **ಅದೃಷ್ಟ ಬಣ್ಣ** ನೀಲಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಹಿಂದಿನಿಂದ ಬಾಕಿ ಇರುವ ಮನೆದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು. ಧಾರ್ಮಿಕ ಕಾರ್ಯಕ್ರಮದ ನಿಮಿತ್ತ ಸಹೋದರರ ಸಮಾಗಮವಾಗಲಿದೆ. **ಅದೃಷ್ಟ ಸಂಖ್ಯೆ** 1, **ಅದೃಷ್ಟ ಬಣ್ಣ** ಹಳದಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಉದ್ಯೋಗದ ಅನಿವಾರ್ಯತೆಗಳನ್ನು ಬಿಟ್ಟು ದೇಹದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಒಳ್ಳೆಯದು. ವೈವಾಹಿಕ ಜೀವನದಲ್ಲಿ ಬದಲಾವಣೆಯೊಂದನ್ನು ಕಾಣುವಿರಿ. **ಅದೃಷ್ಟ ಸಂಖ್ಯೆ** 5, **ಅದೃಷ್ಟ ಬಣ್ಣ** ಕೆಂಪು
(ಕ, ಕಿ, ಕು, ಘ, ಙ, ಚ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಸರಕಾರಿ ಕಾಮಗಾರಿಯ ಗುತ್ತಿಗೆದಾರರಿಗೆ ದೊಡ್ಡ ಯೋಜನೆಯೊಂದು ಹುಡುಕಿಕೊಂಡು ಬರಲಿದೆ. ನಾಲ್ಕಾರು ದಿನಗಳ ಹಿಂದೆ ಪ್ರಾರಂಭಿಸಿದ್ದ ಒಂದು ಯೋಜನೆ ನಿಶ್ಚಿತ ಹಂತ ತಲುಪಲಿದೆ. **ಅದೃಷ್ಟ ಸಂಖ್ಯೆ** 8, **ಅದೃಷ್ಟ ಬಣ್ಣ** ಆಕಾಶ ನೀಲಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಸಹವರ್ತಿಗಳ ಜತೆಗೆ ವ್ಯಾವಹಾರಿಕವಾಗಿ ಇರುವುದು ಸರಿಯಲ್ಲ, ಮಾನವೀಯತೆಯನ್ನು ಬೆಳೆಸಿಕೊಳ್ಳಿ. ಅನುಮಾನಾಸ್ಪದ ಘಟನೆಗಳು ನಡೆದರೂ ಯಶ ನಿಮ್ಮದೇ. **ಅದೃಷ್ಟ ಸಂಖ್ಯೆ** 6, **ಅದೃಷ್ಟ ಬಣ್ಣ** ಕಪ್ಪು
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ವಂಶಪಾರಂಪರ್ಯದಿಂದ ಬಂದ ವ್ಯವಹಾರ ಮತ್ತಷ್ಟು ಏಳಿಗೆ ಕಾಣಲಿದೆ. ವ್ಯಾವಹಾರಿಕ ಸಲಹೆಗಳಿಗೆ ಆದ್ಯತೆ ದೊರೆಯಲಿದೆ. ಕಷ್ಟವನ್ನು ಎದುರಿಸುವ ಧೈರ್ಯವನ್ನು ತಂದುಕೊಳ್ಳಿ. **ಅದೃಷ್ಟ ಸಂಖ್ಯೆ** 4, **ಅದೃಷ್ಟ ಬಣ್ಣ** ಕೇಸರಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಆದರ್ಶ ಮತ್ತು ತತ್ವಗಳ ಜೊತೆಗೆ ಹಿರಿಯರ ಉತ್ತಮ ಅನುಭವ ಮತ್ತು ಸಲಹೆಗಳನ್ನು ಅಳವಡಿಸಿಕೊಂಡಲ್ಲಿ ಯೋಚಿಸಿದ ಕೆಲಸ ಸಂಪೂರ್ಣವಾಗುವುದು. ನೂತನ ವಾಹನ ಖರೀದಿಸುವಿರಿ. **ಅದೃಷ್ಟ ಸಂಖ್ಯೆ** 2, **ಅದೃಷ್ಟ ಬಣ್ಣ** ಹಸಿರು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಸ್ವಯಂಕೃತ ಅಪರಾಧಗಳಿಂದ ವ್ಯವಹಾರದಲ್ಲಿ ಹಿನ್ನಡೆ ಉಂಟಾಗುವ ಲಕ್ಷಣ ತೋರುವುದು. ಸ್ವಂತ ಉದ್ಯೋಗ ಘಟಕವನ್ನು ಹೊಂದಿದ್ದರೆ ಕಾರ್ಮಿಕರ ಉತ್ತಮ ಬೆಂಬಲ ಲಭ್ಯವಾಗಲಿದೆ. **ಅದೃಷ್ಟ ಸಂಖ್ಯೆ** 9, **ಅದೃಷ್ಟ ಬಣ್ಣ** ಬೂದು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ನಿರೀಕ್ಷೆಗೆ ಪೂರಕ ಪ್ರಚೋದನೆ ಲಭಿಸಲಿದೆ. ಅನವಶ್ಯಕವಾಗಿ ಕಾಲಹರಣ ಮಾಡಬೇಕಾಗುವುದು. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವಿರಿ. ವಿವಾಹದ ವಿಷಯಗಳು ಚರ್ಚೆಯಾಗುವುದು. **ಅದೃಷ್ಟ ಸಂಖ್ಯೆ** 7, **ಅದೃಷ್ಟ ಬಣ್ಣ** ಕಿತ್ತಳೆ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಕೌಟುಂಬಿಕ ವಿಷಯಗಳನ್ನು ಹೆಂಡತಿಯೊಡನೆ ಚರ್ಚಿಸಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಎಣ್ಣೆ, ಬೇಳೆ-ಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮ. **ಅದೃಷ್ಟ ಸಂಖ್ಯೆ** 5, **ಅದೃಷ್ಟ ಬಣ್ಣ** ಗುಲಾಬಿ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ನಿದ್ದೆಯ ಅಭಾವದಿಂದ ಅನಾರೋಗ್ಯ ಉಂಟಾಗಬಹುದು. ಸಹೋದ್ಯೋಗಿಯೊಬ್ಬನ ನೆರವಿನಿಂದ ಕಾರ್ಯಗಳು ಪೂರ್ಣಗೊಳ್ಳಲಿವೆ. ಅವಶ್ಯಕವಿದ್ದಲ್ಲಿ ವೈದ್ಯರ ಭೇಟಿ ಮಾಡಿ. **ಅದೃಷ್ಟ ಸಂಖ್ಯೆ** 3, **ಅದೃಷ್ಟ ಬಣ್ಣ** ಖಾಕಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಪ್ರಾಚೀನ ವಸ್ತುಗಳ ಸಂಗ್ರಹದಂತಹ ವಿಚಾರದಲ್ಲಿ ಆಸಕ್ತಿ ಮೂಡಲಿದೆ. ತಾಂತ್ರಿಕ ಪದವಿಧರರಿಗೆ ಹೆಚ್ಚಿನ ಬೇಡಿಕೆ ಇದ್ದು ಒಳ್ಳೆಯ ಅವಕಾಶಗಳು ಒದಗಿ ಬರಲಿವೆ. **ಅದೃಷ್ಟ ಸಂಖ್ಯೆ** 1, **ಅದೃಷ್ಟ ಬಣ್ಣ** ಸುವರ್ಣ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ವಿಜಯಬಂಧ - 7983

1	■	2	3	■	4		■	5
6		■		■		■	7	
	■	8		9		10	■	
11	12		■		■	13	14	
■		■	■	■	■	■		■
15		16	■	17	■	18		19
	■	20	21		22		■	
23		■		■		■	24	
	■	25		■	26		■	

ಎಡದಿಂದ ಬಲಕ್ಕೆ
2 ಪತಾಕೆ ಹಾರಿಸಿದರೂ ಏರಿದ ಬಿಸಿ 2
4 ನೆತ್ತಿಯ ಮೇಲೆ ತೂಗಾಡುತ್ತಿರುವ ಕತಾರಿ 2
6 ಹರಾಜು ಮಾಡಲು ಜರೂರು ಸಹಿ ಮಾಡಿ 2
7 ಆಡುಂಬೊಲ ತೋರುತ್ತಿರುವ ಅಪ್ಪ ಹಾಕಿದ ಮರ 2
8 ಶರೀರದ ಅವಯವಗಳಂತೆ ಸಂವಿಧಾನ ರೂಪುಗೊಂಡ ಬಗೆ 5
11 ನಾರದರು ನುಡಿಸಿದ ಒಳ್ಳೆಯ ಸಂಗೀತದ ಧ್ವನಿ 3
13 ಮರ ಬಟ್ಟೆ ಮುಂತಾದವುಗಳ ಮಡಿಕೆ 3
15 ಕಂಕ ಕತೆ ಓದುವಾಗ ಬಳಸಿದ ಬಾಚಣಿಗೆ 3
18 ಸರಕು ಹೊತ್ತು ಬಂದವನು ಮಾಡಿದ ವಿನೋದ 3
20 ನವಿರಾದ ದಾರ ಕೊಡುವಂತೆ ಕೋರಿ ಬೇಡಿಕೆ ಸಲ್ಲಿಸಿದಾತ 5
23 ಮನೆಗಳ ಶ್ರೇಣಿಯನ್ನು ಹೊಂದಿದ ಕೇರಿ 2
24 ಗುಂಪಿನ ನಾಯಕನಂತಹ ಮುಖಂಡ ದಾದಾಗಿರಿ ಮಾಡಿದ 2
25 ಛತ್ರಕ್ಕೆ ಬಂದು ಕುಳಿತ ಪುನೀತನಾದ ಮಗ 2
26 ಹೆಬ್ಬಾಗಿಲಿಗೆ ಹೊಂದಿಕೊಂಡಂತೆ ಅಳವಡಿಸಿದ ಸಣ್ಣಬಾಗಿಲು 2

ಮೇಲಿನಿಂದ ಕೆಳಕ್ಕೆ
1 ಉತ್ತರಿಸುವಂತೆ ಪುನಃ ಹಿಂದಕ್ಕೆ ಬಂದ ಶಬ್ದ 4
3 ಮಹಾವಿಷ್ಣು ಪವಡಿಸಲು ಶಯನವಾದ ಹಾವು 3
4 ಕವನ ಬರೆಯುವಾತ ತೊಟ್ಟ ರಕ್ಷಣಾ ಹೊದಿಕೆ 3
5 ನೀರಿನಲ್ಲಿ ಜೀವಿಸುವ ಮೀನು ಮುಂತಾದ ಜೀವಿ 4
8 ಅನ್ನದಿದ್ದರೂ ಬಯಸುವ ಸೊಬಗು 2
9 ಪೂರ ಯತ್ನ ಮಾಡಿ ತಂದ ಅನರ್ಘ್ಯ ಹವಳ 2
10 ಮನೆ ಪಕ್ಕದಲ್ಲಿಯೇ ವಾಸಿಸಲು ಇದೇ ಕಾರಣ 2
12 ಸಂಕಟದ ಸಮಯದಲ್ಲೂ ಮಾಡಿದ ರಂಗಪ್ರಯೋಗ 3
14 ಕಚೇರಿಯಲ್ಲಿ ದಪ್ಪನಾದ ಕಡತಗಳ ಕಟ್ಟು 3
15 ಅಫ್ಘಾನಿಸ್ತಾನದಲ್ಲಿನ ಗಾಂಧಾರಿ ಹುಟ್ಟೂರು 4
16 ಸಂತ ಮತ್ತೆ ಬಂದಾಗಲೂ ಆವರಿಸಿದ ಕತ್ತಲೆ 2
17 ಸೋತವನಿಗೆ ಕೋವಿ ಅಗ್ಗದ ಬೆಲೆಯಲ್ಲಿ ಸಿಕ್ಕಿತು 2
18 ಸಮರದಲ್ಲಿ ಜಯಿಸಿ ತಂದ ಹಾರ 2
19 ಸಮುದ್ರದ ಆದಾಯ ಹಂಚಿಕೊಂಡ ಸಮಾಜ 4
21 ನಕ್ಷೆ ಬರೆದಾಗ ಕಾಣುತ್ತಿದ್ದ ತಾರೆ 3
22 ರಕ್ತ ಹಂಚಿಕೊಂಡ ಆದಿ ಬಂಧು 3

ವಿಜಯಬಂಧ | 7982

ಎಡದಿಂದ ಬಲಕ್ಕೆ: 1.ಮಜ್ಜನ 3.ಸಹನೆ 4.ವಸಂತ 6.ತಪನ 7.ಸುರಪಾನ 9.ದಿವಾಕರ 12.ನಿವಾರಕ 15.ಮರಕತ 17.ರಸಾಲ 18.ಗಟ್ಟಿಗ 19.ಮಹಂತ 20.ತರಂಗ.

ಮೇಲಿನಿಂದ ಕೆಳಕ್ಕೆ: 1.ಮನತನ 2.ನವನದಿ 3.ಸಮರ 5.ತವಕ 7.ಸುಜ್ಞಾನಿ 8.ಪಾಮರ 10.ವಾನರ 11.ರಜತ 13.ವಾಲಗ 14.ಕರಗತ 15.ಮಲಮಗ 16.ಕಡತ

ಅ.ನಾ. ಪ್ರಹ್ಲಾದರಾವ್

ಮುರಿದು ಬಿದ್ದ ಸ್ಲ್ಯಾಬ್ ಸರಿಪಡಿಸುವ ಕಾರ್ಯವಾಗಿಲ್ಲ | ಆತಂಕ ಹುಟ್ಟಿಸುವ ಕೇಬಲ್‌ಗಳು

ಫುಟ್‌ಪಾತ್ ನಡಿಗೆ: ಹೆಜ್ಜೆಹೆಜ್ಜೆಗೂ ಭೀತಿ!

■ **ಬಿ.ಎನ್.ಧನಂಜಯ** ಬೆಂಗಳೂರು
dhananjaya.gowda@timesofindia.com

ಒಂದೆಡೆ ಚರಂಡಿ ಸ್ವಚ್ಛತೆಗಾಗಿ ತೆರೆದಿರುವ, ಹೆಜ್ಜೆಯಿಟ್ಟರೆ ಎಲ್ಲಿ ಮುರಿದು ಬೀಳುತ್ತದೆಯೋ ಎಂಬ ಸ್ಥಿತಿಯಲ್ಲಿರುವ ಸ್ಲ್ಯಾಬ್‌ಗಳು... ಮತ್ತೊಂದೆಡೆ ಫುಟ್‌ಪಾತ್‌ಗೆ ಹೊಂದಿಕೊಂಡಿರುವ ವಿದ್ಯುತ್ ಹಾಗೂ ಸಿಗ್ನಲ್ ಕಂಬಗಳು... ಅಪಾಯಕಾರಿಯಾಗಿ ಅವುಗಳನ್ನು ಸುತ್ತಿಕೊಂಡಿರುವ ವೈರ್‌ಗಳ ಜಾಲ...ಇದು ಸಿಲಿಕಾನ್ ಸಿಟಿಯ ಫುಟ್‌ಪಾತ್‌ಗಳ ಸ್ಥಿತಿ!

ನಗರದ ಪಾದಚಾರಿ ಮಾರ್ಗಗಳಲ್ಲಿ ಹೆಜ್ಜೆ ಇಡುವುದೆಂದರೆ ಅಕ್ಷರಶಃ ಸಾಹಸ ಕ್ರೀಡೆಯೇ ಆಗಿದೆ. ನಗರದ ಪ್ರಮುಖ ರಸ್ತೆಗಳ ಫುಟ್‌ಪಾತ್‌ಗಳು ಸದ್ಯ ಸಾರ್ವಜನಿಕರ ಪಾಲಿಗೆ ಸುಗಮ ಹಾದಿಯಾಗುಳಿದಿಲ್ಲ, ಬದಲಿಗೆ ಅಪಾಯದ ಕಂದಕಗಳಾಗಿ ಮಾರ್ಪಟ್ಟಿವೆ.

ನಗರದ ಹಲವೆಡೆ ಪಾದಚಾರಿ ಮಾರ್ಗದಲ್ಲಿ ಚರಂಡಿ ಸ್ವಚ್ಛತೆಗಾಗಿ ತೆಗೆದ ಸಿಮೆಂಟ್ ಸ್ಲ್ಯಾಬ್‌ಗಳನ್ನುಹಾಗೇ ಬಿಡಲಾಗಿದ್ದು, ಆಳವಾದ ಚರಂಡಿಗಳು ಬಾಯ್ತೆರೆದು ಕಾಯುತ್ತಿವೆ. ಇನ್ನೊಂದೆಡೆ ದಶಕಗಳಷ್ಟು ಹಳೆಯದಾದ ಸ್ಲ್ಯಾಬ್‌ಗಳಲ್ಲಿ ಕೆಲವು ಮುರಿದು ಬಿದ್ದರೆ, ಇನ್ನೂ ಕೆಲವು ಬಿರುಕು ಬಿಟ್ಟು, ಪಾದಚಾರಿಗಳು ಆತಂಕದಲ್ಲೇ ಹೆಜ್ಜೆಯಿಡುವಂತಾಗಿದೆ. ಮಲ್ಲೇಶ್ವರಂನ ಸಂಪಿಗೆ ರಸ್ತೆ, ಕಸವನಹಳ್ಳಿ, ಚಾಮರಾಜಪೇಟೆ, ಕೆ.ಆರ್.ಮಾರುಕಟ್ಟೆ, ಚಿಕ್ಕಪೇಟೆ, ಜೆಡಿಎಸ್ ಕಚೇರಿ ರಸ್ತೆ, ಯಶವಂತಪುರ ಮೆಟ್ರೊ ನಿಲ್ದಾಣದ ಸಮೀಪ, ಮಹಾಲಕ್ಷ್ಮಿ ಲೇಔಟ್ ಮೆಟ್ರೊ ನಿಲ್ದಾಣದ ಬಳಿ, ರಾಜಾಜಿನಗರದ ಹೊಂಬೇಗೌಡ ಕಾಲೇಜು ರಸ್ತೆ, ಮೆಜೆಸ್ಟಿಕ್ ಸೇರಿದಂತೆ ನಾನಾ ಕಡೆಗಳಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುತೇಕ ನಿತ್ಯ ಹೆಚ್ಚು ಜನಸಂಚಾರವಿರುವ ನಗರದ ಹೃದಯಭಾಗದಲ್ಲಿಯೇ ಇಂತಹ ಅವ್ಯವಸ್ಥೆಯನ್ನು ಹೆಚ್ಚು ಕಾಣಬಹುದಾಗಿದೆ. ಇನ್ನು ಅನೇಕ ಕಡೆಗಳಲ್ಲಿ ಚರಂಡಿ ಸ್ವಚ್ಛತೆಯ ಕೆಲಸಗಳು ಹಗಲಿನಲ್ಲಿಯೇ ನಡೆಯುತ್ತಿವೆ. ಚರಂಡಿಗಳಲ್ಲಿ ತೆಗೆದ ಹೂಳನ್ನು ರಸ್ತೆಗೆ ಸುರಿಯಲಾಗುತ್ತಿದೆ. ಅದು ಅನೇಕ ದಿನಗಳ ಕಾಲ ಅಲ್ಲೇ ಬಿದ್ದಿರುತ್ತದೆ. ಇತ್ತ ಕೆಲಸವಾದ ಕೂಡಲೇ ಸ್ಲ್ಯಾಬ್‌ಗಳನ್ನು ಮುಚ್ಚುವುದಿಲ್ಲ, ಇದರಿಂದ ವಾಹನ ಸಂಚಾರಕ್ಕೂ ಅಡಚಣೆ ಉಂಟಾಗುತ್ತದೆ.

''ಮಳೆಗಾಲದಲ್ಲಿ ಫುಟ್‌ಪಾತ್‌ಗಳಲ್ಲಿ ಸಂಚರಿಸುವುದೇ ಅಪಾಯಕಾರಿಯಾಗಿದೆ. ಬೆಳಗ್ಗೆ, ಸಂಜೆ ವಾಯುವಿಹಾರಕ್ಕೆ ಹೋಗುವಾಗ, ಕಚೇರಿ-ಮನೆಗೆ ಅವಸರದಲ್ಲಿ ಹೋಗುವಾಗ ಮಾರ್ಗವನ್ನು ಗಮನಿಸದೆ ಹೆಜ್ಜೆಯಿಟ್ಟರೆ ಚರಂಡಿ ಪಾಲಾಗುವುದು ಗ್ಯಾರಂಟಿ. ಹಗಲಿನಲ್ಲಿಯೇ ಇಂತಹ ಕಳವಳಗಳು ಇರುವಾಗ ಇನ್ನು ರಾತ್ರಿಯ ಕಥೆ ಏನು?'' ಎನ್ನುತ್ತಾರೆ ನಾಗರಿಕರು.

ವಿದ್ಯುತ್ ಕಂಬಗಳಲ್ಲಿ ನೇತಾಡುವ ವೈರ್, ಕೇಬಲ್

ಪಾದಚಾರಿ ಮಾರ್ಗಗಳ ಕಥೆ ಒಂದಾದರೆ, ಪಕ್ಕದಲ್ಲಿರುವ ವಿದ್ಯುತ್, ಸಿಗ್ನಲ್ ಕಂಬಗಳದ್ದು ಇನ್ನೊಂದು ಕಥೆ. ವಿದ್ಯುತ್, ಇಂಟರ್ನೆಟ್ ಮತ್ತು ಟಿವಿ ಕೇಬಲ್‌ಗಳು ಸುತ್ತಿಕೊಂಡು ಕೆಳಗೆ ಬಿದ್ದಿವೆ. ರಸ್ತೆಯುದ್ದಕ್ಕೂ ಹಾದು ಹೋಗಿರುವ ಈ ವೈರ್‌ಗಳು ಪಾದಚಾರಿಗಳ ಕಾಲಿಗೆ ಸಿಲುಕುವಂತಿದೆ ಮತ್ತು ನಡೆಯುವಾಗ ತಾಕುವಂತಿವೆ. ಯಾವ ವೈರ್‌ನಲ್ಲಿ ವಿದ್ಯುತ್ ಪ್ರವಹಿಸುತ್ತಿದೆಯೋ, ಯಾವುದು ನಿಷ್ಕ್ರಿಯವಾಗಿದೆಯೋ ತಿಳಿಯದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಳೆಗಾಲದಲ್ಲಿ ಹೆಚ್ಚಿದ ಭೀತಿ

ಸದ್ಯ ನಗರದಲ್ಲಿ ಮಳೆಗಾಲ ಆರಂಭವಾಗಿದೆ. ಜೋರು ಮಳೆ ಬಂದಾಗ ಚರಂಡಿಗಳು ತುಂಬಿ ಹರಿದು ರಸ್ತೆ ಹಾಗೂ ಪಾದಚಾರಿ ಮಾರ್ಗಗಳ ನಡುವಿನ ವ್ಯತ್ಯಾಸವೇ ತಿಳಿಯುವುದಿಲ್ಲ. ನೀರು ತುಂಬಿದ ರಸ್ತೆಗಳು, ಬಾಯಿ ತೆರೆದಿರುವ ಚರಂಡಿಗಳು ಮಳೆ ನೀರೊಳಗೆ ಮುಳುಗಿ ಹೋಗುವುದರಿಂದ ಜನರು ಬೀಳುವ ಅಪಾಯ ಹೆಚ್ಚಿದೆ. ರಸ್ತೆಗೆ ನೇತಾಡುತ್ತಿರುವ ವೈರ್‌ಗಳು ಭೀತಿ ಉಂಟು ಮಾಡುತ್ತವೆ. ಇವೆಲ್ಲವೂ ಕೇವಲ ಸಮಸ್ಯೆಯಲ್ಲ, ಅಪಾಯದ ಸೂಚಕಗಳಾಗಿವೆ. ಹಾಗಾಗಿ, ಜಿಬಿಎ, ಜಲಮಂಡಳಿ, ಬೆಸ್ಕಾಂ ಸೇರಿದಂತೆ ಸಂಬಂಧಪಟ್ಟ ಸಂಸ್ಥೆಗಳು, ಕೂಡಲೇ ಎಚ್ಚೆತ್ತುಕೊಳ್ಳಬೇಕಿದೆ. ಮಳೆಗಾಲ ತೀವ್ರಗೊಳ್ಳುವ ಮುನ್ನ ಮುರಿದ ಪಾದಚಾರಿ ಮಾರ್ಗಗಳನ್ನು ಸರಿಪಡಿಸಿ, ಅಪಾಯಕಾರಿ ವೈರ್‌ಗಳನ್ನು ತೆರವುಗೊಳಿಸುವ ಮೂಲಕ ಜನರ ಆತಂಕ ನಿವಾರಿಸಬೇಕಿದೆ.

ಬ್ರ್ಯಾಂಡ್ ಬೆಂಗಳೂರು ಕೇಳೋಕಷ್ಟೇ ಚೆಂದವಾಗಿದೆ. ಆದರೆ, ನೋಡುವುದಕ್ಕೆ, ಅನುಭವಕ್ಕೆ ದಕ್ಕುತ್ತಿಲ್ಲ. ರಸ್ತೆಗಳು ಗುಂಡಿ ಬಿದ್ದಿವೆ ಎಂದು ಮಾತ್ರ ಹೇಳುತ್ತಿದ್ದರೂ, ಇಲ್ಲಿ ಫುಟ್‌ಪಾತ್‌ಗಳೂ ಹದಗೆಟ್ಟಿವೆ. ರಸ್ತೆ ವಿಸ್ತರಣೆ, ಪೈಪ್‌ಲೈನ್ ಕೆಲಸ ಎಂದು ರಸ್ತೆ ಅಗೆದು ಹದಗೆಡಿಸಿದ್ದಾರೆ. ವಾಹನ ಚಾಲನೆ ಮಾಡುವುದಕ್ಕೆ ಮಾತ್ರವಲ್ಲ, ಫುಟ್‌ಪಾತ್‌ನಲ್ಲಿ ನಡೆಯಲು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಶೀಘ್ರ ಇತ್ತ ಗಮನಹರಿಸಲಿ.

- ಅಕ್ಷತಾ ಮಹಾಲಕ್ಷ್ಮೀ ಲೇಔಟ್

ಮಳೆಗಾಲಕ್ಕೂ ಮುನ್ನ ಮಾಡಬೇಕಾದ ಕಾಮಗಾರಿಗಳನ್ನು ಈಗ ಮಾಡುತ್ತಿದ್ದಾರೆ. ಪ್ರತಿ ವರ್ಷ ಇದೇ ಕಥೆ. ಫುಟ್‌ಪಾತ್‌ಗಳಲ್ಲಿ ಓಡಾಡಲು ಭಯವಾಗುತ್ತಿದೆ. ಈ ನಡುವೆ ಕೇಬಲ್‌ಗಳು ಅಕ್ಕಪಕ್ಕದ ವಿದ್ಯುತ್ ಕಂಬಕ್ಕೆ ಸುತ್ತಿ, ಕೆಳಗೆ ಬಿದ್ದಿರುತ್ತವೆ. ಇವು ಅಪಾಯದ ಸೂಚಕವಾಗಿವೆ.

-ಶಿವಕುಮಾರ್ ಖಾಸಗಿ ಕಂಪನಿ ಉದ್ಯೋಗಿ

ಜಯನಗರದಲ್ಲಿ ಮುಂದಿನ ವಾರದಿಂದ ಟೋಯಿಂಗ್

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಜಯನಗರ ವಲಯದ ವ್ಯಾಪ್ತಿಯಲ್ಲಿ ಮುಂದಿನ ವಾರದಿಂದಲೇ ವಾಹನಗಳ ಟೋಯಿಂಗ್ ಕಾರ್ಯಾಚರಣೆ ಶುರುವಾಗಲಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು. ಜಯನಗರ ವಲಯದ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗೆ ಸಜ್ಜಾಗಿರುವ ಟೋಯಿಂಗ್ ವಾಹನಗಳನ್ನು ಪರಿಶೀಲಿಸಿದ ಅವರು, ''ಅನಧಿಕೃತ ಪಾರ್ಕಿಂಗ್‌ನಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ಕಿರಿಕಿರಿ ತಪ್ಪಿಸಲು ಮೂರು ಟೋಯಿಂಗ್ ವಾಹನಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ,'' ಎಂದು ಹೇಳಿದರು.

''ಜಯನಗರ ವಲಯದ ಪ್ರಮುಖ ರಸ್ತೆಗಳಲ್ಲಿ ಅನಧಿಕೃತ ಪಾರ್ಕಿಂಗ್‌ಗೆ ಕಡಿವಾಣ ಹಾಕಲು ಹೊರಗುತ್ತಿಗೆ ಆಧಾರದಲ್ಲಿ ಪಡೆದಿರುವ ಮೂರು ನೂತನ ಟೋಯಿಂಗ್ ವಾಹನಗಳಿಗೆ ಸಾರಿಗೆ ಇಲಾಖೆಯಿಂದ ಎಫ್‌ಸಿ ಪಡೆಯಲಾಗಿದೆ. ಈ ವಾಹನಗಳನ್ನು ಅಧಿಕೃತವಾಗಿ ಸಂಚಾರ ಪೊಲೀಸರಿಗೆ ಹಸ್ತಾಂತರಿಸಲಾಗುವುದು. ಮುಂದಿನ ವಾರದಿಂದ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸಲಿದ್ದಾರೆ,'' ಎಂದು ತಿಳಿಸಿದರು. ಈ ವೇಳೆ ಪಾಲಿಕೆಯ ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ, ಟಿಇಸಿ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ಜನಾರ್ಧನ್ ಉಪಸ್ಥಿತರಿದ್ದರು.

ದತ್ತಿ ಪ್ರಶಸ್ತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2025ನೇ ಸಾಲಿನ ನಾನಾ ಪುಸ್ತಕ ದತ್ತಿ ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಜು.6ರವರೆಗೆ ವಿಸ್ತರಿಸಿದೆ. 2025ರ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು ಅಥವಾ ಪ್ರಕಾಶಕರು ಕಳಿಸಿಕೊಡಬಹುದು. ಒಟ್ಟು 55 ದತ್ತಿ ಪುಸ್ತಕಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರತಿ ದತ್ತಿ ಪ್ರಶಸ್ತಿಯ ಪ್ರವೇಶಕ್ಕೆ ತಲಾ ಮೂರು ಪುಸ್ತಕಗಳನ್ನು, ಯಾವ ದತ್ತಿಗಾಗಿ ಎನ್ನುವುದನ್ನು ಪುಸ್ತಕದ ಮೊದಲ ಪುಟದಲ್ಲಿ ಸ್ಪಷ್ಟವಾಗಿ ಬರೆದು 'ಆಡಳಿತಾಧಿಕಾರಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018' ಅವರಿಗೆ ಜು.6ರೊಳಗೆ ಕಳುಹಿಸಲು ಪ್ರಕಟಣೆಯಲ್ಲಿ ಕೋರಿದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಂತರ್ಜಾಲ ತಾಣ https://kannadasahithyaparishattu.in www.kasapa.in ಸಂಪರ್ಕಿಸಬಹುದು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೃಹತ್ ಪಾದಯಾತ್ರೆ ಇಂದು

ಬಿಡದಿ(ಬೆಂ.ದಕ್ಷಿಣ): ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಜೂನ್ 21ರಂದು ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಭೈರಮಂಗಲ ಗ್ರಾಪಂ ವ್ಯಾಪ್ತಿಯ ಅಂಚಿಪುರ ಗ್ರಾಮದಿಂದ ಹೊಸೂರುವರೆಗೆ 8 ಗ್ರಾಮಗಳ ಮೂಲಕ ಈ ಪಾದಯಾತ್ರೆ ಸಾಗಲಿದ್ದು, ಜೆಡಿಎಸ್‌ನ ಹಾಲಿ ಮಾಜಿ ಶಾಸಕರು, ಮುಖಂಡರ ಜತೆಗೆ ಸಾವಿರಾರು ರೈತರು ಭಾಗವಹಿಸಲಿದ್ದಾರೆ. ಬೆಳಗ್ಗೆ 9 ಗಂಟೆಗೆ ಅಂಚಿಪುರದಿಂದ ಆರಂಭವಾಗುವ ಪಾದಯಾತ್ರೆ ಅಂಚಿಪುರ ಕಾಲೊನಿ, ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಹಾಗೂ ಹೊಸೂರುವರೆಗೂ ಸಾಗಲಿದ್ದು, ಹೊಸೂರಿನಲ್ಲಿ ಬಹಿರಂಗ ಸಭೆಯೊಂದಿಗೆ ಸಮಾರೋಪಗೊಳ್ಳಲಿದೆ.

''ಕೃಷಿ ಚಟುವಟಿಕೆಗಳನ್ನು ಉಳಿಸಲು ಈ ಹೋರಾಟ ನಡೆಯಲಿದೆ. ಟೌನ್‌ಶಿಪ್ ಯೋಜನೆಯಡಿ ಅಂಚಿಪುರ, ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಸೇರಿ ದಂತೆ ಸುತ್ತಮುತ್ತಲಿನ ಗ್ರಾಮಗಳ 518 ಎಕರೆ ಕೃಷಿ ಭೂಮಿಗೆ ಈಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಲ್ಲದೆ, ತರಾತುರಿಯಲ್ಲಿ ಕೆಲವರಿಗೆ ಸಾಂಕೇತಿಕವಾಗಿ ಪರಿಹಾರದ ಚೆಕ್ ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಅಂಚೀಪುರ, ಗೊಲ್ಲಹಳ್ಳಿ ಸೇರಿದಂತೆ 8 ಗ್ರಾಮಗಳಲ್ಲಿ ಹೆಚ್ಚುವರಿ 7,481 ಎಕರೆ ಭೂಸ್ವಾಧೀನಕ್ಕೆ ಸರಕಾರ ಮುಂದಾಗಿದೆ. 755 ರೈತ ಕುಟುಂಬಗಳು, ಮಾಸಿಕ 6 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಹೈನುಗಾರಿಕೆ, ರೇಷ್ಮೆ-ತೋಟಗಾರಿಕೆ ಹಾಗೂ 10 ಲಕ್ಷ ವೃಕ್ಷಗಳಿಗೆ ಧಕ್ಕೆಯಾಗಲಿದೆ. ಈ ಗ್ರಾಮಗಳ ರೈತರಿಗೆ ನ್ಯಾಯ ದೊರಕಿಸಿಕೊಡಬೇಕಿದೆ,'' ಎಂದು ನಿಖಿಲ್ ಹೇಳಿದ್ದಾರೆ.

'ಜಿಎಸ್ ಕವಿತೆಯಿಂದ ಚೈತನ್ಯ'

ಬೆಂಗಳೂರು: ಡಾ.ಜಿ.ಎಸ್. ಶಿವರುದ್ರಪ್ಪನವರ ಕವಿತೆಗಳು ಬದುಕಿಗೆ ಹೊಸ ಚೈತನ್ಯ ನೀಡುವಂತಿವೆ ಎಂದು ಪ್ರೊ.ಬಿ.ಕೆ.ರವಿ ಅಭಿಪ್ರಾಯಪಟ್ಟರು.

ಕೆ.ಆರ್.ಪುರದ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ಡಾ.ಜಿ.ಎಸ್. ಶಿವರುದ್ರಪ್ಪನವರ ಜನ್ಮಶತಮಾನೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ 'ಎದೆತುಂಬಿ ಹಾಡಿದೆನು- ಡಾ.ಜಿ.ಎಸ್. ಶಿವರುದ್ರಪ್ಪನವರ ಬದುಕು-ಬರಹ' ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ದಿಕ್ಸೂಚಿ ಭಾಷಣ ಮಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಹಿ.ಚಿ.ಬೋರಲಿಂಗಯ್ಯ, ''ಜಿಎಸ್‌ಎಸ್ ಅವರು ಕನ್ನಡ ಸಂಸ್ಕೃತಿಯನ್ನು ಕಟ್ಟಿ ಬೆಳೆಸುವಲ್ಲಿ ಗುರುತರ ಸೇವೆ ಸಲ್ಲಿಸಿದ್ದಾರೆ,'' ಎಂದರು. ಸಿಲಿಕಾನ್ ಸಿಟಿ ಕಾಲೇಜಿನ ಅಧ್ಯಕ್ಷ ಡಾ.ಎಚ್.ಎಂ. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ವಿಚಾರ ಸಂಕಿರಣದಲ್ಲಿ 25 ವಿದ್ವಾಂಸರು ಪ್ರಬಂಧ ಮಂಡಿಸಿದರು. ಸುಮಾರು 120 ಕನ್ನಡ ಅಧ್ಯಾಪಕರು ಭಾಗವಹಿಸಿದ್ದರು.

ಕಾಲೇಜಿನ ನಿರ್ದೇಶಕ ಎಚ್.ಎಂ. ಮುಕುಂದ, ಸಿಇಒ ಧನ್ಯತೇಜಸ್, ಸಿಒಒ ಭಾನು ಪ್ರದ್ಯುಮ್ನ ಭಾಗವಹಿಸಿದ್ದರು.

ಡೀಪ್‌ಫೇಕ್: ಸುಶಿಕ್ಷಿತರಿಂದಲೇ ಕೃತ್ಯ

ಬೆಂಗಳೂರು: ಚಿತ್ರನಟಿ ರುಕ್ಮಿಣಿ ವಸಂತ್‌ರ ತಿರುಚಿದ ಅಶ್ಲೀಲ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಪ್ರಕರಣದಲ್ಲಿ ಬಂಧಿಸಲಾಗಿರುವ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದು, ತನಿಖೆ ವೇಳೆ ಆರೋಪಿಗಳ ಹೈಟೆಕ್ ವೈಯಕ್ತಿಕ ಹಿನ್ನೆಲೆ ಬೆಳಕಿಗೆ ಬಂದಿದೆ.

ಬಂಧಿತ ಟೆಕ್ಕಿಗೆ 20 ಲಕ್ಷ ರೂ. ವಾರ್ಷಿಕ ಸಂಬಳ!

ಬಂಧಿತ ಮೂವರೂ ಆರೋಪಿಗಳು ಸುಶಿಕ್ಷಿತರು ಮತ್ತು ಸಮಾಜದಲ್ಲಿ ಒಳ್ಳೆಯ ಕೆಲಸದಲ್ಲಿ ಇದ್ದವರಾಗಿದ್ದಾರೆ. ಹಣ ಹಾಗೂ ವಿಕೃತ ಸಂತೋಷಕ್ಕಾಗಿ ಈ ಕುಕೃತ್ಯ ಎಸಗಿದ್ದಾಗಿ ಆರೋಪಿಗಳು ಪೊಲೀಸರ ಎದುರು ತಪ್ಪೊಪ್ಪಿಕೊಂಡಿದ್ದು, ಸುಶಿಕ್ಷಿತರು ಇಂತಹ ಸೈಬರ್ ಅಪರಾಧ ಕೃತ್ಯದಲ್ಲಿ ಭಾಗಿಯಾಗಿರುವುದು ಆತಂಕ ಮೂಡಿಸಿದೆ.

ಪ್ರಕರಣ ಸಂಬಂಧ ಬಾಗಲಕೋಟೆ ಜಿಲ್ಲೆಯ ಚಿಲಕಮುಖಿ ಗ್ರಾಮದ ರವಿಕುಮಾರ್ (24), ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ರಂಜಿತ್‌ಕುಮಾರ್ (25), ಶಿವಮೊಗ್ಗದ ತೀರ್ಥಹಳ್ಳಿಯ ಚಂದ್ರಕಾಂತ್ (33) ಎಂಬುವರನ್ನು ಬಂಧಿಸಲಾಗಿದೆ.

ಆರೋಪಿಗಳು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ನಟಿ ರುಕ್ಮಿಣಿ ವಸಂತ್‌ರ ಫೋಟೊ ಹಾಗೂ ವಿಡಿಯೊವನ್ನು ಅಶ್ಲೀಲವಾಗಿ ತಿರುಚಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಆರೋಪಿಗಳು ಎಐ ಆ್ಯಪ್ ಮತ್ತು ತಂತ್ರಾಂಶ ಬಳಸಿ ನಟಿಯರ ಮುಖವನ್ನು ಅಶ್ಲೀಲ ವಿಡಿಯೊಗಳಿಗೆ ಜೋಡಣೆ ಮಾಡುತ್ತಿದ್ದರು.

ಈ ಮೂವರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರ ಪೈಕಿ ಪ್ರಮುಖ ಆರೋಪಿ ರವಿಕುಮಾರ್, ಬಿಎಸ್ಸಿ ನರ್ಸಿಂಗ್ ಮುಗಿಸಿ ಸ್ವಂತ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದ. ಯೂಟ್ಯೂಬ್ ಚಾನೆಲ್ ಮೂಲಕ ಹಣ ಗಳಿಸಿದ್ದ ಈತನಿಗೆ ಸುಲಭವಾಗಿ ಮತ್ತಷ್ಟು ಹಣ ಸಂಪಾದಿಸುವ ಆಸೆ ಹುಟ್ಟಿತ್ತು. ಯೂಟ್ಯೂಬ್ ಚಾನೆಲ್‌ನ ವೀಕ್ಷಣೆ ಹೆಚ್ಚಿಸಿಕೊಳ್ಳಲು ಈತ ನಟಿಯರ ಡೀಪ್‌ಫೇಕ್ ವಿಡಿಯೊಗಳನ್ನು ಅಪ್‌ಲೋಡ್ ಮಾಡಲು ಶುರು ಮಾಡಿದ್ದ.

ಎರಡನೇ ಆರೋಪಿ ರಂಜಿತ್‌ಕುಮಾರ್, ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ. ವಾರ್ಷಿಕ ಸುಮಾರು 20 ಲಕ್ಷ ರೂ. ಸಂಬಳ ಪಡೆಯುತ್ತಿದ್ದ ಈತನಿಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದಲ್ಲಿ ಹೆಚ್ಚಿನ ನೈಪುಣ್ಯತೆಯಿದ್ದು, ವಿಕೃತ ಆನಂದಕ್ಕಾಗಿ ಪ್ರಮುಖ ನಟಿಯರ ಎಐ ಡೀಪ್‌ಫೇಕ್ ವಿಡಿಯೊಗಳನ್ನು ತಯಾರಿಸುತ್ತಿದ್ದಾಗಿ ಪೊಲೀಸರ ಮುಂದೆ ತಪ್ಪೊಪ್ಪಿಕೊಂಡಿದ್ದಾನೆ.

ಮೂರನೇ ಆರೋಪಿ ಚಂದ್ರಕಾಂತ್, ಬೆಂಗಳೂರಿನ ಪ್ರತಿಷ್ಠಿತ ಚಾರ್ಟೆಡ್ ಅಕೌಂಟೆಂಟ್ ಕಂಪನಿಯಲ್ಲಿ ಲೆಕ್ಕ ಪರಿಶೋಧಕನಾಗಿ ಕೆಲಸ ಮಾಡುತ್ತಿದ್ದ. ಒಳ್ಳೆಯ ಸಂಬಳ ಪಡೆಯುತ್ತಿದ್ದ ಈತ ಕೇವಲ ವಿಕೃತ ಸಂತೋಷಕ್ಕಾಗಿ ನಟಿಯರ ಫೋಟೊಗಳನ್ನು ಡೀಪ್‌ಫೇಕ್ ಮಾಡುತ್ತಿದ್ದಾಗಿ ಪೊಲೀಸರ ಮುಂದೆ ಹೇಳಿದ್ದಾನೆ.

ಲಾರಿ ಡಿಕ್ಕಿ: ಸಾವು

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯ ಭಟ್ಟರಹಳ್ಳಿ ಬಳಿ ಶುಕ್ರವಾರ ರಾತ್ರಿ ಲಾರಿ ಡಿಕ್ಕಿಯಾಗಿ ಗಣೇಶ್ ಸಿಂಗ್ (31) ಎಂಬುವರು ಮೃತಪಟ್ಟಿದ್ದಾರೆ.

ರಾಜಸ್ತಾನ ಮೂಲದ ಗಣೇಶ್ ಸಿಂಗ್, ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸವಾಗಿದ್ದರು. ಕ್ಯಾಬ್ ಚಾಲಕರಾಗಿದ್ದ ಅವರು ಸ್ನೇಹಿತರನ್ನು ಭೇಟಿಯಾಗಲು ಭಟ್ಟರಹಳ್ಳಿಗೆ ಹೋಗಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಸ್ತೆ ದಾಟುತ್ತಿದ್ದ ಗಣೇಶ್ ಸಿಂಗ್‌ಗೆ ಲಾರಿ ಡಿಕ್ಕಿ ಹೊಡೆದಿದ್ದು, ತೀವ್ರವಾಗಿ ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಲಾರಿ ಚಾಲಕನ ಅತಿಯಾದ ವೇಗ ಹಾಗೂ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ. ಘಟನೆ ನಂತರ ಲಾರಿ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಆಧರಿಸಿ ಲಾರಿ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಕೆ.ಆರ್.ಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿಗೆ ಮಸಾಜ್‌ನ ಸಂದೇಶ, ಕಿಡಿಗೇಡಿ ವಿರುದ್ಧ ಪ್ರಕರಣ

ಬೆಂಗಳೂರು: ಟೆಲಿಗ್ರಾಂ ಆ್ಯಪ್ ಮೂಲಕ ಯುವತಿಯನ್ನು ಸಂಪರ್ಕಿಸಿ ಸಂಪೂರ್ಣ ದೇಹಕ್ಕೆ ಹಾಗೂ ಖಾಸಗಿ ಅಂಗಾಗಗಳಿಗೆ ಮಸಾಜ್ ಮಾಡುವುದಾಗಿ ಅಸಭ್ಯ ಸಂದೇಶ ಕಳುಹಿಸಿದ್ದ ಆರೋಪದ ಮೇಲೆ ಖಾನ್ ಎಂಬಾತನ ವಿರುದ್ಧ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿ ಖಾನ್, ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿರುವ ದೂರುದಾರ ಯುವತಿಯನ್ನು ಟೆಲಿಗ್ರಾಂ ಆ್ಯಪ್ ಮೂಲಕ ಸಂಪರ್ಕಿಸಿದ್ದ. ನಂತರ ಆತ, ಮನೆ ಬಾಗಿಲಿಗೆ ಬಂದು ಸಂಪೂರ್ಣ ದೇಹಕ್ಕೆ ಹಾಗೂ ಖಾಸಗಿ ಅಂಗಾಗಗಳಿಗೆ ಮಸಾಜ್ ಮಾಡುವುದಾಗಿ ಅಶ್ಲೀಲ ಸಂದೇಶ ಕಳುಹಿಸಿದ್ದ. ಯುವತಿ ಇದನ್ನು ನಿರಾಕರಿಸಿದರೂ ಆತ ನಿರಂತರವಾಗಿ ಸಂದೇಶ ಕಳುಹಿಸಿ ಕಿರುಕುಳ ನೀಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಖಾನ್‌ನ ಕಿರುಕುಳದಿಂದ ರೋಸಿ ಹೋದ ಯುವತಿ ಠಾಣೆಗೆ ದೂರು ಕೊಟ್ಟಿದ್ದರು. ಈ ದೂರು ಆಧರಿಸಿ ಖಾನ್ ವಿರುದ್ಧ ಬಿಎನ್‌ಎಸ್ ಸೆಕ್ಷನ್ 78 (2) ಹಾಗೂ ಮಾಹಿತಿ ತಂತ್ರಜ್ಞಾನ ಕಾಯಿದೆಯಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದೇವೆ ಎಂದು ಪೊಲೀಸರು ಹೇಳಿದ್ದಾರೆ.

ಶಿಕಾರಿಪಾಳ್ಯ ಕೆರೆಯಲ್ಲಿ ಮೀನುಗಳ ಸಾವು

ಬೆಂಗಳೂರು ದಕ್ಷಿಣ: ಒಳಚರಂಡಿ ನೀರು ಸೇರ್ಪಡೆಯಾದ ಪರಿಣಾಮ ಹುಲಿಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿಕಾರಿಪಾಳ್ಯ ಕೆರೆಯಲ್ಲಿ ಸಾವಿರಾರು ಮೀನುಗಳು ಸತ್ತು ತೇಲುತ್ತಿವೆ.

ವಿಪ್ರೋ ಫೌಂಡೇಷನ್ ಮತ್ತು ಸಿಡಿಡಿ ಇಂಡಿಯಾ ಸಹಯೋಗದಲ್ಲಿ ಕೆರೆಯ ಪುನಶ್ಚೇತನ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಕೆರೆಯ ಸುತ್ತ ಕೊಳಚೆ ಸೇರ್ಪಡೆ ತಡೆ ಮತ್ತು ತಿರುವು ಡ್ರೈನೇಜ್ ವ್ಯವಸ್ಥೆ ನಿರ್ಮಿಸಲಾಗುತ್ತಿದೆ.

ಶನಿವಾರ ಬೆಳಗ್ಗೆ ಕೆರೆ ದಂಡೆಗೆ ಬಂದ ಸ್ಥಳೀಯರು ನೀರಿನ ಮೇಲ್ಮೈಯಲ್ಲಿ ತೇಲುತ್ತಿದ್ದ ಸತ್ತ ಮೀನುಗಳನ್ನು ನೋಡಿ ಆಘಾತ ವ್ಯಕ್ತಪಡಿಸಿದ್ದಾರೆ. ''ಕೆರೆ ಪುನಶ್ಚೇತನಕ್ಕೆ ಕೋಟ್ಯಂತರ ರೂ. ವೆಚ್ಚ ಮಾಡಲಾಗುತ್ತಿದೆ. ಈ ನಡುವೆ ಕೊಳಚೆ ನೀರು ಸೇರ್ಪಡೆಯಾಗಿ ಪ್ರಯತ್ನವೆಲ್ಲ ವ್ಯರ್ಥವಾಗುತ್ತಿದೆ,'' ಎಂದು ಶಿಕಾರಿಪಾಳ್ಯ ನಿವಾಸಿ ರಂಜನ್ ಬೇಸರ ವ್ಯಕ್ತಪಡಿಸಿದರು.

ವೈಟ್‌ಫೀಲ್ಡ್

ಏರ್‌ಪೋರ್ಟ್ ರಸ್ತೆ

ಶನಿವಾರ ಸಂಜೆ ನಗರದ ವಿವಿಧೆಡೆ ಧಾರಾಕಾರ ಮಳೆ ಸುರಿಯಿತು. ವೈಟ್‌ಫೀಲ್ಡ್‌ನ ಹಲವೆಡೆ, ಏರ್‌ಪೋರ್ಟ್ ರಸ್ತೆ ಸೇರಿದಂತೆ ವಿವಿಧ ರಸ್ತೆಗಳು ಹೊಳೆಯಂತಾಗಿದ್ದವು.

ಎಲ್ಲಿ-ಏನು?
ಭಾನುವಾರ

ಆಯುಷ್ ಇಲಾಖೆ: ಉದ್ಘಾಟನೆ: ಡಿಸಿಎಂ ಡಿ.ಕೆ.ಶಿವಕುಮಾರ್, ಉಪಸ್ಥಿತಿ: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್
ಸ್ಥಳ: ವಿಧಾನಸೌಧದ ಮುಂಭಾಗ. ಬೆಳಗ್ಗೆ 6ರಿಂದ 9ರವರೆಗೆ.

ಸೋಸಲೆ ವ್ಯಾಸರಾಜ ಮಠ: ದ್ವೈಪಾಯನಾಚಾರ್ಯರಿಂದ ಜಗನ್ನಾಥದಾಸರ ವಿರಚಿತ ಹರಿಕಥಾಮೃತಸಾರದ 'ಕರುಣಾಸಂಧಿ' ವಿಷಯವಾಗಿ ಧಾರ್ಮಿಕ ಪ್ರವಚನ.
ಸ್ಥಳ: ಮಠದ ಆವರಣ, 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ. ಸಂಜೆ 6

ಶ್ರೀ ರಾಘವೇಂದ್ರ ಸೇವಾ ಸಮಿತಿ: ಚಂದ್ರಶೇಖರ ಆಚಾರ್ಯರಿಂದ 'ಯಕ್ಷಪ್ರಶ್ನೆ' ವಿಷಯವಾಗಿ ಧಾರ್ಮಿಕ ಪ್ರವಚನ.
ಸ್ಥಳ: ಮಠದ ಆವರಣ, 6ನೇ ಅಡ್ಡರಸ್ತೆ, ಈಜುಕೊಳ ಬಡಾವಣೆ. ಸಂಜೆ 7.

ಸಂಪಾಜೆ ರಂಗ ಸಂಗಮ: ಸಂಪಾಜೆ ಸಾಂಸ್ಕೃತಿಕ ಸಂಭ್ರಮ. ಸಂಜೆ 6.15ಕ್ಕೆ ಸಭಾ ಕಾರ್ಯಕ್ರಮ. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ. **ಸ್ಥಳ:** ನಯನ ಸಭಾಂಗಣ, ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ ಆವರಣ.

ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್: ಕುರುಹಿನಶೆಟ್ಟಿ ವಿದ್ಯಾರ್ಥಿನಿ ನಿಲಯದ ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಎಸ್.ಕೇಶವ ಪ್ರಸಾದ್. ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಆರ್.ಲಕ್ಷ್ಮೀನಾರಾಯಣ.
ಸ್ಥಳ: ಕುರುಹಿನಶೆಟ್ಟಿ ವಿದ್ಯಾರ್ಥಿನಿ ನಿಲಯ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಅಂಜನಾಪುರದ 8ನೇ ಹಂತ. ಬೆಳಗ್ಗೆ 10.

ಪ್ರವರ ಥಿಯೇಟರ್: ಬೆಗ್ ಬಾರೋ ಅಳಿಯ ಕನ್ನಡ ಹಾಸ್ಯ ನಾಟಕ ಪ್ರದರ್ಶನ.
ಸ್ಥಳ: ನಾಣಿ ಅಂಗಳ, ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬನಶಂಕರಿ 2ನೇ ಹಂತ. ಸಂಜೆ 5.15 ಮತ್ತು 7.30.

ಚೌಡೇಶ್ವರಿ ದೇವಿ ಬ್ರಹ್ಮರಥೋತ್ಸವ

ಬೆಂಗಳೂರು: ಚೌಡೇಶ್ವರಿ ಅಮ್ಮನವರ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಆನೇಕಲ್ ತಾಲೂಕು ಚಂದಾಪುರ ದೊಮ್ಮಸಂದ್ರ ರಸ್ತೆಯ ನಾರಾಯಣಘಟ್ಟದಲ್ಲಿ ಭೈರವೇಶ್ವರ ಮತ್ತು ಸೋಮೇಶ್ವರಿ ಸಮೇತ ಚೌಡೇಶ್ವರಿ ಅಮ್ಮನವರ ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಮತ್ತು ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಲಿದೆ.

ಭಾನುವಾರ ಬೆಳಗ್ಗೆ 7.30ಕ್ಕೆ ಗಣಪತಿ ಪ್ರಾರ್ಥನೆ, ಗುರುಪೂಜೆ, ಸಂಜೆ 5.30ಕ್ಕೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಸೋಮವಾರ ಬೆಳಗ್ಗೆ ಗಣಪತಿ ಪೂಜೆ, ಸಂಕಲ್ಪ, ಗೋಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಮಂಗಳವಾರ ಬೆಳಗ್ಗೆ 4 ಗಂಟೆಗೆ ರತ್ನ ವ್ಯಾಸ ಪೂಜೆ, ಪಂಚಲೋಹ ಪೂಜೆ, 10.30ಕ್ಕೆ ಗ್ರಾಮಸ್ಥರಿಂದ ಕಳಶದೊಂದಿಗೆ ಗ್ರಾಮ ಪ್ರದಕ್ಷಿಣೆ, 11ಕ್ಕೆ ಪೂರ್ಣಾಹುತಿ ನಡೆಯಲಿದೆ. 11.30ಕ್ಕೆ ವಿಮಾನ ಗೋಪುರ, ಬಲಿಪೀಠ ಮತ್ತು ಪ್ರಧಾನ ದೇವತೆಗಳಿಗೆ ಮಹಾ ಕುಂಭಾಭಿಷೇಕ ನಡೆಯಲಿದೆ. ಮಧ್ಯಾಹ್ನ 1ಕ್ಕೆ ಬ್ರಹ್ಮ ರಥೋತ್ಸವ ನಡೆಯಲಿದೆ. ಬೆಳಗ್ಗೆಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ. ರಾತ್ರಿ 10ಕ್ಕೆ ಚೌಡೇಶ್ವರಿ ಸೇರಿದಂತೆ ವಿವಿಧ ಗ್ರಾಮದೇವತೆಗಳ ಹೂವಿನ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಅರಮನೆ ಮೈದಾನ ಸುತ್ತ ಸಂಚಾರ ಮಾರ್ಪಾಡು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಭಾನುವಾರ (ಜೂ.21) ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರ ಪದಗ್ರಹಣ ಸಮಾರಂಭ ನಡೆಯಲಿರುವ ಹಿನ್ನೆಲೆಯಲ್ಲಿ ಅರಮನೆ ಮೈದಾನದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ.

ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಗಣ್ಯ ವ್ಯಕ್ತಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಮಾರಂಭಕ್ಕೆ ಬರುವ ನಿರೀಕ್ಷೆಯಿದ್ದು, ಇದರಿಂದ ಅರಮನೆ ಮೈದಾನದ ಸುತ್ತಮುತ್ತ ವಾಹನ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ. ಹೀಗಾಗಿ, ಸುಗಮ ಸಂಚಾರದ ದೃಷ್ಟಿಯಿಂದ ಭಾನುವಾರ ಬೆಳಗ್ಗೆ 7 ಗಂಟೆಯಿಂದ ಸಂಜೆ 4ರವರೆಗೆ ಅರಮನೆ ಮೈದಾನದ ತ್ರಿಪುರವಾಸಿನಿ ಗೇಟ್, ಬಳ್ಳಾರಿ ರಸ್ತೆ, ಸಿ.ವಿ.ರಾಮನ್ ರಸ್ತೆ, ಜಯಮಹಲ್ ರಸ್ತೆಯ ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರ್ಯಾಯ ಮಾರ್ಗ

- ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಸಂಚರಿಸುವ ವಾಹನಗಳು ಹಳೆ ಹೈಗ್ರೌಂಡ್ಸ್ ಜಂಕ್ಷನ್, ಕಲ್ಪನಾ ಜಂಕ್ಷನ್, ಹಳೆ ಉದಯ ಟಿವಿ ಜಂಕ್ಷನ್, ಕಂಟೋನ್ಮೆಂಟ್ ರೈಲು ನಿಲ್ದಾಣ, ಟ್ಯಾನರಿ ರಸ್ತೆ, ನಾಗವಾರ ಮೂಲಕ ಹೋಗಬೇಕು.
- ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯಿಂದ ನಗರದ ಕೇಂದ್ರ ಭಾಗದ ಕಡೆಗೆ ಬರುವ ವಾಹನಗಳು ಹೆಬ್ಬಾಳದಲ್ಲಿ ಎಡತಿರುವು ಪಡೆದು ನಾಗವಾರ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಬಂಬೂ ಬಜಾರ್, ಕ್ವೀನ್ಸ್ ರಸ್ತೆ ಮೂಲಕ ಸಂಚರಿಸಬೇಕು ಅಥವಾ ಹೆಬ್ಬಾಳ ವರ್ತುಲ ರಸ್ತೆ, ಕುವೆಂಪು ಸರ್ಕಲ್ ಮಾರ್ಗವಾಗಿ ಬಂದು ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಡಾ.ರಾಜ್‌ಕುಮಾರ್ ರಸ್ತೆ ಮೂಲಕ ಸಂಚರಿಸಬಹುದು.
- ಯಶವಂತಪುರ ಕಡೆಯಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಹೋಗುವ ವಾಹನಗಳು ಮತ್ತಿಕೆರೆ ರಸ್ತೆಯಲ್ಲಿ ಹೋಗಿ ಬಿಇಎಲ್ ವೃತ್ತದಲ್ಲಿ ಬಲಕ್ಕೆ ತಿರುಗಿ ವರ್ತುಲ ರಸ್ತೆ ಮೂಲಕ ಸಂಚರಿಸಬೇಕು.
- ಯಶವಂತಪುರ ಕಡೆಯಿಂದ ನಗರದ ಕಡೆಗೆ ಸಂಚರಿಸುವ ವಾಹನಗಳು ಡಾ.ರಾಜ್ ಕುಮಾರ್ ರಸ್ತೆ ಮೂಲಕ ಹೋಗಬೇಕು.
- ಹಲಸೂರು ಮತ್ತು ಹಳೆ ಏರ್‌ಪೋರ್ಟ್ ಕಡೆಯಿಂದ ಹೆಬ್ಬಾಳದ ಕಡೆಗೆ ಸಂಚರಿಸುವ ವಾಹನಗಳು ಹಲಸೂರು ಕೆರೆ ಮೂಲಕ ಟಿನ್ ಫ್ಯಾಕ್ಟರಿ ಜಂಕ್ಷನ್‌ಗೆ ಹೋಗಿ ವರ್ತುಲ ರಸ್ತೆ ಮೂಲಕ ಸಂಚರಿಸಬೇಕು.

ಭಾರಿ ವಾಹನಗಳಿಗೆ ನಿರ್ಬಂಧ ಮತ್ತು ಪರ್ಯಾಯ ಮಾರ್ಗ

- ಹೆಬ್ಬಾಳ ಕಡೆಯಿಂದ ಬಳ್ಳಾರಿ ರಸ್ತೆ ಕಡೆಗೆ ಹೋಗುವ ಭಾರಿ ವಾಹನಗಳ ಸಂಚಾರವನ್ನು ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಬಂಧಿಸಲಾಗಿದ್ದು, ಹೊರ ವರ್ತುಲ ರಸ್ತೆ ಮೂಲಕ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ.
- ಹೈಗ್ರೌಂಡ್ಸ್ ಕಡೆಯಿಂದ ಬರುವ ಭಾರಿ ವಾಹನಗಳು ಕಲ್ಪನಾ ಜಂಕ್ಷನ್, ಹಳೆ ಉದಯ ಟಿವಿ ಜಂಕ್ಷನ್, ಕಂಟೋನ್ಮೆಂಟ್ ರೈಲು ನಿಲ್ದಾಣ, ಟ್ಯಾನರಿ ರಸ್ತೆ, ನಾಗಾವರ ಮಾರ್ಗವಾಗಿ ಸಂಚರಿಸಬೇಕು.
- ಯಶವಂತಪುರ ಕಡೆಯಿಂದ ಸಿ.ವಿ.ರಾಮನ್ ರಸ್ತೆ ಕಡೆಗೆ ಭಾರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ವಾಹನ ನಿಲುಗಡೆ ನಿರ್ಬಂಧಿತ ರಸ್ತೆಗಳು

- ಅರಮನೆ ರಸ್ತೆ
- ಬಳ್ಳಾರಿ ರಸ್ತೆ
- ಜಯಮಹಲ್ ರಸ್ತೆ
- ನಂದಿದುರ್ಗ ರಸ್ತೆ
- ಸಿ.ವಿ.ರಾಮನ್ ರಸ್ತೆ
- ಗುಟ್ಟಹಳ್ಳಿ ರಸ್ತೆ

ಮಹಿಳಾ ನೇಷನ್ಸ್ ಕಪ್ ಹಾಕಿ

ಫೈನಲ್‌ಗೆ ಭಾರತ

ಆಕ್ಲೆಂಡ್: ಶನಿವಾರ ನಡೆದ ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಚಿಲಿ ವಿರುದ್ಧ 6-0 ಅಂತರದ ಭರ್ಜರಿ ಗೆಲುವು ಸಾಧಿಸಿದ ಭಾರತ ತಂಡ ಫೈನಲ್ ಪ್ರವೇಶಿಸಿದೆ.

ಭಾರತದ ಪರ ನವನೀತ್ ಕೌರ್(6, 13ನೇ ನಿಮಿಷ) ಮತ್ತು ದೀಪಿಕಾ (14, 18ನೇ ನಿಮಿಷ) ತಲಾ ಎರಡು ಗೋಲು ಬಾರಿಸಿ ಮಿಂಚಿದರೆ, ನೇಹಾ (32) ಮತ್ತು ರುತುಜಾ (39) ತಲಾ ಒಂದು ಗೋಲು ಗಳಿಸಿದರು. ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದ ನಾಯಕಿ ಸಲಿಮಾ ಟೆಟೆ ಆಲ್‌ರೌಂಡ್ ಪ್ರದರ್ಶನದ ಮೂಲಕ ತಂಡದ ದೊಡ್ಡ ಗೆಲುವಿಗೆ ಕಾರಣರಾದರು. ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ಭಾರತದ ಆಟಗಾರ್ತಿಯರು ಯಶಸ್ವಿಯಾದರು. ಅಂತಿಮ ಕ್ವಾರ್ಟರ್‌ನಲ್ಲಿ ಚಿಲಿ ತಿರುಗಿಬೀಳಲು ಯತ್ನಿಸಿದರೂ, ಭಾರತದ ಗೋಲ್‌ಕೀಪರ್ ಸವಿತಾ ಉತ್ತಮ ರಕ್ಷಣೆ ನೀಡಿ ಎದುರಾಳಿಗೆ ಯಾವುದೇ ಗೋಲು ಬಿಟ್ಟುಕೊಡಲಿಲ್ಲ. ಭಾನುವಾರ ಮಧ್ಯಾಹ್ನ 12.30ಕ್ಕೆ ನಡೆಯಲಿರುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಭಾರತವು ಆತಿಥೇಯ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಭಾರತಕ್ಕೆ ಬೆಳ್ಳಿ, ಕಂಚು

ಶಾಕ್ಸಿಂಗ್ (ಚೀನಾ): ಶನಿವಾರ ಇಲ್ಲಿ ಆರಂಭವಾದ ಏಷ್ಯನ್ ರಿಲೇ ಚಾಂಪಿಯನ್‌ಶಿಪ್‌ನ ಮೊದಲ ದಿನವೇ ಭಾರತ ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನು ಗೆದ್ದುಕೊಂಡಿದೆ.

ನಂತರ ನಡೆದ ಮಿಶ್ರ 4x400 ಮೀಟರ್ ರಿಲೇ ಸ್ಪರ್ಧೆಯಲ್ಲಿ ಟಿ.ಎಸ್. ಶೆಟ್ಟಿ, ಭರತ್ ಶ್ರೀಧರ್, ಎಂ.ಆರ್. ಪೂವಮ್ಮ ಮತ್ತು ನೀರೂ ಪಾಠಕ್ ಅವರಿದ್ದ ಭಾರತ ತಂಡವು 3 ನಿಮಿಷ 17.06 ಸೆಕೆಂಡುಗಳಲ್ಲಿ ಜಯಿಸಿ ಬೆಳ್ಳಿ ಪದಕವನ್ನು ತನ್ನದಾಗಿಸಿಕೊಂಡಿತು. ಕಜಕಸ್ತಾನ (3ನಿ. 16.35 ಸೆ.) ಚಿನ್ನದ ಪದಕ ಗೆದ್ದರೆ, ಚೀನಾ (3ನಿ. 17.20ಸೆ.) ಕಂಚಿನ ಪದಕಕ್ಕೆ ತೃಪ್ತಿಪಟ್ಟಿತು. ಅನಿಮೇಶ್ ಕುಜೂರ್, ಗೌರವ್ ಪ್ರಣವ್, ತಮನ್ನಾ ಮತ್ತು ಎಸ್.ಎಸ್. ಸ್ನೇಹಾ ಅವರನ್ನೊಳಗೊಂಡ ಭಾರತದ ಮಿಶ್ರ 4x100 ಮೀಟರ್ ರಿಲೇ ತಂಡವು 41.47 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕವನ್ನು ಮುಡಿಗೇರಿಸಿಕೊಂಡಿತು. ಈ ವಿಭಾಗದಲ್ಲಿ ಥಾಯ್ಲೆಂಡ್ (41.14 ಸೆಕೆಂಡ್) ಚಿನ್ನ ಹಾಗೂ ಚೀನಾ (41.29 ಸೆಕೆಂಡ್) ಬೆಳ್ಳಿ ಪದಕ ಪಡೆದವು.

ಪಿ.ಟಿ. ಉಷಾ, ಅಂಜುಗೆ ಜೀವಮಾನ ಸಾಧನೆ ಪ್ರಶಸ್ತಿ

ಹೊಸದಿಲ್ಲಿ: ಭಾರತೀಯ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಶನಿವಾರ ಆಯೋಜಿಸಿದ್ದ ಚೊಚ್ಚಲ 'ಇಂಡಿಯನ್ ಅಥ್ಲೆಟಿಕ್ಸ್ ಅವಾರ್ಡ್ಸ್' ಸಮಾರಂಭದಲ್ಲಿ ದಂತಕಥೆ ಪಿ.ಟಿ. ಉಷಾ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಉಷಾ ಅವರೊಂದಿಗೆ ಮಾಜಿ ಅಥ್ಲೀಟ್‌ಗಳಾದ ಅಂಜು ಬಾಬಿ ಜಾರ್ಜ್, ಗುರ್‌ಬಚನ್ ಸಿಂಗ್ ರಂಧಾವಾ ಮತ್ತು ಮಾಜಿ ಮುಖ್ಯ ತರಬೇತುದಾರ ಬಹದ್ದೂರ್‌ಸಿಂಗ್ ಚೌಹಾಣ್ ಅವರಿಗೂ ಈ ಗೌರವ ಸಂದಿದೆ. ಅರ್ಜಿ ಸಲ್ಲಿಸದಿದ್ದರೂ ತನ್ನ ಸಾಧನೆ ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕೆ ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆಯೂ ಆಗಿರುವ ಪಿ.ಟಿ. ಉಷಾ ಹರ್ಷ ವ್ಯಕ್ತಪಡಿಸಿದ್ದಾರೆ. ಭಾರತೀಯ ಅಥ್ಲೆಟಿಕ್ಸ್ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸಿದವರನ್ನು ಗುರುತಿಸುವ ಉದ್ದೇಶದಿಂದ ಈ ಪ್ರಶಸ್ತಿಗಳನ್ನು ಆರಂಭಿಸಲಾಗಿದೆ.

ಬಲಿಷ್ಠ ತಂಡದೆದುರು ಹೈಟಿಗೆ 3-0 ಸೋಲು, ಮ್ಯಾಥ್ಯೂಸ್ ಡಬಲ್ ಗೋಲ್

ಬ್ರೆಜಿಲ್‌ಗೆ ಭರ್ಜರಿ ಜಯ

ಫಿಲಿಡೆಲ್ಫಿಯಾ(ಅಮೆರಿಕ): ಮ್ಯಾಥ್ಯೂಸ್ ಕುನ್ಹಾ(23, 36ನೇ ನಿ.) ಡಬಲ್ ಗೋಲ್ ಮತ್ತು ವಿನೀಶಿಯಸ್ ಜೂನಿಯರ್(48ನೇ ನಿ.) ಅವರ ಗೋಲ್ ನೆರವಿನಿಂದ ಬಲಾಢ್ಯ ಬ್ರೆಜಿಲ್ ತಂಡ ಹೈಟಿ ವಿರುದ್ಧ 3-0 ಗೋಲುಗಳಿಂದ ಜಯ ಸಾಧಿಸಿದೆ. ಈ ಸೋಲಿನೊಂದಿಗೆ ಹೈಟಿ ತಂಡ ವಿಶ್ವಕಪ್‌ನಿಂದ ಹೊರಬಿದ್ದಿದೆ. 1974ರ ಬಳಿಕ ಇದೇ ಮೊದಲ ಬಾರಿಗೆ ವಿಶ್ವಕಪ್‌ಗೆ ಅರ್ಹತೆ ಪಡೆದಿದ್ದ ಹೈಟಿ ನಾಕೌಟ್ ಹಂತ ತಲುಪಲಾಗದೆ ನಿರಾಸೆಗೆ ಒಳಗಾಯಿತು.

ಕುನ್ಹಾ ತಮ್ಮ ವೃತ್ತಿಜೀವನದ ಮೊದಲ ವಿಶ್ವಕಪ್ ಗೋಲು ಬಾರಿಸುವ ಮೂಲಕ ಲಿಂಕನ್ ಫೈನಾನ್ಷಿಯಲ್ ಫೀಲ್ಡ್ ಕ್ರೀಡಾಂಗಣದಲ್ಲಿದ್ದ ಬ್ರೆಜಿಲ್ ಅಭಿಮಾನಿಗಳನ್ನು ರೋಮಾಂಚನಗೊಳಿಸಿದರು. ಬಳಿಕ ಎದುರಾಳಿ ಗೋಲ್‌ಕೀಪರ್‌ನಿಂದ ರಿಬೌಂಡ್ ಆದ ಚೆಂಡನ್ನು ಗೋಲು ಪೆಟ್ಟಿಗೆಗೆ ತಳ್ಳುವ ಮೂಲಕ ಮ್ಯಾಥ್ಯೂಸ್ ಮೊದಲಾರ್ಧದಲ್ಲೇ ಎಡಗಾಲಿನಿಂದ ಮತ್ತೊಂದು ಆಕರ್ಷಕ ಗೋಲ್ ಹೊಡೆದು ಹೈಟಿ ವಿರುದ್ಧ 2-0 ಮುನ್ನಡೆ ತಂದುಕೊಟ್ಟರು. ಬ್ರೆಜಿಲ್‌ನ ಫಾರ್ವರ್ಡ್ ಆಟಗಾರ ರಫಿನ್ಹಾ ಗಳಿಸಿದ ಆರಂಭಿಕ ಗೋಲನ್ನು ಆಫ್‌ಸೈಡ್ ಕಾರಣಕ್ಕಾಗಿ ತಿರಸ್ಕರಿಸಲಾಯಿತು. ಇದರಿಂದ ಬ್ರೆಜಿಲ್‌ನ ಗೆಲುವಿನ ಅಂತರ ತಗ್ಗಿತು.

ಹಿಂದಿನ ಮೊರಾಕ್ಕೊ ವಿರುದ್ಧದ ಪಂದ್ಯದಲ್ಲಿ 32ನೇ ನಿಮಿಷದಲ್ಲಿ ಗೋಲು ಹೊಡೆದು ಪಂದ್ಯ ಡ್ರಾ ಆಗಲು ಕಾರಣವಾಗಿದ್ದ ವಿನೀಶಿಯಸ್, ಈ ಪಂದ್ಯದಲ್ಲಿ ಕುನ್ಹಾರಿಗೆ ಅತ್ಯುತ್ತಮ ಪಾಸ್ ನೀಡುವ ಮೂಲಕ ಬ್ರೆಜಿಲ್ ಖಾತೆ ತೆರೆಯಲು ನೆರವಾದರು. ನಂತರ ಹೈಟಿಯ ರಕ್ಷಣಾತ್ಮಕ ಆಟಗಾರರ ನಡುವಿನಿಂದ ಸಿಕ್ಕ ಪಾಸ್‌ಅನ್ನು ಪಡೆದ ಕುನ್ಹಾ, ಚೆಂಡನ್ನು ಗೋಲ್ ಪೋಸ್ಟ್ ಗುರಿಯೊಳಗೆ ಸೇರಿಸಿ 2-0 ಮುನ್ನಡೆ ತಂದರು. ಬಳಿಕ 48ನೇ ನಿಮಿಷದಲ್ಲಿ ಗೋಲ್ ದಾಖಲಿಸುವ ಮೂಲಕ ವಿನೀಶಿಯಸ್ 3-0 ಗೋಲುಗಳಿಂದ ತಂಡ ಗೆಲ್ಲುವಲ್ಲಿ ಕಾಣಿಕೆ ಸಲ್ಲಿಸಿದರು.

2002ರ ನಂತರ ತನ್ನ ಮೊದಲ ವಿಶ್ವಕಪ್ ಪ್ರಶಸ್ತಿಯ ಹುಡುಕಾಟದಲ್ಲಿರುವ ಬ್ರೆಜಿಲ್, ಬುಧವಾರ ಫ್ಲೋರಿಡಾದ ಮಯಾಮಿ ಗಾರ್ಡನ್ಸ್‌ನಲ್ಲಿ ಸ್ಕಾಟ್ಲೆಂಡ್ ವಿರುದ್ಧ ತನ್ನ ಕೊನೆಯ ಗ್ರೂಪ್ 'ಸಿ' ಪಂದ್ಯವನ್ನು ಆಡಲಿದೆ. ಕಾಲಿನ ಸ್ನಾಯು ಸೆಳೆತದ ಸಮಸ್ಯೆಯಿಂದಾಗಿ ಖ್ಯಾತ ಬ್ರೆಜಿಲ್ ಆಟಗಾರ ನೇಮಾರ್ ಸತತ 2ನೇ ಪಂದ್ಯದಲ್ಲೂ ಬ್ರೆಜಿಲ್ ಪರ ಕಣಕ್ಕಿಳಿಯಲಿಲ್ಲ.

ಅಭಿಮಾನಿಗಳ ಹುರುಪು: ಹೈಟಿ ದೇಶದ ಅಭಿಮಾನಿಗಳು ತಮ್ಮ ರಾಷ್ಟ್ರೀಯ ತಂಡದ ಸಾಂಪ್ರದಾಯಿಕ ಯುದ್ಧ ಘೋಷಣೆಯಾದ 'ಗ್ರೇನೇಡಿಯೆ ಅಲಾಸೊ' (ದಾಳಿಗೆ ಮುನ್ನುಗ್ಗಿ) ಎಂದು ಹಾಡುತ್ತಾ ನೃತ್ಯ ಮಾಡಿದರು. ಇದಕ್ಕೆ ಪ್ರತಿಯಾಗಿ ಬ್ರೆಜಿಲಿಯನ್ನರು, ತಮ್ಮ ದೇಶ ಐದು ಬಾರಿ ವಿಶ್ವಕಪ್ ಚಾಂಪಿಯನ್ ಮತ್ತು ಫುಟ್‌ಬಾಲ್ ರಾಜ ಪೀಲೆಯ ತವರು ಬ್ರೆಜಿಲ್ ಎನ್ನುವುದನ್ನು ನೆನಪಿಸುವ ಘೋಷಣೆಗಳನ್ನು ಕೂಗಿದರು. ಸಮುದ್ರದ ಅಲೆಯ ಮಾದರಿಯ 'ಸರ್ಫಿಂಗ್' ಸಂಭ್ರಮಾಚರಣೆಯ ಮೂಲಕ ಬ್ರೆಜಿಲ್ ಅಭಿಮಾನಿಗಳು ಪಂದ್ಯದ ಹುರುಪನ್ನು ಹೆಚ್ಚಿಸಿದರು.

ಇತರೆ ಫಲಿತಾಂಶಗಳು

ದಿನದ ಇತರೆ ಗ್ರೂಪ್ ಸಿ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಆತಿಥೇಯ ಅಮೆರಿಕ ತಂಡ 2-0 ಗೋಲುಗಳಿಂದ ಜಯ ಸಾಧಿಸಿದೆ. ಸ್ಕಾಟ್ಲೆಂಡ್ ತಂಡವನ್ನು ಮೊರಾಕ್ಕೊ 1-0 ಗೋಲುಗಳಿಂದ ಮಣಿಸಿದೆ. ಟರ್ಕಿ ವಿರುದ್ಧ ಪರಾಗ್ವೆ 1-0 ಗೋಲಿನಿಂದ ಗೆದ್ದಿದೆ.

ಪಂದ್ಯಗಳು

ಬೆಲ್ಜಿಯಂ vs ಇರಾನ್
ಮಧ್ಯರಾತ್ರಿ 12.20 (ಭಾನುವಾರ)

ಉರುಗ್ವೆ vs ಕಾಬೊ ವೆರ್ಡೆ
ಮುಂಜಾನೆ 3.30 (ಸೋಮವಾರ)

ನ್ಯೂಜಿಲೆಂಡ್ vs ಈಜಿಪ್ಟ್
ಮುಂಜಾನೆ 6.30 (ಸೋಮವಾರ)

ಅರ್ಜೆಂಟೀನಾ vs ಆಸ್ಟ್ರಿಯಾ
ಬೆಳಗ್ಗೆ 10.30 (ಸೋಮವಾರ)

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಭಾರತ ಸರಣಿ ಕ್ಲೀನ್‌ಸ್ವೀಪ್

3ನೇ ಏಕದಿನ: ಅಫಘಾನಿಸ್ತಾನ ವಿರುದ್ಧ ಟೀಮ್ ಇಂಡಿಯಾಗೆ 9 ವಿಕೆಟ್ ಜಯ

ಶತಕ ಸಿಡಿಸಿದ ಯಶಸ್ವಿ ಜೈಸ್ವಾಲ್

ಚೆನ್ನೈ: ಯಶಸ್ವಿ ಜೈಸ್ವಾಲ್(110*), ರೋಹಿತ್ ಶರ್ಮ(79) ಭರ್ಜರಿ ಬ್ಯಾಟಿಂಗ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ(23ಕ್ಕೆ 5) ಅವರ ಪಂಚ ವಿಕೆಟ್ ಸಾಧನೆಯ ನೆರವಿನಿಂದ ಭಾರತ ಅಫಘಾನಿಸ್ತಾನ ವಿರುದ್ಧ 9 ವಿಕೆಟ್ ಅಂತರದ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ 3 ಪಂದ್ಯಗಳ ಏಕದಿನ ಸರಣಿಯನ್ನು ಆತಿಥೇಯ ಟೀಮ್ ಇಂಡಿಯಾ ಕ್ಲೀನ್‌ಸ್ವೀಪ್ ಮಾಡಿಕೊಂಡಿದೆ.

ಅಫಘಾನಿಸ್ತಾನ ನೀಡಿದ 219 ರನ್ ಗುರಿಯನ್ನು ಬೆನ್ನಟ್ಟಿದ ಭಾರತ ಕೇವಲ 28.4 ಓವರ್‌ಗಳಲ್ಲಿ ಗುರಿ ಮುಟ್ಟಿ ಗೆಲುವಿನ ನಗೆ ಬೀರಿತು. 22ನೇ ಓವರಿನಲ್ಲಿ ರೋಹಿತ್ ಶರ್ಮ ವಿಕೆಟ್ ಕಳೆದುಕೊಂಡ ಬಳಿಕ ಕಣಕ್ಕಿಳಿದ ಶ್ರೇಯಸ್ ಅಯ್ಯರ್, ಜೈಸ್ವಾಲ್‌ರಿಗೆ ಉತ್ತಮ ಸಾಥ್ ನೀಡಿದರು.

ಟಾಸ್ ಗೆದ್ದ ಅಫಘಾನಿಸ್ತಾನ ಬ್ಯಾಟಿಂಗ್ ಆರಿಸಿಕೊಂಡು 36 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಆರಂಭಿಕ ಸಂಕಷ್ಟಕ್ಕೆ ಗುರಿಯಾಯಿತು. ಪ್ರಸಿದ್ಧ್ ಕೃಷ್ಣರವರ ವೃತ್ತಿಜೀವನದ ಶ್ರೇಷ್ಠ ಬೌಲಿಂಗ್ ದಾಳಿಯ ನಡುವೆಯೂ, ನಾಯಕ ಹಷ್ಮತುಲ್ಲಾ ಶಾಹಿದಿ (102) ಗಳಿಸಿದ ದಿಟ್ಟ ಶತಕದ ನೆರವಿನಿಂದ ಅಫಘಾನಿಸ್ತಾನ 218 ರನ್ ಪೇರಿಸಿತು. ಮೊದಲ 10 ಓವರ್‌ಗಳಲ್ಲೇ 4 ವಿಕೆಟ್ ಪಡೆಯುವ ಮೂಲಕ ಪ್ರಸಿದ್ಧ್, ಜಸ್‌ಪ್ರೀತ್ ಬುಮ್ರಾ, ಜಾವಗಲ್ ಶ್ರೀನಾಥ್ ರಂತಹ ಸಾಧಕ ವೇಗಿಗಳ ಪಟ್ಟಿಗೆ ಸೇರಿದರು.

131 ಎಸೆತಗಳಲ್ಲಿ ತಮ್ಮ ಚೊಚ್ಚಲ ಏಕದಿನ ಶತಕ ಪೂರೈಸಿದ ಶಾಹಿದಿ, ಸ್ನಾಯು ಸೆಳೆತದ ನೋವಿನ ನಡುವೆಯೂ ಉತ್ತಮ ಹೋರಾಟ ತೋರಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರ್

ಅಫಘಾನಿಸ್ತಾನ: 44.2 ಓವರ್‌ಗಳಲ್ಲಿ 218 (ಹಷ್ಮತುಲ್ಲಾ ಶಾಹಿದಿ 102, ಹಜ್ಮತ್ ಉಲ್ಲಾ ಓಮರ್ಜಾಯಿ 50; ಪ್ರಸಿದ್ಧ್ ಕೃಷ್ಣ 23ಕ್ಕೆ 5, ಪ್ರಿನ್ಸ್ ಯಾದವ್ 38ಕ್ಕೆ 1).

ಭಾರತ: 28.4 ಓವರ್‌ಗಳಲ್ಲಿ 1 ವಿಕೆಟ್‌ಗೆ 224 (ಯಶಸ್ವಿ ಜೈಸ್ವಾಲ್ 110*, ರೋಹಿತ್ ಶರ್ಮ 79; ಮೊಹಮ್ಮದ್ ನಬಿ 47ಕ್ಕೆ 1)

ಹಾರ್ಸ್ ಪವರ್

ಬೆಂಗಳೂರು ರೇಸ್ ■ ಅಶ್ವ ಬಂಧು

ಡಾರ್ಟಗ್ನಾನ್ ಗೆಲ್ಲುವ ಫೇವರಿಟ್

ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಡಾರ್ಟಗ್ನಾನ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಜವಾರೇ ಎಸ್ ಪೂನಾವಾಲ ಕೋಲ್ಟ್ಸ್ ಚಾಂಪಿಯನ್‌ಶಿಪ್ ಗೆಲ್ಲುವ ಫೇವರಿಟ್ ಎನಿಸಿದೆ. ಎಂಟು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಅಂಜಾಕ್ ಪೆರೇಡ್ 2, ಚಿಸಾಕ್ಸ್ 1, ಮಾನ್‌ಸ್ಟೆರಾ 8
- 2ನೇ ರೇಸ್: ಅಫೆಲಿಯನ್ 2, ಮೆಜೆಸ್ಟಿಕ್ ಪರ್ಸೋನ 3, ಬೆಸ್ಟ್ ಆಫ್ ಏಸ್ 8
- 3ನೇ ರೇಸ್: ಒಸಾಕ 9, ರಿರ್ಘ್ 10, ಮಾನ್‌ಸ್ಟೆರ 8
- 4ನೇ ರೇಸ್: ಬಾರ್ಟೋಲಿನೊ 3, ಡಾರ್ಡನಸ್ 5, ಥ್ರಿಲ್ ಆಫ್ ಬ್ರೆಜಿಲ್ 1
- 5ನೇ ರೇಸ್: ಐಸ್ ಆಫ್ ಫೈರ್ 4, ಪ್ರೊಕೊಫಿವ್ 1, ಕ್ಯಾಸಿನಿ 5
- 6ನೇ ರೇಸ್: ಡಾರ್ಟಗ್ನಾನ್ 2, ಸ್ಟಡ್ ಪೋಕರ್ 6, ನಾಟಿ ಎಂಪರರ್ 3
- 7ನೇ ರೇಸ್: ಹಶ್ಡ್ 4, ಸುಪ್ರೀಮ್ ಸಕ್ಸಸ್ 7, ಸ್ಟೀಫನ್ 6
- 8ನೇ ರೇಸ್: ಮಿಸ್ಟಿಕಲ್ ಕ್ವೀನ್ 4, ಮೈ ಸಾಲಿಟೇರ್ 7, ಎಸ್ಟೆಫಿನ 8

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 4, 5, 6, 7, 8; 1ನೇ ಟ್ರಿಬಲ್: 3, 4, 5; 2ನೇ ಟ್ರಿಬಲ್: 6, 7, 8

ಅತ್ಯುತ್ತಮ ಬೆಟ್: ಅಫೆಲಿಯನ್

ಇಂದು ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಮ್ಯಾಂಚೆಸ್ಟರ್: ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಭರ್ಜರಿ ಆರಂಭ ಪಡೆದಿರುವ ಭಾರತ ತಂಡ, ಭಾನುವಾರ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯಲಿರುವ ಗ್ರೂಪ್-1ರ ಪಂದ್ಯದಲ್ಲಿ ಅಪಾಯಕಾರಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತೀಯ ಪಡೆ ಪಾಕಿಸ್ತಾನ ಮತ್ತು ನೆದರ್ಲೆಂಡ್ಸ್ ವಿರುದ್ಧ ಸತತ ದೊಡ್ಡ ಗೆಲುವುಗಳನ್ನು ಸಾಧಿಸಿ ಆತ್ಮವಿಶ್ವಾಸದಲ್ಲಿದೆ. ಸ್ಮೃತಿ ಮಂಧಾನ, ಶಫಾಲಿ ವರ್ಮಾ ಮತ್ತು ರಿಚಾ ಘೋಷ್ ಅವರ ಬ್ಯಾಟಿಂಗ್ ಬಲ ಹಾಗೂ ದೀಪ್ತಿ ಶರ್ಮಾ ಅವರ ಸ್ಪಿನ್ ದಾಳಿ ಭಾರತದ ಪ್ರಮುಖ ಶಕ್ತಿಯಾಗಿದೆ.

ಮತ್ತೊಂದೆಡೆ, ಆಸ್ಟ್ರೇಲಿಯಾ ವಿರುದ್ಧ ಸೋತರೂ ಪಾಕಿಸ್ತಾನವನ್ನು ಮಣಿಸಿ ಪುಟಿದೆದ್ದಿರುವ ಲಾರಾ ವೊಲ್ವಾರ್ಡ್ ನೇತೃತ್ವದ ದಕ್ಷಿಣ ಆಫ್ರಿಕಾ, ಭಾರತಕ್ಕೆ ಕಠಿಣ ಸವಾಲು ನೀಡಲು ಸಜ್ಜಾಗಿದೆ. ಕಳೆದ ಬಾರಿ ರನ್ನರ್‌ಅಪ್ ಆಗಿದ್ದ ದಕ್ಷಿಣ ಆಫ್ರಿಕಾ ತಂಡದ ಬಲಿಷ್ಠ ಬೌಲಿಂಗ್ ಮತ್ತು ಭಾರತದ ಬ್ಯಾಟರ್‌ಗಳ ನಡುವಿನ ಜಿದ್ದಾಜಿದ್ದಿ ಕುತೂಹಲ ಮೂಡಿಸಿದೆ. ಮ್ಯಾಂಚೆಸ್ಟರ್ ಪಿಚ್ ಸ್ಪಿನ್ನರ್‌ಗಳಿಗೆ ನೆರವಾಗುವ ಸಾಧ್ಯತೆಯಿದ್ದು, ಭಾರತದ ಸ್ಪಿನ್ ವಿಭಾಗ ಇಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವ ಸಾಧ್ಯತೆ ಇದೆ.

ಆಸ್ಟ್ರೇಲಿಯಾಗೆ 98 ರನ್ ಜಯ

ಆಸ್ಟ್ರೇಲಿಯಾ ತಂಡ ನೆದರ್ಲೆಂಡ್ಸ್ ವಿರುದ್ಧ 98 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಆಸೀಸ್ ಪಡೆ ಎದುರಾಳಿ ತಂಡಕ್ಕೆ 220 ರನ್‌ಗಳ ಸವಾಲಿನ ಗುರಿಯೊಡ್ಡಿತು. ಇದಕ್ಕುತ್ತರವಾಗಿ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 121 ರನ್ ಗಳಿಸಲಷ್ಟೇ ಶಕ್ತವಾಯಿತು.

ತಂಡಗಳು

ಭಾರತ: ಹರ್ಮನ್‌ಪ್ರೀತ್ ಕೌರ್(ನಾಯಕಿ), ಸ್ಮೃತಿ ಮಂಧಾನ, ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ಭಾರತಿ ಫುಲ್ಮಾಲಿ, ದೀಪ್ತಿ ಶರ್ಮಾ, ರಿಚಾ ಘೋಷ್, ಶ್ರೀಚರಣಿ, ಯಾಸ್ತಿಕಾ ಭಾಟಿಯಾ, ನಂದನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್, ಕ್ರಾಂತಿ ಗೌಡ್, ಶ್ರೇಯಾಂಕಾ ಪಾಟೀಲ್, ರಾಧಾ ಯಾದವ್.

ದಕ್ಷಿಣ ಆಫ್ರಿಕಾ: ಲಾರಾ ವೊಲ್ವಾರ್ಡ್ಟ್ (ನಾಯಕಿ), ತಜ್ಮಿನ್ ಬ್ರಿಟ್ಸ್, ನಾಡಿನ್ ಡಿ ಕ್ಲರ್ಕ್, ಅನ್ನೆರಿ ಡೆರ್ಕ್‌ಸೆನ್, ಶಬ್ನಿಮ್ ಇಸ್ಮಾಯಿಲ್, ಸಿನಾಲೊ ಜಫ್ತಾ, ಮರಿಜಾನ್ನೆ ಕಪ್, ಅಯಾಬೊಂಗಾ ಖಾಕಾ, ಸುನೆ ಲೂಸ್, ಕರಾಬೊ ಮೆಸೊ, ನಾನ್‌ಕುಲುಲೆಕೊ ಮ್ಲಾಬಾ, ಕೈಲಾ ರೆಕ್ನೆಕ್, ಚ್ಲೊ ಡ್ಯಾಕ್‌ಹುನೆ, ಚ್ಲೊ ಡ್ಯಾಕ್‌ಹುನೆ.

ಎಐಎಫ್‌ಎಫ್ ಪರಿಷ್ಕೃತ ಸಂವಿಧಾನಕ್ಕೆ ಅನುಮೋದನೆ

ಹೊಸದಿಲ್ಲಿ: ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಶನಿವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ, 'ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯಿದೆ (ಎನ್‌ಎಸ್‌ಜಿಎ), 2025' ಕ್ಕೆ ಅನುಗುಣವಾಗಿ ತನ್ನ ಪರಿಷ್ಕೃತ ಸಂವಿಧಾನವನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಎಐಎಫ್‌ಎಫ್ ಆಶ್ರಯದಲ್ಲಿ ನಡೆಯುವ ಎಲ್ಲಾ ಪಂದ್ಯಗಳ ಆರಂಭಕ್ಕೂ ಮುನ್ನ ರಾಷ್ಟ್ರಗೀತೆ 'ಜನ ಗಣ ಮನ' ಮತ್ತು ರಾಷ್ಟ್ರಗೀತೆ 'ವಂದೇ ಮಾತರಂ' ಅನ್ನು ಕಡ್ಡಾಯವಾಗಿ ನುಡಿಸಲು ಅನುಮೋದನೆ ನೀಡಲಾಗಿದೆ.

ಡೈಮಂಡ್ ಲೀಗ್: ನೀರಜ್‌ಗೆ 4ನೇ ಸ್ಥಾನ

ದೋಹಾ: ಗಾಯದ ಸಮಸ್ಯೆಯಿಂದಾಗಿ ಪ್ರಸಕ್ತ ಋತುವಿನ ಆರಂಭದ ಕೂಟದಿಂದ ಹೊರಗುಳಿದಿದ್ದ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ, ಇಲ್ಲಿ ನಡೆದ ದೋಹಾ ಡೈಮಂಡ್ ಲೀಗ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ. 28 ವರ್ಷದ ನೀರಜ್ ತಮ್ಮ ಮೂರನೇ ಯತ್ನದಲ್ಲಿ 85.69 ಮೀಟರ್ ದೂರ ಜಾವೆಲಿನ್ ಎಸೆದು ಈ ಸಾಧನೆ ಮಾಡಿದರು. ಇದರೊಂದಿಗೆ ಮುಂಬರುವ ಕಾಮನ್‌ವೆಲ್ತ್ ಗೇಮ್ಸ್‌ಗೆ ಭಾರತೀಯ ಅಥ್ಲೆಟಿಕ್ಸ್ ಫೆಡರೇಶನ್ ನಿಗದಿಪಡಿಸಿದ್ದ 82.61 ಮೀಟರ್ ಅರ್ಹತಾ ಮಾರ್ಕ್ ಅನ್ನು ಅವರು ಸುಲಭವಾಗಿ ದಾಟಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಚೋಪ್ರಾ 'ಮತ್ತೆ ಮೈದಾನಕ್ಕೆ ಮರಳಿರುವುದು ಸಂತಸ ತಂದಿದೆ' ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಶ್ರೀಲಂಕಾದ ಉದಯೋನ್ಮುಖ ತಾರೆ ರುಮೇಶ್ ತರಂಗ ಪತಿರಾಜ (88.68 ಮೀ) ಚಿನ್ನ ಗೆದ್ದರೆ, ಗ್ರೆನಡಾದ ಆಂಡರ್ಸನ್ ಪೀಟರ್ಸ್ ಎರಡನೇ ಸ್ಥಾನ ಪಡೆದರು. ಕಳೆದ ನಾಲ್ಕು ವರ್ಷಗಳಲ್ಲಿ ನೀರಜ್ ಡೈಮಂಡ್ ಲೀಗ್‌ನಲ್ಲಿ ಮೊದಲ ಎರಡು ಸ್ಥಾನಗಳಿಂದ ಹೊರಗುಳಿದಿರುವುದು ಇದೇ ಮೊದಲು. ಗಾಯದ ಸುದೀರ್ಘ ವಿರಾಮದ ನಂತರ ಕಣಕ್ಕಿಳಿದಿರುವುದರಿಂದ ಅವರ ಪ್ರದರ್ಶನದ ಮೇಲೆ ಪರಿಣಾಮ ಬೀರಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಇಂಡೆಂಟ್ ಸಂಖ್ಯೆ: ಬೆಸ್ಕಾಂ/2026-27/ಐಎಂಡಿ0263ರಂತೆ **ನಂ.15 ಸ್ಟೇನ್ ಇನ್ಸುಲೇಟರ್‌ಗಳ (ಹೆಚ್‌ಟಿ ಗೈ ಸ್ಟೇನ್)** ಪೂರೈಕೆಗಾಗಿ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ. **ಬಿಡ್ ದಸ್ತಾವೇಜುಗಳ ಲಭ್ಯತೆ:** 24.06.2026 ರಿಂದ. **ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 24.07.2026, 17:30 ಗಂಟೆ. **ಬಿಡ್ ದಸ್ತಾವೇಜು ತೆರೆಯುವ ದಿನಾಂಕ:** 27.07.2026, 11:00 ಗಂಟೆ. ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಪಡೆದುಕೊಳ್ಳಬಹುದು. ಆಸಕ್ತ ಬಿಡ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಹೆಲ್ಪ್ ಡೆಸ್ಕ್ ಕಾಂಟ್ಯಾಕ್ಟ್ ನಂಬರ್‌ಗಳು 91-8046010000, +91-8068948777 ಅಥವಾ ಇ-ಮೇಲ್ **support@eprochelpdesk.com** ನಲ್ಲಿ ಸಂಪರ್ಕಿಸಿ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ)
ಖರೀದಿ ಶಾಖೆ, ಬೆವಿಕಂ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಪಶ್ಚಿಮ ವಲಯ-2
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - 560 040.
ಸಂಖ್ಯೆ:ಕಾಪಾಅ(ವಿನ)/ಟೆಂಡರ್/ಕೆಪಿಪಿ/03/2026-27 **ದಿನಾಂಕ: 20-06-2026**

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬೆಂ.ಪ.ನ.ಪಾಲಿಕೆ, ಬೆಂಗಳೂರು ಇವರು, ಆಯುಕ್ತರು ಬೆಂ.ಪ.ನ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ-3 ಮತ್ತು ಕೆಡಬ್ಲ್ಯೂ-4 ರಂತೆ ಜಿ.ಬಿ.ಎ ಅಥವಾ ತತ್ಸಮಾನವಾಗಿ ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತವಾಗಿರುವ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ವಿಜಯನಗರ ಉಪವಿಭಾಗ, ವಾರ್ಡ್ ಸಂಖ್ಯೆ-83,84,85,86,87,88 ಮತ್ತು 89 ರಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ವಾರ್ಷಿಕ ನಿರ್ವಹಣೆ, ಪಾದಚಾರಿ ಮಾರ್ಗಗಳ ನಿರ್ವಹಣೆ, ಪ್ರಧಾನ ಮತ್ತು ಉಪಪ್ರಧಾನ ರಸ್ತೆಗಳ ಚರಂಡಿಗಳಲ್ಲಿ ಮತ್ತು ಶೋಲ್ಡರ್‌ಗಳಲ್ಲಿ ಹೂಳು ತೆಗೆಯುವುದು. **ಅಂದಾಜು ಮೊತ್ತ: ₹.105.00 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹.87.23 ಲಕ್ಷಗಳು, ಇಎಂಡಿ ಮೊತ್ತ: ₹.1,30,845.00**
2.	ಗಾಳಿ ಅಂಜನೇಯ ದೇವಸ್ಥಾನ ಉಪವಿಭಾಗ, ವಾರ್ಡ್ ಸಂಖ್ಯೆ-82,90,91,92, 93 ಮತ್ತು 94 ರಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ವಾರ್ಷಿಕ ನಿರ್ವಹಣೆ, ಪಾದಚಾರಿ ಮಾರ್ಗಗಳ ನಿರ್ವಹಣೆ, ಪ್ರಧಾನ ಮತ್ತು ಉಪಪ್ರಧಾನ ರಸ್ತೆಗಳ ಚರಂಡಿಗಳಲ್ಲಿ ಮತ್ತು ಶೋಲ್ಡರ್‌ಗಳಲ್ಲಿ ಹೂಳು ತೆಗೆಯುವುದು. **ಅಂದಾಜು ಮೊತ್ತ: ₹.90.00 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹. 74.75 ಲಕ್ಷಗಳು, ಇಎಂಡಿ ಮೊತ್ತ: ₹.1,12,125.00**
3.	ಬೆಂ.ಪ.ನ ಪಾಲಿಕೆಯ ವಿಜಯನಗರ ಕ್ಷೇತ್ರದಲ್ಲಿ ಬೃಹತ್ ನೀರು ಕಾಲುವೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ: ₹.97.56 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹. 97.51 ಲಕ್ಷಗಳು, ಇಎಂಡಿ ಮೊತ್ತ: ₹.1,46,265.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **23-06-2026**ರ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ **03-07-2026**ರ ಸಂಜೆ **4.00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **30-06-2026**ರ ಸಂಜೆ **3.00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ದಾಖಲೆಗಳನ್ನು ದಿನಾಂಕ **04-07-2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು (ಕೆಪಿಪಿ ಮೂಲಕ ನಂತರ ತಿಳಿಸಲಾಗುವುದು)

ಸಹಿ/- ಕಾರ್ಯಪಾಲಕ ಅಭಿಯಂತರರು (ವಿಜಯನಗರ)
ಬೆಂ.ಪ.ನ.ಪಾ ವಲಯ-2

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂ:08539-220054.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2026-27/1006
ದಿ: 16/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 06 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಗಿಟ್ಟ ಮೊತ್ತ ಕನಿಷ್ಠ ರೂ.12.00 ಲಕ್ಷಗಳಿಂದ 500.00 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **20/06/2026** ರಿಂದ ದಿನಾಂಕ: **07/07/2026** ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **01/07/2026** ರಂದು ಬೆಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **09/07/2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **10/07/2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ.ಪಿ" ವೆಬ್‌ಸೈಟ್ Karnataka Public Procurement Portal ನಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/179/ಕೆಎಸ್‌ಎಂಸಿಎ/2026-27

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ನಂ. 6/13/1, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560072. ದೂರವಾಣಿ: **080-22282220**
E-mail: **kredlmd@gmail.com**, Website: **www.kredl.karnataka.gov.in**
ಸಂಖ್ಯೆ: **KREDL/07/SG/F-1992/2025-26** ದಿನಾಂಕ: 21.06.2026

ಇ- ಟೆಂಡರ್ ಪ್ರಕಟಣೆ
(ಜಿಓಕೆ ಕೆಪಿಪಿ ಪೋರ್ಟಲ್ **https://kppp.karnataka.gov.in/** ಮೂಲಕ)

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (ಕೆಆರ್‌ಇಡಿಎಲ್), ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾಗಿದ್ದು, **ಕರ್ನಾಟಕದಲ್ಲಿನ ಬಳ್ಳಾರಿ ಜಿಲ್ಲೆಯ, ಕೆ.ಪಿ.ಸಿ.ಎಲ್‌ನ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ(BTPS) ಆವರಣದಲ್ಲಿ 300 ಕಿಲೋ ವ್ಯಾಟ್ ಹೈಡ್ರೋಜನ್ ಸ್ಥಾವರದ ವಿನ್ಯಾಸ, ತಯಾರಿಕೆ, ಸರಬರಾಜು, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವುದು ಮತ್ತು 10 ವರ್ಷಗಳ ಸ್ಥಾವರದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ (ಇಪಿಸಿ)ಗುತ್ತಿಗೆದಾರರ ಆಯ್ಕೆಗಾಗಿ** ಈ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ದಸ್ತಾವೇಜುಗಳು-ಪ್ರೊಕ್ಯುರ್‌ಮೆಂಟ್ ಪೋರ್ಟಲ್ **https://kppp.karnataka.gov.in/** ರಲ್ಲಿ ದಿನಾಂಕ: **22.06.2026** ರಂದು ಅಥವಾ ಆನಂತರ ಲಭ್ಯವಾಗಲಿದೆ ಹಾಗೂ ಬಿಡ್ ಸಲ್ಲಿಸುವ ಕಡೆಯ ದಿನಾಂಕ: **21.07.2026** ಆಗಿರುತ್ತದೆ. ವಿವರಗಳು ಕೆಆರ್‌ಇಡಿಎಲ್ ವೆಬ್‌ಸೈಟ್‌ನಲ್ಲಿಯೂ ಲಭ್ಯವಿದೆ. ಹೆಚ್ಚಿನ ತಿದ್ದುಪಡಿಗಳಿದ್ದಲ್ಲಿ ಅವುಗಳನ್ನು ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸೂಚನೆ: ಕೆಆರ್‌ಇಡಿಎಲ್ ಸಂಸ್ಥೆಯು ಬಿಡ್ಡಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸುವ ಮತ್ತು ಅಂತಹ ಆಹ್ವಾನ ಪ್ರಕಟಣೆಯನ್ನು ಯಾವುದೇ ಹೊಣೆಗಾರಿಕೆ ಅಥವಾ ಬಾಧ್ಯತೆ ನೀಡದೆ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಯಾವುದೇ ಮುಂದಿನ ಮಾರ್ಪಾಡುಗಳನ್ನು **https://kppp.karnataka.gov.in/** ಹಾಗೂ ಕೆಆರ್‌ಇಡಿಎಲ್ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಸಹಾಯಕ ಪ್ರಧಾನ ವ್ಯವಸ್ಥಾಪಕರು, ಎಸ್‌ಜಿ, ಕೆಆರ್‌ಇಡಿಎಲ್

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2026-27/478
ದಿನಾಂಕ:-20/06/2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
("ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ ವಿವಿಧ ಲೆಕ್ಕಶೀರ್ಷಿಕೆ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ & ದ್ವಿ-ಲಕೋಟೆಯಲ್ಲಿ **ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ-1 & 3ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:09 ಟೆಂಡರ್‌ಗಿಟ್ಟ ಮೊತ್ತ ರೂ.5.09 ಲಕ್ಷಗಳಿಂದ 83.31 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಕಟ್ಟಡ ಮತ್ತು ರಸ್ತೆ ನಿರ್ಮಾಣ ಟೆಂಡರ್ ಫಾರಂಗಳನ್ನು ದಿನಾಂಕ: 20/06/2026 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 04/07/2026 ಸಂಜೆ 5.00 ಗಂಟೆಯವರೆಗೆ** ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192-250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/167/ಕೆಎಸ್‌ಎಂಸಿಎ/2026-27
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ದಾವಣಗೆರೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103
E-Mail:bnuregevl@karnataka.gov.in
web: www.bnu.karnataka.gov.in
ದಿನಾಂಕ: 19.06.2026

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕ್ರಿಯೆಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವಕ್ಕೆ ಈವೆಂಟ್ ಮ್ಯಾನೇಜ್ಮೆಂಟ್ ಸೇವೆಯನ್ನು ಒದಗಿಸುವ ಬಗ್ಗೆ. ಟೆಂಡರ್ ಸಂಖ್ಯೆ : **BNU/2026-27/SE0015.** (2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವಕ್ಕೆ ಅಡುಗೆ ಸೇವೆ **(Catering services)** ಒದಗಿಸುವ ಬಗ್ಗೆ. ಟೆಂಡರ್ ಸಂಖ್ಯೆ : **BNU/2026-27/IND0071.** (3) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದ ಅಂಗವಾಗಿ ಪರೀಕ್ಷಾ ವಿಭಾಗಕ್ಕೆ ಭದ್ರತಾ ವೈಶಿಷ್ಟ್ಯಗಳೊಂದಿಗೆ ಪದವಿ ಪ್ರಮಾಣಪತ್ರಗಳ ಮುದ್ರಣ ಮತ್ತು ಸರಬರಾಜು ಮಾಡುವ ಬಗ್ಗೆ. ಟೆಂಡರ್ ಸಂಖ್ಯೆ : **BNU/2026-27/IND0072.** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು **ದಿನಾಂಕ: 16.06.2026 & 18.06.2026** ರಿಂದ **http://kppp.karnataka.gov.in ವೆಬ್ ಸೈಟ್ ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.** ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು(ಮೌ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ-563103
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:132/ಕೆಎಸ್‌ಎಂಸಿಎ/2026-27

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ:08262-220936 E-Mail: zpedckm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:09/2026-27 690 ದಿನಾಂಕ:16.06.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು, ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ.37.89 ಲಕ್ಷಗಳು ಮತ್ತು ಕನಿಷ್ಠ ಮೊತ್ತ ರೂ.11.50 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ Standard Tender Document KW-1 &2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:16.06.2026 ರಿಂದ ದಿನಾಂಕ:30.06.2026 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:02.07.2026 ರಂದು ಸಂಜೆ 5.05 ಗಂಟೆಗೆ ತೆಗೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಿರಿ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಮೈಸೂರು-570 006.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಟೆಂಡರ್ ಪ್ರಕಟಣೆ ಸಂಖ್ಯೆ. 02/2026-27 ದಿನಾಂಕ:18.06.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು, ಟೆಂಡರ್ ನಮೂನೆ KW-4 ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ), "ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕು ವ್ಯಾಪ್ತಿಯ ಬಳೂರು ಮತ್ತು ಇತರೆ 15 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ಅಂದಾಜು ಮೊತ್ತ ರೂ.346.00 ಲಕ್ಷಗಳಿಗೆ" ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 18.06.2026 ರಿಂದ 30.06.2026 ರವರೆಗೆ, ಟೆಂಡರ್ ತೆರೆಯುವ ದಿ: 01.07.2026 ರ ಸಂಜೆ 4.00 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821-2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DDMYS/354/KSMCA/236/2026-27

ಪಂಚಾಂಗ 21-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಶುಕ್ಲ. **ಮಳೆ ನಕ್ಷತ್ರ:** ಮೃಗಶಿರಾ.
ನಿತ್ಯನಕ್ಷತ್ರ: ಪೂರ್ವಫಾಲ್ಗುಣ.
ತಿಥಿ: ಸಪ್ತಮಿ. **ಯೋಗ:** ಸಿದ್ಧಿ.
ಕರಣ: ವಣಿಕ್.
ವಾರ: ಭಾನುವಾರ.

ರಾಹು ಕಾಲ: **ಸಂ. 4.30 - 6.00**
ಗುಳಿಕ ಕಾಲ: **ಮ. 3.00-4.30**
ಯಮಗಂಡ ಕಾಲ: **ಮ. 12.00-1.30**
ಸೂರ್ಯ ಉದಯ: **ಬೆ. 5.56**
ಸೂರ್ಯ ಅಸ್ತ: **ಸಂ. 6.46**

ಕೃಷಿ ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂ.25ರವರೆಗೆ ವಿಸ್ತರಿಸಲಾಗಿದೆ. ಬಿ.ಇ ಬಯೊಟೆಕ್ನಾಲಜಿ ಪದವಿಯನ್ನು ಬಿ.ಟೆಕ್ ಬಯೊಟೆಕ್ನಾಲಜಿ ಪದವಿಗೆ ಸಮಾನವೆಂದು ಸರಕಾರ ಪರಿಗಣಿಸಿದೆ. ಹೀಗಾಗಿ, ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳಿಗೆ ಬಿ.ಇ ಬಯೊ ಟೆಕ್ನಾಲಜಿ ಅಭ್ಯರ್ಥಿಗಳು ಕೂಡ ಅರ್ಜಿ ಸಲ್ಲಿಸಬಹುದು. ಈ ಹಿಂದೆ ಜೂ.20ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. ಜೂ.22ರವರೆಗೆ ಶುಲ್ಕ ಪಾವತಿಗೆ ಅವಕಾಶ ಇತ್ತು. ಈಗ ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಿಸಿದ್ದು, ಜೂ.25ರ ಸಂಜೆ 5 ಗಂಟೆವರೆಗೆ ಶುಲ್ಕ ಪಾವತಿಸಬಹುದಾಗಿದೆ.

ನಟ ವಿನೋದ್ ಪ್ರಭಾಕರ್ ಆಸ್ಪತ್ರೆಗೆ ದಾಖಲು, ಆರೋಗ್ಯ ಸ್ಥಿರ

ಬೆಂಗಳೂರು: ನಟ ವಿನೋದ್ ಪ್ರಭಾಕರ್ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ನಗರದ ನಾಗರಬಾವಿಯಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ವಿನೋದ್ ಪ್ರಭಾಕರ್ ಅವರ ಆರೋಗ್ಯ ಸ್ಥಿರವಾಗಿದ್ದು, ಆತಂಕಪಡಬೇಕಾದ ಅಗತ್ಯವಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

'ಬಲರಾಮನ ದಿನಗಳು' ಸಿನಿಮಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದ ವಿನೋದ್ ಪ್ರಭಾಕರ್ ಅವರು ಕಡಿಮೆ ರಕ್ತದೊತ್ತಡ ಸಮಸ್ಯೆಯಿಂದ ಬಳಲುತ್ತಿದ್ದರು. ಶನಿವಾರ ಬೆಳಗ್ಗೆ ಆರೋಗ್ಯದಲ್ಲಿ ಏರುಪೇರಾಗಿದ್ದು, ತಕ್ಷಣ ಪತ್ನಿಯೊಂದಿಗೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

''ವೈದ್ಯರ ಸಲಹೆಯಂತೆ ವಿನೋದ್ ಪ್ರಭಾಕರ್ ಅವರಿಗೆ ಎಲ್ಲ ರೀತಿಯ ತಪಾಸಣೆ ಮಾಡಿಸಲಾಗಿದೆ. ಭಾನುವಾರ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ. ಸೋಮವಾರ ಚಿತ್ರ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿದ್ದಾರೆ'' ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಬೆಂಗಳೂರು ಬ್ಲಾಸ್ಟರ್ಸ್ ಶುಭಾರಂಭ

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿ

■ **ಬೀರೇಶ್ ಕಬಿನಿ** ಮೈಸೂರು
beeresha.mahadeva@timesofindia.com

ಅಂತಿಮ ಕ್ಷಣದವರೆಗೂ ಕುತೂಹಲದಿಂದ ಕೂಡಿದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಅದ್ಭುತ ಹೋರಾಟದ ಮೂಲಕ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ 6 ವಿಕೆಟ್‌ಗಳ ರೋಚಕ ಗೆಲುವು ದಾಖಲಿಸಿ ಶುಭಾರಂಭ ಮಾಡಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 201 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ಆದರೆ ಸವಾಲಿನ ಗುರಿಯನ್ನು ಬೆನ್ನಟ್ಟಿದ ಬೆಂಗಳೂರು ಬ್ಲಾಸ್ಟರ್ಸ್ ಒತ್ತಡದ ಕ್ಷಣಗಳಲ್ಲೂ ಆತ್ಮವಿಶ್ವಾಸ ಕಳೆದುಕೊಳ್ಳದೆ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 202 ರನ್ ಗಳಿಸಿ ರೋಚಕ ಜಯದ ನಗೆ ಬೀರಿತು. ತಂಡ ಸಂಕಷ್ಟಕ್ಕೆ ಸಿಲುಕಿದ್ದ ಸಂದರ್ಭದಲ್ಲಿ ನಾಯಕ ಶುಭಾಂಗ್ ಹೆಗ್ಡೆ ಹಾಗೂ ಅನುಭವಿ ಪ್ರವೀಣ್ ದುಬೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದರು. ಅಜೇಯವಾಗಿ ಉಳಿದ ಈ ಜೋಡಿ ಐದನೇ ವಿಕೆಟ್‌ಗೆ 55 ರನ್‌ಗಳ ಅಮೂಲ್ಯ ಜೊತೆಯಾಟ ಕಟ್ಟಿಕೊಟ್ಟು ತಂಡವನ್ನು ಗೆಲುವಿನ ದಡ ಸೇರಿಸಿತು. ಹೆಗ್ಡೆ 36 ಹಾಗೂ ದುಬೆ 32 ರನ್ ಗಳಿಸಿ ಪಂದ್ಯದ ದಿಕ್ಕನ್ನೇ ಬದಲಿಸಿದರು.

ಸಿಡಿಲಬ್ಬರದ ಆರಂಭ: 202 ರನ್‌ಗಳ ಗುರಿ ಬೆನ್ನಟ್ಟಿದ ಬೆಂಗಳೂರು ಪರ ಆರಂಭಿಕರಾದ ಭುವನ್ ಮೋಹನ್ ಮತ್ತು ರೋಹನ್ ಪಾಟೀಲ್ ಸ್ಫೋಟಕ ಆರಂಭ ಒದಗಿಸಿದರು. ಕೇವಲ 29 ಎಸೆತಗಳಲ್ಲಿ 56 ರನ್ ಸಿಡಿಸಿದ ಭುವನ್ ಮೋಹನ್ ಎದುರಾಳಿ ಬೌಲರ್‌ಗಳ ಮೇಲೆ ಸಂಪೂರ್ಣ ಪ್ರಾಬಲ್ಯ ಸಾಧಿಸಿದರು. ಇನ್ನೊಂದೆಡೆ ರೋಹನ್ ಪಾಟೀಲ್ 24 ಎಸೆತಗಳಲ್ಲಿ 31 ರನ್ ಗಳಿಸಿ ಉತ್ತಮ ಬೆಂಬಲ ನೀಡಿದರು. ಮೊದಲ ವಿಕೆಟ್‌ಗೆ 88 ರನ್‌ಗಳ ಜೊತೆಯಾಟ ಕಟ್ಟಿದ ಈ ಜೋಡಿ ಬೆಂಗಳೂರಿಗೆ ಭದ್ರ ಅಡಿಪಾಯ ಹಾಕಿಕೊಟ್ಟಿತು. 15 ಓವರ್‌ಗಳ ಅಂತ್ಯಕ್ಕೆ 147 ರನ್‌ಗೆ 4 ವಿಕೆಟ್ ಕಳೆದುಕೊಂಡಿದ್ದ ಬೆಂಗಳೂರು ಒತ್ತಡಕ್ಕೆ ಸಿಲುಕಿತ್ತು. ಇದೇ ಸಂದರ್ಭದಲ್ಲಿ ಶುಭಾಂಗ್ ಹೆಗ್ಡೆ ಮತ್ತು ಪ್ರವೀಣ್ ದುಬೆ ಪರಿಸ್ಥಿತಿಗೆ ತಕ್ಕ ಬ್ಯಾಟಿಂಗ್ ನಡೆಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಮಿಸ್ಟಿಕ್ಸ್‌ಗೆ ಚತುರ್ವೇದಿ-ಆರವ್ ಆಸರೆ: ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಗುಲ್ಬರ್ಗಾ ಮಿಸ್ಟಿಕ್ಸ್ ಆರಂಭದಲ್ಲೇ ಲೋಚನ್ ಗೌಡ (17) ವಿಕೆಟ್ ಕಳೆದುಕೊಂಡು ಹಿನ್ನಡೆ ಅನುಭವಿಸಿತು. ಆದರೆ ನಂತರ ಪ್ರಖರ್ ಚತುರ್ವೇದಿ ಮತ್ತು ಆರವ್ ಮಹೇಶ್ ಅಬ್ಬರದ ಬ್ಯಾಟಿಂಗ್ ಮೂಲಕ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದರು. ಚತುರ್ವೇದಿ 38 ಎಸೆತಗಳಲ್ಲಿ 64 ರನ್ ಹಾಗೂ ಆರವ್ ಮಹೇಶ್ 41 ಎಸೆತಗಳಲ್ಲಿ 63 ರನ್ ಸಿಡಿಸಿ ಮಿಂಚಿದರು. ನಂತರ ಕಣಕ್ಕಿಳಿದ ತಂಡದ ನಾಯಕ ಮನೀಷ್ ಪಾಂಡೆ 19 ರನ್‌ಗಳಿಗೆ ಸೀಮಿತರಾದರೆ ಉಳಿದ ಬ್ಯಾಟರ್‌ಗಳು ದೊಡ್ಡ ಮೊತ್ತ ಸೇರಿಸಲು ವಿಫಲರಾದರು.

ಬೆಂಗಳೂರು ತಂಡದ ಪರವಾಗಿ ಉತ್ತಮ ಜತೆಯಾಟ ಪ್ರದರ್ಶಿಸಿದ ನಾಯಕ ಶುಭಾಂಗ್ ಹೆಗ್ಡೆ ಹಾಗೂ ಪ್ರವೀಣ್ ದುಬೆ.

ಸಂಕ್ಷಿಪ್ತ ಸ್ಕೋರ್

ಗುಲ್ಬರ್ಗಾ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 201 (ಪ್ರಖರ್ ಚತುರ್ವೇದಿ 64, ಆರವ್ ಮಹೇಶ್ 63, ಮನೀಷ್ ಪಾಂಡೆ 19; ಶುಭಾಂಗ್ ಹೆಗ್ಡೆ 2 ವಿಕೆಟ್, ಶ್ರೀವತ್ಸ ಆಚಾರ್ಯ 2)
ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 202 (ಭುವನ್ ಮೋಹನ್ 56, ರೋಹನ್ ಪಾಟೀಲ್ 31, ಶುಭಾಂಗ್ ಹೆಗ್ಡೆ 36*, ಪ್ರವೀಣ್ ದುಬೆ 32*).

ಶಿವಮೊಗ್ಗ ಲಯನ್ಸ್‌ಗೆ 90 ರನ್ ಜಯ: ಲವ್ನಿತ್ ಸಿಸೋಡಿಯ(58) ಅರ್ಧ ಶತಕ ಯಶ್ ಪೂಂಜಾ(30ಕ್ಕೆ 4) ಮಾರಕ ಬೌಲಿಂಗ್ ನೆರವಿನಿಂದ ಶಿವಮೊಗ್ಗ ಲಯನ್ಸ್ ತಂಡ ಮೈಸೂರು ವಾರಿಯರ್ಸ್ ವಿರುದ್ಧ 90 ರನ್ ಜಯ ಸಾಧಿಸಿದೆ. ಶಿವಮೊಗ್ಗ ನೀಡಿದ 191 ರನ್ ಗುರಿ ಬೆನ್ನಟ್ಟಿದ ಮೈಸೂರು ತಂಡ 14.5 ಓವರ್‌ಗಳಲ್ಲಿ 100 ರನ್‌ಗಳಿಗೆ ಸರ್ವಪತನ ಕಂಡಿತು. ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಶಿವಮೊಗ್ಗ ಪರ ಲವ್ನಿತ್ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು.

ಸಂಕ್ಷಿಪ್ತ ಸ್ಕೋರ್ : ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 190(ಲವ್ನಿತ್ ಸಿಸೋಡಿಯ 58, ಹರ್ಷಿಲ್ 36; ಮನೋಜ್ 16ಕ್ಕೆ 2, ವೈಶಾಖ್ ವಿಜಯ್ ಕುಮಾರ್ 38ಕ್ಕೆ 2); **ಮೈಸೂರು ವಾರಿಯರ್ಸ್:** 14.5 ಓವರ್‌ಗಳಲ್ಲಿ 100(ರಿತೇಶ್ 17, ಕಾರ್ತಿಕ್ 16; ಯಶ್ ಪೂಂಜಾ 30ಕ್ಕೆ 4, ಶ್ರೀಶ ಆಚಾರ್ 9ಕ್ಕೆ 2).

ಇಂದಿನ ಪಂದ್ಯಗಳು
ಮಂಗಳೂರು ಡ್ರ್ಯಾಗನ್ಸ್ vs ಹುಬ್ಬಳ್ಳಿ ಟೈಗರ್ಸ್
ಸಮಯ: ಮಧ್ಯಾಹ್ನ 2.30
ಬೆಂಗಳೂರು ಬ್ಲಾಸ್ಟರ್ಸ್ vs ಶಿವಮೊಗ್ಗ ಲಯನ್ಸ್
ಸಮಯ: ರಾತ್ರಿ 7
ನೇರಪ್ರಸಾರ: ಫ್ಯಾನ್ ಕೋಡ್ ಆಪ್

ಕನ್ನಡ ಕಲಿಸದ ಶಾಲೆಗಳ ವಿರುದ್ಧ ಕ್ರಮಕ್ಕೆ ಆಗ್ರಹ

ನಿಯಮ ಪಾಲಿಸದ ಶಾಲೆಗಳ ವಿರುದ್ಧ ರಾಜ್ಯಾದ್ಯಂತ ಹೋರಾಟ

■ **ವಿಕ ಸುದ್ದಿಲೋಕ** ಬೆಂಗಳೂರು

ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಕಲಿಸಬೇಕೆಂಬ ಸರಕಾರಿ ಆದೇಶವನ್ನು ಉಲ್ಲಂಘಿಸುತ್ತಿರುವ ಶಾಲೆಗಳನ್ನು ಮುಚ್ಚಿಸಬೇಕು ಎಂದು ಸಾಹಿತಿಗಳು, ಕನ್ನಡ ಹೋರಾಟಗಾರರು, ಚಿತ್ರ ನಿರ್ದೇಶಕರು, ಇತಿಹಾಸ ತಜ್ಞರು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.

ಕನ್ನಡ ಮೊದಲು ಬಳಗದ ನೇತೃತ್ವದಲ್ಲಿ ನಗರದಲ್ಲಿ ನಡೆದ ರಾಜ್ಯ ಮಟ್ಟದ ದುಂಡು ಮೇಜಿನ ಸಭೆಯಲ್ಲಿ ಶಿಕ್ಷಣದಲ್ಲಿ ಕನ್ನಡದ ಕಡ್ಡಾಯ ಕಲಿಕೆ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ, ಸರಕಾರದ ನಿಯಮ ಪಾಲಿಸದ ಶಾಲೆಗಳ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡಲು ತೀರ್ಮಾನಿಸಲಾಯಿತು.

ಕನ್ನಡ ಭಾಷಾ ಅಧಿನಿಯಮ 2015ರ ಪ್ರಕಾರ ಎಲ್ಲ ಖಾಸಗಿ, ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಶಾಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು 1 ಅಥವಾ 2ನೇ ಭಾಷೆಯಾಗಿ ಕಲಿಸದಿದ್ದರೆ, ಒಂದು ವಾರದ ಗಡುವಿನ ನಂತರ ಅಂತಹ ಶಾಲೆಗಳಿಗೆ ಭೇಟಿ ನೀಡಿ ಕಾನೂನಾತ್ಮಕವಾಗಿ ಉಗ್ರ ಹೋರಾಟ ನಡೆಸುವುದು. ನಿಯಮ ಉಲ್ಲಂಘಿಸುವ ಶಾಲೆಗಳಿಗೆ ಲಗಾಮು ಹಾಕದ ಕ್ಷೇತ್ರ ಶಿಕ್ಷಣಾಧಿಕಾರಿಗಳ (ಬಿಇಒ) ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸುವುದು. ಈ ವಿಚಾರ ಮುಂದಿಟ್ಟುಕೊಂಡು ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಹೋರಾಟ ರೂಪಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ರಾಜ್ಯಸಭೆಯ ಮಾಜಿ ಸದಸ್ಯ ಹಾಗೂ ಸಾಹಿತಿ ಡಾ. ಎಲ್.ಹನುಮಂತಯ್ಯ ಮಾತನಾಡಿ, ''ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ 1 ಅಥವಾ 2ನೇ ಭಾಷೆಯಾಗಿ ಕನ್ನಡವನ್ನು ಮಕ್ಕಳು ಕಲಿಯದಿದ್ದರೆ, ಭಾಷೆಯ ಅಭಿವೃದ್ಧಿ ಕಷ್ಟವಾಗುತ್ತದೆ,'' ಎಂದರು.

ಚಿತ್ರ ಸಾಹಿತಿ ಡಾ. ವಿ.ನಾಗೇಂದ್ರ ಪ್ರಸಾದ್ ಮಾತನಾಡಿ, ''ಕನ್ನಡವನ್ನು ಕೇವಲ 3ನೇ ಭಾಷೆಯಾಗಿ ಆಯ್ಕೆ ನೀಡುತ್ತಿರುವ ಶಾಲೆಗಳು ಕಾನೂನು ಉಲ್ಲಂಘಿಸುತ್ತಿವೆ. ಇದನ್ನು ತಕ್ಷಣವೇ ತಡೆಗಟ್ಟಲು ರಾಜ್ಯ ಸರಕಾರ ತುರ್ತಾಗಿ ಕಾರ್ಯಪ್ರವೃತ್ತರಾಗಬೇಕು,'' ಎಂದು ಒತ್ತಾಯಿಸಿದರು. ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಮಾತನಾಡಿ, ''ಸರಕಾರದ ಶಾಸನಬದ್ಧ ಭಾಷಾ ನಿಯಮವನ್ನು ಪಾಲಿಸದ ಶಾಲೆಗಳು ನಾಡದ್ರೋಹ ಮಾಡುತ್ತಿವೆ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಗದ ಅಧ್ಯಕ್ಷ ಜ್ಞಾನೇಶ್ವರ್, ''ಶಾಲಾ (ನಿರಾಕ್ಷೇಪಣಾ ಪತ್ರ) ನಿಯಮಾವಳಿಯಂತೆ ಎಲ್ಲ ಶಾಲೆಗಳು ಕನ್ನಡವನ್ನು ಒಂದು ಅಥವಾ ಎರಡನೇ ಭಾಷೆಯಾಗಿ ಮಾತ್ರ ಕಲಿಸಬೇಕು. ಈ ಶಿಕ್ಷಣ ನೀತಿ ಕಟ್ಟುನಿಟ್ಟಾಗಿ ಜಾರಿಯಾದರೆ ಮಾತ್ರ ಜನಸಾಮಾನ್ಯರ ಮಕ್ಕಳಿಗೆ ಕನ್ನಡ ತಲುಪಲು ಮತ್ತು ಭಾಷೆ ಬೆಳೆಯಲು ಸಾಧ್ಯ,'' ಎಂದು ಆಶಯ ವ್ಯಕ್ತಪಡಿಸಿದರು.

ಈ ಮಹತ್ವದ ಸಭೆಯಲ್ಲಿ ಕನ್ನಡ ಹೋರಾಟಗಾರರಾದ ಡಾ. ತಲಕಾಡು ಚಿಕ್ಕರಂಗೇಗೌಡ, ಧರ್ಮೇಂದ್ರ ಆರೇನಹಳ್ಳಿ, ನೇ.ಭ.ರಾಮಲಿಂಗಶೆಟ್ಟಿ, ಪಾಲನೇತ್ರ, ಕೆ.ನ.ಲಿ.ಗೌಡ, ಭೀಮಶಂಕರ ಪಾಟೀಲ್, ಡಾ. ಮಂಚೇಗೌಡ, ಶಿವಕುಮಾರ್, ಸಾರಿಕಾ ಶೋಭಾ, ಶ್ರೀರಾಜ್, ವಾಣಿ ಅಲ್ಲರಂಡ, ಶಶಿಕುಮಾರ್, ಜಯರಾಮ್ ಹಾಗೂ ಗಿರೀಶ್ ಉಪಸ್ಥಿತರಿದ್ದರು.

ಹುಬ್ಬಳ್ಳಿ- ಗದಗ ಬೈಪಾಸ್ ಮೂಲಕ ರೈಲು ಸಂಚಾರಕ್ಕೆ ಸಮ್ಮತಿ

ಮೈಸೂರು- ಪಂಢರಾಪುರ ಪ್ರಯಾಣ ಅವಧಿ 55 ನಿಮಿಷದಷ್ಟು ಇಳಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮೈಸೂರು- ಪಂಢರಪುರ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ರೈಲನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕ ಸಂಚರಿಸಲು ರೈಲ್ವೆ ಮಂಡಳಿ ಶುಕ್ರವಾರ ಒಪ್ಪಿಗೆ ನೀಡಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಸಚಿವ ಎಂ.ಬಿ.ಪಾಟೀಲ್, ಇದರಿಂದ ವಿಜಯಪುರ, ಬಾಗಲಕೋಟೆ ಭಾಗದ ಜನರ ಬಹು ದಿನಗಳ ಬೇಡಿಕೆಗೆ ಮನ್ನಣೆ ಸಿಕ್ಕಂತಾಗಿದೆ ಎಂದಿದ್ದಾರೆ.

ವಿಜಯಪುರ ಕಡೆಗೆ ಚಲಿಸುವ ರೈಲುಗಳು ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕವೇ ಸಂಚರಿಸುವಂತೆ ಆಗಬೇಕೆಂದು ಹಲವು ಬಾರಿ ಪತ್ರ ಬರೆದು ವಿನಂತಿಸಲಾಗಿತ್ತು. ಅದಕ್ಕೆ ರೈಲ್ವೆ ಮಂಡಳಿ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಇದಕ್ಕಾಗಿ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಮತ್ತು ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರಿಗೆ ಅಭಿನಂದನೆ ಸಲ್ಲಿಸಲಾಗುವುದು. ಈ ನಿರ್ಧಾರದಿಂದ ಎರಡೂ ನಗರಗಳ ನಡುವಿನ ಪ್ರಯಾಣ ಅವಧಿ 55 ನಿಮಿಷದಷ್ಟು ಕಡಿಮೆಯಾಗಲಿದೆ ಎಂದು ತಿಳಿಸಿದ್ದಾರೆ.

ಹಾಗೆಯೇ, ಸದ್ಯ ವಿಜಯಪುರ-ಬೆಂಗಳೂರು ನಡುವೆ ವಾರದಲ್ಲಿ ಎರಡು ದಿನ ಸಂಚರಿಸುತ್ತಿರುವ ವಿಶೇಷ ರೈಲು ಸೇವೆಯನ್ನೂ ಕಾಯಂಗೊಳಿಸಬೇಕು ಎಂದು ಎಂ.ಬಿ.ಪಾಟೀಲ್ ಒತ್ತಾಯಿಸಿದ್ದಾರೆ.

ಬೈಪಾಸ್ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾದ ಬಳಿಕ ಗೋಲಗುಂಬಜ್ ಎಕ್ಸ್‌ಪ್ರೆಸ್ ಇನ್ನು ಮುಂದೆ ಹುಬ್ಬಳ್ಳಿ ಮತ್ತು ಗದಗದಲ್ಲಿ ನಗರದ ಒಳ ಭಾಗದಲ್ಲಿ ಹಾದು ಹೋಗುವುದಿಲ್ಲ, ಆದರೆ, ಅಲ್ಲಿಯ ಪ್ರಯಾಣಿಕರಿಗೆ ತೊಂದರೆಯಾಗದಂತೆ ಹುಬ್ಬಳ್ಳಿ ದಕ್ಷಿಣ, ಗದಗ ಬೈಪಾಸ್ ನಿಲ್ದಾಣಗಳಲ್ಲಿ ರೈಲು ನಿಲುಗಡೆ ಇರಲಿದೆ. ರಾಜ್ಯ ಸರಕಾರದ ಕೋರಿಕೆಯಂತೆ ಮೈಸೂರು-ಪಂಢರಾಪುರ ನಡುವೆ ಮತ್ತೊಂದು ರೈಲು ಸೇವೆ ಪ್ರಾರಂಭಿಸಬೇಕು ಎಂದು ಅವರು ಕೋರಿದ್ದಾರೆ.

ವೇಳಾಪಟ್ಟಿ ಬದಲು: ಮೈಸೂರು-ಪಂಢರಪುರ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ಬೈಪಾಸ್ ಮಾರ್ಗಗಳಲ್ಲಿ ಸಂಚರಿಸಲು ಆರಂಭಿಸಿದ ಬಳಿಕ ಮೈಸೂರಿನಿಂದ ಮಧ್ಯಾಹ್ನ 3.50ಕ್ಕೆ ಹೊರಟು ಮರುದಿನ ಬೆಳಿಗ್ಗೆ 10.05ಕ್ಕೆ ಪಂಢರಪುರ ತಲುಪಲಿದೆ. ಹಾಗೆಯೇ, ಪಂಢರಾಪುರದಿಂದ ಮಧ್ಯಾಹ್ನ 1.15ಕ್ಕೆ ಹೊರಟು ಮರುದಿನ ಬೆಳಿಗ್ಗೆ 11.30ಕ್ಕೆ ಮೈಸೂರು ತಲುಪಲಿದೆ. ಮೊದಲಿಗೆ ಹೋಲಿಸಿದರೆ 55 ನಿಮಿಷದ ಪ್ರಯಾಣ ಅವಧಿ ಕಡಿಮೆಯಾಗಲಿದೆ ಎಂದು ವಿವರಿಸಿದ್ದಾರೆ.

ದಾಖಲಾತಿ ಹೆಚ್ಚಳಕ್ಕೆ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

2026-27ನೇ ಸಾಲಿನಲ್ಲಿ ರಾಜ್ಯದ ನಾನಾ ಜಿಲ್ಲೆಗಳ ಸರಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಆದಷ್ಟು ಶೀಘ್ರವಾಗಿ ಪ್ರಾರಂಭಿಸಿ, ಮಕ್ಕಳ ದಾಖಲಾತಿ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ಪೂರ್ವ ಪ್ರಾಥಮಿಕ ತರಗತಿಗಳ ದಾಖಲಾತಿ ಆಂದೋಲನ ಆರಂಭಿಸುವ ಮೂಲಕ ದಾಖಲಾತಿ ಹೆಚ್ಚಿಸಬೇಕು. ಪೂರ್ವ ಪ್ರಾಥಮಿಕ ತರಗತಿಗಳಿಗೆ ಅನುಮೋದನೆ ದೊರೆತಿರುವ ಪ್ರತಿ ಶಾಲೆಯಲ್ಲಿ ಎಲ್‌ಕೆಜಿಗೆ ಕನಿಷ್ಠ 20 ಹಾಗೂ ಯುಕೆಜಿಗೆ ಗರಿಷ್ಠ 40 ಮಕ್ಕಳು ದಾಖಲಾಗುವಂತೆ ಮಾಡಬೇಕು. ಈ ಕುರಿತ ವಿವರಗಳನ್ನು ಯುಡಿಐಎಸ್ ಇಯಲ್ಲಿ ನಮೂದಿಸಬೇಕು. ಈ ದಾಖಲಾತಿಯ ದತ್ತಾಂಶ ಆಧರಿಸಿ ಶಿಕ್ಷಕರ ಗೌರವಧನ ಬಿಡುಗಡೆ ಮಾಡಲಾಗುತ್ತದೆ. ನಿಗದಿತ ಪ್ರಮಾಣದಲ್ಲಿ ದಾಖಲಾತಿಯ ಗುರಿ ಸಾಧಿಸದಿದ್ದರೆ, ತಾಲೂಕು ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪ ನಿರ್ದೇಶಕರನ್ನೇ ನೇರ ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕನೀನಿನಿ,
ಘ.ಬ.ದಂ.ಕಾ.ನಿ ವಿಭಾಗ-4, ಚಿಕ್ಕೋಡಿ. ದೂರವಾಣಿ ಸಂಖ್ಯೆ: 08338-272485
ಇ-ಮೇಲ್: ee_knnlgrbc4ckd@rediffmail.com

ಸಂಖ್ಯೆ:ಕನೀನಿನಿ/ಘಬದಂಕಾನಿ-4/ಟೆಂಡರ್/2026-27/01 ದಿನಾಂಕ: 19-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ (https://kppp.karnataka.gov.in) 4701 ಅಡಿಯಲ್ಲಿನ 14 ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ.
ಇಂಡೆಂಟ್ ಸಂಖ್ಯೆ: **ದ್ವಿ-ಲಕೋಟೆ ಪದ್ಧತಿ - ಸಾಮಾನ್ಯ - ಇಂಡೆಂಟ್ ಸಂಖ್ಯೆ. 4560, 4569, 4571, 4553, 4555, 4568, 4557, 4556, 4554, 4570, 4552, 4558, 4559, ಪ್ರವರ್ಗ-II(ಎ) - ಇಂಡೆಂಟ್ ಸಂಖ್ಯೆ: 4561,** ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ: **ರೂ. 42.22 ಲಕ್ಷದಿಂದ ರೂ. 84.65 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 84,700/- ರಿಂದ ರೂ. 1,69,600/-,** ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ: **08-07-2026 ರಂದು 17.00 ಗಂಟೆವರೆಗೆ,** ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **09-07-2026 ರಂದು 16.00 ಗಂಟೆವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **10-07-2026 ರಂದು 16.30 ಗಂಟೆಗೆ,** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **13-07-2026 ರಂದು 16.30 ಗಂಟೆಗೆ.**
ಕಾಮಗಾರಿಗಳ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರಿನ ನಿಯಮ / ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ.
ವಾಸಾಸಂಇ/ಬೆಳಗಾವಿ/470/ಅಡ್ವರ್ಟೋರ್/2026-27

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಅಗ್ರಹಾರ ಟ್ಯಾಂಕ್‌ಬಂಡ ರಸ್ತೆ. ಬಿನ್ನಿಪೇಟೆ, ಬೆಂಗಳೂರು-560023
ಜಿಲ್ಲೆ: ಬೆಂಗಳೂರು ರಾಜ್ಯ: ಕರ್ನಾಟಕ ದೂರವಾಣಿ: 080-26707575
ಇ-ಮೇಲ್: apmcfv@rediffmail.com, secretaryapmcfv@gmail.com

ಸಂ: ಹಹೂಮತ(ವಿ)ಕೃಉಮಾಸ(ಬೆಂ)/289/2026-27 ದಿನಾಂಕ: 18.06.2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

2025-26ನೇ ಸಾಲಿನ RIDF-31 ರ ಯೋಜನೆಯಡಿ ಅನುಮೋದನೆಗೊಂಡ Comprehensive Development of Huskur Main Road from Hosur Main Road, leading to Singena Agrahara Fruit Market from Binnipete APMC ಕಾಮಗಾರಿಯ (Indent No: APMC/2026-27/RD/WORK_INDENT/974) ಟೆಂಡರ್ ಮೊತ್ತ ರೂ.672.00 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ), ಇ.ಎಂ.ಡಿ ಮೊತ್ತ ರೂ.10,10,000.00 ಸದರಿ ಕಾಮಗಾರಿ ಪೂರ್ಣಗೊಳಿಸಲು 5.5 ತಿಂಗಳು ಕಾಲಾವಕಾಶ (ಮಳೆಗಾಲ ಹೊರತುಪಡಿಸಿ) ನಿಗಧಿಪಡಿಸಿ, ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರುಗಳಿಂದ ಇ-ಟೆಂಡರ್ ವೆಬ್‌ಸೈಟ್: https://kppp.karnataka.gov.in ಅಡಿಯಲ್ಲಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ-4ರ ಷರತ್ತುಗಳನ್ವಯ ಆಹ್ವಾನಿಸಲಾಗಿದೆ.
ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ: (1) ಪೂರ್ವಭಾವಿ ಸಭೆ ದಿನಾಂಕ: 13.07.2026 ಬೆಳಿಗ್ಗೆ 11.00 ಗಂಟೆಗೆ. (2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 20.07.2026 ಸಂಜೆ 5.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22.07.2026 ಬೆಳಿಗ್ಗೆ 11.00 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.07.2026 ಬೆಳಿಗ್ಗೆ 11.00 ಗಂಟೆಗೆ.
ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಹೆಚ್ಚಿನ ಮಾಹಿತಿಗಾಗಿ ಇ-ಟೆಂಡರ್ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು ಅಥವಾ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಆದಲ್ಲಿ ವೆಬ್‌ಸೈಟ್‌ನಲ್ಲಿ ಮಾತ್ರ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ | ಸಹಿ/- ಆಡಳಿತಾಧಿಕಾರಿ
ವಾಸಾಸಂಇ/ವಾಪ್ರ/ಎಸ್‌ಎಂಸಿಎಲ್/1278/2026-27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಶೇಷ ವಿಭಾಗ,
19ನೇ ಅಡ್ಡರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010.

ಸಂಖ್ಯೆ: ಬೆಂಪನಪಾ/ಕಾಪಾಅ/ವಿ.ವಿಭಾಗ/ಟೆಂಡರ್/08/2026-27 ದಿನಾಂಕ: 20-06-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು (ವಿಶೇಷ ವಿಭಾಗ), ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳಿಗೆ ಹೆಸರಾಂತ ಸೇವಾದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಯೋಜನೆಯ ಹೆಸರು
1	ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಟೋಟಲ್ ಸ್ಟೇಷನ್ಸ್ & ಮಹಡಿಗಳ ಪ್ರಕಾರ ಭೂ ಉಪಯೋಗ ಪ್ರದೇಶದ ವಿವರಗಳನ್ನು ಉಪಯೋಗಿಸಿಕೊಂಡು ಕಟ್ಟಡಗಳು ಹಾಗೂ ಕ್ಯಾಂಪಸ್‌ಗಳ ಮ್ಯಾಪಿಂಗ್ ಮಾಡುವುದು. **ಇಎಂಡಿ: ರೂ.1.00 ಲಕ್ಷಗಳು.**

ಟೆಂಡರ್ ವೇಳಾಪಟ್ಟಿ: 1) ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: **22.06.2026 ಸಂಜೆ 4.00** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ & ಸಮಯ: **25.06.2026ರ ಮಧ್ಯಾಹ್ನ 3.00 ಗಂಟೆಗೆ.** 3) ಕೆಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ & ಸಮಯ: **03.07.2026ರ ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **04-07-2026ರ ಸಂಜೆ 4.00 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವುದು (ಸಾಧ್ಯವಾದಲ್ಲಿ): **07.07.2026ರ ಸಂಜೆ 4.00 ಗಂಟೆಗೆ. (ಸಾಧ್ಯವಾದಲ್ಲಿ)**
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ,
ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕರ್ನಾಟಕ ಮಾಹಿತಿ ಆಯೋಗ
ಮಾಹಿತಿ ಸೌಧ, ದೇವರಾಜ್ ಅರಸ್ ರಸ್ತೆ, ಬೆಂಗಳೂರು-560 001.
ದೂರವಾಣಿ: 080-22371959
ಇ-ಮೇಲ್ ಐಡಿ: secy-kic@karnataka.gov.in

ನಂ: KIC/2026-27/SE0004 ದಿನಾಂಕ : 18.06.2026

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಗಳು, 2000ರ ಅನ್ವಯ, ಕರ್ನಾಟಕ ಮಾಹಿತಿ ಆಯೋಗವು ಹೊರಗುತ್ತಿಗೆ ಆಧಾರದ ಮೇಲೆ ಕೆಳಕಂಡ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸಿದೆ.

ಕ್ರ ಸಂ.	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	Judgement Writers	18	17.07.2026 ಸಂಜೆ 5.30 ಗಂಟೆಯವರೆಗೆ.
2	Stenographers	12	
3	Assistants	16	
4	Data Entry Operators	12	
5	Typists	11	
6	Law Assistants	07	
7	Drivers	13	
8	Group-D	27	
9	Watchman	04	

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17.07.2026 ಸಂಜೆ 5.30 ಗಂಟೆಯವರೆಗೆ.** 2) **ಇಎಂಡಿ ಮೊತ್ತ: ರೂ. 8,00,000/-.** (ಟೆಂಡರ್ ದಾಖಲಾತಿಯಲ್ಲಿ ಸೂಚಿಸಿರುವ ವಿಧಾನಗಳಲ್ಲಿ ಇ-ಪಾವತಿ ಮೂಲಕ ಪಾವತಿಸುವುದು) 3) **ಪ್ರೀ-ಬಿಡ್ ಸಭೆ: 29.06.2026 ರಂದು ಮಧ್ಯಾಹ್ನ 3.00 ಗಂಟೆಗೆ.** ಸ್ಥಳ: ಕೊಠಡಿ ಸಂ: 306, ಮಾಹಿತಿ ಸೌಧ, ಕರ್ನಾಟಕ ಮಾಹಿತಿ ಆಯೋಗ, ಡಿ.ದೇವರಾಜ ಅರಸ್ ರಸ್ತೆ, ಬೆಂಗಳೂರು-560 001. 4) ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **24.06.2026 ಸಂಜೆ 5.30 ಗಂಟೆಯವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.07.2026ರಂದು ಬೆಳಿಗ್ಗೆ 11.00 ಗಂಟೆಗೆ.** 6) ಆರ್ಥಿಕ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ: **27.07.2026ರಂದು ಬೆಳಿಗ್ಗೆ 11.00 ಗಂಟೆಗೆ.**

- ವಿವರವಾದ ಟೆಂಡರ್ ದಾಖಲಾತಿ, ಅರ್ಹತಾ ಮಾನದಂಡಗಳು ಹಾಗೂ ಷರತ್ತು-ನಿಬಂಧನೆಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.
- ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿತ ಸಂಸ್ಥೆಗಳಷ್ಟೇ ಟೆಂಡರ್ ಸಲ್ಲಿಸಬಹುದು.
- ತಾಂತ್ರಿಕ ಸಹಾಯಕ್ಕಾಗಿ ಈ ಕೆಳಕಂಡ ಸಹಾಯವಾಣಿಗೆ ಕರೆ ಮಾಡುವುದು. +91-9240214000/+91-9240214001.

ಸಹಿ/-
ಅಧೀನ ಕಾರ್ಯದರ್ಶಿ
ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು
ವಾಸಾಸಂಇ/ವಾ.ಪ್ರ/1287/ಎಂಎಎ/2026-27

ಕರ್ನಾಟಕ ಗೃಹ ಮಂಡಳಿ
3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ-06/ಸಿಎ/ಪ.ಪ್ರ/2026-27 ದಿನಾಂಕ: 20-06-2026

ತಿದ್ದುಪಡಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ 373 ನಾಗರೀಕ ಸೌಲಭ್ಯದ (ಸಿಎ) ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 26-05-2026 ರಂದು ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಸದರಿ ಪ್ರಕಟಣೆಯಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿ ದಿನಾಂಕ: 05.06.2026ರಂದು ತಿದ್ದುಪಡಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಸದರಿ ತಿದ್ದುಪಡಿ ಪ್ರಕಟಣೆಯಲ್ಲಿನ Sl.No. as per notification ನ ಕಲಂನಲ್ಲಿ ಕ್ರಮ ಸಂಖ್ಯೆ: 250, 251, 252, 256, 286, 287, 288, 290, 291, 292, 295, 296, 298 ಮತ್ತು 299 ಗಳನ್ನು ಕ್ರಮವಾಗಿ 251, 252, 253, 257, 287, 288, 289, 291, 292, 293, 296, 297, 299 ಮತ್ತು 300 ಎಂದು ಓದಿಕೊಳ್ಳತಕ್ಕದ್ದು.
ಉಳಿದಂತೆ ದಿನಾಂಕ: 26-05-2026 ಮತ್ತು 05-06-2026 ರ ಪ್ರಕಟಣೆಯಲ್ಲಿನ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ದಿನಾಂಕ: 20-06-2026
ಸಹಿ/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು
ವಾಸಾಸಂಇ/ವಾಪ್ರ/1274/ಎಂಎಎ/2026-27

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು - 560099.
ದೂರವಾಣಿ: 080-27835122 ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/04/2026-27 ದಿನಾಂಕ: 19-06-2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ-ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ-ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Baky proptech ಪರವಾಗಿ ಪಾಲುದಾರರಾದ ಶ್ರೀ ಬಾಬುರೆಡ್ಡಿ. ಆರ್ ಮತ್ತು ಶ್ರೀ ಕೆ.ವಿ. ಅಶ್ವಥ ರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	36/2	0-09	ವಸತಿ	ವಾಣಿಜ್ಯ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಠಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಲಭಿಸುತ್ತದೆ. ಸಾರ್ವಜನಿಕರಿಗೆ ವ್ಯಾಪಾರ ವಹಿವಾಟು ಮಾಡಲು ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವಸತಿ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.
ವಾಸಾಸಂಇ/ವಾ.ಪ್ರ/1285/ಅಡ್ವರ್ಟೋರ್/2026-27

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು - 560002.

ಸಂಖ್ಯೆ: ಮು.ನ.ಯೋ/ಜಿಬಿಎ/ಪಿಆರ್/396/CLU-6/2026-27/ಇ-208983 ದಿನಾಂಕ: 18-06-2026

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14ಎ-(1)(ಸಿ) ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಕೈಗಾರಿಕೆ'** ವಲಯದಿಂದ **'ವಾಣಿಜ್ಯ'** ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎ/ಗುಂ)	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Avenue Super Mart Ltd.,	ಯಲಹಂಕ	ಯಲಹಂಕ	ತಿರುಮೇನ ಹಳ್ಳಿ	18/8	01ಎ-23ಗುಂ (00ಎ-01.08ಗುಂ ಖರಾಬು ಹೊರತುಪಡಿಸಿ)	ಕೈಗಾರಿಕೆ	ವಾಣಿಜ್ಯ
2					19/8	00ಎ-32ಗುಂ		

ಷರಾ:- ಅರ್ಜಿದಾರರು ಪ್ರಶ್ನಿತ ಜಮೀನು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವುದಿಲ್ಲ ಹಾಗಾಗಿ ಅಭಿವೃದ್ಧಿಪಡಿಸುವ ಅಗತ್ಯವಿರುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ನಮ್ಮ ಜಮೀನಿನ ಸುತ್ತಮುತ್ತ ವಾಣಿಜ್ಯ ಉದ್ದೇಶಕ್ಕಾಗಿ ಬೇಡಿಗೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ / ಅಪಾರ್ಟ್‌ಮೆಂಟ್ ಲಭ್ಯವಾಗುತ್ತವೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಾಣಿಜ್ಯ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ'** ವಲಯದಿಂದ **'ವಾಣಿಜ್ಯ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ವಿಕ ಮನಿ

From The House of THE ECONOMIC TIMES

ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ಸ್ಮಾಲ್ ಇಂಡಸ್ಟ್ರೀಸ್‌ಗೆ 'ಬಿಗ್ ಶಾಕ್'

ದೇಶದ ಜಿಡಿಪಿ ವೃದ್ಧಿಸುವ 'ಸದ್ದಿಲ್ಲದ ಅಸಲಿ ಹೀರೋ'ಗಳ ಸ್ಥಿತಿ ಹೇಗಿದೆ? ಕರ್ನಾಟಕದ ಲಕ್ಷಾಂತರ ಎಂಎಸ್‌ಎಂಇಗಳ ಭವಿಷ್ಯ ಯಾವ ದಿಕ್ಕಿನಲ್ಲಿದೆ?

- ಜಪಾನಿನ ಕೈಜೆನ್ ತತ್ವದಲ್ಲಿದೆ ಆರ್ಥಿಕ ಸ್ವಾತಂತ್ರ್ಯದ ರಹಸ್ಯ: **ಶರತ್ ಎಂ.ಎಸ್.** ಮಾರ್ಗದರ್ಶನ
- ಎಲಾನ್ ಮಸ್ಕ್, ಸೋಲಿನ ಬೂದಿಯಿಂದ ಎದ್ದ ಫೀನಿಕ್ಸ್: **ರಂಗಸ್ವಾಮಿ ಮೂಕನಹಳ್ಳಿ** ಅಂಕಣ
- Time = Money: ಈ ಸೂತ್ರ ಮರೆತವರಿಗೆ ಸೋಲೇ ಫಂಡು! ಬಿಸಿನೆಸ್ ಕೆಫೆಯಲ್ಲಿ **ಜಿ.ಕೆ.ಪ್ರಮೋದ್** ವಿವರಣೆ
- ಎಐ ಯುಗದಲ್ಲಿ ಭಾರತದ್ದು 'ಹೊಸ ಸ್ವಾತಂತ್ರ್ಯ ಹೋರಾಟ' ಹೇಗೆ? **ವಸಂತ್ ಶೆಟ್ಟಿ** ಅವಲೋಕನ-ಮುನ್ನೋಟ
- ಲಾಕರ್‌ನಲ್ಲಿ ಇಟ್ಟರೆ ಸಾಕೇ? ನಿಮ್ಮ ಹಕ್ಕುಗಳು, ಬ್ಯಾಂಕಿನ ಜವಾಬ್ದಾರಿಗಳ ಬಲ್ಲಿರಾ? **ಉಲ್ಲಾಸ ರಾಮ ಗುನಗಾ** ಗೈಡೆನ್ಸ್
- ಕೈಕೇಯಿ ನಿರ್ಧಾರವೂ ಹೂಡಿಕೆದಾರರ ಮನಸ್ಥಿತಿಯೂ: ರಾಮಾಯಣದಿಂದ ಮನಿ ಪಾಠ ಹೆಕ್ಕಿ ತಂದಿದ್ದಾರೆ **ಡಾ.ವೆಂಕಟೇಶ್ ಆರ್.ವೇದಾಂತಿ, ಡಾ.ಜೆ.ಎನ್.ಜಗನ್ನಾಥ್**
- 430 ರೂ.ನಿಂದ 13,500 ರೂ.ಗೆ; ಮಾರುತಿ ಸುಜುಕಿ ಪಯಣದಲ್ಲಿದೆ ಹೂಡಿಕೆದಾರರಿಗೆ ದೊಡ್ಡ ಲೆಸೆನ್: **ಡಾ.ಬಾಲಾಜಿ ರಾವ್ ಡಿ.ಜಿ.** ಕಾಲಂ
- ಫಾದರ್ಸ್ ಡೇ ದಿನ ಪ್ರತಿಯೊಬ್ಬ ತಂದೆಯೂ ತನಗೆ ತಾನು ಕೇಳಿಕೊಳ್ಳಬೇಕಾದ ಪ್ರಶ್ನೆ ಯಾವುದು ಗೊತ್ತೆ?
- ಬ್ಯಾಂಕಿಂಗ್ ಪಿಂಚಣಿ ಪರಿಷ್ಕರಣೆ: ಹೋರಾಟಕ್ಕೆ ಅಂತ್ಯ ಯಾವಾಗ? **ಗೋಪಾಲಕೃಷ್ಣ ಭಟ್** ಮಹತ್ವದ ಪ್ರಶ್ನೆ
- ಮ್ಯಾನೇಜರ್ ಕೈನಲ್ಲಿನ ಡಿಜಿಟಲ್ ಚಾಟಿ ಆಗದಿರಲಿ ಎಐ! **ಸಿದ್ದು ಮಠಪತಿ** ಕಳಕಳಿ
- ಐಟಿ ರಿಟರ್ನ್ಸ್ ಸಲ್ಲಿಸಲು ಯಾವೆಲ್ಲ ದಾಖಲೆಗಳು ಬೇಕು? **ಶ್ರೀಧರ ಬಾಣಾವರ** ಮಾರ್ಗದರ್ಶನ

ಯೋಗ ದಿನ ಸ್ಪೆಷಲ್



ಯೋಗದ ಮಾರುಕಟ್ಟೆ ಮೌಲ್ಯವೀಗ 13 ಲಕ್ಷಕೋಟಿ ರೂ.!

ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಶಿಕ್ಷಕರ ಜೇಬಿಗೆ ಹೊರೆಯಾದ ಮೊಟ್ಟೆ!

ಮುಖ್ಯ ಶಿಕ್ಷಕರಿಗೆ ಕೋಳಿ ಮೊಟ್ಟೆ ಕಿರಿಕಿರಿ | ಕೈಯಿಂದ 2 ರೂ. ಪಾವತಿ

■ **ಬಸವರಾಜ ಕೆ.ಜಿ.** ದಾವಣಗೆರೆ
basava.darshu@gmail.com

ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಲ್ಲೇ ಸರಕಾರಿ ಶಾಲೆ ಮುಖ್ಯ ಶಿಕ್ಷಕರಿಗೆ ಕೋಳಿ ಮೊಟ್ಟೆ ಕಿರಿಕಿರಿ ಶುರುವಾಗಿದೆ. ಸರಕಾರ ನೀಡುವ ದರ ಹಾಗೂ ಮಾರುಕಟ್ಟೆಯಲ್ಲಿನ ಮೊಟ್ಟೆ ಬೆಲೆ ನಡುವೆ 2 ರೂ. ವ್ಯತ್ಯಾಸವಿದ್ದು, ಕಳೆದ 19 ದಿನಗಳಲ್ಲಿ ರಾಜ್ಯದ ಸರಕಾರಿ ಶಾಲೆಗಳ ಮುಖ್ಯ ಶಿಕ್ಷಕರು ಅಂದಾಜು 5.20 ಕೋಟಿ ರೂ.ಗಳನ್ನು ತಮ್ಮ ಜೇಬಿನಿಂದ ಭರಿಸಿದ್ದಾರೆ!

ರಾಜ್ಯದಲ್ಲಿ 5.20 ಕೋಟಿ ರೂ. ಶಿಕ್ಷಕರ ಜೇಬಿನಿಂದ ಪಾವತಿ

ರಾಜ್ಯ ಸರಕಾರ ಪ್ರಸ್ತುತ ಒಂದು ಮೊಟ್ಟೆಗೆ 6 ರೂ. ನಿಗದಿಪಡಿಸಿದೆ. ಇದರಲ್ಲಿ ಒಂದು ಮೊಟ್ಟೆ ಬೇಯಿಸುವ ಇಂಧನ ವೆಚ್ಚಕ್ಕೆ 50 ಪೈಸೆ, ಬೆಂದ ಮೊಟ್ಟೆಯ ಸಿಪ್ಪೆ ಸುಲಿಯುವ ಅಡುಗೆ ಸಿಬ್ಬಂದಿಗೆ 30 ಪೈಸೆ ಹಾಗೂ ಸಾಗಣೆ ವೆಚ್ಚವಾಗಿ 20 ಪೈಸೆ ಮೀಸಲಿರಿಸಿದ್ದು, ಮೊಟ್ಟೆ ಖರೀದಿಗೆ ಉಳಿಯುವುದು 5 ರೂ. ಮಾತ್ರ. ಬೆಂಗಳೂರು ಸಗಟು ಮಾರುಕಟ್ಟೆಯಲ್ಲಿ ಶುಕ್ರವಾರ ಒಂದು ಮೊಟ್ಟೆ ದರ 7.05 ರೂ. ಇತ್ತು. ಅಂದರೆ, ಸರಕಾರ ನೀಡುತ್ತಿರುವ ದರಕ್ಕಿಂತ 2.05 ರೂ. ಹೆಚ್ಚುವರಿ!

ಮೊಟ್ಟೆ ಹೊರೆ ಲೆಕ್ಕಾಚಾರ

ಈಗಿರುವ ಒಂದು ಮೊಟ್ಟೆಗೆ 2 ರೂ. ವ್ಯತ್ಯಾಸದ ಪ್ರಕಾರ ಹೋದರೆ, ಕನಿಷ್ಠ 50 ಮಕ್ಕಳು ಮೊಟ್ಟೆ ಸೇವಿಸುವ ಶಾಲೆಯ ಮುಖ್ಯ ಶಿಕ್ಷಕ ದಿನವೊಂದಕ್ಕೆ 100 ರೂ.ನಂತೆ ತಿಂಗಳಿಗೆ 3000 ರೂ. ತಮ್ಮ ಜೇಬಿನಿಂದ ಭರಿಸಬೇಕು. ಇನ್ನು ದಾವಣಗೆರೆಯ ನಿಟ್ಟುವಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 750ಕ್ಕೂ ಅಧಿಕ ಮಕ್ಕಳು ದಾಖಲಾಗಿದ್ದಾರೆ. ಶಾಲೆಗೆ ಬರುವುದು 700 ಮಕ್ಕಳು ಅಂದುಕೊಂಡರೂ ಆ ಶಾಲೆ ಮುಖ್ಯ ಶಿಕ್ಷಕ ಒಂದು ದಿನಕ್ಕೆ ತಮ್ಮ ಪರ್ಸ್‌ನಿಂದ 1400 ರೂ., ತಿಂಗಳಿಗೆ 42,000 ರೂ. ಭರಿಸಬೇಕು. ಒಬ್ಬ ಶಿಕ್ಷಕ ತಿಂಗಳಿಗೆ ಇಷ್ಟೊಂದು ಹಣ ಭರಿಸಲು ಸಾಧ್ಯವೇ,'' ಎಂಬುದು ಶಿಕ್ಷಕರ ಸಂಘದ ಪ್ರಶ್ನೆ.

ಶಿಕ್ಷಣ ಇಲಾಖೆ ಮಾಹಿತಿ ಪ್ರಕಾರ ಪ್ರಸಕ್ತ ಶೈಕ್ಷಣಿಕ ವರ್ಷ ರಾಜ್ಯದಲ್ಲಿ 46,174 ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿವೆ. ಇಲ್ಲಿ 1ರಿಂದ 10ನೇ ತರಗತಿವರೆಗೆ ದಾಖಲಾಗಿರುವ ಮಕ್ಕಳ ಪೈಕಿ ಮೊಟ್ಟೆ ಸೇವಿಸುವವರು 50 ಲಕ್ಷಕ್ಕೂ ಹೆಚ್ಚಿದ್ದಾರೆ. ಅಷ್ಟೂ ಮಕ್ಕಳ ಪೈಕಿ ಶೇ.80 ಮಕ್ಕಳು ನಿತ್ಯ ಶಾಲೆಗೆ ಬರುತ್ತಿದ್ದಾರೆ.

ಅವರೆಲ್ಲರಿಗೂ ಜೂನ್ 1ರಿಂದಲೇ ಮೊಟ್ಟೆ ವಿತರಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿ ಮೊಟ್ಟೆಗೆ ಇರುವ ಇಂದಿನ ದರದ ಪ್ರಕಾರ ಸರಕಾರಿ ಶಾಲೆ ಮುಖ್ಯ ಶಿಕ್ಷಕರು ತಮ್ಮ ಕೈನಿಂದ ಒಂದು ಮೊಟ್ಟೆಗೆ 2 ರೂ. ಭರಿಸುತ್ತಿದ್ದಾರೆ.

ಮೊಟ್ಟೆ ಪೂರೈಕೆ ಸ್ಥಿತಿ: ''ದಾವಣಗೆರೆಯಲ್ಲಿ ಪ್ರಸ್ತುತ ಒಂದು ಮೊಟ್ಟೆ ಬೆಲೆ 7.30 ರೂ. ಇದೆ. ಅಂದರೆ ಇಲ್ಲಿನ ಸರಕಾರಿ ಶಾಲೆ ಮುಖ್ಯ ಶಿಕ್ಷಕರಿಗೆ 2.30 ರೂ. ಹೆಚ್ಚುವರಿ ಹೊರೆಯಾಗುತ್ತಿದೆ. ಹೆಚ್ಚು ಮಕ್ಕಳಿರುವ ಕೆಲವು ಶಾಲೆಗಳಲ್ಲಿ ನಿತ್ಯ ಮೊಟ್ಟೆ ದರ ಭರಿಸುವುದು ಮುಖ್ಯ ಶಿಕ್ಷಕರಿಗೆ ಕಷ್ಟವಾಗಿದೆ. ಈ ನಿಟ್ಟಿನಲ್ಲಿ ದರ ಕಡಿಮೆ ಮಾಡಿಕೊಳ್ಳುವಂತೆ ಶಿಕ್ಷಕರು ಮೊಟ್ಟೆ ಪೂರೈಕೆದಾರರ ಬಳಿ ಚೌಕಾಸಿ ಮಾಡುತ್ತಿದ್ದಾರೆ. ಇದರಿಂದ ಬೇಸತ್ತ ಮೊಟ್ಟೆ ಪೂರೈಕೆದಾರರು ಶಾಲೆ ಬಳಿ ಹೋಗುವುದನ್ನೇ ಬಿಟ್ಟಿದ್ದಾರೆ. ಹೀಗಾಗಿ ಎಲ್ಲ ಮಕ್ಕಳಿಗೂ ಬಾಳೆ ಹಣ್ಣು ನೀಡಲಾಗುತ್ತಿದೆ,'' ಎಂದು ಶಿಕ್ಷಕರೊಬ್ಬರು ತಿಳಿಸಿದ್ದಾರೆ.

ಆರಂಭದಿಂದ ಒಂದೇ ದರ

''ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಣೆ ಆರಂಭವಾಗಿ 3 ವರ್ಷಗಳು ಕಳೆದಿವೆ. ಮೂರು ವರ್ಷದ ಹಿಂದೆ ಸರಕಾರ ನಿಗದಿ ಮಾಡಿದ್ದ ದರವನ್ನೇ ಇಂದಿಗೂ ನೀಡಿದೆ. ಆದರೆ ಮೊಟ್ಟೆ ದರ ಹೆಚ್ಚಾಗುತ್ತಲೇ ಇರುತ್ತದೆ. 2025ರ ಸೆಪ್ಟೆಂಬರ್‌ನಿಂದಲೂ ಮೊಟ್ಟೆ ದರ 7 ರೂ.ಗಿಂತ ಹೆಚ್ಚೇ ಇದೆ. ಇಷ್ಟು ದಿನ ಬಾಳೆ ಹಣ್ಣಿನ ದರ ಕಡಿಮೆ ಇದ್ದುದರಿಂದ ಆ ಹಣದಲ್ಲಿ ಮ್ಯಾನೇಜ್ ಮಾಡಬಹುದಿತ್ತು. ಅಕ್ಷರ ದಾಸೋಹ ಸ್ಕೀಂನಿಂದ 50 ಪೈಸೆ ಹಾಕುತ್ತಾರೆ. ಆದರೆ, ಈಗ ಬಾಳೆ ದರ ಕೂಡ ಹೆಚ್ಚಾಗಿದೆ. ನಮ್ಮ ಶಾಲೆಯಲ್ಲಿ 760 ಮಕ್ಕಳಿದ್ದು, ಬಾಳೆ ಹಣ್ಣು ತಿನ್ನುವವರು ಕಡಿಮೆ. ಹೀಗಿರುವಾಗ ಕೈಯಿಂದ ಹಣ ಹಾಕುವುದು ಅನಿವಾರ್ಯ,'' ಎನ್ನುತ್ತಾರೆ ಹೆಸರು ಹೇಳಲಿಚ್ಛಿಸದ ಮುಖ್ಯ ಶಿಕ್ಷಕ.

ಮೊಟ್ಟೆ ದರ ಹೆಚ್ಚಳದಿಂದ ಮುಖ್ಯ ಶಿಕ್ಷಕರ ಮೇಲೆ ಆರ್ಥಿಕ ಹೊರೆ ಬೀಳುತ್ತಿರುವ ಬಗ್ಗೆ ಶಿಕ್ಷಕರ ಸಂಘದಿಂದ ಮನವಿ ಸಲ್ಲಿಸಲಾಗಿದೆ. ಸಮಸ್ಯೆ ಇರುವುದು ಸತ್ಯ. ಈ ಕುರಿತು ಸಮಸ್ಯೆಗೆ ಪರಿಹಾರ ಕೋರಿ ರಾಜ್ಯದ ಪಿಎಂ ಪೋಷಣ್ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ.

- **ವಿಶ್ವನಾಥ್** ಸಹಾಯಕ ನಿರ್ದೇಶಕ, ಅಕ್ಷರ ದಾಸೋಹ, ದಾವಣಗೆರೆ

ಕಬಿನಿ ಡ್ಯಾಂನಲ್ಲಿ 4 ಅಡಿ ನೀರು ಏರಿಕೆ

■ **ವಿಕ ಸುದ್ದಿಲೋಕ** ಎಚ್.ಡಿ.ಕೋಟೆ(ಮೈಸೂರು)

ಕೇರಳದ ವಯನಾಡು ಜಿಲ್ಲೆಯಲ್ಲಿ ಮೂರ್ನಾಲ್ಕು ದಿನದಿಂದ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ತಾಲೂಕಿನ ಬೀಚನಹಳ್ಳಿಯ ಕಬಿನಿ ಜಲಾಶಯದ ನೀರಿನ ಮಟ್ಟ 4 ಅಡಿ ಏರಿಕೆ ಆಗಿದೆ.

ಜಲಾಶಯದ ಗರಿಷ್ಠ ಮಟ್ಟ 2284 ಅಡಿ ಇದ್ದು, ಸಂಗ್ರಹಣಾ ಸಾಮರ್ಥ್ಯ 19.52 ಟಿಎಂಸಿ, ಸದ್ಯ ಜಲಾಶಯದಲ್ಲಿ 5.7 ಟಿಎಂಸಿ ನೀರು ಇದೆ.

ಕಳೆದ ವರ್ಷ ಭರ್ತಿಯಾಗಿತ್ತು

2025ರ ಮೇ ತಿಂಗಳಲ್ಲಿ ಮಳೆ ಆಗಿದ್ದರಿಂದ ಜೂನ್ 5ಕ್ಕೆ ಜಲಾಶಯ ಭರ್ತಿ ಆಗಿತ್ತು. ಕಳೆದ ವರ್ಷ ಇದೇ ದಿನ ಜಲಾಶಯದ ಮಟ್ಟ 2280.50 ಅಡಿ ನೀರಿದ್ದು, ಒಳಹರಿವು 16,933 ಕ್ಯುಸೆಕ್ ಇದ್ದು, ಜಲಾಶಯದಿಂದ 25 ಸಾವಿರ ಕ್ಯೂಸೆಕ್ ನೀರು ಬಿಡಲಾಗುತ್ತಿತ್ತು.

ಕಳೆದ ಎರಡು-ಮೂರು ದಿನಗಳ ಹಿಂದೆ 2,250 ಅಡಿಯಿದ್ದ ಜಲಾಶಯದ ಮಟ್ಟ ಈಗ 2,254 ಅಡಿಗಳ ಸನಿಹಕ್ಕೆ ಬಂದಿದೆ. ಒಟ್ಟಾರೆ ವಾರದಿಂದೀಚೆಗೆ ಸುಮಾರು 4 ಅಡಿಗಳಷ್ಟು ನೀರು ಹೆಚ್ಚಿದೆ. ಒಳಹರಿವು 1,488 ಕ್ಯುಸೆಕ್‌ಗೆ ಹೆಚ್ಚಳವಾಗಿದೆ. ಹವಾಮಾನ ಇಲಾಖೆಯ ಅನುಸಾರ ಈ ತಿಂಗಳ ಕೊನೆ ಮತ್ತು ಜುಲೈ ಮೊದಲ ವಾರದಲ್ಲಿ ಮಳೆ ಆಗುವ ನಿರೀಕ್ಷೆ ಇದೆ.

-**ಗಣೇಶ್** ಎಇಇ, ಕಬಿನಿ ಜಲಾಶಯ

ಮತದಾರರ ಪಟ್ಟಿ ಪರಿಷ್ಕರಣೆಗೆ ವಿರೋಧ | ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮೊಳಗಿದ ಘೋಷಣೆ

'ಎದ್ದಿದೆ ಕರ್ನಾಟಕ, ನಡೆಯದು ಎಸ್‌ಐಆರ್ ನಾಟಕ'

■ **ವಿಕ ಸುದ್ದಿಲೋಕ** ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಜಾತ್ಯಾತೀತ ಪಕ್ಷಗಳು, ಜನಪರ ಸಂಘಟನೆಗಳ ಒಕ್ಕೂಟ ಸೇರಿದಂತೆ 230ಕ್ಕೂ ಹೆಚ್ಚು ಸಂಘಟನೆಗಳು ಶನಿವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ನಡೆಸಿದವು. 'ಎದ್ದಿದೆ ಕರ್ನಾಟಕ, ನಡೆಯದು ಎಸ್‌ಐಆರ್ ನಾಟಕ' ಘೋಷಣೆಗಳನ್ನು ಮೊಳಗಿಸಿದವು.

ಕೇಂದ್ರ ಸರಕಾರ ಚುನಾವಣಾ ಆಯೋಗದ ಮೂಲಕ ಎಸ್‌ಐಆರ್ ಹೆಸರಿನಲ್ಲಿ ಸಂವಿಧಾನಾತ್ಮಕ ಮತದಾನದ ಹಕ್ಕು ಕಿತ್ತುಕೊಳ್ಳುವ ಹುನ್ನಾರ ನಡೆಸಿದೆ. ಇದಕ್ಕೆ ಕರ್ನಾಟಕದಲ್ಲಿ ಯಾವುದೇ ಕಾರಣಕ್ಕೂ ಆಸ್ಪದ ನೀಡುವುದಿಲ್ಲ ಎಂದು ಘೋಷಣೆ ಕೂಗಿದರು. ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ತಡೆಯಲು ರಾಜ್ಯ ಸರಕಾರ ದಿಟ್ಟ ಕ್ರಮಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು.

ಎಸ್‌ಐಆರ್ ಹಿಂದಿನ ಷಡ್ಯಂತ್ರ ವಿಫಲಗೊಳಿಸಲು ರಾಜ್ಯ ಸರಕಾರ ದಿಟ್ಟ ಹೆಜ್ಜೆ ಇಡದಿದ್ದರೆ ಪ. ಬಂಗಾಳ, ಬಿಹಾರದಂತೆ ಕರ್ನಾಟಕವು ಅಪಾಯಕ್ಕೆ ಸಿಲುಕುತ್ತದೆ.

- **ನೂರ್ ಶ್ರೀಧರ್** ಸಂಘಟಕ, ಕರ್ನಾಟಕ ಜನಶಕ್ತಿ ಸಂಘಟನೆ

ಪ್ರಮುಖ ಹಕ್ಕೊತ್ತಾಯಗಳು

- ಪರೀಕ್ಷೆಗೆ ಒಳಪಡಿಸದ ಅತಾರ್ಕಿಕ ಲಾಜಿಕಲ್ ಡಿಸ್ಕ್ರಿಪೆನ್ಸಿ ಸಾಫ್ಟ್‌ವೇರ್ ಅನ್ನು ಯಾವುದೇ ಕಾರಣಕ್ಕೂ ಬಳಸಬಾರದು
- ಕರಡು ಮತದಾರರ ಪಟ್ಟಿಯನ್ನು ಓದಲು ಬರುವಂತೆ ಒದಗಿಸಬೇಕು
- ಕರಡು ಪಟ್ಟಿಯನ್ನು ಗ್ರಾಮ ಮತ್ತು ವಾರ್ಡ್ ಸಭೆ ಪರಿಶೀಲನೆಗೆ ಒಳಪಡಿಸಬೇಕು
- ಅಪೀಲು ಸಲ್ಲಿಕೆಗೆ ಕನಿಷ್ಠ ಆರು ತಿಂಗಳ ಕಾಲಾವಕಾಶ ನೀಡಬೇಕು

ಎಸ್‌ಐಆರ್ ವಿರೋಧಿ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲವಿದ್ದು, ಪಟ್ಟಿಯಿಂದ ಯಾವೊಬ್ಬ ಮತದಾರರು ಹೊರಗುಳಿಯಬಾರದು ಎಂಬುದು ಪಕ್ಷದ ನಿಲುವು. ಆದ್ದರಿಂದ ದಾಖಲೆಗಳಿಲ್ಲದ ಅರ್ಹ ಮತದಾರರಿಗೆ ರಹವಾಸಿ ಪತ್ರವನ್ನು ತ್ವರಿತವಾಗಿ ಒದಗಿಸುವಂತೆ ಪಿಡಿಒಗಳಿಗೆ ನಿರ್ದೇಶನ ನೀಡುವುದಾಗಿ ಸಿಎಂ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ.

- **ಬಿ.ಕೆ.ಹರಿಪ್ರಸಾದ್** ಕೆಪಿಸಿಸಿ ಅಧ್ಯಕ್ಷ

ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಚುನಾವಣಾ ಆಯೋಗ, ಎಸ್‌ಐಆರ್ ಬಗ್ಗೆ ಯಾಕೆ ಜಾಗೃತಿ ಮೂಡಿಸುತ್ತಿಲ್ಲ. ದೇಶದ 13 ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಿ ಮತದಾರ ಪಟ್ಟಿಯಿಂದ ಹೊರಗಿಟ್ಟಿರುವ 6.5 ಕೋಟಿ ಮತದಾರರಲ್ಲಿ ಎಷ್ಟು ಜನ ನುಸುಳುಕೋರರಿದ್ದಾರೆ ಎಂಬ ಅಂಕಿ-ಅಂಶವನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಆಯೋಗ ಈವರೆಗೆ ಉತ್ತರಿಸಿಲ್ಲ. ಜನಸಾಮಾನ್ಯರ ಪ್ರಶ್ನೆಗಳಿಗೆ ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗ ಉತ್ತರ ನೀಡದಿದ್ದರೆ, ಉಗ್ರ ರೂಪದ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ರೈತ ಸಂಘಟನೆ, ದಲಿತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಅಲ್ಪಸಂಖ್ಯಾತ ಸಂಘಟನೆಗಳು, ಹಿಂದುಳಿದ ಹಾಗೂ ಶೋಷಿತ ಸಮುದಾಯ, ಆದಿವಾಸಿ-ಅಲೆಮಾರಿ ಸಮುದಾಯ, ವಿದ್ಯಾರ್ಥಿ-ಯುವಜನರ ಸಂಘಟನೆಗಳು, ಮಹಿಳಾ ಸಂಘಟನೆಗಳು, ಎಡ ಪಕ್ಷಗಳು, ಎಸ್‌ಐಆರ್ ವಿರೋಧಿ ಆಂದೋಲನ, ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳು ಸೇರಿದಂತೆ 200ಕ್ಕೂ ಹೆಚ್ಚು ಸಂಘಟನೆಗಳು ಪ್ರತಿನಿಧಿಗಳು ಸಮಾವೇಶದಲ್ಲಿ ಹಾಜರಿದ್ದರು.

ಅವಳಿ ಮಕ್ಕಳು ಕೆರೆ ಪಾಲು

■ **ವಿಕ ಸುದ್ದಿಲೋಕ** ಸುಳ್ಯ (ದ.ಕ.)

ತಾಲೂಕಿನ ಮುರುಳ್ಯ ಗ್ರಾಮದ ಕಡೀರ ಎಂಬಲ್ಲಿ ಶನಿವಾರ ಸಂಜೆ ಮನೆಯ ಸಮೀಪದ ಕೆರೆ ಬಳಿ ಆಟವಾಡುತ್ತಿದ್ದ ಅವಳಿ ಮಕ್ಕಳು ಆಕಸ್ಮಿಕವಾಗಿ ಕೆರೆಗೆ ಬಿದ್ದು ಮೃತಪಟ್ಟಿದ್ದಾರೆ.

ವಸಂತ ಹಾಗೂ ದಿವ್ಯ ದಂಪತಿಯ ಐದು ವರ್ಷದ ಅವಳಿ ಮಕ್ಕಳಾದ ಯಶ್ವಿನ್ ಹಾಗೂ ಜಸ್ವಿತ್ ಮೃತಪಟ್ಟ ದುರ್ದೈವಿಗಳು. ಯುಕೆಜಿಯಲ್ಲಿ ಕಲಿಯುತ್ತಿರುವ ಇವರಿಬ್ಬರು, ಆಟ ಆಡುತ್ತ ಮನೆಯ ಸಮೀಪದಲ್ಲಿನ 15 ಅಡಿ ಆಳದ ಕೆರೆಯತ್ತ ಹೋಗಿದ್ದರು. ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ.

ತಂದೆ ವಸಂತ ಅವರು ವೆಲ್ಡಿಂಗ್ ಕೆಲಸ ಮಾಡುತ್ತಿದ್ದು, ತಾಯಿ ದಿವ್ಯ ಅವರು ಕೂಲಿ ಕೆಲಸಕ್ಕೆ ತೆರಳಿದ್ದರು. ಮನೆಯಲ್ಲಿ ಅಜ್ಜ ಮತ್ತು ಅಜ್ಜಿ ಮಾತ್ರ ಇದ್ದರು.

ಮೈಸೂರು ದಸರಾದಲ್ಲಿ ಕಂಬಳಕ್ಕೆ ಅಸ್ತು

ಇದೇ ಮೊದಲ ಬಾರಿಗೆ ನಾಡಹಬ್ಬದಲ್ಲಿ ಆಯೋಜನೆ

■ **ವಿಕ ಸುದ್ದಿಲೋಕ** ಮೈಸೂರು

ನಾಡಹಬ್ಬ ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಕರಾವಳಿ ಭಾಗದ ಜನಪ್ರಿಯ ಕಂಬಳ ಕ್ರೀಡೆಯನ್ನು ನಡೆಸಲು ಮೈಸೂರು ಜಿಲ್ಲಾಡಳಿತ ಸಮ್ಮತಿಸಿದೆ.

ಈ ಸಂಬಂಧ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರು ಶನಿವಾರ ಕಂಬಳ ಆಯೋಜನೆಯ ಬಗ್ಗೆ ಸಭೆ ನಡೆಸಿದರು. ನಂತರ ಮಾತನಾಡಿದ ಅವರು, ''ಕಳೆದ ವರ್ಷವೇ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ, ಸರಿಯಾದ ಸ್ಥಳ ದೊರಕದ ಹಿನ್ನೆಲೆಯಲ್ಲಿ ಸಾಧ್ಯವಾಗಲಿಲ್ಲ. ಹಾಗಾಗಿ ಈ ಬಾರಿ ಕಂಬಳ ಕಾರ್ಯಕ್ರಮವನ್ನು ವಿಶೇಷ ಆಕರ್ಷಣೆಯಾಗಿ ಆಯೋಜಿಸಲಾಗುವುದು,'' ಎಂದರು.

''ಈ ಬಾರಿ 3 ತಿಂಗಳ ಮೊದಲೇ ಕಂಬಳ ಆಯೋಜಿಸಲು ಮೈಸೂರು ನಗರದ ವಿಜಯನಗರ ಮೊದಲನೇ ಹಂತ, ವಿಜಯನಗರ ನಾಲ್ಕನೇ ಹಂತ ಹಾಗೂ ಸಾತಗಳ್ಳಿ ರಿಂಗ್ ರೋಡ್ ರಸ್ತೆಯಲ್ಲಿ ಮೂರು ಸ್ಥಳ ಗುರುತಿಸಲಾಗಿದ್ದು, ಒಂದು ಸ್ಥಳವನ್ನು ಆಯ್ಕೆ ಮಾಡುವುದು,'' ಎಂದರು.

''ಕಂಬಳ ಆಯೋಜನೆಗೆ ಕನಿಷ್ಠ ಏಳು ಎಕರೆ ಸ್ಥಳ ಬೇಕಿದ್ದು, ಸ್ಥಳ ಆಯ್ಕೆ ಮಾಡುವಾಗ ಪಾರ್ಕಿಂಗ್ ವ್ಯವಸ್ಥೆ, ವೀಕ್ಷಕರ ಗ್ಯಾಲರಿ, ಕೋಣಗಳು ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಿರುವ ಸ್ಥಳವನ್ನು ನೋಡಿ ಆಯ್ಕೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ,'' ಎಂದರು.

''ಕಂಬಳ ಕಾರ್ಯಕ್ರಮದ ಉಪ ಸಮಿತಿಗೆ ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗುವುದು,'' ಎಂದರು.

ಸಭೆಯಲ್ಲಿ ಜಿಪಂ ಸಿಇಒ ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ರಾಜ್ಯ ಕಂಬಳ ಅಸೋಸಿಯೇಶನ್ ಕಾರ್ಯದರ್ಶಿ ವಿಜಯ ಕುಮಾರ್ ಕಂಗಿನಮನೆ, ಬೆಂಗಳೂರು ಕಂಬಳ ವರ್ಕಿಂಗ್ ಪ್ರೆಸಿಡೆಂಟ್ ಮುರುಳಿಧರ್ ರೈ, ಜಯಸೂರ್ಯ ರೈ ಹಾಜರಿದ್ದರು.

ಈ ರೈತ ರಸಗೊಬ್ಬರಕ್ಕಾಗಿ ಹರ್ಮುಜ್ ಕಡೆ ನೋಡೋದಿಲ್ಲ!

ಹಂಪಿ ಬಳಿಯೊಂದು ಹಸಿರು ಸಾಮ್ರಾಜ್ಯ ಎರೆಹುಳುಗಳಿಂದ ಬರಡನ್ನು ಬನವಾಗಿಸಿದ ಸ್ವಾಮಿ

■ **ಸೋಮಶೇಖರ ಕಿಲಾರಿ**
somashekar.mahadevappa@timesofindia.com

ಬಳ್ಳಾರಿಯಿಂದ ಹಂಪಿಯತ್ತ ಸಾಗುವ ದಾರಿ. ಸುತ್ತೆಲ್ಲ ಬಯಲು. ಅಲ್ಲಲ್ಲಿ ನೀರು ಕಾಣದೆ ಬಾಯ್ದೆರೆದು ಮಲಗಿದ ತುಂಗಭದ್ರಾ ಕಾಲುವೆಗಳು. ಮುಂದೆ ಸಾಗಿದರೆ ಎದುರಾಗುವ ಕುರುಚಲು ಕಾಡು. ಅಲ್ಲಿಂದ ಇಳಿದು ಹಂಪಿ ಮಗ್ಗುಲಿನ ಕಮಲಾಪುರದತ್ತ ಹೆಜ್ಜೆ ಹಾಕಿದರೆ ಹದಗೊಂಡು ಮಳೆಗಾಗಿ ಕಾಯ್ದ ಜಮೀನು ಕಾಣಿಸುತ್ತವೆ. ಮುಂಗಾರು ಮಳೆ ತಡವಾಗಿದೆ. ಎಲ್‌ನಿನೋ ಪರಿಣಾಮ ಈ ವರ್ಷ ಆರೆಬರಗಾಲ ಉಂಟಾಗುವ ಆಪಾಯವೂ ಸದ್ದಾಗುತ್ತಿದೆ. ರೈತರ ಮುಖದಲ್ಲಿ ಕಳವಳ ಮಡುಗಟ್ಟಿದೆ. ಕಳವಳಿತ ರೈತರ ಬೋಳು ಜಮೀನುಗಳನ್ನು ಹಿಂದೆ ಬಿಟ್ಟು ನೀರಾವರಿ ಇಲಾಖೆಯ ಮೀಸಲು ಅರಣ್ಯ ಬದಿಯ ಆ ಪುಟ್ಟ ಜಮೀನು ಪ್ರವೇಶಮಾಡಿದರೆ ಪವಾಡ ಸದೃಶ ತಂಗಾಳಿ ಸ್ವಾಗತಿಸುತ್ತದೆ.

ಕಮಲಾಪುರದ ಪಂಪಯ್ಯ ಸ್ವಾಮಿ ಮಳಿಮಠ ಅವರಿಗೆ ಸೇರಿದ ಎರಡು ಎಕರೆ ಜಮೀನು ಅದು. ಬೇವು, ಹೆಬ್ಬೇವು, ಮಾವು, ಪಪ್ಪಾಯಿ, ಕರಿಬೇವು, ನುಗ್ಗೆ ನೂರಾರು ಜಾತಿ ಮರಮುಟ್ಟುಗಳು. ಮಧ್ಯೆದಲ್ಲಿ ಆಹಾರ ಧಾನ್ಯದ ಬೆಳೆಗಳು. ತರಕಾರಿ, ಥರಹೇವಾರಿ ಸಸಿಗಳು. ಕೆಳಗೆ, ಹೆಜ್ಜೆ ಇರಿಸಿದರೆ ತಣ್ಣಗೆ ಪಾದ ಸ್ಪರ್ಶಿಸುವ ಮೃದು ಮಣ್ಣು. ಪಕ್ಕದ ಜಮೀನು ಬೋಳಾಗಿರುವಾಗ ಇಲ್ಲಿ ಮಾತ್ರ ನಳನಳಿಸುವ ಹಸಿರು! ಈ ಬೆರಗು ಹೇಗೆ ಸಾಧ್ಯವಾಗಿತು ಎಂದು ಕೇಳಿದರೆ, ''ಸಿಂಪಲ್, ಎರೆಹುಳು ಇಷ್ಟೆಲ್ಲ ಪವಾಡ ಸೃಷ್ಟಿಗೆ ಕಾರಣವಾಗಿದೆ,'' ಎಂದು ಕಾಂಪೋಸ್ಟ್ ಗುಂಡಿಗಳತ್ತ ಕೈತೋರಿಸುತ್ತಾರೆ ಪರಿಸರ ಪ್ರೇಮಿ ಪಂಪಯ್ಯ ಸ್ವಾಮಿ.

ಪಿಚಕಾರಿಯಂತೆ ಮೆತ್ತಗೆ ತಟ್ಟುವ ಈ ಎರೆಹುಳು ಪರಿಸರದ ಬಹುದೊಡ್ಡ ಭಾಗ. ಮರ, ಸಸ್ಯ, ಮಣ್ಣು ಮತ್ತು ಮಾನವನನ್ನು ಚಿರಕಾಲ ಆರೋಗ್ಯವಾಗಿಡಲು ಈ ಎರೆಹುಳು ನಿರಂತರ ಶ್ರಮಿಸುತ್ತದೆ. ಉದುರುವ ಒಣಎಲೆ, ಕಸಕಡ್ಡಿ, ಪಶುಪಕ್ಷಿ ತ್ಯಾಜ್ಯ ಕೊಳೆತು ಕಾಂಪೋಸ್ಟ್ ಆಗಿ ಮಣ್ಣಿಗೆ ಪೋಷಕಾಂಶ ರೂಪದಲ್ಲಿ ಒದಗಿಸಲು ಎರೆಹುಳುಗಳೇ ಬೇಕು. ಎರೆಹುಳು ಕಣ್ಮರೆಯಾದ ದಿನ ಈ ಮಣ್ಣು ಸಂಪೂರ್ಣ ಬರಡಾಗುತ್ತದೆ. ಮರಗಳು ಮರೆಯಾಗುತ್ತವೆ. ಜೀವ ಜಗತ್ತು ಪರಿಸರ ನಿಧಾನ ನಶಿಸುತ್ತದೆ ಎನ್ನುವ ಸತ್ಯವನ್ನು ವಿಜ್ಞಾನಿಗಳು ಹೇಳಿ ಎಚ್ಚರಿಸಿದ್ದಾರೆ. ಈ ಎಚ್ಚರ ಇಟ್ಟುಕೊಂಡೇ ಪಂಪಯ್ಯ ಸ್ವಾಮಿಯವರು ತಮ್ಮ ಜಮೀನಿನ ಮೂಲೆಯಲ್ಲಿ ಎರೆಹುಳುಗಳನ್ನು ಬೆಳೆಸುವ ಶೆಡ್ ನಿರ್ಮಿಸಿದ್ದಾರೆ. ಬೆಳೆದ ಎರೆಹುಳುಗಳನ್ನು ಕಾಂಪೋಸ್ಟ್ ಗುಂಡಿಗೆ ಬಿಟ್ಟು ಸಾವಯವ ಗೊಬ್ಬರ ಸಿದ್ಧಪಡಿಸುತ್ತಾರೆ. ಆ ಮೂಲಕ ಹತ್ತು ವರ್ಷಗಳ ಹಿಂದೆ ಬರಡಾಗಿದ್ದ ತಮ್ಮ ಜಮೀನನ್ನು ಕಾಂಪೋಸ್ಟ್ ಬಳಕೆಯಿಂದಲೇ ಇಂದು ನಳನಳಿಸುವ ನಂದನವನವಾಗಿಸಿದ್ದಾರೆ ಪಂಪಯ್ಯ ಸ್ವಾಮಿ.



ನನ್ನ ಭೂಮಿ ಹೆಜ್ಜೆ — ವಿಕ ಅಭಿಯಾನ

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿ.
63664 22240

ಕಾಂಪೋಸ್ಟ್ ಗೊಬ್ಬರವನ್ನು ಅತಿ ಕಡಿಮೆ ಖರ್ಚಿನಲ್ಲಿ ಎಲ್ಲಾ ರೈತರು ತಯಾರಿಸಬಹುದಾಗಿದೆ. ಕಾಂಪೋಸ್ಟ್ ಗೊಬ್ಬರ ಬಳಸಿದರೆ, ರಸಗೊಬ್ಬರಕ್ಕಾಗಿ ಗೋಗರೆಯುವುದು ತಪ್ಪುತ್ತದೆ. ಭೂಮಿಯ ಫಲವತ್ತತೆ ಹೆಚ್ಚಿ, ಇಳುವರಿ ವರ್ಧಿಸುತ್ತದೆ. ಮಳೆಯ ಡಿಪೆಂಡೆನ್ಸಿ ತಗ್ಗುತ್ತದೆ. ಪರಿಸರದ ಆರೋಗ್ಯ ಸುಧಾರಿಸಿ ನಮ್ಮೆಲ್ಲರ ಬದುಕು ಕೂಡ ಹಸನಾಗುತ್ತದೆ.

-**ಪಂಪಯ್ಯ ಸ್ವಾಮಿ**

ನೀವೂ ತಯಾರಿಸಬಹುದು ಕಾಂಪೋಸ್ಟ್

- **ಲೀಫ್ ಮೌಲ್ಡ್ ಕಾಂಪೋಸ್ಟ್:** ಒಣಎಲೆ, ಮಣ್ಣು ಮತ್ತು ಸಗಣಿ ಪದರುಗಳಲ್ಲಿ ಗುಂಡಿ ತುಂಬಿಸಿ ಎರೆಹುಳು ಬಿಟ್ಟರೆ ನಾಲ್ಕು ತಿಂಗಳಲ್ಲಿ ಬೆಸ್ಟ್ ಕಾಂಪೋಸ್ಟ್ ರೆಡಿಯಾಗುತ್ತದೆ
- **ಬಿಸಿ ರೊಟ್ಟಿ ಮಲ್ಲಪ್ಪ ಮಾದರಿ:** ಸಗಣಿ, ಗೋಮೂತ್ರ, ಬೆಲ್ಲದ ನೀರು ಮತ್ತು ದ್ವಿದಳ ಧಾನ್ಯಗಳ ಹಿಟ್ಟು ಮಿಶ್ರ ಮಾಡಿ ಭೂಮಿಗೆ ಸಿಂಪರಣೆ ಮಾಡುವುದರಿಂದ ಗೊಣ್ಣೆಹುಳು (ರೈನೊ ಸಾರಸ್ ಬೀಟಲ್ ಲಾರ್ವ), ಎರೆಹುಳು ಸೃಷ್ಟಿಯಾಗಿ ಮಣ್ಣು ಫಲವತ್ತುಗೊಳ್ಳುತ್ತದೆ
- **ಲೈವ್ ಮಲ್ಚಿಂಗ್ (ಗ್ರೀನ್ ಮೆನೂರ್):** ದ್ವಿದಳ ಧಾನ್ಯ ಬೆಳೆ ಜಮೀನಿನಲ್ಲಿ ಬೆಳೆಸಿ, ಬಳಕೆ ಮಾಡದೇ ಅದನ್ನು ಉಳುಮೆ ಮಾಡುವುದರಿಂದ ಮಣ್ಣಿನ ಸತ್ವಾಂಶ ಹೆಚ್ಚುತ್ತದೆ



PUBLIC NOTICE

This is to inform the general public that my client intends to purchase the immovable property mentioned and described the schedule below from its owners **(i) Sri. Mohan,** and **(ii) Sri. Lakshmikanth R,** both sons of Late Ramaiah (hereafter collectively referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered any sort of Agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the immovable property bearing Survey No. 44/1, measuring 02 acres 21 guntas, situated at Kadugodi Village, Bidarahalli Hobli, Bengaluru East Taluk, Bengaluru Urban District and bounded on the:

East by : Road;
West by : Land bearing Survey Nos.29 and 45;
North by : Land bearing Survey Nos.43 and 44/2; and
South by : Road.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road,
Bengaluru-560001 Ph.: 080 22863885 / 49763233
email: vinay@vinaykademane.in

Place : Bengaluru
Date : 20-06-2026

PUBLIC NOTICE

This is to inform the general public that my client intends to purchase the immovable property mentioned and described the schedule below from its owners **(i) Sri. Mohan,** and **(ii) Sri. Lakshmikanth R,** both sons of Late Ramaiah (hereafter collectively referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered any sort of Agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the immovable property bearing Survey No. 44/1, measuring 02 acres 21 guntas, situated at Kadugodi Village, Bidarahalli Hobli, Bengaluru East Taluk, Bengaluru Urban District and bounded on the:

East by : Road;
West by : Land bearing Survey Nos.29 and 45;
North by : Land bearing Survey Nos.43 and 44/2; and
South by : Road.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road,
Bengaluru-560001 Ph.: 080 22863885 / 49763233
email: vinay@vinaykademane.in

Place : Bengaluru
Date : 20-06-2026

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು, ಕೆಳಕಂಡ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ("ಷೆಡ್ಯೂಲ್ ಪ್ರಾಪರ್ಟಿ") ಮತ್ತು ಬಾಗಲೂರ ಗ್ರಾಮ, ಜಾಲ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ಉತ್ತರ ಜಿಲ್ಲೆ ವಿಳಾಸದ ವಿವಿಧ ಸರ್ವೆ ನಂಬರ್‌ಗಳಲ್ಲಿ ಸಂಯೋಜಿತ ಸುಮಾರು 11 ಎಕರೆ 32 ಗುಂಟಾ ವಿಸ್ತೀರ್ಣದ ಜಮೀನುಗಳನ್ನು, ಅವುಗಳ ಪ್ರಸಕ್ತ ಮಾಲೀಕರಿಂದ ಖರೀದಿಸಲು ಉದ್ದೇಶಿಸಿದ್ದು, ನಮ್ಮ ಕಕ್ಷಿದಾರರ ಸೂಚನೆಯ ಮೇರೆಗೆ ನಾವು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಗಳನ್ನು ಪರಿಶೋಧಿಸುತ್ತಿದ್ದೇವೆ.

ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ, ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಗೆ ಅಡಮಾಣ, ಈಡು, ಋಣಭಾರ, ಹಕ್ಕುಪತ್ರಗಳ ಠೇಣಿ, ಅಡವು, ಮೇಲಾಧಾರ, ಹಂಚಿಕೆ, ಮಾರಾಟ, ಮಾರಾಟ ಒಪ್ಪಂದ, ವರ್ಗಾವಣೆ, ಅಸೈನ್‌ಮೆಂಟ್, ಭೋಗ್ಯ, ಭೋಗ್ಯ ಒಪ್ಪಂದ, ಉಪ ಭೋಗ್ಯ, ಉಪ ಭೋಗ್ಯ ಒಪ್ಪಂದ, ಭಾಡಿಗೆ, ಉಪ ಭಾಡಿಗೆ, ಲೈಸನ್ಸ್, ಸಬ್ ಲೈಸನ್ಸ್, ಲೀನ್, ಚಾರ್ಜ್, ಟ್ರಸ್ಟ್, ನಿರ್ವಹಣೆ, ಈಸ್‌ಮೆಂಟ್, ಪರಿಹಾರ ಕ್ಲೇಮ್‌ಗಳು, ಉಡುಗೊರೆ, ಲಿಸ್ಪೆಂಡೆನ್ಸ್, ವಿನಿಮಯ, ಪಾಲು, ಫಲಾನುಭವಿ ಹಿತಾಸಕ್ತಿ, ಸ್ವಾಧೀನ, ಬಿಡುಗಡೆ, ರೆಲಿಕ್ವಿಷ್‌ಮೆಂಟ್, ಭಾಗ, ಪವರ್ ಆಫ್ ಅಟಾರ್ನಿ, ಗುತ್ತಿಗೆ/ಒಡಂಬಡಿಕೆ, ಅಯ್ಕೆಗಳು, ಮೊದಲ ತಿರಸ್ಕಾರ ಹಕ್ಕು ಅಥವಾ ಮೊದಲ ಕೊಡುಗೆ ಹಕ್ಕು ಅಥವಾ ಪ್ರಿಯಾಂಪ್ಷನ್ ಅಥವಾ ಋಣಭಾರ ಅಡಿಯಲ್ಲಿನ ಯಾವುದೇ ಸ್ವರೂಪದಲ್ಲಿ, ಉಯಿಲು, ಬಿಕ್ವೆಸ್ಟ್, ಆನುವಂಶಿಕ, ಸಕ್ಸೆಶನ್, ಎಫ್‌ಎಆರ್, ಎಫ್‌ಎಸ್‌ಐ, ಅಭಿವೃದ್ಧಿ ಹಕ್ಕುಗಳು, ವೃತ್ತಿ, ಪಾಲು, ಅಸೈನ್‌ಮೆಂಟ್, ಕುಟುಂಬ ಒಪ್ಪಂದಗಳು/ಇತ್ಯರ್ಥ, ಅಥವಾ ಇತರ ಯಾವುದೇ ಕಾನೂನು ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಇನ್ಯಾವುದೇ ಕಂದಾಯ ಅಥವಾ ಶಾಸನಬದ್ಧ ಅಥವಾ ತೀರ್ಪು ನೀಡುವ ಪ್ರಾಧಿಕಾರ ಅಥವಾ ಆರ್ಬಿಟ್ರೇಶನ್ ಹೊರಡಿಸಿರುವ ಡಿಸ್ಪೊಸಿಶನ್, ಪಾಲುದಾರಿಕೆ, ಸ್ವಾಧೀನತೆ, ಹಂಚಿಕೆ, ವ್ಯಾಜ್ಯ, ಆದೇಶ, ಡಿಕ್ರಿ, ಅವಾರ್ಡ್, ನಿರ್ದೇಶನ, ಮಧ್ಯಂತರ ತಡೆ, ಅಟ್ಯಾಚ್‌ಮೆಂಟ್ ಅಥವಾ ಸರ್ಕಾರಿ ಅಥವಾ ಯಾವುದೇ ಸಂಸ್ಥೆಯ ಸ್ವಾಧೀನತೆ, ನಿರ್ಬಂಧ ಅಥವಾ ಇನ್ಯಾವುದೇ ಅಡಚನೆಗಳಿದ್ದಲ್ಲಿ ಅಥವಾ ಇನ್ಯಾವುದೇ ಒಪ್ಪಂದ, ಡೀಡ್, ದಾಖಲಾತಿ ಅಥವಾ ಪವರ್ ಆಫ್ ಅಟಾರ್ನಿ ಅಥವಾ ಇನ್ನಿತರ ಯಾವುದೇ ವಿಧಾನದಲ್ಲಿ ("ಕ್ಲೇಮ್") ಅಥವಾ ಈಗಾಗಲೇ ಯಾವುದಾದರು ದಾವೆ, ವ್ಯಾಜ್ಯ, ತಗಾದೆ, ಮೇಲ್ಮನವಿ ಹೂಡಿದ್ದಲ್ಲಿ ಅಥವಾ ಇತರೆ ಪ್ರೊಸೀಡಿಂಗ್‌ಗಳಿದ್ದಲ್ಲಿ ಅಥವಾ ಯಾವುದೇ ಡಿಮಾಂಡ್ ನೋಟಿಸ್ ಜಾರಿಗೊಳಿಸಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಡಿಕ್ರಿ, ತೀರ್ಪು, ಆದೇಶ, ತಡೆಯಾಜ್ಞೆ, ಅಟ್ಯಾಚ್‌ಮೆಂಟ್, ನಿರ್ದೇಶನ ಜಾರಿಯಾಗಿದ್ದಲ್ಲಿ, ಇಂತಹವುಗಳಷ್ಟೆ ಅಲ್ಲದೆ ಇನ್ಯಾವುದೇ ಸ್ವರೂಪದ ಅಡಿಯಲ್ಲಿ ಯಾರಿಗಾದರು ಕ್ಲೇಮ್‌ಗಳಿದ್ದಲ್ಲಿ ಅಥವಾ ಯಾವುದೇ ಡಿಮಾಂಡ್‌ಗಳಿದ್ದಲ್ಲಿ ಮತ್ತು/ಅಥವಾ ಆಕ್ಷೇಪಣೆಗಳಿದ್ದಲ್ಲಿ ಮತ್ತು/ಅಥವಾ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಎಸ್ಟೇಟ್ ಹೊಂದಿದ್ದಲ್ಲಿ, ಅಂತಹವರು ತಮ್ಮ ಯಾವುದೇ ಕ್ಲೇಮ್‌ಗಳ ಅಥವಾ ಆಕ್ಷೇಪಣೆಗಳ ವಿವರಗಳನ್ನು, ತಮ್ಮ ಕ್ಲೇಮ್ ಅಥವಾ ಆಕ್ಷೇಪಣೆಗಳನ್ನು ಪುರಸ್ಕರಿಸಬಲ್ಲ ಅಗತ್ಯ ಪುರಾವೆ ದಾಖಲಾತಿಗಳ ಸಮೇತ, ಕೆಳಕಂಡ ವಿಳಾಸದಲ್ಲಿರುವ ಕೆಳಗಿನ ಸಹಿದಾರರಿಗೆ, ಈ ಪ್ರಕಟಣೆಯ ದಿನಾಂಕದಿಂದ **15 (ಹದಿನೈದು) ದಿನಗಳೊಳಗೆ,** ಲಿಖಿತ ರೂಪದಲ್ಲಿ ಮಾಹಿತಿ ನೀಡಬೇಕೆಂದು ಈ ಮೂಲಕ ಕರೆ ನೀಡುತ್ತಿದ್ದೇವೆ, ಅಲ್ಲದೆ **harsha.sudhindra@cyrilshroff.com** ಇಮೇಲ್ ವಿಳಾಸಕ್ಕೆ (ಶ್ರೀ. ಹರ್ಷ ಸುಧೀಂದ್ರ ಇವರ ಗಮನಕ್ಕೆ ಎಂದು ಉಲ್ಲೇಖಿಸಿ) ತಮ್ಮ ಆಕ್ಷೇಪಣೆ ಅಥವಾ ಕ್ಲೇಮ್ ಹಾಗೂ ಪುರಾವೆ ದಾಖಲಾತಿಗಳ ಪ್ರತಿಯನ್ನು ರವಾನಿಸುವುದು, ಇದಕ್ಕೆ ತಪ್ಪಿದಲ್ಲಿ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯ ಅಥವಾ ಪಕ್ಷಗಾರರ ಯಾವುದೇ ಕ್ಲೇಮ್‌ಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿ ಅಥವಾ ಪ್ರಾಪರ್ಟಿಯ ಯಾವುದೇ ಭಾಗದ ಮೇಲೆ ಯಾವುದೇ ಕ್ಲೇಮ್‌ಗಳು, ಆಕ್ಷೇಪಣೆಗಳು ಇರುವುದಿಲ್ಲವೆಂದು ಭಾವಿಸುತ್ತ, ಸದರಿ ಷೆಡ್ಯೂಲ್ ಪ್ರಾಪರ್ಟಿಯನ್ನು ಅದರ ಪ್ರಸಕ್ತ ಮಾಲೀಕರಿಂದ ನೇರವಾಗಿ ಖರೀದಿಸುವ ತಮ್ಮ ಉದ್ದೇಶವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ. ಒಂದು ವೇಳೆ ಅಂತಹ ಯಾವುದೇ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ಎದುರಾದಲ್ಲಿ, ಅವುಗಳನ್ನು, ವಿವೇಚನಾಪೂರ್ವಕವಾಗಿ ಕೈಬಿಡಲಾಗುತ್ತದೆ ಮತ್ತು ಕ್ಲೇಮುದಾರರ ಕ್ಲೇಮ್ ಹಕ್ಕು ಕೂಡ ಇಲ್ಲವಾಗುತ್ತದೆ. ಸದರಿ ಷೆಡ್ಯೂಲ್ ಪ್ರಾಪರ್ಟಿಯ ಹಕ್ಕುಗಳು ಸ್ಪಷ್ಟವಾಗಿವೆ ಮತ್ತು ಖರೀದಿ ಮಾರಾಟಕ್ಕೆ ಯೋಗ್ಯವಾಗಿವೆ ಹಾಗೂ ಯಾವುದೇ ಋಣಭಾರಗಳಿಂದ, ಕ್ಲೇಮ್‌ಗಳಿಂದ, ವ್ಯಾಜ್ಯಗಳಿಂದ ಮತ್ತು/ಅಥವಾ ಯಾವುದೇ ರೀತಿಯ ಅನುಮಾನಗಳಿಂದ ಮುಕ್ತವಾಗಿದೆ ಎಂದು ಪರಿಭಾವಿಸಲಾಗುತ್ತದೆ ಮತ್ತು ಪರಿಗಣಿಸಲಾಗುತ್ತದೆ.

ಷೆಡ್ಯೂಲ್
(ಷೆಡ್ಯೂಲ್ ಪ್ರಾಪರ್ಟಿಯ ವಿವರ)

ಬಾಗಲೂರ ಗ್ರಾಮ, ಜಾಲ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ಉತ್ತರ ಜಿಲ್ಲೆ ವಿಳಾಸದಲ್ಲಿನ ವಿವಿಧ ಸರ್ವೆ ನಂಬರ್‌ಗಳಲ್ಲಿ ಸಂಯೋಜಿತ, ಸುಮಾರು 11 ಎಕರೆ 32 ಗುಂಟಾ ವಿಸ್ತೀರ್ಣವುಳ್ಳ ಎಲ್ಲಾ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಜಮೀನುಗಳ ಚಕ್ಕುಬಂದಿ ಕೆಳಗಿನಂತಿರುತ್ತದೆ:

ಕ್ರ. ಸಂ.	ಸರ್ವೆ ನಂಬರ್	ವಿಸ್ತೀರ್ಣ (ಖರಾಬ್ ಹೊರತಾಗಿ)		ಖರಾಬ್		ಚಕ್ಕುಬಂದಿ (ಸರ್ವೆ ನಂಬರ್)			
				ಎ	ಬಿ				
		ಎಕರೆ	ಗುಂಟಾ	ಗುಂಟಾ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	465/1	03	00	-	-	ಸರ್ವೆ ನಂ. 449 ರಲ್ಲಿನ ಜಮೀನು	ಸರ್ವೆ ನಂ. 465/2 ರಲ್ಲಿನ ಜಮೀನು	ಸರ್ವೆ ನಂ. 466 ರಲ್ಲಿನ ಜಮೀನು	ರಸ್ತೆ
2	465/2	01	00	-	-	ಸರ್ವೆ ನಂ. 465/1 ರಲ್ಲಿನ ಜಮೀನು	ಹೊಸಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 466 ರಲ್ಲಿನ ಜಮೀನು	ರಸ್ತೆ
3	466/1	01	16	-	-	ಸರ್ವೆ ನಂ. 175 ರಲ್ಲಿನ ಜಮೀನು	ಸರ್ವೆ ನಂ. 466/2 ರಲ್ಲಿನ ಜಮೀನು	ಸರ್ವೆ ನಂ. 467 & 175 ರಲ್ಲಿನ ಜಮೀನು	ಸರ್ವೆ ನಂ. 465 & 175 ರಲ್ಲಿನ ಜಮೀನು
4	466/2	01	16	-	-	ಸರ್ವೆ ನಂ. 466/1 ರಲ್ಲಿನ ಜಮೀನು	ಸರ್ವೆ ನಂ. 466/3 ರಲ್ಲಿನ ಜಮೀನು	ಸರ್ವೆ ನಂ. 467 ರಲ್ಲಿನ ಜಮೀನು	ಸರ್ವೆ ನಂ. 465 ರಲ್ಲಿನ ಜಮೀನು
5	466/3	02	00	-	-	ಸರ್ವೆ ನಂ. 466/2 ರಲ್ಲಿನ ಜಮೀನು	ಹೊಸಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 467 ರಲ್ಲಿನ ಜಮೀನು	ಸರ್ವೆ ನಂ. 465 ರಲ್ಲಿನ ಜಮೀನು
6	467/1	01	00	-	-	ಸರ್ವೆ ನಂ. 449 ರಲ್ಲಿನ ಜಮೀನು	ಹೊಸಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 467/2 ರಲ್ಲಿನ ಜಮೀನು	ಸರ್ವೆ ನಂ. 466 ರಲ್ಲಿನ ಜಮೀನು
7	467/2	02	00	-	-	ಸರ್ವೆ ನಂ. 499 ರಲ್ಲಿನ ಜಮೀನು	ಹೊಸಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 468 ರಲ್ಲಿನ ಜಮೀನು	ಸರ್ವೆ ನಂ. 467/1 ರಲ್ಲಿನ ಜಮೀನು
ಒಟ್ಟು		11	32						

ಹರ್ಷ ಸುಧೀಂದ್ರ
ಪಾಲುದಾರರು
ಸಿರಿಲ್ ಅಮರಚಂದ್ ಮಂಗಲದಾಸ್
ವಕೀಲರು ಮತ್ತು ಸಾಲಿಸಿಟರ್ಸ್, ಪ್ರೆಸ್ಟೀಜ್ ಫಾಲ್ಕನ್ ಟವರ್, 3ನೇ ಮಹಡಿ, ಬ್ರಂಟನ್ ರಸ್ತೆ, ಎಂ.ಜಿ. ರಸ್ತೆ ಪಕ್ಕ, ಬೆಂಗಳೂರು – 560025. ಫೋನ್ ನಂ.: 080 67922000

ದಿನಾಂಕ: ಜೂನ್ 21, 2026
ಸ್ಥಳ: ಬೆಂಗಳೂರು

ಅಪ್ಪ ಹೇಳದ ಐದು ಸತ್ಯಗಳು

ಈ ಆಕಾಶದ ಉದ್ದಗಲ ಅಳೆಯುವ ಬಗೆ ಹೇಗೆ?

ಅಪ್ಪನ ದಿನ

ಅಪ್ಪನ ಮಮತೆಯ ಹರಿವು ಅರಿವಿಗೆ ಬಾರದಷ್ಟು ನಿಗೂಢ, ವ್ಯಾಪ್ತಿಗೆ ಸಿಗದಷ್ಟು ವಿಶಾಲ. ಆದರೂ ಅವನೊಬ್ಬ ಸುರಕ್ಷೆಯ ಸೂತ್ರ. ಇದರಲ್ಲಿ ಅವನು ಕೊಟ್ಟ ಪ್ರೀತಿಯನ್ನು ಕೂಡಿಸಿ, ಕೊಡದೇ ಹೋದದ್ದನ್ನು ಕಳೆಯುವುದು ಹೇಗೆ ಎಂಬ ಲೆಕ್ಕದ ನಡುವೆ ಉಳಿದ ಸತ್ಯಗಳೇ ಅಪ್ಪ ಮಕ್ಕಳ ಬಾಂಧವ್ಯದ ಫಲಿತಾಂಶ. ಅಪ್ಪಂದಿರ ದಿನದ ನಿಮಿತ್ತ ಅಪ್ಪ ಯಾವತ್ತೂ ಹೇಳದ ಆದರೆ ಮಕ್ಕಳ ಗಮನಕ್ಕೆ ಬರುವ ಸತ್ಯಗಳ ಅನಾವರಣ ಇಲ್ಲಿದೆ.

ಅಪ್ಪನ ಎದೆಗೂಡಲ್ಲಿ ಬಚ್ಚಿಟ್ಟ ಮಾತು

ಶುಭಶ್ರೀ ಭಟ್ಟ
feedbacklvk@vijaykarnataka.com

ಅಮ್ಮನಾದರೆ ಅಳು, ನಗು, ಕೋಪ, ಜಗಳ, ಚಿಂತೆ, ಹೆಮ್ಮೆ ಅನ್ನುತ್ತಾ ತನಗನಿಸಿದ್ದೆಲ್ಲವನ್ನೂ ಅಭಿವ್ಯಕ್ತಿಸುತ್ತಲೇ ಮಕ್ಕಳೊಂದಿಗೆ ತನ್ನದೇ ಆದ ಬಾಂಧವ್ಯವನ್ನು ಬೆಸೆದುಕೊಂಡಿರುತ್ತಾಳೆ. ಆದರೆ ಅಪ್ಪ ಹಾಗಲ್ಲ. ಇದ್ಯಾವುದನ್ನೂ ಹೇಳಿಕೊಂಡು ಹಗುರಾಗುವುದಿಲ್ಲ. ಬದುಕಿನುದ್ದಕ್ಕೂ ತನ್ನ ಭಾವನೆಗಳನ್ನು ಹೆಪ್ಪುಗಟ್ಟಿಸಿಕೊಂಡು, ತನ್ನ ಕನಸುಗಳನ್ನೆಲ್ಲ ಮರೆತು ತನ್ನ ಮಕ್ಕಳಿಗಾಗಿ, ಕುಟುಂಬಕ್ಕಾಗಿಯೇ ದುಡಿವ ಅಸ್ತಿತ್ವದ ಪ್ರತೀಕವಾಗಿರುತ್ತಾನೆ. ಮಗಳಿಗೆ ಹೇಳಬೇಕು ಅಂದುಕೊಂಡ ಹಲವು ವಿಷಯಗಳು ಅವನಲ್ಲಿಯೇ ಉಳಿದುಬಿಡುತ್ತವೆ. ಹೀಗೆ ಎಲ್ಲ ಅಪ್ಪಂದಿರು ಮಗಳೆದುರು ಹಂಚಿಕೊಳ್ಳಲಾರದ ಆದರೆ ಅವರಲ್ಲಿಯೇ ಹುದುಗಿರುವ ಸತ್ಯಗಳು ಅವೆಷ್ಟೋ...

1 ಪುಟಾಣಿ ಕೂಸು

ಮಗಳು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ, ಸ್ವತಂತ್ರವಾಗಿ ಬದುಕನ್ನು ನಿಭಾಯಿಸುತ್ತಿದ್ದರೂ, ಆಧುನಿಕ ನಿರ್ಭಿಡೆಯ ಮಹಿಳೆಯಾಗಿದ್ದರೂ ಅಪ್ಪನಿಗೆ ಅವಳಿನ್ನೂ ತನ್ನ ಎದೆಗೊದ್ದು ನಸುನಗುವ ಪುಟಾಣಿ ಮಗುವೇ. ಹೊರಜಗತ್ತಿಗೆ ಅವಳು ಯಶಸ್ವಿ ಉದ್ಯಮಿಯಾಗಿರಲಿ, ಡಾಕ್ಟರ್ ಆಗಿರಲಿ, ಯಾರದ್ದೋ ಹೆಂಡತಿ ಅಥವಾ ಅಮ್ಮನಾಗಿರಲಿ ಅಪ್ಪನ ದೃಷ್ಟಿ ಬದಲಾಗುವುದಿಲ್ಲ. ಅಪ್ಪನಿಗವಳಿನ್ನೂ ತನ್ನ ಕೈಹಿಡಿದು ನಡೆಯಲು ಕಲಿತ ಅದೇ ಪೆಂಗ್ವಿನ್ ಪಾಪು. ಅದಕ್ಕೆ ಅವರಿಗೆ ಮಗಳು ಎಂತಹುದೇ ನಿರ್ಧಾರ ತೆಗೆದುಕೊಂಡರೂ ಅವ್ಯಕ್ತ ಚಿಂತೆಯ ಎಳೆಯೊಂದು ಕಂಡೂ ಕಾಣದಂತೆ ಇದ್ದೇ ಇರುತ್ತದೆ. ಮಗಳು ಬೆಳೆದು ದೊಡ್ಡವಳಾಗಿದ್ದಾಳೆ ಎಂಬ ಸತ್ಯವನ್ನು ಬಹುತೇಕ ಅಪ್ಪಂದಿರು ಒಪ್ಪಿಕೊಳ್ಳುವುದೇ ಇಲ್ಲ. ಅಪ್ಪನ ಹೃದಯಕ್ಕೆ ಮಗಳ ಲೇಟೆಸ್ಟ್ ವರ್ಷನ್ ಅಪ್ಡೇಟ್ ಆಗುವುದೇ ಇಲ್ಲ.

2 ಅವ್ಯಕ್ತ ಭಯ

ಅಪ್ಪ ಎನ್ನುವ ವ್ಯಕ್ತಿ ಅಳಲೇಬಾರದು. ಎಂತಹ ಸಂದರ್ಭ ಬಂದರೂ ಗಟ್ಟಿಯಾಗಿರಬೇಕು ಎಂಬಿತ್ಯಾದಿ ನಿಯಮಗಳು ನಮ್ಮ ಸುತ್ತಲಿವೆ. ಅಪ್ಪಂದಿರು ಅದಕ್ಕೆ ತಕ್ಕನಾಗಿಯೇ ತಮ್ಮನ್ನು ತಾವು ಗಟ್ಟಿ ಎಂದು ತೋರಿಸಿಕೊಳ್ಳುತ್ತಿರುತ್ತಾರೆ. ಆದರೆ ಒಳಗೊಳಗೆ ಎಲ್ಲರಿಗಿಂತ ಹೆಚ್ಚು ಭಯ ಇರುವುದು ಅವನಿಗೇ. ಎಲ್ಲರಿಗಿಂತ ಮೃದು ಹೃದಯ ಅವನದು. 'ನನ್ನ ಮಗಳಿಗೆ ಬೇಕಾದುದ್ದನ್ನೆಲ್ಲ ಸರಿಯಾಗಿ ಮಾಡ್ತಾ ಇದ್ದೀನಾ? ಈ ಕೊಳಕು ಪ್ರಪಂಚವನ್ನು ಸಶಕ್ತವಾಗಿ ಎದುರಿಸಲು ಸರಿಯಾದ ತಿಳಿವಳಿಕೆ ಅವಳಿಗೆ ಕೊಟ್ಟಿದ್ದೀನಾ? ನಾನಿಲ್ಲದೆಯೂ ಎಲ್ಲವನ್ನೂ ಮಗಳು ನಿಭಾಯಿಸುತ್ತಾಳ?' ಹೀಗೆ ಅನೇಕ ಪ್ರಶ್ನೆಗಳು ಅವನನ್ನು ಕಾಡುತ್ತಲೇ ಇರುತ್ತವೆ. ಆದರೆ ತಾನು ಗಟ್ಟಿ ಎಂದು ತೋರಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಅದ್ಯಾವ ಭಯವನ್ನೂ ಅಭಿವ್ಯಕ್ತಿಸದೆ ಗಟ್ಟಿತನದ ಮುಖವಾಡ ತೊಟ್ಟು ಒಳಗೊಳಗೆ ಇಂತಹ ಭಯ, ಹಿಂಜರಿಕೆಗಳ ಬಿಸಿಯುಗುಳು ನುಂಗುತ್ತಲೇ ಬದುಕಿರುತ್ತಾನೆ ಅಪ್ಪ.

3 ತ್ಯಾಗದ ಲೆಕ್ಕ

ತನ್ನ ಮಗಳಿಗೆ ಏನು ಬೇಕು, ಅದನ್ನು ಪೂರೈಸುವುದು ಹೇಗೆ ಎಂಬುದರ ಸುತ್ತಲೇ ಅಪ್ಪನ ಆಲೋಚನೆಗಳು ಸುತ್ತುತ್ತಿರುತ್ತವೆ. ಮರೆತು ಹೋದ ಸ್ವಂತದ ಕನಸುಗಳು, ನಿದ್ದೆಗೆಟ್ಟ ರಾತ್ರಿಗಳು, ಹೊತ್ತಲ್ಲದ ಹೊತ್ತಿನ ಊಟ ಹೀಗೆ ಮಗಳ ಕುರಿತಾಗಿ ಮಾಡಿದ ತ್ಯಾಗವನ್ನು ಪ್ರೀತಿಯ ಹೆಸರಿಟ್ಟು ಕರೆದುಬಿಡುತ್ತಾನೆ ಹೊರತು, ಅವನ್ನೆಲ್ಲ ಲೆಕ್ಕವಿಟ್ಟು ವ್ಯವಹಾರ ಮಾಡುವುದಿಲ್ಲ. 'ನಾನು ನಿನ್ನ ಸಲುವಾಗಿ ಇಂತಿಷ್ಟು ಮಾಡಿದೆ, ಅದಕ್ಕೆ ನೀನೂ ನನ್ನ ಸಲುವಾಗಿ ಇದನ್ನು ಮಾಡು' ಎಂದು ಅಪ್ಪ ಹೇಳಿದ ದಾಖಲೆಯೇ ಇರಲಿಕ್ಕಿಲ್ಲ. ಮಗಳು ತನ್ನ ಕಾಲ ಮೇಲೆ ತಾನು ನಿಂತುಕೊಂಡು ಸಶಕ್ತಳಾದಾಗ ಮುಗುಳ್ನಗುವುದರ ಜೊತೆಗೆ ಎಂತದ್ದೇ ಸಂದರ್ಭ ಬರಲಿ 'ಮಗಳೇ ನಾನಿದ್ದೇನೆ' ಅನ್ನುವುದನ್ನು ಮರೆಯುವುದಿಲ್ಲ. ಮತ್ತೆ ಶುರುವಿನಿಂದ ಎಲ್ಲವನ್ನೂ ಮಗಳಿಗಾಗಿ ಮಾಡಲು ತಯಾರಿರುವ ಅಪ್ಪನೆಂಬ ಶಕ್ತಿಗಂತೂ ವಯಸ್ಸೇ ಆಗುವುದಿಲ್ಲ.

4 ಅವ್ಯಕ್ತ ಪ್ರೀತಿ

ಮಗಳು ಫೋನಿನಲ್ಲಿ ವಿನಾಕಾರಣ ಹನಿಗಣ್ಣಾದರೂ ಶುರುವಾಗುವ ಚಡಪಡಿಕೆ, ಗಂಟಲಲ್ಲಿಳಿಯದ ಮಗಳಿಷ್ಟದ ಅಡುಗೆ, ಮಗಳು ಆಫೀಸಿನಿಂದ ಮನೆಗೆ ಬರುವ ತನಕ ಅವರ ಆತಂಕ, ಅಪರೂಪಕ್ಕೆ ತವರಿಗೆ ಬಂದ ಮಗಳ ಕಂಡಾಗಿನ ನಿರಾಳತೆ, ಅವಳು ಮರಳಿ ತೆರಳುವಾಗ ಖುದ್ದು ತಾನೇ ಪ್ಯಾಕ್ ಮಾಡುವ ಚೀಲದಲ್ಲಿನ ಬಿಸುಪು ಇದೆಲ್ಲದರಲ್ಲಿಯೂ ಅಪ್ಪನ ಪ್ರೀತಿ ಅಡಕ. ಎಲ್ಲ ಅಪ್ಪಂದಿರು 'ಐ ಲವ್ಯೂ ಮಗಳೇ' ಅಂತ ದಿನಕ್ಕೆ ನೂರು ಸಲ ಹೇಳಿಕೊಂಡು ತಿರುಗುವುದಿಲ್ಲ. ಮೌನದಲ್ಲಿಯೂ ಅಪ್ಪ ತೋರಿಸುವ ಪ್ರೀತಿಯನ್ನು ಮಗಳು ಅರ್ಥಮಾಡಿಕೊಳ್ಳಬೇಕಷ್ಟೆ.

5 ಮಗಳನ್ನು ಕಳುಹಿಸಿಕೊಡುವ ನೋವು

ಉನ್ನತ ಶಿಕ್ಷಣ, ದೂರದೂರಿನ ಕೆಲಸ, ಮದುವೆ ಹೀಗೆ ಬದುಕಿನ ವಿವಿಧ ಮಜಲುಗಳಿಗೆ ಮಗಳು ತೆರೆದುಕೊಳ್ಳುತ್ತಾ ಹೋದಂತೆ ಅಪ್ಪ ಒಳಗೊಳಗೆ ಖಾಲಿಯಾಗುತ್ತಾನೆ. ಮಗಳು ಎಲ್ಲಿದ್ದರೂ ಸುಖವಾಗಿರಲಿ ಎಂದು ಮನಸಾರೆ ಹಾರೈಸಿದರೂ, ಮಗಳು ಜೊತೆಗಿಲ್ಲದ ಬದುಕನ್ನು ಬದುಕಲೂ ಪ್ರತೀ ಅಪ್ಪನೂ ಹೆಣಗಾಡುತ್ತಲೇ ಇರುತ್ತಾನೆ. ಅಪ್ಪಂದಿರ ದಿನದ ನೆಪದಲ್ಲೊಂದು ನಿಮ್ಮ ಅಪ್ಪನಿಗೊಂದು ಅಪ್ಪುಗೆ ಕೊಟ್ಟು ಅವರ ಪ್ರೀತಿ ನಿಮಗೆಷ್ಟು ಮುಖ್ಯ ಎಂದು ಹೇಳಿಕೊಂಡುಬಿಡಿ. ಆ ಒರಟು ಬಿಳಿಮೀಸೆಯಡಿಯಲ್ಲೂ ತುಸು ಮುಗುಳ್ನಗುವಿನ ಸಾರ್ಥಕತೆ ದೊರೆಯಲಿ.

(ಲೇಖಕರು ಕವಯಿತ್ರಿ, ಕಥೆಗಾರರು)

ಮನುಷ್ಯರಲ್ಲಿ ಶ್ರೇಷ್ಠ ಈ ತಂದೆ

ಜಯರಾಮಾಚಾರಿ
feedbacklvk@vijaykarnataka.com

ಜಗತ್ತು ಅಮ್ಮನನ್ನು ಸಂಭ್ರಮಿಸಿದಷ್ಟು ಅಪ್ಪನನ್ನು ಸಂಭ್ರಮಿಸಿಲ್ಲ. ಅಮ್ಮ ಹುಟ್ಟಿನಿಂದಲೇ ಪ್ರೀತಿಯ ಧಾರೆಯೆರೆದು ಮುದ್ದು ಮಾಡಿ ಕಾಪಿಡುವಂತೆ ಅಪ್ಪ ಎಂದೂ ಮಾಡಿರುವುದಿಲ್ಲ. ಬಾಲ್ಯದಿಂದಲೇ ಅಪ್ಪನ ಜೊತೆ ಗೊತ್ತೋ ಗೊತ್ತಿಲ್ಲದೆಯೇ ಒಂದು ಪ್ರತಿರೋಧ ಮೂಡಿಬಿಟ್ಟಿರುತ್ತದೆ. ಅಮ್ಮನ ಜೊತೆ ತನ್ನ ಗುಟ್ಟು ಹೇಳಿಕೊಳ್ಳುವಂತೆ ಅಪ್ಪನ ಜೊತೆ ಹೇಳಿಕೊಳ್ಳೋದಕ್ಕಾಗೋಲ್ಲ. ಅವನದೇನಿದ್ದರೂ ಕಣ್ಣ ಹೊಳಪಿನಲ್ಲಿ, ಭುಜವನ್ನು ತಟ್ಟುವ ಸ್ಪರ್ಶದಲ್ಲಿ, ಅಪರೂಪಕ್ಕೊಮ್ಮೆ ಬೆಚ್ಚನೆಯ ಅಪ್ಪುಗೆಗಳಲ್ಲಿ, ಹಿಡಿವ ಕೈ ಬೆರಳ ತುದಿಗಳಲ್ಲಿ, ಆನಂದಬಾಷ್ಪಗಳಲ್ಲೇ ವ್ಯಕ್ತವಾಗುವ ಪ್ರೀತಿ. ಗಂಡು ಮಕ್ಕಳಿಗೆ ಅಪ್ಪ ಅರ್ಥವಾಗುವುದು ಬಲು ನಿಧಾನ. ಹೆಣ್ಣು ಮಕ್ಕಳಿಗೆ ಹುಟ್ಟಿದ ಕ್ಷಣದಿಂದಲೇ ಅರ್ಥವಾಗಿಬಿಡುತ್ತಾನೆ. ಅಮ್ಮ ವಾಚ್ಯ, ಅಪ್ಪ ಸೂಚ್ಯ. ಎಷ್ಟೊಂದೆಲ್ಲಾ ಹೇಳದೆ ದಾಟಿಸಿಬಿಡುತ್ತಾನಲ್ಲ?!

1 ಸೋಲನ್ನು ನಂಬುವ ಅಪ್ಪ

ಅಪ್ಪ ಸೋಲುಗಳನ್ನು ನಂಬುತ್ತಾನೆ. ಮಕ್ಕಳು ಸೋತಾಗ ಅಮ್ಮನಿಗೆ ಸಹಿಸಿಕೊಳ್ಳಲು ಅಸಾಧ್ಯ. ಆಕೆ ನೇರ ಬಯ್ದು ಆಮೇಲೆ ಮುದ್ದು ಮಾಡಿ ಮಡಿಲಿಗ್ಹಾಕಿ ಸಂತೈಸಿಬಿಡುತ್ತಾಳೆ. ಮಕ್ಕಳು ಸದಾ ಗೆಲ್ಲಬೇಕು, ಬೀಳಬಾರದು ಎನ್ನುವಷ್ಟು ಪ್ರೀತಿ ಅವಳಿಗೆ. ಆದರೆ ಅಪ್ಪ ಹಾಗಲ್ಲ, ಆತ ಸೋತಾಗ ಕಣ್ಣಲ್ಲೊಂದು ವಾರ್ನಿಂಗ್ ಕೊಟ್ಟರೂ ನಮ್ಮ ಸೋಲುಗಳನ್ನು ನಂಬುತ್ತಾನೆ. ಸೋತವರಷ್ಟೇ ಇಲ್ಲಿ ಗೆಲ್ಲಲು ಸಾಧ್ಯ ಎಂದು ಅವನಿಗೆ ಗೊತ್ತಿರುತ್ತದೆ. ಯಾಕೆಂದರೆ ಅಪ್ಪ ಅಂತಹ ಹಲವು ಸೋಲುಗಳನ್ನು ಕಂಡಿರುತ್ತಾನೆ.

2 ಕನ್ನಡಿಯ ಬಿಂಬ ಅಪ್ಪ

ನಾವು ಕನ್ನಡಿಯ ಮುಂದೆ ಏನು ಬಿಂಬಿಸುತ್ತೇವೋ, ಅದನ್ನೇ ಕನ್ನಡಿ ಮರು ಪ್ರತಿಬಿಂಬಿಸುವ ಹಾಗೆ ಅಪ್ಪ ನಾವು ಅವನನ್ನು ಹೇಗೆ ಗೌರವಿಸುತ್ತೇವೋ ಅಷ್ಟೇ ನಮ್ಮನ್ನೂ ಗೌರವಿಸುತ್ತಾನೆ. ಗೌರವ ಕೊಡದ ಮಕ್ಕಳನ್ನು ಅಪ್ಪ ಎಂದೂ ಗೌರವಿಸುವುದಿಲ್ಲ. ಆಕಾಶಕ್ಕೆ ಏನು ಒಗೆದರೂ ಮತ್ತೆ ಅದೇ ನಮ್ಮ ಬಳಿಗೆ ಬೀಳುವ ಹಾಗೆ ಅಪ್ಪ ಕೂಡ. ನಾವು ಅವನಿಗೆ ಏನು ಒಗೆಯುತ್ತೇವೋ ಅದನ್ನೇ ಒಗೆಯುತ್ತಾನೆ. ತಪ್ಪು ಮಾಡಿದರೂ ಅವನು ಮುದ್ದಿಸಲಾರ. ಬದುಕು ಹೀಗೇ ಎಂದು ಕಲಿಸುವುದಕ್ಕೆ ಇಂಥ ಕಟ್ಟುನಿಟ್ಟಿನ ಯಜಮಾನನೊಬ್ಬನ ದೇಖರೇಖಿ ಬೇಕೇಬೇಕು. ಏಕೆಂದರೆ, ಅತಿ ಮುದ್ದಿನಿಂದ ಮಗು ದಾರಿ ತಪ್ಪಿದರೆ ಎಂಬ ಎಚ್ಚರ ಅವನದು. ಜಡವೇ ಮರಣ ಚಲನೆಯೇ ಜೀವನ ಎಂದು ನೆನಪಿಸುತ್ತ ಬದುಕಿರುವವನು ಅವನು. ಆತ ಮನೆಯಲ್ಲಿ ಕೆಲಸವಿಲ್ಲದೇ ಕೂತ ದೃಶ್ಯ ಮಕ್ಕಳಿಗೆ ನೋಡಲು ಕಾಣಸಿಗಲಾರದು. ಮನೆಯಲ್ಲೇ ಕೊಳೆತ ಅಪ್ಪಂದಿರ ಮನೆಯೂ ಕೊಳೆಯುತ್ತದೆ. ಮನೆಯ ಮಾಳಿಗೆ ಎಂದೂ ಸೋರಬಾರದು ಎಂದು ಅಪ್ಪನಿಗೆ ಗೊತ್ತು. ನಿಂತಲ್ಲೇ ನಿಲ್ಲಬಾರದು ಸದಾ ಚಲಿಸುತ್ತಿರಬೇಕು ಎಂದು ಅಪ್ಪ ಪದೇ ಒಳದೇ ನೆನಪಿಸುತ್ತಿರುತ್ತಾನೆ. ಕಾರ್ಯತತ್ಪರತೆಯ ಒಂದು ರೂಪಕ ಅವನು. ಬದುಕಿನ ವಾಸ್ತವವನ್ನು ಎದುರಿಸಲು ಇಂಥ ಒಬ್ಬ ಕಟ್ಟುನಿಟ್ಟಿನ ಗುರು ಎದುರಿನಲ್ಲಿ ಸದಾ ಬೇಕು.

3 ಒಳಗೆ ಭಾವನೆ ಹೊರಗೆ ಬಿಗುಮಾನ

ಅಪ್ಪ ಹೇಗೆ ಬದುಕಬೇಕು ಎಂಬುದನ್ನು ತೋರಿಸುವಾತ. ಕೆಲಸ ಕಳೆದುಹೋಗಲಿ, ಸಾಲ ಶಿಖರದ ಹಾಗೇ ಬೆಳೆದುಹೋಗಲಿ, ಬದುಕೇ ಕುಸಿದು ಹೋಗುವಂತಹ ಸಂದರ್ಭ ಬಂದಾಗಲೂ ಅಪ್ಪ ಧೃತಿಗೆಡುವುದಿಲ್ಲ, ಮತ್ತೆ ಮತ್ತೆ ಎಲ್ಲವನ್ನೂ ಎದುರಿಸಿ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕೆಂದು ತೋರಿಸುತ್ತಾನೆ. ವಿಶೇಷವೆಂದರೆ, ಅವನು ಮಕ್ಕಳನ್ನು ಅಷ್ಟಾಗಿ ಹಚ್ಚಿಕೊಂಡವನಂತೆ ತೋರಿಸಿಕೊಳ್ಳುವುದಿಲ್ಲ. ಮಕ್ಕಳು ಹೊರಗಿದ್ದಾಗ ಅಮ್ಮನಂತೆ ನೇರವಾಗಿ, ಎಲ್ಲಿದ್ದೀಯ, ಏನ್ ಮಾಡ್ತಾ ಇದ್ದೀಯ, ಏನ್ ತಿಂದೆ ಎಂದೆಲ್ಲ ಕೇಳೋದಿಲ್ಲ. ಬದಲಾಗಿ, ಅಮ್ಮನನ್ನೇ, 'ಫೋನ್ ಮಾಡಿದ್ನಾ ಅವನು? ಎಲ್ಲಿದ್ದಾನಂತೆ?' ಎಂದು ಕೇಳುತ್ತಾ ಕೊಂಚ ಅಂತರವಿಟ್ಟೇ ವ್ಯವಹರಿಸುತ್ತಾನೆ. ಆದರೆ, ಅಲ್ಲೆಲ್ಲೋ ಬೈಕ್‌ನ ಸದ್ದಾಯಿತೆಂದರೆ ಮೊದಲು ಅಮ್ಮನಿಗೆ ಸುದ್ದಿ ಮುಟ್ಟಿಸಿ ಒಳಗೆ ಹಿಗ್ಗುತ್ತ ಹೊರಗೆ ಬಿಗುಮಾನದಿಂದ ಕುಳಿತಿರುವವನೂ ಅವನೇ!

4 ವಾಸ್ತವವಾದಿ

ಭವಿಷ್ಯಕ್ಕಿಂತ ವರ್ತಮಾನದಲ್ಲಿ ಬದುಕುವುದು ಅವನ ಆಯ್ಕೆ. ಕನಸುಗಳಿಗಿಂತ ನಿಜ ಜೀವನವನ್ನು ನಂಬುತ್ತಾನವನು. ಹಾಗಂತ ಭವಿಷ್ಯದಲ್ಲಿ ನಂಬಿಕೆ ಇಲ್ಲವೆಂದಲ್ಲ, ಭವಿಷ್ಯಕ್ಕೆ ಎಷ್ಟು ಬೇಕು ಅಷ್ಟು ವ್ಯವಸ್ಥೆ ಅಂತೂ ಮಾಡಿರುತ್ತಾನೆ. ನೋವಿದ್ದರೂ ನಗುವುದನ್ನು ಅಪ್ಪ ಕಲಿಸಿಕೊಟ್ಟಷ್ಟು ಅಮ್ಮ ಕಲಿಸುವುದಿಲ್ಲ. ಮಾತಿನಲ್ಲಿ, ಆಪ್ತ ಸಂಭಾಷಣೆಗಳಲ್ಲಿ ಅವನು ವಿಷಯವನ್ನು ದಾಟಿಸುವುದಿಲ್ಲ. ಮಕ್ಕಳು ನೋಡಿ ಕಲಿಯುತ್ತಾರೆ ಎಂದು ಮಕ್ಕಳು ಚಿಕ್ಕವರಿದ್ದಾಗಲೇ ಅವನಿಗೆ ಗೊತ್ತಿರುತ್ತದೆ. ಬೇರೆಯವರನ್ನು ಹೇಗೆ ನೋಡಬೇಕು ಮಾತಾಡಿಸಬೇಕು, ಸೋತಾಗ ಹೇಗೆ ಎದ್ದು ನಿಲ್ಲಬೇಕು, ಏಕಾಏಕಿ ಸವಾಲುಗಳಿಗೆ ಹೇಗೆ ಸಿದ್ಧರಾಗಿರಬೇಕೆಂಬುದಕ್ಕೆ ಅವನೇ ಮಾದರಿ.

ಅವನು ಮೌನಿ. ಅಳುವೂ ಇಲ್ಲ, ನಗುವೂ ಇಲ್ಲ ಎಂಬಂತಿರುವವನು. ಭಾವನೆಗಳೇ ಇಲ್ಲದ ಬರಡಿನಂತೆ. ಕೆಲವೊಮ್ಮೆ ಬಯ್ಯೋದರಲ್ಲಿ ಕೊಂಚ ಮುಂದಿದ್ದರೂ, ಹೊಗಳೋದರಲ್ಲಿ ಸ್ವಲ್ಪ ಹಿಂದೆ. ಆದರೆ ನಿಮಗೆ ಗೊತ್ತಿಲ್ಲ, ಅಪ್ಪನಿಗೊಂದು ವಿಶೇಷ ಗುಣವಿದೆ. ಅವನು ಬೇರೆಯವರ ಮುಂದೆ ಮಕ್ಕಳನ್ನು ಬಯ್ಯೋದಿಲ್ಲ, ಬಯ್ಯೋದೇನಿದ್ದರೂ ಎದುರಿನಲ್ಲಿ ಮಾತ್ರ. ಆದರೆ ಮಕ್ಕಳ ಬೆನ್ನ ಮರೆಯಲ್ಲಿ ಬೇರೆಯವರ ಮುಂದೆ ನನ್ನ ಮಗ, ನನ್ನ ಮಗಳು ಅನ್ನುತ್ತ ಹೊಗಳೋದರಲ್ಲಿ ಜಂಭ ಕೊಚ್ಚಿಕೊಳ್ಳೋದರಲ್ಲಿ ಆತ ಎಂದೂ ಹಿಂದೆ ಬಿದ್ದೋನಲ್ಲ. ಅತಿ ಹೊಗಳುವಿಕೆಯಿಂದ ಮಕ್ಕಳು ಹಾಳಾಗುತ್ತಾರೆಂಬ ಸದೆಚ್ಚರ ಅವನದು.

5 ಅಪ್ಪನೆಂಬ ಹೆಗಲು

ಹೃದಯಕ್ಕಿಂತ ಹೆಗಲಿನ ಪ್ರಾಮುಖ್ಯತೆ ತಿಳಿಸೋದು ಅಪ್ಪನೇ. ಪುಟಾಣಿ ಮಗ ನಡೆಯಲು ಕಲಿತಕೂಡಲೇ ಹೆಗಲ ಮೇಲೆ ಕೂರಿಸಿಕೊಳ್ಳೋದು ಮೊದಲು ಅಪ್ಪನೇ. ಸೈಕಲ್ ಹಿಂದುಗಡೆ ಸೀಟು ಹಿಡಿದು ಕಲಿಸಿಕೊಡುವ ಅಪ್ಪ ಸೈಕಲ್ ಕಲಿತ ಮೇಲೆ ಅದೇ ಹಿಂದುಗಡೆ ಸೀಟಿನಲ್ಲಿ ಕೂತು ಹೆಗಲ ಮೇಲೆ ಮೆಲ್ಲಗೆ ಕೈ ಇಟ್ಟಿರುತ್ತಾನೆ. ಸೋತಾಗ, ಅತ್ತಾಗ, ಕುಸಿದಾಗ ಅಪ್ಪ ಮತ್ತದೇ ಹೆಗಲ ಮೇಲೆ ಕೈ ಹಾಕಿ ಸಮಾಧಾನ ಮಾಡುತ್ತಾನೆ. ತನ್ನವರು ಯಾರಾದರೂ ಸತ್ತಾಗ ಹೆಗಲು ಕೊಡುವುದನ್ನು ಮರೆಯುವುದೂ ಇಲ್ಲ ಅವನು. ಅಪ್ಪ ಎಂದರೆ ಹೆಗಲೇ. ಭಾವ ವ್ಯಕ್ತಪಡಿಸಲು ಭಾವ ಬೇಕಿಲ್ಲದ ಜಾದೂಗಾರ ಅವನು. ಶಾಲೆಗೆ ಹೋಗುವಾಗ ರಸ್ತೆ ದಾಟಿಸುವಾಗ ಹಿಡಿದ ಕೈ ಬೆರಳುಗಳ ಸ್ಪರ್ಶದಲ್ಲೇ ಪ್ರೀತಿ, ಕಾಳಜಿ, ರಕ್ಷಣೆ, ನಂಬಿಕೆ ಎಲ್ಲವನ್ನೂ ದಾಟಿಸುವವನು ಅವನು. ಅದನ್ನು ನಾವು ನೋಡಬೇಕು, ಅನುಭವಿಸಬೇಕಷ್ಟೆ.

(ಲೇಖಕರು ಕಥೆಗಾರರು)

ಬರಹದ ದಾರಿ ತೋರಿದವರು

ಡಾ.ಕೆ.ಕೇಶವ ಶರ್ಮ
feedbacklvk@vijaykarnataka.com

ವಿಕ ಸಾಹಿತ್ಯ ಸರ್ಕಲ್

ನನಗೆ ಹೈಸ್ಕೂಲ್ ಮೇಷ್ಟ್ರಾಗಿದ್ದ ವಿ.ಗ. ನಾಯಕರು ನನ್ನ ಮೊದಲ ಕವನಸಂಕಲನ ಪ್ರಕಟಿಸಿದರು. ಆಮೇಲೆ ನನ್ನ ಸಣ್ಣಕತೆ, ಲೇಖನಗಳನ್ನೂ ಅವರೇ ಪ್ರಕಟಿಸಿದ್ದು. ಅವರಿಂದ ನನಗೆ ತುಂಬಾ ಪ್ರೀತಿ ಸಿಕ್ಕಿತು. ಡಿಗ್ರಿಗೆ ಬಂದಾಗ ಅಮೃತ ಸೋಮೇಶ್ವರ ಮೇಷ್ಟ್ರು ಸಿಕ್ಕಿದರು. ಅವರು ಕೂಡ ನನ್ನಲ್ಲಿ ಸಾಹಿತ್ಯದ ಅಭಿರುಚಿಯನ್ನು ಮೂಡಿಸಿದರು. ಇವರೆಲ್ಲರ ಒಡನಾಟ ನನ್ನ ಬೌದ್ಧಿಕ ಬೆಳವಣಿಗೆಗೆ ಕಾರಣವಾಯಿತು.

1984ರಿಂದ ನಾನು ಕೆ.ವಿ. ನಾರಾಯಣ ಅವರ ಸಂಪರ್ಕದಲ್ಲಿದ್ದೇನೆ. ಪ್ರತಿ ತಿಂಗಳೂ ನಮ್ಮ ನಡುವೆ ಮಾತುಕತೆ, ಚರ್ಚೆ-ಸಂವಾದ ನಡೆಯುತ್ತದೆ. ನನ್ನ ಪ್ರಶ್ನೆಗಳನ್ನು ಆಲಿಸಿ ಸಂದೇಹಗಳನ್ನು ನಿವಾರಿಸುತ್ತಾರೆ. ಅಷ್ಟೇ ಅಲ್ಲ, ಸಲಹೆಗಳ ಜತೆಗೆ ಅವರು ಕೆಲವೊಂದು ಪ್ರಶ್ನೆಗಳನ್ನೂ ಎತ್ತುತ್ತಾರೆ. ಆ ಮೂಲಕ ನನ್ನ ವೈಚಾರಿಕತೆಯನ್ನು ಮತ್ತಷ್ಟು ಮೊನಚುಗೊಳಿಸುತ್ತಾರೆ. ಅವರಿಗೆ ತಾನು ಕನ್ನಡದ ಶ್ರೇಷ್ಠ ಬರಹಗಾರ ಎನ್ನುವ ಗರ್ವ ಇಲ್ಲ. ಸಜ್ಜನಿಕೆಯ ವ್ಯಕ್ತಿತ್ವ ಅವರದ್ದು. ಕೆಲವು ವಿಚಾರಗಳಲ್ಲಿ ಅವರ ಜತೆಗೆ ನನಗೆ ಭಿನ್ನಾಭಿಪ್ರಾಯ ಇದೆ. ಆದರೆ, ಅವರು ಅದನ್ನು ಸಹಿಸುತ್ತಾರೆ. ವೈಚಾರಿಕ ಭಿನ್ನಾಭಿಪ್ರಾಯಗಳು ಎಂದಿಗೂ ನಮ್ಮ ಸ್ನೇಹಕ್ಕೆ ಧಕ್ಕೆ ತಂದಿಲ್ಲ. ಅವರು ನನ್ನನ್ನು ತುಂಬಾ ಪ್ರೀತಿಯಿಂದ ನಡೆಸಿಕೊಂಡದ್ದು ಮಾತ್ರವಲ್ಲದೆ, ನನ್ನ ಅನೇಕ ಬರಹಗಳಿಗೂ ಕಾರಣವಾಗಿದ್ದಾರೆ.


ಕೆ.ವಿ. ನಾರಾಯಣ

ಒಮ್ಮೆ ಶಿವರಾಮ ಕಾರಂತರ ಬಗ್ಗೆ ಮಾತನಾಡುವಾಗ, 'ನೋಡಿ... ಕಾರಂತರ ಬಗ್ಗೆ ಕನ್ನಡ ವಿಮರ್ಶಕರಲ್ಲಿ ಸಣ್ಣ ಅವಜ್ಞೆ ಇದೆ. ಅವರ ಬಗ್ಗೆ ನಾವು ತುಂಬಾ ಕೆಲಸ ಮಾಡುವುದು ಇದೆ. ನೀವು ಕೆಲಸ ಮಾಡಿ' ಎಂದು ಹೇಳಿದ್ದರು. ಅದಾದ ಬಳಿಕ ನಾನು ಕಾರಂತರ ಬಗ್ಗೆ ಮೂರು ಪುಸ್ತಕಗಳನ್ನು ಬರೆದೆ. ಇನ್ನೊಂದು ಪುಸ್ತಕ ಬರೆದಾಗಿದೆ, ಪ್ರಕಟಣೆಯ ಹಂತದಲ್ಲಿದೆ.

ಇನ್ನೊಮ್ಮೆ, ನಾನು ಕನ್ನಡದ ಕವಯಿತ್ರಿಯರ ಬಗ್ಗೆ ಪುಸ್ತಕ ಬರೆಯುವ ಯೋಚನೆ ಮಾಡಿದೆ. 70ರ ದಶಕದ ನಂತರ ಕವಯತ್ರಿಯರ ಬಗ್ಗೆ ಒಂದು ರೀತಿಯ ಮೌನ ಇದೆ. ಮುಖ್ಯ ವಿಮರ್ಶಕರು ಅವರ ಬಗ್ಗೆ ಯಾವುದೇ ಚರ್ಚೆ ಮಾಡುವುದಕ್ಕೆ ಹೋಗುತ್ತಿಲ್ಲ ಎಂದು ನಾನು ಈ ಯೋಚನೆ ಮಾಡಿದ್ದೆ. ಇದನ್ನು ಕೆ.ವಿ. ನಾರಾಯಣ ಅವರ ಬಳಿ ಹೇಳಿದೆ. 'ಯಾವ ವಿಷಯದ ಮೇಲೆ ಪುಸ್ತಕ ಬರೆಯುತ್ತೀರಿ?' ಎಂದು ಕೇಳಿದರು.

'ಮಹಿಳಾ ಕಾವ್ಯದಲ್ಲಿ ಅನನ್ಯತೆ, ಹುಡುಕಾಟ, ಕಾಲ ಮತ್ತು ನಿರೂಪಣೆ' ಎಂದೆ ನಾನು. ಆಗ ಅವರು, 'ಹೆಚ್ಚಾಗಿ ಕವಯಿತ್ರಿಯರು ಸ್ವಂತಿಕೆಯ ಹುಡುಕಾಟವನ್ನು ಮಾಡುವುದು ಕಾವ್ಯದಲ್ಲಿ, ಅವರ ಸಾಮಾಜಿಕ ಧೋರಣೆ ವ್ಯಕ್ತವಾಗುವುದು ಕಥೆಗಳಲ್ಲಿ' ಎಂದು ಹೇಳಿದರು. ಈ ಮಾತು ನನ್ನ ಪುಸ್ತಕ ರಚನೆಯ ಸಿದ್ಧತೆಗೆ ಬಹಳ ಅನುಕೂಲವಾಯಿತು. ಆ ದಾರಿಯಲ್ಲೇ ನಾನೀಗ ಪುಸ್ತಕಕ್ಕೆ ವಿಷಯಗಳನ್ನು ಹುಡುಕುತ್ತಿದ್ದೇನೆ. ■

Advertorial

ಅಂಡಾಶಯದ ತಿರುಚುವಿಕೆ: ಹದಿಹರೆಯದ ಹುಡುಗಿಯರಲ್ಲಿ ಅಡಗಿರುವ ಅಪಾಯ

ಹದಿಹರೆಯದ ಹುಡುಗಿಯರಲ್ಲಿ ತೀವ್ರ ವಾಕರಿಕೆ ಮತ್ತು ವಾಂತಿಯೊಂದಿಗೆ ಹಠಾತ್ ಕೆಳಹೊಟ್ಟೆ ನೋವು ಕಾಣಿಸಿಕೊಂಡಾಗ ಅದನ್ನು ಹೆಚ್ಚಾಗಿ ಅಜೀರ್ಣ ಅಥವಾ ಸಾಮಾನ್ಯ ಹೊಟ್ಟೆಯ ಕಾಯಿಲೆ ಎಂದು ನಿರ್ಲಕ್ಷಿಸಲಾಗುತ್ತದೆ. ಆದರೆ ಈ ಲಕ್ಷಣಗಳು ಅಡ್ನೆಕ್ಸಲ್ ಟಾರ್ಶನ್ ಅನ್ನು ಸೂಚಿಸಬಹುದು. ಇದು ಒಂದು ಗಂಭೀರ ವೈದ್ಯಕೀಯ ತುರ್ತು ಪರಿಸ್ಥಿತಿಯಾಗಿದ್ದು, ಇಲ್ಲಿ ಅಂಡಾಶಯ ಅಥವಾ ಫಾಲೋಪಿಯನ್ ಟ್ಯೂಬ್ ತಿರುಚಿಕೊಳ್ಳುತ್ತದೆ ಮತ್ತು ಅದಕ್ಕೆ ಹರಿಯುವ ಪ್ರಮುಖ ರಕ್ತ ಪೂರೈಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುತ್ತದೆ ಎಂದು ಹೆಣ್ಣೂರಿನ ಕೊತ್ತನೂರಿನ ಓವಂ ಆಸ್ಪತ್ರೆಯ ಕನ್ಸಲ್ಟೆಂಟ್ ಒಬಿಜಿ ಮತ್ತು ಗೈನಕ್-ಲ್ಯಾಪ್ರೊಸ್ಕೋಪಿಕ್ ಸರ್ಜನ್ ಡಾ. ಮಂಜುಳಾ ಎಸ್ ಪಾಟೀಲ್ ಹಂಚಿಕೊಂಡಿದ್ದಾರೆ.

ಅವರ ಪ್ರಕಾರ,'ಭಾರತದಲ್ಲಿ ಅಡ್ನೆಕ್ಸಲ್ ಟಾರ್ಶನ್ ಐದನೇ ಅತ್ಯಂತ ಸಾಮಾನ್ಯ ಸ್ತ್ರೀರೋಗದ ತುರ್ತು ಪರಿಸ್ಥಿತಿ. ಇದು ಒಂದು ಲಕ್ಷ ಹದಿಹರೆಯದವರಲ್ಲಿ ಸರಿಸುಮಾರು ಐದು ಜನರನ್ನು ಬಾಧಿಸುತ್ತದೆ. ಅಷ್ಟೇ ಅಲ್ಲದೆ, ಶೇ. 30 ರಷ್ಟು ತಿರುಚುವಿಕೆಯ ಪ್ರಕರಣಗಳು 20 ವರ್ಷದೊಳಗಿನ ಯುವತಿಯರಲ್ಲಿ ಕಂಡುಬರುತ್ತವೆ' ಎನ್ನುತ್ತಾರೆ. 'ಸಮಯಕ್ಕೆ ಸರಿಯಾದ ವೈದ್ಯಕೀಯ ಹಸ್ತಕ್ಷೇಪವು ಅತ್ಯಂತ ನಿರ್ಣಾಯಕ. ಏಕೆಂದರೆ ಶಸ್ತ್ರಚಿಕಿತ್ಸೆಗೆ ಮುನ್ನ ಇದನ್ನು ಖಚಿತಪಡಿಸಲು ಯಾವುದೇ ನಿರ್ಣಾಯಕ ಮಾನದಂಡಗಳಿಲ್ಲ, ಹೀಗಾಗಿ ವಿಳಂಬವಾದರೆ ಇದು ಸರಿಪಡಿಸಲಾಗದ ಅಂಗಾಂಶ ಹಾನಿಯನ್ನು ಉಂಟುಮಾಡಬಹುದು' ಎಂದು ಎಚ್ಚರಿಸಿದ್ದಾರೆ.

ತಮ್ಮ ವೃತ್ತಿ ಅನುಭವವನ್ನು ಹಂಚಿಕೊಂಡಿರುವ ಅವರು, 'ಹದಿನೆಂಟು ವರ್ಷದ ವರ್ಷಾ (ಹೆಸರು ಬದಲಾಯಿಸಲಾಗಿದೆ) ಗೆ ಅಜೀರ್ಣಕ್ಕಾಗಿ 15 ದಿನಗಳ ಕಾಲ ಸ್ಥಳೀಯವಾಗಿ ಚಿಕಿತ್ಸೆ ನೀಡಲಾಯಿತು. ಆದರೆ ಅವಳ ಸ್ಥಿತಿ ಕ್ರಮೇಣ ಹದಗೆಟ್ಟಿತು. ಆಕೆ ತಜ್ಞವೈದ್ಯರ ಬಳಿಗೆ ಬರುವಷ್ಟರಲ್ಲಿ ಆಕೆಯ ಅಂಡಾಶಯದಲ್ಲಿ ದೊಡ್ಡದೊಂದು ಸಿಸ್ಟ್ ಉಂಟಾಗಿತ್ತು. ಅದರ ತೂಕಕ್ಕೆ ಅಂಡಾಶಯವು ಮೂರು ಬಾರಿ ಸುರುಳಿ ಸುತ್ತಿಕೊಂಡಿತ್ತು. ಇದರಿಂದಾಗಿ ರಕ್ತಪೂರಣ ಸ್ಥಗಿತಗೊಂಡು, ಅಂಡಾಶಯವು ಸಂಪೂರ್ಣವಾಗಿ ಕೊಳೆತುಹೋಗಿತ್ತು. ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದುಹಾಕಬೇಕಾಯಿತು. ನಮ್ಮ ಪರಿಣತ ವೈದ್ಯಕೀಯ ತಂಡವು ಈ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿತು. ಆದರೆ ನಮ್ಮ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ ಅಂಡಾಶಯವನ್ನು ಉಳಿಸಲು ಸಾಧ್ಯವಾಗಲಿಲ್ಲ' ಎಂದು ಪ್ರಕರಣವೊಂದರ ತೀವ್ರತೆ ಬಗ್ಗೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.


ಡಾ. ಮಂಜುಳಾ ಎಸ್ ಪಾಟೀಲ್

ಈ ಬಗ್ಗೆ ಜಾಗೃತಿ ಅಗತ್ಯ ಎಂದಿರುವ ಅವರು, 'ಇಂತಹ ಸೂಕ್ಷ್ಮ ಪ್ರಕರಣಗಳಿಗೆ ಅದರಲ್ಲೂ ಹದಿಹರೆಯದವರಲ್ಲಿ ಚಿಕಿತ್ಸೆ ನೀಡಲು ವಿಶೇಷ ಪರಿಣತಿ ಮತ್ತು ಶಸ್ತ್ರಚಿಕಿತ್ಸೆಯ ನಿಖರತೆಯ ಅಗತ್ಯವಿರುತ್ತದೆ. ಲ್ಯಾಪ್ರೋಸ್ಕೋಪಿಯಂತಹ ಸೂಕ್ಷ್ಮ ತಂತ್ರಗಳು ಯುವ ದೇಹಗಳನ್ನು ರಕ್ಷಿಸಲು ಸಹಾಯ ಮಾಡುತ್ತವೆ' ಎಂದು ವಿವರಿಸಿದ್ದಾರೆ.

'ಹಠಾತ್ ಅಥವಾ ತೀವ್ರವಾದ ಹೊಟ್ಟೆ ನೋವು, ವಾಕರಿಕೆ ಅಥವಾ ವಾಂತಿ ಹದಿಹರೆಯದ ಹುಡುಗಿಯರಲ್ಲಿ ಕಂಡುಬಂದರೆ ಅವರಿಗೆ ತಕ್ಷಣದ ವೈದ್ಯಕೀಯ ಗಮನ ಅಗತ್ಯ ಎಂಬುದಕ್ಕೆ ವರ್ಷಾ ಪ್ರಕರಣ ಅತ್ಯುತ್ತಮ ಉದಾಹರಣೆ. ಏಕೆಂದರೆ ಆರಂಭಿಕ ರೋಗನಿರ್ಣಯವು ಅಂಡಾಶಯದ ಕಾರ್ಯ ಮತ್ತು ಸಂತಾನೋತ್ಪತ್ತಿ ಸಾಮರ್ಥ್ಯವನ್ನು ಕಾಪಾಡಲು ಸಹಾಯ ಮಾಡುತ್ತದೆ' ಎಂದು ಅವರು ತಿಳಿಸಿದ್ದಾರೆ.

ಅಡ್ನೆಕ್ಸಲ್ ಟಾರ್ಶನ್ ಲಕ್ಷಣಗಳು

- ಹಠಾತ್, ತೀವ್ರವಾದ ಕೆಳಹೊಟ್ಟೆ ನೋವು
- ನೋವು ಸಾಮಾನ್ಯವಾಗಿ ಹೊಟ್ಟೆಯ ಒಂದು ಬದಿಯಲ್ಲಿರುತ್ತದೆ
- ತೀವ್ರ ವಾಕರಿಕೆ
- ವಾಂತಿ
- ಉಲ್ಬಣಗೊಳ್ಳುವ ಹೊಟ್ಟೆಯ ಅಸ್ವಸ್ಥತೆ
- ಆರಂಭದಲ್ಲಿ ಬಂದು ಹೋಗುವ ಸೊಂಟದ ನೋವು
- ಹೊಟ್ಟೆಯನ್ನು ಮುಟ್ಟಿದಾಗ ನೋವು
- ಕೆಲವೊಮ್ಮೆ ಅಂಡಾಶಯದ ಸಿಸ್ಟ್‌ನೊಂದಿಗೆ ಸಂಬಂಧ ಹೊಂದಿರುತ್ತದೆ

ಹೆಚ್ಚಿನ ಮಾಹಿತಿಗಾಗಿ: ಓವಂ ವುಮನ್ ಅಂಡ್ ಚೈಲ್ಡ್ ಸ್ಪೆಷಾಲಿಟಿ ಹಾಸ್ಪಿಟಲ್, ಕಲ್ಯಾಣ್ ನಗರ, ಹೊಸಕೋಟೆ, ಬನಶಂಕರಿ, ಹೆಣ್ಣೂರು, ಎಚ್‌ಎಸ್‌ಆರ್ ಲೇಔಟ್, ಬೂದಿಗೆರೆ ಕ್ರಾಸ್, ಹೊಸೂರು, ಭಟ್ಟರಹಳ್ಳಿ.
ಕರೆ ಮಾಡಿ: 4530 9999
ವೆಬ್‌ಸೈಟ್: **www.ovumhospitals.com**
(ಉಲ್ಲೇಖಿಸಲಾದ ಕಾರ್ಯವಿಧಾನಗಳು ಮತ್ತು ವೀಕ್ಷಣೆಗಳು ಸದರಿ ಕ್ಷೇತ್ರದಲ್ಲಿನ ತಜ್ಞರ ತಿಳಿವಳಿಕೆಯನ್ನು ಆಧರಿಸಿವೆ.)

OVUM Woman & Child Speciality Hospital
(A Unit of Neonatal Care & Research Institute Pvt Ltd)
OVUM Fertility
PATH TO PARENTHOOD
Banashankari | Bhattarahalli | Budigere | Kalyan Nagar | Hennur | HSR | HRBR | Hosur | Hoskote
iOS Download the App Now
Android Download the App Now
080 4530 9999
www.ovumfertility.in

RNI No. KARKAN/2016/71628
Vol. 11 Issue no. 171
Published by Lokesh K V on behalf of Metropolitan Media Company Limited., Published at 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, Ph: 080 40877666 and Printed at (a) Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099. (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) Metropolitan Media Co. Ltd.,Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g) Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. Regd. Office: 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, (Ph:080-40877666). Editor: Sudarshan Channangihalli. © All Rights Reserved. Reproduction in whole or part without permission is prohibited.

ಭಾನುವಾರ, 21 ಜೂನ್ 2026
ಲವಲVK ಸಾಪ್ತಾಹಿಕ

ಗೊಂಬೆಯೂ ಮನುಷ್ಯ ಲೋಕವೂ

ಹೆಸರುಗಳಿಲ್ಲದ ಆ ಗೊಂಬೆಗಳಿಗೆ ಹೆಸರುಗಳನ್ನು ಕೊಡುವವರೆಗೂ ನಾವು ಮಗುವಿನ ಹಾಗೆಯೇ ಮುಗ್ಧರಾಗಿದ್ದೆವು ಅಥವಾ ನಿಷ್ಪಾಪಿಗಳಾಗಿದ್ದೆವು. ಗೊಂಬೆಗಳಿಗೆ ದೇವರು, ದೇವಿ, ರಾಜ, ರಾಣಿ, ಪುರೋಹಿತ, ಪೂಜಾರಿ, ಮಂತ್ರಿ, ಸೇನಾಪತಿ ಎಂದೆಲ್ಲ ನಾವು ಕೊಟ್ಟ ಹೆಸರುಗಳ ನಿಜವಾದ ಅರ್ಥ ನಮಗಾಗತೊಡಗಿದ್ದು ನಾವು ಬೆಳೆದು ದೊಡ್ಡವರಾದ ಮೇಲೆ...

ಏಕ ಅನೇಕ
ಎಸ್. ದಿವಾಕರ್

ಕಾವ್ಯವೆನ್ನುವುದು ಸ್ವತಃ ಒಂದು ಭಾಷೆ. ಅದು ವಿಚಾರಗಳನ್ನು ಒಳಗೊಂಡಿದ್ದರೂ ವಿಚಾರಗಳಲ್ಲ; ಕತೆ ಹೇಳುತ್ತಿದ್ದರೂ ಕತೆಯಲ್ಲ. ಅದು ಮನುಷ್ಯ ಭಾವನೆಗಳ ಒಂದಿಡೀ ಶ್ರೇಣಿಯನ್ನೇ ಒಳಗೊಂಡಿದ್ದರೂ ಅದನ್ನು ಪ್ರತಿಫಲಿಸುವ ತೀರ ಹೊಸದಾದ, ಶಕ್ತವಾದ, ಬೆರಗು ಹುಟ್ಟಿಸುವ ಭಾಷೆಯಲ್ಲಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಅಂಥ ಭಾಷೆ ಇಲ್ಲದಿರುವ ಕಾವ್ಯ ಒಂದಿಷ್ಟೂ ಪರಿಣಾಮ ಬೀರದು.

ಕಾವ್ಯಕ್ಕೆ ಪ್ರಾಸವಿಲ್ಲದಿದ್ದರೂ ನಡೆದೀತು, ಆದರೆ ಲಯ ಬೇಕೇಬೇಕು. ಅದು ಬುದ್ಧಿ ಭಾವಗಳ ನಡುವೆ, ಮನಸ್ಸು ಮತ್ತು ಇಂದ್ರಿಯಗಳ ನಡುವೆ, ವಿಚಾರ ಮತ್ತು ಕ್ರಿಯೆಗಳ ನಡುವೆ ಸಮತೋಲನ ಸಾಧಿಸಬೇಕು. ಒಂದು ಕವನದಲ್ಲಿ ವಿಚಾರಗಳೇನಾದರೂ ಇದ್ದರೆ ಅವು ವಾಚ್ಯವಾಗದೆ ಮೂರ್ತವೂ ಭಾವಪ್ರಚೋದಕವೂ ಆದ ಪ್ರತಿಮೆಗಳಿಂದ ವ್ಯಕ್ತವಾಗಬೇಕು. ಜೊತೆಗೆ ಇನ್ನೊಂದು ಬಹುಮುಖ್ಯವಾದ ಅಂಶ ಧ್ವನಿ. ಕಾವ್ಯದಲ್ಲಿ ವಿಚಾರಗಳನ್ನು, ಭಾವಗಳನ್ನು ಪ್ರಚೋದಿಸುವ ಶಬ್ದಗಳೋ ಶಬ್ದ ಸಮುಚ್ಚಯಗಳೋ ತಮ್ಮ ವಾಚ್ಯಾರ್ಥಕ್ಕಿಂತ ಮಿಗಿಲಾದ ಅರ್ಥವನ್ನು ಸೂಚಿಸಿದರೆ ಅದು ಧ್ವನಿ. ಧ್ವನಿಯನ್ನು ಸಾಹಿತ್ಯಿಕ ಸಂಬಂಧಿ ಸೂಚಕದಿಂದ (ಬಹುಶಃ ಅನ್ಯೋಕ್ತಿಯಿಂದ) ಸಾಧಿಸಬಹುದು. ಎಲ್ಲ ಬಗೆಯ ಕಾವ್ಯದಲ್ಲೂ, ಅಷ್ಟೇಕೆ ಅತ್ಯುತ್ತಮ ಗದ್ಯದಲ್ಲಿ ಕೂಡ, ಧ್ವನಿ ಎಂಬುದಿರುತ್ತಿದೆ. ಅದು ನಿರ್ದಿಷ್ಟ ಪ್ರತಿಮೆಗಳಿಂದ, ಅಲಿಗರಿಯಿಂದ, ರೂಪಕಗಳಿಂದ ರೂಪುಗೊಂಡಿರುತ್ತದೆ. ಆನಂದವರ್ಧನನ ಪ್ರಕಾರ ಧ್ವನಿಯೇ ಕಾವ್ಯದ ಆತ್ಮ; ಯಾವ ಕಾವ್ಯ ಧ್ವನಿಪ್ರಧಾನವಾಗಿರುವುದೋ ಅದು ಅತ್ಯುತ್ತಮ ಕಾವ್ಯ.

ನಮ್ಮ ಕವಿ ಎಚ್. ಎಸ್. ಶಿವಪ್ರಕಾಶ್ ಅವರ ಧ್ವನಿಯೇ ಮೈವೆತ್ತ ಒಂದು ಕವನ 'ಗೊಂಬೆ ಕತೆ'. ಅದನ್ನೊಮ್ಮೆ ಓದಿ:

ಪುಟಾಣಿಗೊ
ಚಿಕ್ಕಂದಿನಲ್ಲಿ ಸದಾ ಹಾತೊರೆಯುತ್ತಿದ್ದ
ನಮ್ಮ ಪುಟಾಣಿ ಕೈಗಳಿಂದ ಮಾಡುತ್ತಿದ್ದೆವು
ಪುಟಾಣಿ ಗೊಂಬೆಗಳನ್ನು.
ಮಾತುಕತೆ ಚೂರೂ ಗೊತ್ತಿರದ ಅವಕ್ಕೆ ಹೆಸರಿಕ್ಕುತ್ತಿದ್ದೆವು:
ದೇವರು, ದೇವಿ, ರಾಜ, ರಾಣಿ, ಪುರೋಹಿತ,
ಪೂಜಾರಿ, ಮಂತ್ರಿ, ಸೇನಾಪತಿ -ಇತ್ಯಾದಿ
ಹೆಸರೂ ಇರಲಿಲ್ಲ ಅವಕ್ಕೆ ನಾವು ಕೊಡುವತನಕ
ನಾವೀಗ ಬೆಳೆದು ದೊಡ್ಡವರಾದ ಮೇಲೆ
ನಾವು ಅವುಗಳಿಗೆ ಗುಲಾಮರಾಗಿದ್ದೇವೆ
ಕೈಗೊಂಬೆಗಳ ಕೈಗೊಂಬೆಯಾಗಿದ್ದೇವೆ
ಅವು ದಾರಿತೋರಿಸದಿದ್ದರೆ ಕೆಟ್ಟೆವೆಂದುಕೊಂಡಿದ್ದೇವೆ
ಅವನ್ನು ನಾವೇ ಮಾಡಿದ್ದೆವೆಂಬುದನ್ನು
ಪೂರ್ತಿ ಮರೆತಿದ್ದೇವೆ

ಒಂದು ಕಾಲದಲ್ಲಿ ಮಗುವಿಗಾಗಿ ಗೊಂಬೆಗಳನ್ನು ಮಾಡಿಕೊಡುತಿದ್ದ ನಾವು, ನೀವು, ಅವರು ಮೊದಲು ಪುಟಾಣಿಗಳೇ ಆಗಿದ್ದವರು. ಯಾಕೆಂದರೆ ನಾವು ಗೊಂಬೆಗಳನ್ನು ಮಾಡಿಕೊಡುತ್ತಿದ್ದದ್ದು 'ನಮ್ಮ ಪುಟಾಣಿ ಕೈಗಳಿಂದ'. ಹೆಸರುಗಳಿಲ್ಲದ ಆ ಗೊಂಬೆಗಳಿಗೆ ಹೆಸರುಗಳನ್ನು ಕೊಡುವವರೆಗೂ ನಾವು ಮಗುವಿನ ಹಾಗೆಯೇ ಮುಗ್ಧರಾಗಿದ್ದೆವು ಅಥವಾ ನಿಷ್ಪಾಪಿಗಳಾಗಿದ್ದೆವು. ಗೊಂಬೆಗಳಿಗೆ ದೇವರು, ದೇವಿ, ರಾಜ, ರಾಣಿ, ಪುರೋಹಿತ, ಪೂಜಾರಿ, ಮಂತ್ರಿ, ಸೇನಾಪತಿ ಎಂದೆಲ್ಲ ನಾವು ಕೊಟ್ಟ ಹೆಸರುಗಳ ನಿಜವಾದ ಅರ್ಥ ನಮಗಾಗತೊಡಗಿದ್ದು ನಾವು ಬೆಳೆದು ದೊಡ್ಡವರಾದ ಮೇಲೆ; ಅಥವಾ ಅವರೆಲ್ಲ ಏನೆಲ್ಲ ಆಗಿ ನಮ್ಮ ಮೇಲೆ ಸವಾರಿ ಮಾಡತೊಡಗಿದ ಮೇಲೆ.

ಮನುಷ್ಯರ ಎಲ್ಲ ಸಮಸ್ಯೆಗಳಿಗೂ ಪರಿಹಾರಗಳಿವೆ ಯೆಂದುಕೊಂಡ ಮನುಷ್ಯ ಆದರ್ಶ ಸಮಾಜವೊಂದರ ನಿರ್ಮಾಣಕ್ಕೆ ಪ್ರಯತ್ನಿಸಿದ್ದು ಸಹಜವೇ. ಸಮಾಜಜೀವಿಯಾದ ಅವನು ರಾಜಾಧಿಕಾರ, ಸರ್ವಾಧಿಕಾರ, ಮಿಲಿಟರಿ ಆಡಳಿತ, ಪ್ರಜಾತಂತ್ರ ಇಂಥ ಯಾವುದಾದರೊಂದು ರಾಜಕೀಯ ವ್ಯವಸ್ಥೆಗೆ ಬದ್ಧನಾಗಬೇಕಾದದ್ದು ಕೂಡ ಸಹಜವೇ. ಈಗಂತೂ ಅವನು ಈ ವ್ಯವಸ್ಥೆಗಳಲ್ಲಿ ಒಂದಲ್ಲ ಒಂದು ವ್ಯವಸ್ಥೆಗೆ ಎಷ್ಟೆಲ್ಲ ಹೊಂದಿಕೊಂಡುಬಿಟ್ಟಿದ್ದಾನೆಂದರೆ ಇವೆಲ್ಲ ಅವನೇ ಸೃಷ್ಟಿಸಿದ ವ್ಯವಸ್ಥೆಗಳೆಂಬುದನ್ನು ಕೂಡ ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೆ.

ಮಗುವಿನ ಮನಸ್ಸು ನಿಸರ್ಗಸಹಜವಾದದ್ದು. ಮನೋವಿಜ್ಞಾನಿ ಎರಿಕ್ ಫ್ರಾಮ್‌ನ ಪ್ರಕಾರ ಮನುಷ್ಯರು ನಿಸರ್ಗದಿಂದ ಬೇರೆಯಾಗಿರುವುದರಿಂದ, ಅವರಿಗೆ ಸ್ವಂತ ಅರಿವೂ ಇರುವುದರಿಂದ ಅವರ ಶಕ್ತಿ ಸಾಮರ್ಥ್ಯಕ್ಕೆ ಹೊರದಾರಿ ಬೇಕು. ಸೃಷ್ಟಿಸುವ, ಸಂಬಂಧಗಳನ್ನು ರೂಪಿಸಿಕೊಳ್ಳುವ, ಬೆಳೆಯುವ ಅವರ ಸಾಮರ್ಥ್ಯವನ್ನು ಪರಕೀಯ ಪರಿಸರಗಳೋ ದಮನಕಾರಿ ಸಮಾಜಗಳೋ ಹತ್ತಿಕ್ಕಿದರೆ, ಆ ಸಾಮರ್ಥ್ಯ ಅವರನ್ನು ವಿನಾಶದತ್ತ ಕೊಂಡೊಯ್ಯುತ್ತದೆ.

ನಿಸರ್ಗದಲ್ಲಿ ಒಂದಾಗದ, ಅದನ್ನು ತನ್ನದೊಂದು ಭಾಗವೆಂದು ತಿಳಿಯದ ಏಕೈಕ ಪ್ರಾಣಿಯೆಂದರೆ ಮನುಷ್ಯ. ಸ್ವಾತಂತ್ರ್ಯದಾಹ, ದಾಕ್ಷಿಣ್ಯದ ನೆಲೆ, ವಿಧೇಯತೆಯ ಮಿತಿ, ಕಾನೂನಿನ ಮತ್ತು ನಿಷ್ಠೆಯ ಬುನಾದಿ, ಸಮಾನತೆಯ ಆದರ್ಶ ಮತ್ತು ಅಸಮಾನತೆಯ ಪರಿಸ್ಥಿತಿ ಹೀಗೆ ಅವನಿಗಿರುವ ಸಮಸ್ಯೆಗಳು ಒಂದೆರಡಲ್ಲ. ಆದ್ದರಿಂದಲೇ ಅವನು ನಿಸರ್ಗದಲ್ಲಿ ಒಂದಾಗಿದ್ದ ಮನುಷ್ಯಪೂರ್ವ ಕಾಲಕ್ಕೆ ಹೋಗುವವಂತಿಲ್ಲ; ಮುನ್ನಡೆದರೆ ಎಲ್ಲಿಗೆ ಮುಟ್ಟುವೆನೆಂಬ ಅರಿವೂ ಅವನಿಗಿಲ್ಲ.

ಶಿವಪ್ರಕಾಶರ ಕವನದ ಭಾಷೆ, ನಮ್ಮ ವಚನಕಾರರ ಭಾಷೆಯಂತೆ, ತೀರ ಸರಳ ಎನ್ನಿಸುವಂತಿದೆ, ನಿಜ. ಆದರೆ ಅದರ ಆಶಯ ಅಷ್ಟು ಸರಳವಲ್ಲ, ತುಂಬ ಸಂಕೀರ್ಣವಾದದ್ದು. ಮೊನ್ನೆ ಮೊನ್ನೆ ನಾನು ಮತ್ತೆ ಈ ಕವನವನ್ನು ಓದುತ್ತಿರುವಾಗ ಮೇಲಿನ ಅನೇಕ ವಿಚಾರಗಳು ಒಮ್ಮೆಗೇ ಸ್ಫುರಿಸಿ ಒಂದು ಕ್ಷಣ ನನ್ನ ಮನಸ್ಸು ತಲ್ಲಣಿಸಿತು.

ಒಂದು ಕವನವನ್ನು ಹೀಗೂ ಓದಬಹುದೆ? ಓದಬಹುದು-ಕವನದ ಒಡಲಲ್ಲೇ ಅಷ್ಟೆಲ್ಲ ವಿಚಾರಗಳು ಬೀಜರೂಪದಲ್ಲಿದ್ದರೆ ಇದೇ ಕವನವನ್ನು ನೀವೂ ಓದಿದರೆ ನಿಮಗೆ ನನಗಾದ ಕಾವ್ಯಾನುಭವವೇ ಆಗಬೇಕೆಂದಿಲ್ಲ; ಅದು ಬೇರೆಯದೇ ಆಗಬಹುದು.

ಈಗ ಪ್ರಸಿದ್ಧ ಅಮೆರಿಕನ್ ಕವಿ ಡಬ್ಲ್ಯು.ಎಸ್. ಮರ್ವಿನ್ ಬರೆದಿರುವ ಒಂದು ಕವನವನ್ನು (ಅಥವಾ ಅತಿಸಣ್ಣ ಕತೆಯನ್ನು) ನೋಡೋಣ. ಅದರ ಹೆಸರು (ನನ್ನ ಅನುವಾದದಲ್ಲಿ) 'ಒಬ್ಬೊಂಟಿ ಮಗು'.

ಒಬ್ಬೊಂಟಿಯಾಗಿರುವ ಒಂದು ಮಗು ತನ್ನೆದುರಿಗಿರುವ ಗೊಂಬೆಗಳನ್ನು ಜೋಡಿಸಿಡುತ್ತದೆ.

'ಬನ್ನಿಬನ್ನಿ, ಆಟ ಆಡೋಣ. ನೋಡಿ, ನನ್ನ ಹತ್ತಿರ ಎಷ್ಟೊಂದು ಬೊಂಬೆ ಇದ್ದಾವೆ' ಎಂದು ಹತ್ತಿರ ಬರುವ ಎಲ್ಲರನ್ನೂ ಕರೆಯುತ್ತದೆ.

ಆದರೆ ಎಲ್ಲರೂ ದೂರ ಹೋಗುತ್ತಾರೆ.

ಮಗು ಗೊಂಬೆಗಳಲ್ಲಿ ಮೊದಲನೆಯದನ್ನು ಒಡೆದುಹಾಕುತ್ತದೆ.

ಆಮೇಲೆ ಇತರ ಮಕ್ಕಳು ಬರುತ್ತವೆ - ನೋಡುವುದಕ್ಕೆ, ಸಹಾಯ ಮಾಡುವುದಕ್ಕೆ, ಯಾರು ಗೊಂಬೆಗಳನ್ನು ಒಡೆದು ಹಾಕುತ್ತಾರೋ ಅವರ ಜೊತೆ ಜಗಳವಾಡುವುದಕ್ಕೆ.

ಒಂದು ಒಬ್ಬೊಂಟಿ ಮಗುವಿಗೆ ಗೊಂಬೆಗಳೇ ಇಲ್ಲದಿದ್ದರೆ, ಅದು ಗೊಂಬೆಗಳನ್ನು ಮಾಡಿಕೊಳ್ಳುತ್ತದೆ.

ಬೆಳೆದ ಮನುಷ್ಯ ಒಂಟಿಯಾಗಿರಬಹುದು. ಆದರೆ ಮಗು ಒಂಟಿಯಾಗಿರುವುದಿಲ್ಲ. ಅದಕ್ಕೆ ಅದರದೇ ಆದ, ನಾವು ಬಾಲಿಶ ಎಂದು ಉಪೇಕ್ಷಿಸಬಹುದಾದ ಗೊಂಬೆಗಳು ಅರ್ಥಾತ್ (ಆ ಗೊಂಬೆಗಳ ಮುಖೇನ ಹೊಮ್ಮುವ) ಭಾವನೆಗಳು ಇವೆ. ಅವುಗಳನ್ನು ನಾವೂ ನೋಡಬೇಕೆಂದು ಅಥವಾ ಅರಿಯಬೇಕೆಂದು ಬಯಸುತ್ತದೆ ಅದು. ನೂರೆಂಟು ಈತಿಬಾಧೆಗಳಲ್ಲಿ ತೊಳಲಾಡುತ್ತಿರುವ ನಾವು ಅವುಗಳನ್ನು ನೋಡದಿದ್ದಾಗ ಅಥವಾ ಅರಿಯದಿದ್ದಾಗ ಮಗುವಿಗೆ ನಿರಾಶೆಯಾಗುವುದು ಸಹಜ. ಈ ಕವನದಲ್ಲಿ ಮಗು ಗೊಂಬೆಯನ್ನು ಒಡೆದು ಹಾಕುವ ಕ್ರಿಯೆ, ಮತ್ತೆ ಅದನ್ನು ಮಾಡಿಕೊಳ್ಳುವ ಕ್ರಿಯೆಗಳು ಏನನ್ನು ಸೂಚಿಸುತ್ತವೆ? ಸ್ವಲ್ಪ ಯೋಚಿಸಿ ನೋಡಿ. ■

ಪದ್ಯಕಾಲ

ಪರಮಪಿತನು ಅಪ್ಪನ ಸೃಷ್ಟಿ ಮಾಡಿದನು

ಪರ್ವತದ ಗಟ್ಟಿತನವ ಭಟ್ಟಿ ಇಳಿಸಿ
ದಿವ್ಯದಾರುವಿನ ಔನ್ನತ್ಯವ ತಟ್ಟಿ ತೊಡಿಸಿ
ದಿನಕರನ ಹೊಂಗಿರಣದ ರೇಕು ಜಡಿದು
ಸಾಗರದ ಅಗಾಧ ಪ್ರಶಾಂತತೆ ಸುರಿದು

ವನರಾಜ್ಜಿಯ ದಯಾಳು ಹೃದಯ ಅರಸಿ
ನೆಮ್ಮದಿಯನೀವ ನಿಶೆಯ ತೋಳು ಬಳಸಿ
ಸಹಸ್ರಮಾನಗಳ ಜ್ಞಾನರಾಶಿ ಗಗನದೆತ್ತರ ಪೇರಿಸಿ
ಅತೀಂದ್ರಿಯ ವೇಗೋತ್ಕರ್ಷದ ಜಾಡು ಅನುಸರಿಸಿ

ವಸಂತ ಸುಪ್ರಭಾತ ಸಂತಸದಿ ಚಿತ್ರಿಸಿ
ಸಾಸಿವೆಯ ಸೂಕ್ಷ್ಮಕ್ಷಮತೆಯ ಪೂಸಿ
ಅನಂತದ ಅಪರಿಮಿತ ತಾಳ್ಮೆಯ ಪೊರೆದು
ಸಂಸಾರ ನಿರೀಕ್ಷೆಗಳ ಆಳ-ಅಗಲವ ಅಳೆದು

ಬ್ರಹ್ಮಾಂಡದ ಗುಣಗಣೆಯ ಒಂದೆಡೆ ಕೂಡಿ
ಸೇರಿಸಲನೇನೂ ಉಳಿದಿಲ್ಲವೆಂದು ಖಾತ್ರಿ ಮಾಡಿ
ತನ್ನದೇ ಪ್ರತಿಫಲನದ ಪರಿಪೂರ್ಣ ಪ್ರತಿಕೃತಿಯಂತೆ
ಪರಮಪಿತನವನು ಅಪ್ಪನ ಸೃಷ್ಟಿ ಮಾಡಿದನು.

(ಅನಾಮಿಕ ಇಂಗ್ಲಿಷ್ ಕವಿಯ ಕವನ)
ಅನುವಾದ: ಬೇದ್ರೆ ಮಂಜುನಾಥ, ಮೈಸೂರು

ಡೆಮೋ



ಕಥೆ ಕಿಟಕಿ
ಗಿರಿಧರ್ ಖಾಸನೀಸ್

'ಸಂಜೆ ಏಳಕ್ಕೆ ಬರ್ತೀನಿ' ಅಂತ ಹೇಳಿದ ಪ್ರಾಣಿ ಬಂದಿದ್ದು ಏಳೂ ಮುಕ್ಕಾಲಿಗೆ. ಸೌಜನ್ಯಕ್ಕಾದರೂ 'ಸಾರಿ, ಲೇಟಾಯಿತು' ಅನ್ನಲಿಲ್ಲ.

ಮುಖ ಸಿಂಡರಿಸಿಕೊಂಡೇ ಡೆಮೋ ನೋಡಿದ. ಆರ್ಡರ್ ಬಗ್ಗೆ ಒಂದು ಮಾತೂ ಇಲ್ಲ. 'ಆಯಿತು ನೋಡೋಣ' ಅನ್ನುತ್ತಾ ಆಫೀಸಿಗೆ ಬೀಗ ಹಾಕಿ ಕಾರ್ ಹತ್ತಿ ಹೊರಟೇ ಬಿಟ್ಟ ಡರ್ಟಿ ರಾಸ್ಕಲ್. ಜಿನುಗುತ್ತಿದ್ದ ಮಳೆಯಲ್ಲಿ ನಾನು ನಡುಬೀದಿ ನಾರಾಯಣನಾದೆ.

ಒಂಬತ್ತು ಗಂಟೆಯ ಬಸ್ ಸಿಕ್ಕಿದರೆ ಸಾಕು. ಇಲ್ಲಿಂದ ಎಸ್ಕೇಪ್ ಆಗಬೇಕು. ಬೀದಿಯ ಮೂಲೆಯಲ್ಲಿ ನಿಂತು, ಬಂದುಹೋಗುವ ವಾಹನಗಳಿಗೆಲ್ಲ ಹೆಬ್ಬೆರಳು ತೋರಿಸಿದೆ.

ಯಾರೂ ಕ್ಯಾರೇ ಅನ್ನಲಿಲ್ಲ. ಹೆಗಲ ಮೇಲಿನ ಸ್ಯಾಂಪಲ್ ಬ್ಯಾಗ್ ಹೆಣಭಾರ.

ಮಳೆ ಜೋರಾಯಿತು. ಮೈ ಒದ್ದೆಯಾಯಿತು. ಅಷ್ಟರಲ್ಲಿ ಟರಟರ ಅನ್ನುತ್ತಾ ಒಂದು ಆಟೋ ಬಂದು ನಿಂತಿತು. 'ಬಸ್ ಸ್ಟ್ಯಾಂಡ್... ಇನ್ನೂರು ರೂಪಾಯಿ' ಅಂತ ಆಟೋ ಡ್ರೈವರ್ ಕೂಗಿ ಹೇಳಿದ.

ಬಸ್ ಸ್ಟ್ಯಾಂಡ್ ತಲುಪುವಷ್ಟರಲ್ಲಿ ಒಂಬತ್ತರ ಬಸ್ ಹೋಗಿಯಾಗಿತ್ತು. ಮುಂದಿನದು ಹತ್ತೂವರೆಗೆ.

ನನ್ನ ಮುಖ ನೋಡಿದ ಆಟೋ ಡ್ರೈವರ್‌ಗೆ ಏನನಿಸಿತೋ ಏನೋ. 'ಬನ್ನಿ ಸರ್, ಹತ್ತಿರದಲ್ಲೇ ಖಾನಾವಳಿ ಇದೆ. ಊಟ ಮುಗಿಸಿ ವಾಪಸ್ ಇಲ್ಲೇ ಬಿಡ್ತೀನಿ,' ಅಂದ.

ಖಾನಾವಳಿಯ ಬಿಸಿಬಿಸಿ ಊಟ ರುಚಿಯಾಗಿತ್ತು. ಕೈತೊಳೆಯುವಾಗ ಮೊಬೈಲ್ ರಿಂಗಣಿಸಿತು. ಅದೇ ರಾಸ್ಕಲ್! ಕಿರಿಕಿರಿಯಿಂದಲೇ 'ಹಲೋ' ಅಂದೆ. ಆ ಕಡೆಯಿಂದ ಧ್ವನಿ ಬದಲಾಗಿತ್ತು. 'ಸಾರಿ, ಮೈ ಫ್ರೆಂಡ್. ಮಗಳಿಗೆ ಡೇಟ್ ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿದ್ದಾಳೆ. ಟೆನ್ಷನ್‌ನಲ್ಲಿ ಸರಿಯಾಗಿ ಮಾತಾಡಿಸಲಿಲ್ಲ. ತಪ್ಪು ತಿಳೀಬೇಡಪ್ಪ. ಪ್ರಾಡಕ್ಟ್ ಚೆನ್ನಾಗಿದೆ. ಎರಡು ದಿನದಲ್ಲಿ ಆರ್ಡರ್ ಪ್ಲೇಸ್ ಮಾಡ್ತೀವಿ. ಈಗ ಎಲ್ಲಿದ್ದೀ?'

'ಖಾನಾವಳಿಯಲ್ಲಿ ಊಟ ಮುಗಿಸಿದೆ, ಸರ್. ಒಂಬತ್ತು ಗಂಟೆ ಬಸ್ ಮಿಸ್ ಆಯ್ತು. ಹತ್ತೂವರೆ ಬಸ್ಸಿಗೆ ಕಾಯ್ತೀನಿ.'

'ಬೇಡ ಬೇಡ. ಬಸ್ ಸ್ಟ್ಯಾಂಡಿಗೆ ಹೋಗು. ನನ್ನ ಫ್ರೆಂಡ್ ಕಾರಿನಲ್ಲಿ ಬೆಂಗಳೂರಿಗೆ ಹೊರಟಿದ್ದಾನೆ. ನಿನ್ನನ್ನು ಪಿಕ್ ಮಾಡ್ತಾನೆ. ಸೇಫ್ ಜರ್ನಿ.'

'ಥ್ಯಾಂಕ್ ಯು ಸರ್, ನಿಮ್ಮ ಮಗಳಿಗೆ ಸೇಫ್ ಡೆಲಿವರಿ ಆಗಲಿ.'

ಮೆಟ್ಟಿಲಿಳಿದು ಕೆಳಗೆ ಬಂದೆ. ಆಟೋ ಡ್ರೈವರ್ ನನಗಾಗಿ ಕಾಯುತ್ತಿದ್ದ. ಮಳೆ ನಿಂತಿತ್ತು.

ತಲೆಯೆತ್ತಿ ನೋಡಿದೆ.

ಆಕಾಶದಲ್ಲಿ ಹತ್ತಾರು ಚುಕ್ಕಿಗಳು. ■

ಕಾದಂಬರಿಕಾರ, ಕಥೆಗಾರ ಶ್ರೀಧರ ಬಳಗಾರ 'ಬಲಿಪಾದ' ಎಂಬ ಹೊಸ ಕಾದಂಬರಿ ಬರೆದಿದ್ದಾರೆ. ಅಭಿವೃದ್ಧಿ, ಪ್ರಕೃತಿ, ಸಂಸ್ಕೃತಿ ಮತ್ತು ಮಾನವ ಅಸ್ತಿತ್ವದ ಕುರಿತಾಗಿ ಗಂಭೀರ ಪ್ರಶ್ನೆಗಳನ್ನು ಎತ್ತುವ ಈ ಕೃತಿ ಮೂಲನಿವಾಸಿ ಸಮುದಾಯಗಳ ಬದುಕು, ಸ್ಮೃತಿ, ಪುರಾಣ ಮತ್ತು ಪ್ರಕೃತಿಯೊಂದಿನ ಅವರ ನಂಟನ್ನು ಅತ್ಯಂತ ಸಂವೇದನಾಶೀಲವಾಗಿ ಹಿಡಿದಿಡುತ್ತದೆ. 'ಅಭಿವೃದ್ಧಿ' ಎಂಬ ಹೆಸರಿನಲ್ಲಿ ನಡೆಯುತ್ತಿರುವ ಅಳಿವಿನ ಮೌನ ವ್ಯಥೆಯನ್ನೂ ನಮ್ಮ ಮುಂದಿರಿಸುತ್ತದೆ. ಇಂದು ಬೆಂಗಳೂರಿನಲ್ಲಿ ಈ ಕೃತಿ ಬಿಡುಗಡೆಯಾಗುತ್ತಿರುವ ಸಂದರ್ಭದಲ್ಲಿ ಲೇಖಕರ ಜೊತೆಗೆ ಇನ್ನೋರ್ವ ಕಾದಂಬರಿಕಾರ, ಕಥೆಗಾರ ಕರ್ಕಿ ಕೃಷ್ಣಮೂರ್ತಿ ಮುಖಾಮುಖಿಯಾದ ಬಗೆ ಇಲ್ಲಿದೆ.

ಕಾದಂಬರಿ ಸಾಂಸ್ಕೃತಿಕ ವಾಗ್ವಾದದ ಪಠ್ಯ ಕೂಡ



ವಿಕ ಸಮ್ಮುಖ

● ಕಾದಂಬರಿಯಲ್ಲಿರುವ ಮೂಲನಿವಾಸಿ ಸಮುದಾಯಗಳ ಬದುಕು ಬಹಳ ದಟ್ಟವಾಗಿ ಮೂಡಿಬಂದಿದೆ. ಓದುಗರಿಗೆ ಅದು 'ಬಾಹ್ಯ ವೀಕ್ಷಣೆ'ಯಂತೆ ಕಾಣುವುದಿಲ್ಲ; ಒಳಗಿನಿಂದ ಬಂದ ಅನುಭವದಂತೆ ಕಾಣುತ್ತದೆ. ಈ ವಿಶ್ವಾಸಾರ್ಹತೆಯನ್ನು ಪಡೆಯಲು ನೀವು ಮಾಡಿದ ಸಿದ್ಧತೆ ಏನು?

ಸಾಹಿತ್ಯ ಕೃತಿಯ ವಿಶ್ವಾಸಾರ್ಹತೆ ಕೇವಲ ಬಾಹ್ಯ ವೀಕ್ಷಕ ವಿವರಣೆಯಿಂದ ಪ್ರಾಪ್ತವಾಗಲು ಸಾಧ್ಯವಿಲ್ಲ. ಸಂಕೀರ್ಣ ನೇಯ್ಗೆಗಳ ಅನುಭವದ ಸಜೀವ ವಿವರಗಳ ಕಥನ ವಿನ್ಯಾಸವನ್ನು ಸಮುದಾಯದ ಬದುಕಿನ ಒಳಗಿನಿಂದ ನೋಡುವುದು ಅಗತ್ಯ. ಜೊಯಿಡಾ ಕಾಡಿನ ಮೂಲನಿವಾಸಿಗಳೊಂದಿಗಿದ್ದ ನನ್ನ ನಿರಂತರ ಒಡನಾಟಕ್ಕೆ ಹನ್ನೆರಡು ವರ್ಷಗಳ ಹಿನ್ನೆಲೆ ಇದೆ. ಅವರ ಭೌಗೋಳಿಕ ಪರಿಸರ, ಚರಿತ್ರೆ, ಭಾಷೆ, ನಂಬಿಕೆ, ಆಚರಣೆ ಮತ್ತು ಪ್ರಕೃತಿ ಸಂಬಂಧ ಭಿನ್ನವಾಗಿದ್ದರೂ ಪರಕೀಯವೆನಿಸಲಿಲ್ಲ. ಚಿಕ್ಕವನಿದ್ದಾಗ ಗೋವಾದಿಂದ ಬರುತ್ತಿದ್ದ ಕುಣಬಿಯರು ನನ್ನ ಮನೆಯ ಸನಿಹದ ಬಿಡಾರದಲ್ಲುಳಿದು ನಸುಕಿಗೇ ಗಡಿಗೆ ತುಂಬ ಗಂಜಿ ಉಂಡು ಅರೆಬೆತ್ತಲಲ್ಲಿ ಮರವೇರಿ ಸೊಪ್ಪು ಬೋಳಿಸುವ ಕೆಲಸ ಮಾಡುತ್ತಿದ್ದರು. ನಾನು ಶಾಲೆಯಲ್ಲಿ ಓದುತ್ತಿದ್ದಾಗ ಮನೆಯ ಉತ್ತರಕ್ಕಿರುವ ಹಸಿರು ಕಾಡಿನ ನಡುವಿನ ಸುಪಾ ತಾಲ್ಲೂಕು ಕಾಳಿ ಡ್ಯಾಮಿನಿಂದ ಮುಳುಗಿ ನಕ್ಷೆಯಿಂದ ಕಣ್ಮರೆಯಾಯಿತು. ತಮ್ಮ ಪಾಡಿಗೆ ತಾವು ಬಡತನವನ್ನು ವ್ರತವನ್ನಾಗಿಸಿಕೊಂಡು ಬದುಕಿದ್ದವರನ್ನು ದೈತ್ಯ ಪಾದವೊಂದು ತುಳಿದು ಪಾತಾಳಕ್ಕೆ ತಳ್ಳುತ್ತಿರುವ ದೃಶ್ಯ ಭಯಾನಕವಾಗಿತ್ತು. ಭಯದಿಂದ ಬಿಡುಗಡೆಯಾಗಲು ಬರೆಯಬೇಕಾಯಿತು.

● ಕಾದಂಬರಿಯೊಳಗೆ ನದಿ, ಕಾಡು, ಭಾಷೆ, ನೆನಪು, ಬದುಕಿನ ಜಾಗ- ಇವೆಲ್ಲ ನಿಧಾನವಾಗಿ ಅಳಿದುಹೋಗುತ್ತಿರುವ ಆಳವಾದ ವ್ಯಥೆ ಕಾಣಿಸುತ್ತದೆ. 'ಬಲಿಪಾದ' ಬರೆಯುವಾಗ ನೀವು ಒಂದು ದುರಂತವನ್ನು ದಾಖಲಿಸುತ್ತಿದ್ದೀರಾ ಅಥವಾ ಭವಿಷ್ಯಕ್ಕೆ ಎಚ್ಚರಿಕೆಯನ್ನೂ ನೀಡುತ್ತಿದ್ದೀರಾ?

'ಬಲಿಪಾದ' ದುರಂತ ಕಥೆಯ ದಾಖಲೆ ಮಾತ್ರವಲ್ಲ. ಭೂಮಿ, ಭೂತ, ಭಾಷೆಯೊಂದಿಗೆ ಬೆಸೆದ ಸ್ಥಳೀಯರ ಸಂಬಂಧದ ಎಳೆಗಳು ಮೂರು ತಲೆಮಾರುಗಳಿಗೆ ಚಾಚುತ್ತ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳಿಗೆ ತಳಕು ಹಾಕಿದ ಹಲವು ಬಿಕ್ಕಟ್ಟುಗಳನ್ನು ಕಾದಂಬರಿ ಶೋಧಿಸುತ್ತದೆ. ಆಧುನಿಕ ಸವಾಲುಗಳಿಗೆ ತೆರೆದುಕೊಳ್ಳುತ್ತ ಸ್ಥಳೀಯರು ತಮ್ಮ ಸಮುದಾಯದ ಸ್ವಾಯತ್ತತೆಯನ್ನು ಮರುಹೊಂದಾಣಿಕೆಯ ಮೂಲಕ ರಕ್ಷಿಸುವ ಸೂಚನೆಯೂ ಇದೆ. ಕಥನದ ಸಾವಯವ ಶಿಲ್ಪದಿಂದ ಪ್ರವಾದಿಯೊಬ್ಬನ ಎಚ್ಚರಿಕೆ ಧ್ವನಿಸಿದರೆ ಕೃತಿ ಸಾರ್ಥಕ.

● 'ಬಲಿಪಾದ' ಓದಿದಾಗ ಇದು ಕೇವಲ ಕಥೆ ಅಲ್ಲ, ಒಂದು ಸಂಸ್ಕೃತಿಯ ನೆನಪುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಎಂಬ ಭಾವನೆ ಬರುತ್ತದೆ. ನಿಮಗೆ ಈ ಕಾದಂಬರಿ ಸಾಹಿತ್ಯಕ ಕೃತಿ ಅಷ್ಟೇನಾ ಅಥವಾ ಒಂದು ಸಾಂಸ್ಕೃತಿಕ ಸಾಕ್ಷ್ಯವೂ ಆಗಿದೆಯಾ?

ಕಾದಂಬರಿ ಸಾಹಿತ್ಯ ಕೃತಿಯಾಗಿ ಮೈತಳೆದು ಅದರಾಚೆಯ ಚಾರಿತ್ರಿಕ ಮತ್ತು ಸಮಕಾಲೀನ ಪ್ರಶ್ನೆಗಳನ್ನು ಮುಖಾಮುಖಿಯಾಗುವುದರಿಂದ ಸಾಂಸ್ಕೃತಿಕ ವಾಗ್ವಾದದ ಪಠ್ಯವನ್ನಾಗಿಯೂ ಓದಬಹುದಾಗಿದೆ.

● ಈ ಕೃತಿಯಲ್ಲಿ ಪುರಾಣ, ಇತಿಹಾಸ, ಜನಪದ ಸ್ಮೃತಿ ಮತ್ತು ಸಮಕಾಲೀನ ರಾಜಕೀಯ- ಇವೆಲ್ಲ ಒಂದರೊಳಗೆ ಒಂದು ಬೆರೆತಿವೆ. ಈ ರೀತಿಯ ಬಹುಪದರದ ನಿರೂಪಣೆ ಕಥೆಯನ್ನು ಸಂಕೀರ್ಣವಾಗಿಸುವ ಅಪಾಯ ಇತ್ತು. ಆದರೂ ನೀವು ಅದನ್ನೇ ಆಯ್ಕೆ ಮಾಡಿಕೊಂಡದ್ದು ಯಾಕೆ?

ಕಾದಂಬರಿಯ ಕಥಾವಸ್ತು ಅಪಾಯಕಾರಿಯಾದ ಆಯ್ಕೆಯೇನೂ ಅಲ್ಲ. ಏಕೆಂದರೆ, ಮೂಲನಿವಾಸಿಗಳ ಬದುಕಿನ ಅನುಭವವೇ ಬಹಳ ಸಂಕೀರ್ಣವಾದ ವೈರುಧ್ಯಗಳಿಂದ ಹೆಣೆದುಕೊಂಡಿದ್ದರಿಂದ ಅದಕ್ಕೆ ಸೂಕ್ತವಾದ ಸೃಷ್ಟಿಶೀಲ ಅಭಿವ್ಯಕ್ತಿಯನ್ನು ನೀಡದಿದ್ದರೆ ಆಶಯವನ್ನು ಸರಳೀಕರಿಸಿದಂತಾಗುತ್ತಿತ್ತು.

● 'ಬಲಿಪಾದ' ಒಂದು ನಿರ್ದಿಷ್ಟ ಸಮುದಾಯದ ಕಥೆಯನ್ನು ಮೀರಿ, ಇಂದಿನ ಜಗತ್ತಿನ ಅಭಿವೃದ್ಧಿ ಮಾದರಿಯನ್ನೇ ಪ್ರಶ್ನಿಸುವ ಧ್ವನಿ ಹೊಂದಿದೆ. ಇಂದಿಗೂ ಸಾಹಿತ್ಯವು ಇತಿಹಾಸ ಮತ್ತು ಅಭಿವೃದ್ಧಿಯ ಅಧಿಕೃತ ಕಥನಗಳನ್ನು ಪ್ರಶ್ನಿಸುವ ಶಕ್ತಿಯನ್ನು ಹೊಂದಿದೆ ಎಂದು ನೀವು ನಂಬುತ್ತೀರಾ?

ಧರ್ಮ, ರಾಜಕೀಯ, ಇತಿಹಾಸ ತನಗಿಂತ ಭಿನ್ನ ವಿಚಾರಕ್ರಮಗಳನ್ನು ನಾಶಗೊಳಿಸಲು ಯತ್ನಿಸುತ್ತಿರುವಾಗ ಅವುಗಳನ್ನು ಸಂಯಮದಿಂದ ಪ್ರಶ್ನಿಸುತ್ತ, ಅರಿಯುತ್ತ, ಪ್ರತಿರೋಧಿಸುತ್ತಿರುವ ಕಾದಂಬರಿ ಅಧಿಕೃತವೆನಿಸುತ್ತದೆ. ■

ಬಲಿಪಾದ; ಲೇ: ಶ್ರೀಧರ ಬಳಗಾರ; ಪ್ರ: ಅಂಕಿತ ಪುಸ್ತಕ, ಬೆಂಗಳೂರು; ಬೆಲೆ: 295ರೂ.

ಬುದ್ಧಿ ಕಲಿತ ಸಿಂಬು

ನರೇಂದ್ರ ಎಸ್. ಗಂಗೊಳ್ಳಿ
feedbacklvk@vijaykarnataka.com

ಮಕ್ಕಳ ಕಥೆ

ಸಂಪಿಗೆ ಕಾಡಿನಲ್ಲಿ ಒಂದು ಸಿಂಹ ತನ್ನ ಮಗ ಸಿಂಬು ಸಿಂಹದ ಜೊತೆ ವಾಸವಾಗಿತ್ತು. ಅಪ್ಪ ಕಾಡಿನ ರಾಜ ಎನಿಸಿಕೊಂಡಿದ್ದರಿಂದ ಸಿಂಬು ಸಿಂಹ ಯಾರ ಮಾತನ್ನೂ ಕೇಳದೆ ಮನಸಿಗೆ ಬಂದ ಹಾಗೆ ವರ್ತಿಸುತಿತ್ತು. ಅಪ್ಪ 'ಬೇಟೆಯ ಕಲೆಯನ್ನು ಹೇಳಿಕೊಡುತ್ತೇನೆ. ನನ್ನ ಜೊತೆಗೆ ಬಾ' ಎಂದು ಬಹಳಷ್ಟು ಬಾರಿ ಕರೆದರೂ ಸಿಂಬು ಸಿಂಹ ಹೋಗುತ್ತಲೇ ಇರಲಿಲ್ಲ.

ಹಾಗೆ ದಿನಗಳು ಉರುಳಿ ಸಿಂಬು ಸಿಂಹ ದೊಡ್ಡದಾಯಿತು. ಅಪ್ಪ ಸಿಂಹಕ್ಕೆ ವಯಸ್ಸಾಗುತ್ತಾ ದೇಹ ದುರ್ಬಲವಾಗತೊಡಗಿತ್ತು. ಅದೊಂದು ದಿನ ಮಗನನ್ನು ಕರೆದು, 'ಇನ್ನು ನನ್ನ ಬಳಿ ಬೇಟೆಯಾಡಲು ಸಾಧ್ಯವಿಲ್ಲ. ನೀನು ಆಹಾರ ಸಂಪಾದನೆ ಮಾಡಿಕೊಂಡು ಬರಬೇಕು' ಎಂದಿತು. 'ಸರಿ' ಎಂದು ತಲೆಯಾಡಿಸಿದ ಸಿಂಬು ಪಕ್ಕದಲ್ಲಿಯೇ ಊರ ಹೊರಗೆ ಶನಿಯಜ್ಜನ ಶೆಡ್ಡಿನಲ್ಲಿ ನೂರಾರು ಕುರಿಗಳಿವೆ. ರಾತ್ರಿ ಹೋಗಿ ದಿನ ಒಂದು ಕುರಿಯನ್ನು ಕದ್ದು ತಂದರೆ ಆಹಾರದ ಸಮಸ್ಯೆ ಮುಗಿಯುತ್ತದೆ ಎಂದುಕೊಂಡು ಆ ದಿನ ರಾತ್ರಿಯಿಂದಲೇ ದಿನವೂ ಶನಿಯಜ್ಜನ ಶೆಡ್ಡಿನಿಂದ ಕುರಿಯನ್ನು ಕದ್ದು ತರತೊಡಗಿತು. ಕದ್ದು ತರುತ್ತಿದ್ದ ಸಿಂಬುಗೆ ಅಪ್ಪ ಸಿಂಹ, 'ಹೀಗೆ ಮಾಡುವುದು ಸರಿಯಲ್ಲ ಸಿಂಬು. ಮುಂದೆ ನಿನಗೆ ಊರ ಜನರಿಂದ ಅಪಾಯವಾಗುತ್ತದೆ. ಹಾಗೆ ಮಾಡಬೇಡ' ಎಂದು ಬುದ್ಧಿ ಹೇಳಿತು. ಆದರೆ ಸಿಂಬು ಸಿಂಹ ಅಪ್ಪನ ಮಾತನ್ನು ಕೇಳದೆ ತನ್ನ ಕಾರ್ಯವನ್ನು ಮುಂದುವರಿಸಿತ್ತು.

ಮನುಷ್ಯ ಲೋಕದಲ್ಲಿ ಕೊರೊನಾ ಎನ್ನುವ ರೋಗವೊಂದು ಬಂದು ಜನ ಸಾಯುತ್ತಿರುವ ಸುದ್ದಿ ಕಾಡಿಗೂ ತಲುಪಿತು. ಕಾಡಿನ ರಾಜ ಸಿಂಹ ಎಲ್ಲಾ ಪ್ರಾಣಿಗಳನ್ನು ಕರೆದು, 'ಈ ರೋಗ ಪ್ರಾಣಿಗಳಿಗೆ ಬರುತ್ತದೋ ಇಲ್ಲವೋ ಸರಿಯಾಗಿ ಮಾಹಿತಿಯಿಲ್ಲ. ಆದರೆ ಮುನ್ನೆಚ್ಚರಿಕೆ ಒಳ್ಳೆಯದು. ನಾವು ಕೂಡ ಅವರಂತೆ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳೋಣ. ರೋಗವನ್ನು ತಡೆಗಟ್ಟುವ ಗಿಡಮೂಲಿಕೆಗಳನ್ನು ಸೇವಿಸೋಣ' ಎಂದು ಸಲಹೆ ನೀಡಿತು. ಕೆಲ ದಿನಗಳ ಬಳಿಕ ಕೊರೊನಾ ಕಾರಣದಿಂದಾಗಿ ಪಕ್ಕದ ಹಳ್ಳಿಯಲ್ಲೂ ಲಾಕ್ಡೌನ್ ಕಾರಣಕ್ಕೆ ಜನ ಹೊರಗಡೆ ಬರುತ್ತಿರಲಿಲ್ಲ. ಇದೇ ಉತ್ತಮ ಅವಕಾಶವೆಂದು ಭಾವಿಸಿದ ಸಿಂಬು ಸಿಂಹ ಬೆಳಗ್ಗೆ ಎರಡೆರಡು ಕುರಿಗಳನ್ನು ಕದ್ದು ತರತೊಡಗಿತು. ಇದರಿಂದ ಬೇಸರಗೊಂಡ ಅಪ್ಪ ಸಿಂಹ, 'ಸಿಂಬು, ಬೇಟೆ ನಮಗೆ ಅನಿವಾರ್ಯ. ಹಾಗೆಂದು ನಾವು ಅನವಶ್ಯಕ ಪ್ರಾಣಿಗಳನ್ನು ಕೊಲ್ಲಬಾರದು. ಈ ಕೊರೊನಾ ಸಮಯದಲ್ಲಿ ನೀನು ಊರೊಳಗೆ ಹೋಗುವುದು ಕೂಡ ಸರಿಯಲ್ಲ' ಎಂದು ಬುದ್ಧಿ ಹೇಳಿತು. ಆದರೆ ಸಿಂಬು ಅಪ್ಪನ ಮಾತನ್ನು ಕೇಳಲೇ ಇಲ್ಲ.

ಅದೊಂದು ದಿನ ಶನಿಯಜ್ಜನಿಗೂ ಕೊರೊನಾ ಬಂದು ಅವನು ತೀರಿ ಹೋದ. ಅವನ ಕುರಿಗಳಲ್ಲೂ ಸೋಂಕು ಕಾಣಿಸಿತ್ತು. ಸಿಂಬುಗೆ ಗೊತ್ತಿರಲಿಲ್ಲ. ಎಂದಿನಂತೆ ಕುರಿಯನ್ನು ಕದ್ದು ತಂದಿತ್ತು. ಅದನ್ನು ಸೇವಿಸಿದ ಅಪ್ಪ ಸಿಂಹನಲ್ಲೂ ಕೊರೊನಾ ಕಾಣಿಸಿಕೊಂಡು ಅದು ಸತ್ತು ಹೋಯಿತು. ಕಾಡಿನ ವೈದ್ಯ ಚಂಪೂ ಕೋತಿ ತಿಳಿಸಿದ ಮೇಲೆ ಸಿಂಬುಗೆ ತನ್ನ ಅಪ್ಪನ ಸಾವಿಗೆ ತಾನೇ ಕಾರಣನಾದೆನಲ್ಲ ಎಂದು ಬೇಸರವಾಗಿ ಅತ್ತಿತು.

ಒಂದಷ್ಟು ದಿನಗಳ ನಂತರ ಹಸಿವು ಹೆಚ್ಚಾದಂತೆ ಏನಾದರಾಗಲಿ ಎಂದು ಮತ್ತೆ ಬೆಳಗ್ಗೆಯ ಹೊತ್ತಿನಲ್ಲಿ ಶನಿಯಜ್ಜನ ಶೆಡ್ಡಿನ ಕಡೆಗೆ ಕುರಿಯನ್ನು ಕದ್ದು ತರಲು ಹೊರಟಿತು. ಶೆಡ್ಡಿನ ಹತ್ತಿರ ಬರುತ್ತಿದ್ದಂತೆ ಸಿಂಬು ಸಿಂಹದ ನಿರಂತರ ಕಳ್ಳತನದ ಬಗೆಗೆ ತಿಳಿದು ಕೋಪಗೊಂಡಿದ್ದ ಊರಿನ ಜನರು ದೊಣ್ಣೆ, ಕಲ್ಲುಗಳಿಂದ ಹೊಡೆದು ಸಿಂಬು ಸಿಂಹವನ್ನು ಓಡಿಸಿಬಿಟ್ಟರು. ಅವರಿಂದ ಹೇಗೋ ತಪ್ಪಿಸಿಕೊಂಡು ಬಂದ ಸಿಂಬುಗೆ ಗಾಯಗಳಾಗಿ ನರಳಿತು. ಕೊನೆಗೊಮ್ಮೆ ಹಸಿವು ತಡೆಯದಾದಾಗ ಕಾಡಿನ ಒಳಗಡೆ ಹುಲ್ಲು ಮೇಯುತ್ತಿದ್ದ ಮರಿಜಿಂಕೆಯೊಂದನ್ನು ಬೇಟೆಯಾಡಲು ಅಟ್ಟಿಸಿಕೊಂಡು ಹೋಯಿತು. ಸ್ವಲ್ಪ ದೂರ ಹೋಗುವಷ್ಟರಲ್ಲೇ ಜಿಂಕೆಯ ದೊಡ್ಡ ಹಿಂಡು ಸಿಂಬುನೆದುರಿಗೆ ಬಂದು ಸುತ್ತುವರಿದು ನಿಂತುಬಿಟ್ಟಿತು. ಸಿಂಬು ಹೆದರಿ ತನ್ನ ಗುಹೆಯ ಬಳಿ ಬಂದಿತು.

ಆ ದಿನ ಸಂಜೆ ಸಿಂಬುವನ್ನು ನೋಡಲು ಅದರ ಸ್ನೇಹಿತ ಪಕ್ಕದ ಕಾಡಿನಿಂದ ಚಾಂಗಿ ಸಿಂಹವು ಬಂದಿತ್ತು. 'ಸಿಂಬು, ದೊಡ್ಡವರು ಹೇಳಿದ ಮಾತನ್ನು ನಾವು ಕೇಳಬೇಕು. ಬದುಕಲು ಬೇಕಾದ ಕೌಶಲ ಕಲಿಯಬೇಕು. ಅತಿಯಾದ ಆತ್ಮವಿಶ್ವಾಸ ಒಳ್ಳೆಯದಲ್ಲ. ಎಲ್ಲವೂ ಸುಲಭವಾಗಿ ಸಿಗುವಂತಿದ್ದರೆ ಪರಿಶ್ರಮಕ್ಕೆ ಬೆಲೆ ಇರುವುದಿಲ್ಲ. ಬದುಕಿನ ಪ್ರತಿಯೊಂದು ಏಳುಬೀಳಿನಲ್ಲಿ ಪಾಠಗಳಿರುತ್ತವೆ. ನಾವು ಅರ್ಥ ಮಾಡಿಕೊಳ್ಳಬೇಕು. ಭವಿಷ್ಯದ ಬಗ್ಗೆ ಆಲೋಚಿಸು. ನಿನಗೆ ನಾನು ಬೇಟೆಯಾಡುವುದನ್ನು ಹೇಳಿಕೊಡುತ್ತೇನೆ. ಕಲಿತುಕೊಳ್ಳುವೆಯಾ? ನಿನಗೆ ಒಳ್ಳೆಯದಾಗುತ್ತದೆ' ಎಂದಿತು. ಸಿಂಬು ಸಿಂಹ ನಗುತ್ತಾ ಆಗಲಿ ಎಂದು ತಲೆಯಾಡಿಸಿತು. ■

ಚಿಂತನಾ, ಭಾವಲಹರಿಯ ಪ್ರಬುದ್ಧ ಪ್ರಬಂಧ

ಪ್ರಸನ್ನ ಕರ್ಪೂರ
feedbacklvk@vijaykarnataka.com



ನಾನು ಓದಿದ ಹೊತ್ತಿಗೆ

ಆಪ್ತ ಬರಹಗಳನ್ನೊಳಗೊಂಡ 15 ಲಲಿತ ಪ್ರಬಂಧಗಳ ಸಂಕಲನ 'ಮಿಗಿಲಿಹುದು ಭುವಿಯಬಣ್ಣ'. ಇಲ್ಲಿ ಲೇಖಕ ಶ್ರೀನಿವಾಸ ವಾಡಪ್ಪಿ ಅವರಿಗೆ ಭಾಷೆ ಒಲಿದಿದೆ. ಅದಕ್ಕೆ ಅದು ಆಪ್ತವಾಗುತ್ತದೆ. ಪ್ರತಿ ಕುಟುಂಬಕ್ಕೆ ಎದುರಾಗುವ ಸುಖ, ದುಃಖ, ಮೌಲ್ಯಗಳು, ಅನಿವಾರ್ಯತೆಗೆ ಸಿಕ್ಕು ತೆಗೆದುಕೊಂಡ ನಿರ್ಣಯಗಳು ಹೀಗೆ ನಾನಾ ವಿಷಯಗಳ ಹರಿವು ಈ ಕೃತಿಯಲ್ಲಿನ ಪ್ರಬಂಧಗಳ ವಿಶೇಷತೆ.

ಇಲ್ಲಿ ಸಮಾಜದ ಪ್ರತಿ ವ್ಯಕ್ತಿ ಅಥವಾ ವಸ್ತುವಿನ ಆಳವಾದ ಪರಿಚಯವಿದೆ. ಸಾಂದರ್ಭಿಕ ಹೋಲಿಕೆ ಕೃತಿಯ ಲವಲವಿಕೆ ಮತ್ತು ಹೆಗ್ಗಳಿಕೆ. ಪತಿ-ಪತ್ನಿ ಮಧ್ಯದ ಆಪ್ತ ಸಂವಾದ, ಯೌವನದ ಪ್ರಣಯದ ದಿನಗಳ ಮಾನಸಿಕ ತುಮುಲ, ದೈಹಿಕ ರೋಮಾಂಚನ, ಸಿಟ್ಟು ಸೆಡವು ಸೇರಿದಂತೆ ಸಾಮಾಜಿಕ ಮತ್ತು ರಾಜಕೀಯ ವಿದ್ಯಮಾನಗಳ ಸೂಕ್ಷ್ಮ ಅವಲೋಕನವೂ ಇದೆ. ವಿಡಂಬನೆ ಇದೆ. ಪರಿಸರ ಕಾಳಜಿಯೂ ಇದೆ. ನದಿಗಳ ಪ್ರಾಮುಖ್ಯತೆ ಮತ್ತು ಪಾವಿತ್ರ್ಯತೆ ಬಗ್ಗೆ ಪ್ರಸ್ತಾಪವಿದೆ. ಕೃತಿಕಾರನ ಜೀವನದ ಅನುಭವಗಳ ಸಾರವೂ ಇದರಲ್ಲಿದೆ. ಗಂಗೆಯ ಬಗೆಗಿನ ಭಕ್ತಿ ಮತ್ತು ಪ್ರೀತಿ ಎರಡೂ ಲೇಖಕನಿಗೆ ಇದ್ದ ಕಾರಣ ಅದರ ಪ್ರಸ್ತಾಪ ಇಲ್ಲಿ ನವಿರಾದ ನಿರೂಪಣೆಯೊಂದಿಗೆ ಉಲ್ಲೇಖವಾಗಿರುವುದು ವಿಶೇಷ. ಪ್ರೇಮ, ಪ್ರಣಯ, ಅಂತಃಕರಣ, ಕರುಣೆ, ವಾತ್ಸಲ್ಯ, ಮಮತೆ, ಕಕ್ಕುಲಾತಿ ಇಡೀ ಬದುಕನ್ನು ವ್ಯಾಪಿಸಿ ಸಂಬಂಧಗಳ ಸೆಳೆತದಲ್ಲಿ ನಮ್ಮನ್ನು ಹಿಡಿದಿಟ್ಟುಬಿಡುವ ಶಕ್ತಿ ಈ ಪ್ರಬಂಧಗಳಲ್ಲಿದೆ. ಯಾವುದೇ ಒಂದು ಪಕ್ಷ, ಸಿದ್ಧಾಂತಕ್ಕೆ ಅಂಟಿಕೊಳ್ಳದೇ ಸಮಕಾಲೀನ ಸಮಸ್ಯೆಗಳ ಬಗ್ಗೆ ಇರುವ ಕಳಕಳಿಗೆ ಪ್ರಬಂಧ ಸ್ವರೂಪ ಕೊಡಲಾಗಿದೆ. ಜನಸಾಮಾನ್ಯರಿಗೂ ಅರ್ಥವಾಗುವ ಲಘುಭಾಷೆ ಹಾಗೂ ಅಲ್ಲಲ್ಲಿ ಧಾರವಾಡ ಸೊಗಡು ಪ್ರಬಂಧದ ಶಕ್ತಿಯನ್ನು ವಿಸ್ತರಿಸಿದೆ.

ಮಿಗಿಲಹುದು ಭುವಿಯಬಣ್ಣ; ಲೇ: ಶ್ರೀನಿವಾಸ ವಾಡಪ್ಪಿ; ಪ್ರ: ಮನೋಹರ ಗ್ರಂಥ ಮಾಲಾ, ಧಾರವಾಡ; ಪುಟ : 122; ಬೆಲೆ : 180ರೂ. ■

ಅವಳ ರಂಗಪ್ರವೇಶ

ನಟಿ, ಲೇಖಕಿ ಜಯಲಕ್ಷ್ಮಿ ಪಾಟೀಲ್ ಅವರ ಆತ್ಮಕಥನ 'ತಿಟ್ಹತ್ತಿ ತಿರುಗಿ' ಕೃತಿ ಇಂದು ಬೆಂಗಳೂರಿನಲ್ಲಿ ಬಿಡುಗಡೆಗೊಳ್ಳುತ್ತಿದೆ. ಈ ಕೃತಿಯ ಆಯ್ದಭಾಗ ಇಲ್ಲಿದೆ.

ನಾಟಕ ಅರ್ಧ ಮುಗಿದಿತ್ತು... ಹತ್ತು ನಿಮಿಷಗಳ ನಂತರ, ನಾಟಕಕ್ಕೆ ಸಂಬಂಧವೇ ಇಲ್ಲದ ಒಂದು ನೃತ್ಯದೊಂದಿಗೆ ಮತ್ತೆ ನಾಟಕ ಮುಂದುವರಿದಿತ್ತು. ಕುಣಿತ ಮುಗಿದು ಇನ್ನೇನು ಮುಂದಿನ ದೃಶ್ಯಕ್ಕೆ ಹೋಗಬೇಕು ಅನ್ನುವಾಗಲೇ ಆಹೇರಿಗಳ ಸುರಿಮಳೆ ನೃತ್ಯಗಾತಿಗೆ. ಪ್ರೇಕ್ಷಕರು ಹಾಗೆ ಭಕ್ಷೀಸು ಕೊಡುವಾಗೆಲ್ಲ ನಾಟಕ ನಿಲ್ಲಿಸುವುದು ಅನಿವಾರ್ಯ. ಹಳ್ಳಿಗಳಲ್ಲಿ ಹಾಗೇ. ಅಪರೂಪಕ್ಕೆ ನಾಟಕದಲ್ಲಿ ಅಭಿನಯಿಸುವ ತಮ್ಮ ತಮ್ಮ ಬಂಧು, ಸ್ನೇಹಿತರಿಗೆ, ಮೆಚ್ಚಿನ ನಟ ನಟಿಯರಿಗೆ, ಪ್ರೇಕ್ಷಕರು ಒಂದು ರೂಪಾಯಿಂದ ಮೊದಲುಗೊಂಡು ನೂರಾ ಒಂದು ರೂಪಾಯಿಗಳವರೆಗೆ, ಬಟ್ಟೆ, ಸಾಮಾನು, ಬಂಗಾರ ಆಹೇರಿ ಮಾಡುವ ಮೂಲಕ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ.

ಹೀಗೇ 1, 2, 5, 11, 25 ರೂಪಾಯಿಗಳು, ತಾಟು ಪ್ಲೇಟುಗಳು ಒಟ್ಟಾಗಿ ಕಲರವ ಹೆಚ್ಚಾಗುತ್ತಿದ್ದಂತೆಯೇ ಸೈಡ್ ವಿಂಗ್‌ನಿಂದ, ಗುಂಗುರು ಕೂದಲಿನ ಚೆಂದದ, ಎತ್ತರವಾಗಿ ತೆಳ್ಳಗಿದ್ದ ನಾಯಕ ನಟ ಶಶಾಂಕ್ ಪಾತ್ರಧಾರಿ ಸ್ಟೇಜ್ ಮೇಲೆ ಬಂದು, 'ಪ್ರೇಕ್ಷಕ ಬಂಧುಗಳಲ್ಲಿ ವಿನಂತಿ. ದಯಮಾಡಿ ಆಯೇರಿ ಮಾಡೋರೆಲ್ಲ ಹಿಂಗ ಗದ್ಲಾ ಮಾಡ್ದನ ಕುಂತಲ್ಲೇ ಕುಂದರ್ರಿ. ನಮ್ಮೋರೊಬ್ರು ಪೆನ್ನ ಹಾಳಿ ಹಿಡ್ಕೊಂಡು ನಿಮ್ಮ ಹಂತ್ಯಾಕ ಬರ್ತಾರ. ಅವ್ರ ಕೈಯಾಗ ನಿಮ್ಮ ಆಯೇರಿ ಕೊಟ್ಟು ಹೆಸ್ರು ಬರಸ್ರಿ. ನಿಮ್ಮೆಲ್ಲಾರ ಹೆಸ್ರನ ಸ್ಟೇಜ್ ಮ್ಯಾಲೆ ಹೇಳ್ತೀವಿ. ಗದ್ಲಾ ಮಾಡಬಾರದಾಗಿ ವಿನಂತಿ' ಎಂದು ವಿನಂತಿಸಿದ ಮೇಲೆ ಸಭೆಯಲ್ಲಿನ ದನಿಗಳು ಅಡಗಿದವು. ಹೀಗೆ ಬರಕೊಂಡು ಬಂದ ಹೆಸರುಗಳನ್ನೆಲ್ಲ ಓದುವ ಕೆಲಸ 9 ವರ್ಷದ ಹುಡುಗಿಗೆ ವಹಿಸಲಾಗಿತ್ತು.

ಸ್ಟೇಜ್ ಮೇಲೆ ನೆಟ್ಟಗೆ ಆಭಾರಿಯಾಗಿದ್ದೇನೆ ಅನ್ನಲು ಪರದಾಡುತ್ತಿದ್ದ ಆ 9 ವರ್ಷದ ಹುಡುಗಿಗೆ, ಅಷ್ಟೊಂದು ಜನರ ಹೆಸರು ನೆನಪಿಟ್ಟುಕೊಂಡು ಆಭಾರಿಯಾಗಿದ್ದೇನೆ ಅನ್ನಬೇಕಲ್ಲಾ ಅನ್ನುವ ಚಿಂತೆ! ಲಿಸ್ಟ್ ಹಿಡಿದುಕೊಂಡು ಬಂದ ವ್ಯಕ್ತಿ ಹುಡುಗಿಯೆದುರು ಹಾಳೆಯನ್ನು ಹಿಡಿದಾಗ, ಆ ಸೊಟ್ಟಾಪಟ್ಟ ಅಕ್ಷರಗಳನ್ನು ನೋಡಿ ಇನ್ನೂ ದಿಗಿಲು! ಕಣ್ಣ್‌ಕಣ್ಣ್ ಬಿಡುತ್ತಾ ಓದಲು ತಿಣಕಾಡುತ್ತ ಹಾಗೂ ಹೀಗೂ ಮೊದಲ ಹೆಸರು ಓದುವಷ್ಟರಲ್ಲಿಯೇ, ಇನ್ನೂ ಅರ್ಧದಷ್ಟು ನಾಟಕ ಬಾಕಿ ಇದ್ದು ಈ ಹುಡುಗಿಯಿಂದಾಗಿ ತಡವಾಗುತ್ತಿದೆಯಲ್ಲ ಅನಿಸಿರಬೇಕು ನಾಯಕ ನಟನಿಗೆ. ರಂಗದ ಮೇಲೆ ಆ ಹುಡುಗಿಯನ್ನು ಏನೂ ಅನ್ನುವಂತಿಲ್ಲ ಬೇರೆ! ಸಹನೆ ಧರಿಸಿ, 'ಅವ್ವಿ, ನಾ ಹೆಸರು ಓದ್ಕೋಂತ ಹೋಕ್ಕಿನಿ, ನೀ ಕೈ ಮುಗದು ಆಭಾರಿಯಾಗಿದ್ದೇನೆ ಅಂಕೋತ ಹೋಗಾ' ಎಂದವನೇ ಪಟ್ಟಿಯಲ್ಲಿರುವ ಹೆಸರುಗಳನ್ನು ಓದತೊಡಗಿದ.

'ವೀರಭದ್ರಸ್ವಾಮಿ ಹಿರೇಮಠ, ಸಾಕೀನ್'

'ಆ ಆ ಆಭಾರಿಯಾಗಿದ್ದೇನೆ'

'ಹ'ನ'ಮ'ಂ'ತ'ರಾ ಯ ಬಿರಾದಾರ್, ಸಾಕೀನ್?'

'ಆ ಆಭಾರಿಯಾಗಿದ್ದೇನೆ'

ಹುಡುಗಿಗೆ ಆಭಾರಿಯಾಗಿದ್ದೇನೆ ಎನ್ನುವ ಹೊಸ ಪದ ಅಂದೂ ಅಂದೂ ಬಾಯಿಪಾಠವಾಗಿ, ಇನ್ನೇನು ತನಗೆ ಸುಲಲಿತವಾಗಿ ಅನ್ನಲು ಬಂತು ಎಂಬ ಖುಷಿಯಲ್ಲಿ ಹುರುಪಿನಿಂದ ಮುಂದೆ ಬರುವ ಹೆಸರಿಗೆ ಕಿವಿಯಾಗಿ ಉತ್ಸಾಹದಿಂದ ನಾಯಕ ಶಶಾಂಕನತ್ತ ಕಣ್ಣುಗಳನ್ನ ಹೊರಳಿಸಿದರೆ, 'ಬಂಗಾರದ ಮನುಷ್ಯ ಚಿತ್ರದ 'ಆಗದು ಎಂದು ಕೈಲಾಗದು ಎಂದು..' ಎನ್ನುವ ಹಾಡಿಗೆ ನೃತ್ಯ ಮಾಡಿದ, ನಮ್ಮೆಲ್ಲರ ಹೆಮ್ಮೆಯ ಸರಕಾರಿ ವೈದ್ಯರಾದ ಡಾ. ಆರ್.ಎಲ್ ಅವರಾದಿ ಸರ್ ಅವರ ಹಿರಿಯ ಸುಪುತ್ರಿಗೆ ನೀವೆಲ್ಲರು ನಿಮ್ಮ ಅಮೋಘ ಚಪ್ಪಾಳೆ ಮತ್ತು ಆಯೇರಿ ನೀಡಿ ಪ್ರೋತ್ಸಾಹಿಸಿದ್ದಕ್ಕಾಗಿ ಅನಂತ ಧನ್ಯವಾದಗಳು. ಇನ್ನೀಗ ಎರಡು ನಿಮಿಷಗಳಲ್ಲಿ ನಾಟಕ ಆರಂಭವಾಗಲಿದೆ, ದಯವಿಟ್ಟು ಎಲ್ಲರೂ ಶಾಂತರಾಗಿ ಕುಂದ್ರಬೇಕೆಂದು ವಿನಂತಿ' ಎಂದುಬಿಟ್ಟ.

ಹೀಗೆ ಶಾಲೆಯ ಗ್ಯಾದರಿಂಗ್‌ನ ಹೊರತಾಗಿ, ದೊಡ್ಡ ಸಮೂಹದೆದುರು ಇದು ನನ್ನ ಮೊದಲ ರಂಗಪ್ರವೇಶವಾಗಿತ್ತು! ಶಾಲೆಯಲ್ಲಿ ಗ್ಯಾದರಿಂಗ್‌ನ ವೇಳೆ ಮಾಡಿದ್ದ ಸಮೂಹ ನೃತ್ಯವನ್ನೇ ಇಲ್ಲಿ ಒಬ್ಬಳೇ ಮಾಡಿದ್ದೆ ಯಾವುದೇ ಅಳುಕಿಲ್ಲದೆ. ಆ ನಂತರ ನಾನು ಬಣ್ಣ ಹಚ್ಚಿದ್ದು 22-23 ವರ್ಷಗಳ ನಂತರ, ನಟಿಯಾಗಿ...



ಹೊಸ ಓದು

ತಿಟ್ಹತ್ತಿ ತಿರುಗಿ; ಲೇ: ಜಯಲಕ್ಷ್ಮಿ ಪಾಟೀಲ್; ಪ್ರ: ಅಂಕಿತ ಪುಸ್ತಕ, ಬೆಂಗಳೂರು.

ಅಪ್ಪ ಕೊಟ್ಟ ಉಡುಗೊರೆ
ನಂದನ ಪ್ಯಾಲೇಸ್

ಬೆಂಗಳೂರಿನಲ್ಲಿ ಆಂಧ್ರ ಶೈಲಿಯ ಊಟಕ್ಕೆ ಹೆಚ್ಚು ಜನಪ್ರಿಯವಾದ ರೆಸ್ಟೋರೆಂಟ್ ಎಂದರೆ ನಂದನ ಪ್ಯಾಲೇಸ್. ಹೋಟೆಲ್ ಊಟಕ್ಕೆ ಹೋಗುವವರಿಗೆ 'ನಂದನ ಪ್ಯಾಲೇಸ್ ಚೈನ್ ರೆಸ್ಟೋರೆಂಟ್'ಗಳು ಚಿರಪರಿಚಿತ. ಬಾಳೆಎಲೆಯಲ್ಲಿ ನೈಜ ಆಂಧ್ರಶೈಲಿಯ ಸ್ವಾದಿಷ್ಟ ಮತ್ತು ರುಚಿಕರವಾದ ಸಸ್ಯಾಹಾರ ಮತ್ತು ಮಾಂಸಾಹಾರ ಭೋಜನಪ್ರಿಯರನ್ನು ಮತ್ತೆ ಮತ್ತೆ ತನ್ನತ್ತ ಸೆಳೆಯುತ್ತವೆ. ಕುಟುಂಬ ಸದಸ್ಯರೆಲ್ಲ ಕುಳಿತು ಊಟವನ್ನು ಆಸ್ವಾದಿಸಲು ವಿಶಾಲ, ಆರಾಮದಾಯಕ ಸ್ಥಳಾವಕಾಶ ಕಲ್ಪಿಸುವ ಕಾರಣ 'ನಂದನ ಪ್ಯಾಲೇಸ್' ಭೋಜನ ಪ್ರಿಯರಿಗೆ ಅಚ್ಚುಮೆಚ್ಚು.

ಆತಿಥ್ಯ ಕ್ಷೇತ್ರದ ಹೆಗ್ಗುರುತಾಗಿ ನಿಲ್ಲುವ 'ನಂದನ' ಹೋಟೆಲ್ ಉದ್ಯಮದಲ್ಲಿನ ಎಲ್ಲ ಅತ್ಯುನ್ನತ ಪರಿಣತಿಯನ್ನೂ ತನ್ನದಾಗಿಸಿಕೊಂಡಿದೆ. ಆಹಾರ, ಸಂಸ್ಕೃತಿ, ಪರಿಸರ ಮತ್ತು ರುಚಿಯ ಸಾಂಪ್ರದಾಯಿಕತೆಯನ್ನು ಮತ್ತಷ್ಟು ವೃದ್ಧಿಸಲು ಶ್ರಮಿಸುತ್ತಿರುವ ಹೋಟೆಲ್ ಇದು. ಬೆಂಗಳೂರಿನ ಪ್ರಸಿದ್ದ ಆಂಧ್ರ ರೆಸ್ಟೋರೆಂಟ್, ರುಚಿಕರವಾದ ಹಾಗೂ ಆರೋಗ್ಯಕರವಾದ ಆಹಾರವನ್ನು ನೀಡುವುದರ ಮೇಲೆ ಗಮನಹರಿಸುವ ಈ ಹೋಟೆಲ್ ಅತ್ಯಂತ ಶ್ರೀಮಂತ ರುಚಿಯನ್ನು ಉಣಬಡಿಸಲು ಅತ್ಯುತ್ತಮ ಪದಾರ್ಥಗಳನ್ನು ಬಳಸುತ್ತದೆ. ಅತ್ಯದ್ಭುತವಾದ ಬ್ಯಾಂಕ್ವೆಟ್ ಹಾಲ್‌ಗಳು, ರುಚಿಕರವಾದ ಸಿಹಿತಿಂಡಿಗಳು, ಆರಾಮದಾಯಕ ವಸತಿ ಸೌಕರ್ಯಗಳು ಮತ್ತು ಇನ್ನೂ ಹೆಚ್ಚಿನದನ್ನು ಒದಗಿಸುವ ತಾಣವೂ ಇದು ಹೌದು.

ನಂದನ ಬ್ರಾಂಡ್ ಬೆಂಗಳೂರು ಮತ್ತು ಚೆನ್ನೈನಾದ್ಯಂತ ಹಲವಾರು ಪೂರ್ಣ ಪ್ರಮಾಣದ ಸೇವಾ ಶಾಖೆಗಳನ್ನು ಹೊಂದಿದೆ. ಮೂವತ್ತೊಂದು ಶಾಖೆಗಳೊಂದಿಗೆ, ನಂದನ ಸಮೂಹವು ಭಾರತದಾದ್ಯಂತ ಇತರ ಪ್ರಮುಖ ನಗರಗಳಿಗೂ ತನ್ನ ಹೆಜ್ಜೆಯ ಗುರುತನ್ನು ವಿಸ್ತರಿಸುತ್ತಿದೆ. ಫೈನ್-ಡೈನ್‌ನಿಂದ ಹಿಡಿದು ಒಳಾಂಗಣ ಪಾರ್ಟಿಗಳವರೆಗೆ ವೈವಿಧ್ಯಮಯ ಸೇವೆಗಳನ್ನು ನೀಡುವ ಮೂಲಕ ನಂದನ ಪ್ಯಾಲೇಸ್‌ನ ಬೆಳವಣಿಗೆ ಹೋಟೆಲ್ ಉದ್ಯಮದಲ್ಲಿ ನಿರಂತರವಾಗಿ ಕಾಣಿಸುತ್ತಿದೆ.

ಇಂಥ ಸಬಲ ಬ್ರಾಂಡ್ ಒಂದನ್ನು ಕಟ್ಟಿ ಬೆಳೆಸಿದವರು ಶ್ರೀ ಡಾ.ಆರ್. ರವಿಚಂದರ್. ಮೊದಲು ಮಿನರ್ವ ವೃತ್ತದಲ್ಲಿ ಪಾಲುದಾರರ ಜೊತೆ 1989ರಲ್ಲಿ ಹೋಟೆಲ್ ಆರಂಭಿಸುವ ಸಾಹಸವನ್ನು ಅವರು ಕೈಗೊಂಡರು. ಅದು ಅನ್ಯ ಕಾರಣಗಳಿಂದ ಪ್ರತ್ಯೇಕಗೊಂಡಾಗ ನಂದನ ಬ್ರಾಂಡ್‌ನೊಂದಿಗೆ ಪೂರ್ಣ ಮಾಲೀಕತ್ವದ ಹೋಟೆಲ್ 'ನಂದನ ಪ್ಯಾಲೇಸ್' ಅನ್ನು 1997ರಲ್ಲಿ ಆರಂಭಿಸಿದರು. ಈ ಹೆಸರಿನಲ್ಲಿ ಆತಿಥ್ಯ ಕ್ಷೇತ್ರಕ್ಕೆ ಹೆಜ್ಜೆ ಇರಿಸಿದ ಬಳಿಕ ಅವರು ಎಂದೂ ತಿರುಗಿ ನೋಡಲಿಲ್ಲ. ಈಗ ಈ ಸಂಸ್ಥೆಯನ್ನು ಅವರ ಪುತ್ರಿಯರಾದ ಶ್ವೇತಾ ರವಿ, ರಮ್ಯಾ ರವಿ ಹಾಗು ರವೀನಾ ರವಿ ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

ಕಳೆದ ಒಂದು ದಶಕದಿಂದ ಬೆಂಗಳೂರಿನಲ್ಲಿ ಅತ್ಯಂತ ದೊಡ್ಡ ರೆಸ್ಟೋರೆಂಟ್ ಬ್ರಾಂಡ್ ಆಗಿದೆ ನಂದನ ಪ್ಯಾಲೇಸ್. ಪ್ರಸ್ತುತ ಪೇಟೆಂಟ್ ಪಡೆದಿರುವ ಎಲ್ಲಾ 25 ಡಿಶ್‌ಗಳೂ ನಂದನದಲ್ಲಿ ಮಾತ್ರ ಸಿಗುತ್ತವೆ. ಕ್ಯಾರೆಟ್ 65, ಚಿಕನ್ ಕ್ಷತ್ರಿಯ, ಬ್ಯಾಂಬೂ ಚಿಕನ್ ಸೇರಿದಂತೆ ವಿಭಿನ್ನ ಬಗೆಯ ಖಾದ್ಯಗಳು ಹೆಚ್ಚು ಜನಪ್ರಿಯ ಆಯ್ಕೆಯಾಗಿವೆ. 'ನಂದನದ ವಿಶೇಷ ಎಂದರೆ 6 ವರ್ಷ ವಯಸ್ಸಿನಿಂದ ಹಿಡಿದು, 60 ವರ್ಷದ ವಯಸ್ಸಿನವರು ಕೂಡ ಬಂದು ರುಚಿಯಾದ ಖಾದ್ಯಗಳನ್ನು ಸವಿಯಬಹುದು. ಖಾದ್ಯಗಳಿಗೆ ಯಾವುದೇ ರೀತಿಯ ಕೃತಕ ಬಣ್ಣ ಮತ್ತು ಟೇಸ್ಟಿಂಗ್ ಪೌಡರ್ ಯಾವುದನ್ನೂ ಬಳಸುವುದಿಲ್ಲ. ಈ ಕಾರಣವೇ ನಾವು ಮಾರುಕಟ್ಟೆಯಲ್ಲಿ ದೀರ್ಘಕಾಲದಿಂದ ಉಳಿಯಲು ಸಾಧ್ಯವಾಗಿರುವುದು. ಚೆನ್ನೈನಲ್ಲಿ ನಂದನ ಪ್ಯಾಲೇಸ್ ಅನುಷ್ಠಾನಕ್ಕೆ ಬೆಂಗಳೂರಿನಲ್ಲಿನ ಯಶಸ್ಸು ಮತ್ತು ಜನಪ್ರಿಯತೆಯೇ ಕಾರಣ. ಈ ಯಶಸ್ಸು ಮತ್ತು ಜನಪ್ರಿಯತೆಯನ್ನು ಭಾರತದ ಪ್ರಮುಖ ನಗರಗಳಿಗೂ ವಿಸ್ತರಿಸಬೇಕೆಂಬುದು ಈಗಿನ ಆಶಯ' ಎನ್ನುತ್ತಾರೆ ನಂದನ ಪ್ಯಾಲೇಸ್ ನಿರ್ದೇಶಕಿಯಾದ ಶ್ವೇತಾ ರವಿ.

ತಂದೆ ಡಾ.ಆರ್. ರವಿಚಂದರ್ ಅವರೊಂದಿಗೆ ಶ್ವೇತಾ ರವಿ (ಎಡಭಾಗದಲ್ಲಿ) ಮತ್ತು ರಮ್ಯಾ ರವಿ.

nandhana PALACE

Legendary Andhra Restaurant Chain

ಸ್ಫೂರ್ತಿಯ ಕಥೆ

ಡಾ. ಆರ್.ರವಿಚಂದರ್ ಅವರು 'ಮನತಿಲ್ ಉರುತಿ ವೇಂಡುಂ' (Manathil Uruthi Vendum) ಎಂಬ ಚಲನಚಿತ್ರವನ್ನು ನೋಡಿದಾಗ, ಅದರಲ್ಲಿನ ಮುಖ್ಯ ನಾಯಕಿ ಸುಹಾಸಿನಿ ಅವರ ಪಾತ್ರವು ಅವರಿಗೆ ಅತಿ ದೊಡ್ಡ ಪ್ರೇರಣೆ ನೀಡಿತು. ತಮ್ಮ ಹೆಣ್ಣುಮಕ್ಕಳಿಗೆ ಗೌರವ ಸೂಚಕವಾಗಿ ಈ ಬ್ರಾಂಡ್‌ಗೆ 'ನಂದನ' ಎಂದು ಹೆಸರಿಟ್ಟರು. ಸಂಸ್ಕೃತದಲ್ಲಿ ನಂದನ ಎಂದರೆ 'ಮಗಳು' ಎಂಬ ಅರ್ಥವಿದೆ. ಈ ಹೆಸರಿನಡಿಯಲ್ಲಿ ಪ್ರತಿಯೊಬ್ಬ ಆಹಾರ ಪ್ರೇಮಿಗೆ ಅಪ್ಪಟ ಆಂಧ್ರ ಶೈಲಿಯ ಅದ್ಭುತ ಭೋಜನದ ಅನುಭವವನ್ನು ನೀಡುವ ದೃಷ್ಟಿಕೋನದೊಂದಿಗೆ ಇದನ್ನು ಮುನ್ನಡೆಸಿದರು. ನಂದನ ಪ್ಯಾಲೇಸ್ ಇಂದು ಎಲ್ಲರ ನೆಚ್ಚಿನ ತಾಣವಾಗಿದೆ. ಏಕೆಂದರೆ ಇಲ್ಲಿನ ಆಹಾರವು ಕೇವಲ ರುಚಿಕರವಾಗಿರದೆ, ಆಂಧ್ರದ ಮೂಲ ನೆಲದಿಂದಲೇ ಆಯ್ದುಕೊಂಡ ನೈಸರ್ಗಿಕ ಪದಾರ್ಥಗಳ ಪರಿಪೂರ್ಣ ಮಿಶ್ರಣದಿಂದ ಮಾಡಲ್ಪಟ್ಟ ಸಾಂಪ್ರದಾಯಿಕ ಶೈಲಿಯದ್ದಾಗಿದೆ. ಅತ್ಯುತ್ತಮ ಸೇವೆಗಾಗಿ ನಿರಂತರವಾಗಿ ಶ್ರಮಿಸುತ್ತಾ ಬಂದಿರುವ ಈ ಬ್ರಾಂಡ್, ವರ್ಷಗಳ ಅವಧಿಯಲ್ಲಿ ರುಚಿ, ಗುಣಮಟ್ಟ ಮತ್ತು ಆತಿಥ್ಯದ ಮೂಲಕ ತನ್ನದೇ ಆದ ಸಾಮ್ರಾಜ್ಯವನ್ನು ನಿರ್ಮಿಸಿದೆ.

ಸಮಾಜ ಸೇವೆ

ಸಮಾಜ ಸೇವೆಯಲ್ಲೂ ಡಾ.ಆರ್.ರವಿಚಂದರ್ ಹಾಗೂ ಅವರ ಪುತ್ರಿಯರು ಸಕ್ರಿಯವಾಗಿ ತೊಡಗಿದ್ದಾರೆ. 2004ರಲ್ಲಿ ಸುನಾಮಿ ವೇಳೆ ಶ್ರೀಲಂಕಾಕ್ಕೆ ನೆರವಾದ ಹಿನ್ನೆಲೆಯಲ್ಲಿ ಅಲ್ಲಿನ ಕೊಲಂಬೊ ಮುಕ್ತ ವಿಶ್ವವಿದ್ಯಾಲಯ ಆರ್. ರವಿಚಂದರ್ ಅವರಿಗೆ 2006ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಇದಲ್ಲದೆ ಡಾ.ಆರ್.ರವಿಚಂದರ್ ತಮ್ಮ ಸಂಸ್ಥೆಯ ವತಿಯಿಂದ ಬೆಂಗಳೂರಿನ ಈಜಿಪುರದಲ್ಲಿ ಸರ್ಕಾರಿ ಶಾಲೆಯ ಜೀರ್ಣೋದ್ಧಾರಕ್ಕೆ ಕೈಜೋಡಿಸಿದ್ದಾರೆ. ಇಸ್ಕಾನ್ ದೇವಾಲಯದ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿದ್ದಾರೆ. ಪ್ರತಿವರ್ಷ ಸರಕಾರಿ ಶಾಲೆ ವಿದ್ಯಾರ್ಥಿಗಳಿಗೆ ಬ್ಯಾಗ್, ಪುಸ್ತಕಗಳನ್ನು ವಿತರಿಸಲಾಗುತ್ತದೆ. ಕ್ಯಾನ್ಸರ್ ಮತ್ತು ವಿಕಲಚೇತನರು ಸೇರಿದಂತೆ ಹಲವರಿಗೆ ನೆರವಾಗಿದ್ದಾರೆ. ಈ ಸಮಾಜಮುಖಿ ಕಾರ್ಯಗಳಿಗಾಗಿ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಉದ್ಯಮರತ್ನ ಅವಾರ್ಡ್, ಕೇಂದ್ರ ಮತ್ತು ವಿವಿಧ ರಾಜ್ಯಗಳಿಂದ ಪ್ರಶಸ್ತಿಗಳು ಡಾ.ಆರ್. ರವಿಚಂದರ್ ಅವರನ್ನು ಅರಸಿ ಬಂದಿವೆ.

ಭಾರತದ ಅತಿ ದೊಡ್ಡ ಆಂಧ್ರ ರೆಸ್ಟೋರೆಂಟ್ ಚೈನ್

ಆತಿಥ್ಯಕ್ಕೆ ಮತ್ತೊಂದು ಹೆಸರಾಗಿ ನಿಂತಿರುವ ನಂದನ ಪ್ಯಾಲೇಸ್, ಆತಿಥ್ಯ ರಂಗದ ಪರಿಣತರಾದ ಡಾ. ಆರ್.ರವಿಚಂದರ್ ಅವರ ಕಲ್ಪನೆಯ ಕೂಸಾಗಿದೆ. ಇದು ಬೆಂಗಳೂರು ಮತ್ತು ಚೆನ್ನೈನಾದ್ಯಂತ ಅಪ್ಪಟ ಆಂಧ್ರ ಶೈಲಿಯ ಆಹಾರದ ರುಚಿಯನ್ನು ಪಸರಿಸುವಲ್ಲಿ ಯಶಸ್ವಿಯಾಗಿದೆ. ಇಂದು ನಂದನ ಪ್ಯಾಲೇಸ್, ಈ ಎರಡು ಪ್ರಸಿದ್ಧ ನಗರಗಳಲ್ಲಿ ತನ್ನ ಶಾಖೆಗಳನ್ನು ಹೊಂದುವ ಮೂಲಕ ಭಾರತದ ಅತ್ಯಂತ ದೊಡ್ಡ ಆಂಧ್ರ ರೆಸ್ಟೋರೆಂಟ್ ಚೈನ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತಂತ್ರಜ್ಞಾನ ಮತ್ತು ಜೀವನಶೈಲಿಯಲ್ಲಿ ಆಧುನಿಕತೆ ಎಷ್ಟೇ ಮುಂದುವರಿದಿದ್ದರೂ, ನಂದನ ಪ್ಯಾಲೇಸ್‌ನ ಬಾಣಸಿಗರು ಅದನ್ನು ಸಾಂಪ್ರದಾಯಿಕ ಅಡುಗೆ ಪದ್ಧತಿ, ಪಾಕವಿಧಾನಗಳು ಹಾಗೂ ಅಪ್ಪಟ ರುಚಿಯೊಂದಿಗೆ ಅತ್ಯದ್ಭುತವಾಗಿ ಸಮ್ಮಿಲನಗೊಳಿಸಿದ್ದಾರೆ. ಇಲ್ಲಿನ ಪ್ರಸಿದ್ಧ ಆಂಧ್ರ ಖಾದ್ಯಗಳಾದ ಚಿಕನ್ ಕ್ಷತ್ರಿಯ, ಚಿಕನ್ ಶೋಲೆ ಕಬಾಬ್, ಬ್ಯಾಂಬೂ ಚಿಕನ್, ಕ್ಯಾರೆಟ್ 65, ಹೈದರಾಬಾದ್ ಪನೀರ್ ಬಿರಿಯಾನಿ, ನೆಲ್ಲೂರ್ ಚಿಕನ್ ಬಿರಿಯಾನಿ, ಸುಪ್ರೀಮ್ ಚಿಕನ್ ಬೋನ್ಸ್ ಬಿರಿಯಾನಿ ಮುಂತಾದ ವಿಶೇಷ ಖಾದ್ಯಗಳನ್ನು ರೂಪಿಸಿ, ಪೇಟೆಂಟ್ ಪಡೆದು ಗ್ರಾಹಕರಿಗೆ ಉಣಬಡಿಸುವಲ್ಲಿ ನಂದನ ಪ್ಯಾಲೇಸ್ ಪರಿಣತಿ ಪಡೆದಿದೆ.

> ನಮಗೆ ನಮ್ಮ ತಂದೆಯೇ ಸ್ಫೂರ್ತಿ. ಪ್ರತಿಯೊಬ್ಬ ಹೆಣ್ಣುಮಕ್ಕಳಿಗೂ ತಂದೆಯೇ ನಿಜವಾದ ಹೀರೊ ಆಗಿರುತ್ತಾರೆ. ನಮ್ಮ ಪಾಲಿಗೂ ನಮ್ಮ ತಂದೆ ನಮ್ಮ ಜೀವನದ ದೊಡ್ಡ ನಾಯಕ. ಅವರು ಕಟ್ಟಿ ಬೆಳೆಸಿ ನಮಗೆ ಉಡುಗೊರೆಯಾಗಿ ನೀಡಿದ ಸಂಸ್ಥೆಯನ್ನು ಮತ್ತಷ್ಟು ಅಭಿವೃದ್ಧಿ ಮಾಡಿ ದೇಶದಾದ್ಯಂತ ವಿಸ್ತರಿಸುವ ಮೂಲಕ ಅವರಿಗೆ ಮರು ಉಡುಗೊರೆ ನೀಡಬೇಕೆಂಬ ಮಹದಾಸೆ ಇದೆ. ಈ ನಿಟ್ಟಿನಲ್ಲಿ ಸದ್ಯ ಬೆಂಗಳೂರು ಮತ್ತು ಚೆನ್ನೈನಲ್ಲಿ ಹೆಚ್ಚು ಜನಪ್ರಿಯವಾಗಿರುವ ನಂದನ ಪ್ಯಾಲೇಸ್ ಅನ್ನು ಮುಂಬಯಿ ಮತ್ತು ದಿಲ್ಲಿ ಮತ್ತು ಭಾರತದ ಪ್ರಮುಖ ನಗರಗಳಲ್ಲಿ ವಿಸ್ತರಿಸಬೇಕೆಂಬ ಮಹತ್ವದ ಯೋಜನೆ ಕೈಗೊಂಡಿದ್ದೇವೆ. ಈ ವಿಷಯವಾಗಿ ಕೆಲಸಗಳು ಸಿದ್ಧವಾಗುತ್ತಿವೆ.
>
> **ಶ್ವೇತಾ ರವಿ** | ನಿರ್ದೇಶಕಿ, ನಂದನ ಪ್ಯಾಲೇಸ್

ಅಪ್ಪನೇ ಬೆನ್ನೆಲುಬು

ಜೂ.21 ವಿಶ್ವ ಅಪ್ಪಂದಿರ ದಿನ. ಈ ಸಂದರ್ಭದಲ್ಲಿ ಹೋಟೆಲ್ ಸಮೂಹವನ್ನು ತಮ್ಮ ಕೈಗಿಟ್ಟು, ತಮಗೆ ಗೆಲುವಿನ ರುಚಿ ಸಿಗುವಂತೆ ನೋಡಿಕೊಂಡ ಅಪ್ಪನ ಕುರಿತು ಪುತ್ರಿಯರಾದ ಶ್ವೇತಾ, ರಮ್ಯಾ ಹಾಗೂ ರವೀನಾ ಬಹಳ ಹೆಮ್ಮೆಪಡುತ್ತಾರೆ. ಈ ಯುವ ಉದ್ಯಮಿಗಳು ಪ್ರತಿಷ್ಠಿತ ವಿವಿಗಳಲ್ಲಿ ವ್ಯಾಸಂಗ ಮಾಡಿದ್ದಾರೆ. ಶ್ವೇತಾ ಹೋಟೆಲ್‌ಗಳ ಆಡಳಿತ ಮತ್ತು ಹಣಕಾಸು ನೋಡಿಕೊಂಡರೆ, ರಮ್ಯಾ ಮಾರ್ಕೆಟಿಂಗ್ ಮತ್ತು ಕಾರ್ಯಾಚರಣೆಯನ್ನು ನೋಡಿಕೊಳ್ಳುತ್ತಾರೆ. ಹಾಗೇ ಕಿರಿಯ ಪುತ್ರಿ ರವೀನಾ ಅವರು ಹೋಟೆಲ್‌ನ ಆಹಾರ ಸಂರಕ್ಷಣೆ, ಆಹಾರ ಗುಣಮಟ್ಟವನ್ನು ನೋಡಿಕೊಳ್ಳುತ್ತಿದ್ದಾರೆ. ವ್ಯಾಸಂಗ ಮುಗಿಸಿದ ಬಳಿಕ ಮೂವರು ಮಕ್ಕಳೂ ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಸೇರ್ಪಡೆ ಬಳಿಕ ನಂದನ ಸಂಸ್ಥೆಯ ಎಲ್ಲಾ ಕಾರ್ಮಿಕ ವರ್ಗಗಳ ಜೊತೆ ಕೂಡಿ ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಇದರಿಂದ ವರ್ಷದಿಂದ ವರ್ಷಕ್ಕೆ ಅವರ ಹೋಟೆಲ್ ಉದ್ಯಮ ಶೇ.15ರಿಂದ ಶೇ.20ರಷ್ಟು ಬೆಳವಣಿಗೆ ಸಾಧಿಸುತ್ತಿದೆ. ಹೋಟೆಲ್ ಉದ್ಯಮವನ್ನು ಮತ್ತಷ್ಟು ವಿಸ್ತರಣೆ ಮಾಡಿ ಹೊಸ ಮಜಲುಗಳಿಗೆ ದಾಟಿಸುವಲ್ಲಿ ಪ್ರಮುಖರಾಗುತ್ತಿದ್ದಾರೆ.

ಅಮ್ಮನ ಸಾಥ್

ಆಂಧ್ರ ಶೈಲಿಯ ಆಹಾರವನ್ನು ಹೋಟೆಲ್‌ನಲ್ಲಿ ಪರಿಚಯಿಸುವ ಮೊದಲು ಶ್ವೇತಾ ಅವರ ತಾಯಿ ಶ್ರೀಮತಿ ಸರಳ ರವಿಚಂದರ್ ಅವರು ಪ್ರಯೋಗ ಮಾಡುತ್ತಾರೆ. ಖಾದ್ಯದ ರುಚಿಯನ್ನು ಮತ್ತು ಮಸಾಲೆ ಪದಾರ್ಥಗಳ ಗುಣಮಟ್ಟವನ್ನು ಪರೀಕ್ಷಿಸಿ ಅಂತಿಮಗೊಳಿಸುವುದು ಅವರೇ. ಅವರ ಒಪ್ಪಿಗೆಯ ಮುದ್ರೆ ಸಿಕ್ಕ ಬಳಿಕ ಹೋಟೆಲ್‌ನಲ್ಲಿ ಪರಿಚಯಿಸುತ್ತೇವೆ. ಆಹಾರಗಳನ್ನು ಸಾಕಷ್ಟು ಬಾರಿ ತಯಾರಿಸಿ, ಟೇಸ್ಟ್ ಮಾಡಿ ಅಂತಿಮಗೊಳಿಸಲಾಗುತ್ತದೆ. ನಂತರವೇ ಹೋಟೆಲ್‌ನಲ್ಲಿ ಪರಿಚಯಿಸಲಾಗುತ್ತದೆ ಎನ್ನುತ್ತಾರೆ

ರುಚಿ ಹೆಚ್ಚಿಸುವ ಆಧುನಿಕ ತಂತ್ರಜ್ಞಾನ

ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಕೂಡ ನಂದನ ಪ್ಯಾಲೇಸ್‌ನ ವಿಶೇಷತೆ. ಅನುಭವಿ ಬಾಣಸಿಗರು ತಂತ್ರಜ್ಞಾನವನ್ನು ಬಳಸಿಕೊಂಡು ಅಡುಗೆಯನ್ನು ಮತ್ತಷ್ಟು ರುಚಿಕರವಾಗಿಸುತ್ತಿದ್ದಾರೆ. ಪ್ರತಿವರ್ಷ ಕೂಡ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಾ ಬಂದಿದ್ದಾರೆ. ಜತೆಗೆ ಸುರಕ್ಷತೆ ಮತ್ತು ಸ್ವಚ್ಛತೆ ಸಂಸ್ಥೆಯ ಆದ್ಯತೆ ಮೊದಲ ಆಯ್ಕೆ. ಪ್ರತಿವರ್ಷ ಒಂದರಿಂದ ಎರಡು ರೀತಿಯ ಹೊಸ ಬಗೆಯ ಖಾದ್ಯಗಳನ್ನು ಪರಿಚಯಿಸಲಾಗುತ್ತಿದೆ. ಅವು ಆಹಾರ ಪ್ರಿಯರನ್ನು ಸೆಳೆಯುತ್ತವೆ ಕೂಡ. ಕಳೆದ ವರ್ಷ ಪರಿಚಯಿಸಿದ ಚಿಕನ್ 555 ಬಿರಿಯಾನಿ ಗ್ರಾಹಕರನ್ನು ಬಹುವಾಗಿ ಸೆಳೆದಿತ್ತು. ಡಾ.ರವಿಚಂದರ್ ಅವರ ಕಿರಿಯ ಪುತ್ರಿ ನಂದನ ಪ್ಯಾಲೇಸ್‌ಗೆ ಮ್ಯಾಂಗೋ ಮಲೈ ಮಟ್ಕಾ, ರಾಸಮಲೈ ಟ್ವಿಸ್ಟ್, ಕೊಕೊನಟ್ ಪುಡ್ಡಿಂಗ್, ಮ್ಯಾಂಗೋ ಕ್ರಿಸ್ಟಲ್ ರೋಲ್ ಮೊದಲಾದ ಹಲವು ಡೆಸರ್ಟ್‌ಗಳನ್ನು ಹೊಸದಾಗಿ ಅನ್ವೇಷಿಸಿ ಪರಿಚಯಿಸಿದ್ದಾರೆ.

ಸಂಸ್ಕೃತಿ, ಸಂಪ್ರದಾಯ ಮತ್ತು ನಂಬಿಕೆಯ ರೂಪವೇ ನಂದನ ಪ್ಯಾಲೇಸ್

ಹೋಟೆಲ್ ಉದ್ಯಮದಲ್ಲಿ ಗ್ರಾಹಕರಿಗೆ ಸಾಂಪ್ರದಾಯಿಕವಾದ ಸ್ವಾಗತವನ್ನು **'ನಮಸ್ತೆ ನಂದನ'** ಎನ್ನುವ ಮೂಲಕ ಬರಮಾಡಿಕೊಂಡು, ರುಚಿ ಮತ್ತು ಶುಚಿಯಾದ ಅಡುಗೆಯನ್ನು ಮನೆಯಲ್ಲಿ ಕುಳಿತು ಊಟ ಮಾಡುವಂತಹ ಅನುಭವವನ್ನು ಒದಗಿಸುವುದು ನಂದನ ಪ್ಯಾಲೇಸ್‌ನ ಮೂಲ ತತ್ವವಾಗಿದೆ.

ಮನೆಬಾಗಿಲಿಗೆ ರೆಸ್ಟೋರೆಂಟ್

ಸೋಷಿಯಲ್ ಮೀಡಿಯಾದಲ್ಲೂ ಹೆಚ್ಚು ಫಾಲೋವರ್‌ಗಳನ್ನು ಹೊಂದಿರುವ ಟಾಪ್ ರೆಸ್ಟೋರೆಂಟ್‌ಗಳಲ್ಲಿ ನಂದನ ಪ್ಯಾಲೇಸ್ ಕೂಡ ಒಂದು. 'ಗ್ರಾಹಕರು ರೆಸ್ಟೋರೆಂಟ್‌ನಲ್ಲಿ ಸವಿಯಬಹುದಾದ ಖಾದ್ಯಗಳನ್ನು ಮನೆಯಲ್ಲೇ ಆರ್ಡರ್ ಮಾಡಿ ಸವಿಯಬಹುದು. ಪ್ಯಾಕೇಜಿಂಗ್‌ನಲ್ಲೂ ಗ್ರಾಹಕರನ್ನು ಸೆಳೆಯುವಂತಹ ವಿಧಾನವನ್ನು ಅನುಸರಿಸಲಾಗುತ್ತದೆ. ವೆಜ್ ಮತ್ತು ನಾನ್ ವೆಜ್ ಕ್ಯಾರಿಯರ್ ಮೀಲ್‌ಗಳನ್ನು ಬಾಳೆಎಲೆಯೊಂದಿಗೆ ಆಕರ್ಷಕವಾಗಿ, ಸುರಕ್ಷಿತವಾಗಿ ಪ್ಯಾಕ್ ಮಾಡಲಾಗುತ್ತದೆ. ಬಿರಿಯಾನಿ ಬಾಕ್ಸ್‌ಗಳು ಕೂಡ ಪೇಟೆಂಟ್ ಆಗಿವೆ. ಸಿಂಗಲ್ ಯೂಸ್ ಪ್ಲಾಸ್ಟಿಕ್ ಬಳಕೆ ಇಲ್ಲ, ನಂತರ ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆಯನ್ನು ತಡೆಯಲು ಮತ್ತು ಗ್ರಾಹಕರಿಗೆ ಮರುಬಳಕೆಗೆ ಉಪಯೋಗವಾಗಲು ಅದ್ಭುತ ವಿನ್ಯಾಸದೊಂದಿಗೆ ಬಟ್ಟೆ ಕೈಚೀಲಗಳನ್ನು ಚಲಾವಣೆಗೆ ತಂದರು. ಗ್ರಾಹಕರಿಗೆ ಇಷ್ಟವಾಗುವಂತಹ, ತೆರೆಯಲು ಸುಲಭವಾಗುವಂತ ಫುಡ್ ಪ್ಯಾಕೇಜಿಂಗ್ ಇದೆ. ಫುಡ್ ಡೆಲಿವರಿಗೂ ಗ್ರಾಹಕರಿಂದ ಅತ್ಯುತ್ತಮ ಪ್ರತಿಕ್ರಿಯೆ ಇದೆ' ಎನ್ನುತ್ತಾರೆ ಶ್ವೇತಾ ರವಿ.

ಅಲ್ಲದೆ ಬೆಂಗಳೂರು ಮತ್ತು ಚೆನ್ನೈನಲ್ಲಿ 25ಕ್ಕೂ ಹೆಚ್ಚು ಬ್ಯಾಂಕ್ವೆಟ್ ಹಾಲ್‌ಗಳಿವೆ. ನಿಶ್ಚಿತಾರ್ಥ, ನಾಮಕರಣ, ಹುಟ್ಟಿದ ಹಬ್ಬ ಸೇರಿದಂತೆ ಎಲ್ಲಾ ರೀತಿಯ ಸಂಭ್ರಮದ ಆಚರಣೆಗಳನ್ನು ಕೈಗೆಟಕುವ ದರದಲ್ಲಿ ಅದ್ದೂರಿಯಾಗಿ ಆಚರಿಸಬಹುದು.

ಎಲ್ಲ ಉದ್ಯೋಗಿಗಳೂ ನಂದನ ಕುಟುಂಬದವರು!

ಎರಡೂವರೆ ಸಾವಿರಕ್ಕೂ ಹೆಚ್ಚು ಉದ್ಯೋಗಿಗಳು ನಂದನ ಹೋಟೆಲ್ ಗ್ರೂಪ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಇದಕ್ಕೆ ಕಾರಣ **'ನಂದನ ಎಂದರೆ ನಂಬಿಕೆ'** ಎಂಬ ಅರಿವು ಎಲ್ಲರಲ್ಲಿ ಆಳವಾಗಿ ಬೇರೂರಿದೆ. ಪ್ರತಿಯೊಬ್ಬರಿಗೂ ನಿಯಮಾನುಸಾರ ಪಿಎಫ್, ಇಎಸ್‌ಐ ಸೇರಿ ವೇತನ ಅನುಸಾರ ಸಿಗಬೇಕಾದ ಸೌಲಭ್ಯಗಳನ್ನು ನೀಡಲಾಗುತ್ತದೆ. ಉದ್ಯೋಗಿಗಳ ಕಲ್ಯಾಣಕ್ಕಾಗಿ ಕಾರ್ಯಕ್ರಮ ರೂಪಿಸಲಾಗಿದೆ. ಉದ್ಯೋಗಿಗಳನ್ನು ಕುಟುಂಬದಂತೆ ಕಾಣಲಾಗುತ್ತದೆ. ಹೀಗಾಗಿ, ಬಹಳಷ್ಟು ಉದ್ಯೋಗಿಗಳು ಎಲ್ಲಿಯೂ ಹೋಗದೆ ಉಳಿದುಕೊಂಡಿದ್ದಾರೆ ಎನ್ನುತ್ತಾರೆ ಶ್ವೇತಾ ರವಿ.

● ಯೋಗವು ಸಂಗೀತದಂತೆ. ದೇಹದ ಲಯ, ಮನಸ್ಸಿನ ಮಾಧುರ್ಯ ಮತ್ತು ಆತ್ಮದ ಸಾಮರಸ್ಯದ ಮೂಲಕ ಜೀವನದಲ್ಲಿ ಸ್ವರಮೇಳವನ್ನು ಸೃಷ್ಟಿಸುತ್ತದೆ.
- ಬಿಕೆಎಸ್ ಅಯ್ಯಂಗಾರ್ ಖ್ಯಾತ ಯೋಗ ಗುರು

ಮೈಮನಗಳ ರಾಗ ಯೋಗ

● ಜೀವನದ ಪ್ರತಿಯೊಂದು ಹಂತದಲ್ಲಿ ಸಮತೋಲನ ಕಾಪಾಡಿಕೊಳ್ಳಲು ಯೋಗ ಅವಶ್ಯಕ. -ರಶ್ಮಿಕಾ ಮಂದಣ್ಣ ನಟಿ

ಅಂತಾರಾಷ್ಟ್ರೀಯ ಯೋಗ ದಿನ-2026
ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಎಷ್ಟೇ ಬ್ಯುಸಿ ಇದ್ರೂ ನಿತ್ಯ ಯೋಗ ಮಾಡುತಾರೆ!



ನರೇಂದ್ರ ಮೋದಿ
ಭಾರತದ ಪ್ರಧಾನಿ ಪ್ರತಿದಿನ ಬೆಳಗ್ಗೆ ಹಠಯೋಗ, ಅಷ್ಟಾಂಗ ಯೋಗ ಎರಡನ್ನೂ ಒಳಗೊಂಡ ಯೋಗಾಭ್ಯಾಸ ಮತ್ತು ಪ್ರಾಣಾಯಾಮ ಮಾಡುತ್ತಾರೆ. ಧ್ಯಾನ ಸೇರಿದಂತೆ ಸಾಂಪ್ರದಾಯಿಕ ಯೋಗಾಭ್ಯಾಸ ನಡೆಸುತ್ತಾರೆ. ಒತ್ತಡದ ವೇಳಾಪಟ್ಟಿಯ ನಡುವೆ ಯೋಗಾಭ್ಯಾಸ ಮಾಡುವುದ ರಿಂದ ಶಾರೀರಿಕ ಆರೋಗ್ಯ ಮತ್ತು ಮಾನಸಿಕ ಒತ್ತಡ ನಿವಾರಣೆ ಸಾಧ್ಯವಾಗಿದೆ.



ಶಿಲ್ಪಾ ಶೆಟ್ಟಿ
ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ತಮ್ಮ ದೈನಂದಿನ ದಿನಚರಿಯಲ್ಲಿ ಅಷ್ಟಾಂಗ ಮತ್ತು ವಿನ್ಯಾಸ ಯೋಗವನ್ನು ಅಳವಡಿಸಿಕೊಂಡಿದ್ದಾರೆ. ದೀರ್ಘಕಾಲದ ಬೆನ್ನುನೋವಿಗೆ ಚಿಕಿತ್ಸೆ ನೀಡಲು ಅವರು ಆರಂಭದಲ್ಲಿ ಈ ಅಭ್ಯಾಸವನ್ನು ರೂಢಿಸಿಕೊಂಡಿದ್ದರು. ಒತ್ತಡ ನಿರ್ವಹಿಸಲು ಪ್ರಾಣಾಯಾಮದ (ಉಸಿರಾಟದ ವ್ಯಾಯಾಮಗಳು) ಕಡೆಗೆ ಹೆಚ್ಚಿನ ಗಮನ ಹರಿಸುತ್ತಾರೆ.

ಜೆನಿಫರ್ ಅನಿಸ್ಟನ್
ಹಾಲಿವುಡ್ ನಟಿ, ‘ಫ್ರೆಂಡ್ಸ್’ ಟಿ.ವಿ ಧಾರಾವಾಹಿ ಖ್ಯಾತಿಯ ನಟಿ ಜೆನಿಫರ್ ಅನಿಸ್ಟನ್ ಬೆಳಗಿನ ದಿನಚರಿಯಲ್ಲಿ ಯೋಗ ಒಳಗೊಂಡಿದೆ. ಪವರ್ ವಿನ್ಯಾಸ ಫ್ಲೋ ಎನ್ನುವ ವಿಶಿಷ್ಟ ಬಗೆಯಯೋಗಾಭ್ಯಾಸವನ್ನು ಅವರು ನಡೆಸುತ್ತಾರೆ. ಇದರಿಂದ ಮಾನಸಿಕ ಶಕ್ತಿ ವೃದ್ಧಿ ಜತೆಗೆ ಹಾಲಿವುಡ್‌ನ ಕೆಲಸದ ಒತ್ತಡ ನಿಭಾಯಿಸಲು ಸಾಧ್ಯವಾಗಿದೆಯಂತೆ.

ರಾಬರ್ಟ್ ಡೌನಿ ಜೂ.
‘ಐರನ್ ಮ್ಯಾನ್’ ಖ್ಯಾತಿಯ ಹಾಲಿವುಡ್ ನಟ ತಮ್ಮ ಚೇತರಿಕೆ ಮತ್ತು ದೀರ್ಘಕಾಲದ ಮಾದಕವ್ಯಸನ ಮುಕ್ತ ಜೀವನಕ್ಕೆ ಪವರ್‌ಫ್ಲೋ ಯೋಗವೇ ಪ್ರಮುಖ ಕಾರಣ ಎಂದು ಹಲವೆಡೆ ಹೇಳಿದ್ದಾರೆ. ಭಾವನಾತ್ಮಕ ಸಮತೋಲನ ಕಾಯ್ದುಕೊಳ್ಳಲು, ಮನಸ್ಸನ್ನು ನಿರಾಳವಾಗಿಡಲು, ತಮ್ಮ ಶಕ್ತಿಯನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಲು ಅವರು ಪ್ರತಿದಿನ ಅಭ್ಯಾಸ ಮಾಡುತ್ತಾರೆ.

ಜಸ್ಟಿನ್ ಟ್ರುಡೊ
ಕೆನಡಾದ ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಯೋಗಾಭ್ಯಾಸಕ್ಕೆ ಮಾರು ಹೋಗಲು ಅವರ ತಂದೆ ಪಿಯರೆ ಟ್ರುಡೊ ಕಾರಣ. ತಂದೆಯವರ ಹೆಜ್ಜೆಯನ್ನೇ ಅನುಸರಿಸಿರುವ ಜಸ್ಟಿನ್ ಟ್ರುಡೊ ಹಠ ಮತ್ತು ವಿನ್ಯಾಸ ಯೋಗ ದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಮಯೂರಾಸನದಂತಹ ಸವಾಲಿನ ಆರ್ಮ್-ಬ್ಯಾಲೆನ್ಸ್ ಆಸನಗಳನ್ನು ಪ್ರದರ್ಶಿಸಿ ಹೆಸರಾಗಿದ್ದಾರೆ.

3ನೇ ಕಿಂಗ್ ಚಾರ್ಲ್ಸ್
ಬ್ರಿಟನ್ ರಾಜ ಮೂರನೇ ಕಿಂಗ್ ಚಾರ್ಲ್ಸ್ ತಮ್ಮ ಕಟ್ಟುನಿಟ್ಟಾದ ಬೆಳಗಿನ ಆರೋಗ್ಯ ರಕ್ಷಣೆಯ ದಿನಚರಿಯ ಭಾಗವಾಗಿ ಪ್ರತಿದಿನ ಶಿಸ್ತುಬದ್ಧ, ಚಿಕಿತ್ಸಕ ರೂಪದ ಯೋಗವನ್ನು ಅಭ್ಯಾಸ ಮಾಡುತ್ತಾರೆ. ಪ್ರತಿಷ್ಠಿತ ಪೋಲೊ ಕ್ರೀಡೆ ಆಡಿದ ಬಳಿಕ ಉಂಟಾದ ಗಾಯಗಳು ಮತ್ತು ಬೆನ್ನುನೋವನ್ನು ನಿರ್ವಹಿಸಲು ನಿರ್ದಿಷ್ಟ ಸ್ಟ್ರೆಚಿಂಗ್ ಮತ್ತು ಸೌಮ್ಯ ಆಸನಗಳನ್ನು ಮಾಡುತ್ತಾರೆ.

ಮ್ಯಾಕ್ರನ್
ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ತಮ್ಮ ಬಿಡುವಿಲ್ಲದ ಜೀವನಶೈಲಿಯಲ್ಲಿ ಜಾಗರೂಕ ಯೋಗ ಮತ್ತು ಉಸಿರಾಟದ ವ್ಯಾಯಾಮಗಳನ್ನು ಅಳವಡಿಸಿಕೊಂಡಿದ್ದಾರೆ. ಕೇವಲ ಕೆಲವು ಗಂಟೆಗಳ ಕಾಲ ಮಾತ್ರ ನಿದ್ರಿಸುವ ಅವರು, ತಮ್ಮ ದೈಹಿಕ ಸಾಮರ್ಥ್ಯ ವೃದ್ಧಿಸಲು ದೈಹಿಕ ಬಳಲಿಕೆ ಹೋಗಲಾಡಿಸಲು ವಿಶೇಷ ಪ್ರಾಣಾಯಾಮ ಮತ್ತು ಯೋಗಾಭ್ಯಾಸ ಮಾಡುತ್ತಾರೆ.

ಎಚ್.ಡಿ. ದೇವೇಗೌಡ
ಭಾರತದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಪ್ರತಿದಿನ ಬೆಳಗ್ಗೆ ರಾಗಿ ಮುದ್ದೆಯ ಕಟ್ಟುನಿಟ್ಟಾದ ಆಹಾರ ಸೇವನೆಯ ನಂತರ, 7.30 ಗಂಟೆಗೆ ಖ್ಯಾತ ಯೋಗಪಟು ಅಯ್ಯಂಗಾರ್ ಶೈಲಿಯಿಂದ ಪ್ರೇರಿತವಾದ ಶಿಸ್ತುಬದ್ಧ ಯೋಗ ದಿನಚರಿ ಪ್ರಾರಂಭಿಸುತ್ತಾರೆ. ವೀರಾಸನ ಮತ್ತು ಸರ್ವಾಂಗಾಸನ ಸೇರಿದಂತೆ ಹಲವು ಸಂಕೀರ್ಣ ಆಸನಗಳನ್ನು ಅಭ್ಯಾಸ ಮಾಡುತ್ತಾರೆ.

ಸ್ಕ್ರೀನ್ ಟೈಮಿಂಗ್ ಒತ್ತಡ ನಿವಾರಿಸಲು 5 ಸರಳ ಯೋಗಾಸನಗಳು

ಆಧುನಿಕ ಬದುಕಿನ ಬಿಡುವಿಲ್ಲದ ಓಟದಲ್ಲಿ, ನಾವಿಂದು ಅರಿವಿಲ್ಲದಂತೆಯೇ ಡಿಜಿಟಲ್ ಪರದೆಗಳ ಸೆರೆಯಾಳಾಗಿದ್ದೇವೆ. ಬೆಳಗಿನ ಮಂಪರಿನಿಂದ ಹಿಡಿದು ರಾತ್ರಿಯ ಆಕಳಿಕೆವರೆಗೂ ನಮ್ಮ ಕಣ್ಣುಗಳು ಹೊಳೆಯುವ ಪರದೆಗಳಿಗೆ ಅಂಟಿಕೊಂಡಿವೆ. ಭಾರತೀಯರಂತೂ ತಮ್ಮ ದಿನದ ಅಮೂಲ್ಯವಾದ 7.4 ಗಂಟೆಗಳನ್ನು ಈ ವರ್ಚುವಲ್ ಜಗತ್ತಿನಲ್ಲೇ ಕಳೆಯುತ್ತಿದ್ದಾರೆ ಎಂಬುದು ಕೇವಲ ಅಂಕಿ-ಅಂಶವಲ್ಲ, ಆರೋಗ್ಯದ ಎಚ್ಚರಿಕೆ ಗಂಟೆ. ಈ ಮಿತಿಮೀರಿದ ಡಿಜಿಟಲ್ ಗೀಳು ನಮ್ಮ ದೈಹಿಕ ಶಕ್ತಿಯನ್ನು ಹೀರುವುದರ ಜತೆಗೆ, ನಿದ್ರಾಹೀನತೆ, ಅಕಾರಣ ಆತಂಕ ಮತ್ತು ‘ಡಿಜಿಟಲ್ ಖಿನ್ನತೆ’ಯಂಥ ಸಮಸ್ಯೆಗಳ ಸುಳಿಯಲ್ಲಿ ನಮ್ಮನ್ನು ಮೌನವಾಗಿ ಸಿಲುಕಿಸುತ್ತಿದೆ. ಇದರಿಂದ ಹೊರಬರಲು, ರೀಲ್ಸ್‌ಗಳ ಬಗ್ಗೆ ಮನಸ್ಸನ್ನು ನಿಯಂತ್ರಿಸಲು 8 ಯೋಗಾಸನಗಳುಂಟು.

1 **ಭ್ರಮರಿ ಪ್ರಾಣಾಯಾಮ:** ಹೆಬ್ಬೆರಳುಗಳಿಂದ ಕಿವಿಗಳನ್ನು ಮುಚ್ಚಿರಿ. ತೋರು ಬೆರಳು ಮತ್ತು ಮಧ್ಯದ ಬೆರಳುಗಳಿಂದ ಕಣ್ಣುಗಳನ್ನು ನಿಧಾನವಾಗಿ ಮುಚ್ಚಿಕೊಳ್ಳಿ. ದೀರ್ಘ ಉಸಿರನ್ನು ತೆಗೆದುಕೊಳ್ಳಿ ಮತ್ತು ಜೇನುಹುಳುವಿನಂತೆ ಝೇಂಕರಿಸುತ್ತಾ ಉಸಿರನ್ನು ಹೊರಬಿಡಿ.
ಪ್ರಯೋಜನ: ಮಿದುಳಿಗೆ ವಿಶ್ರಾಂತಿ ನೀಡಿ ನಿದ್ರೆಯನ್ನು ಸುಧಾರಿಸುತ್ತದೆ. ನರಮಂಡಲವನ್ನು ಶಾಂತಗೊಳಿಸುತ್ತದೆ.
ಬೆಸ್ಟ್ ಟೈಂ: ರಾತ್ರಿ ಮಲಗುವ ಮುನ್ನ 5 ರಿಂದ 7 ಬಾರಿ.

2 **ತ್ರಾಟಕ್ (ದೀಪವನ್ನು ದಿಟ್ಟಿಸುವುದು):** 1-2 ನಿಮಿಷಗಳ ಕಾಲ ಅಥವಾ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕಣ್ಣು ಮಿಟುಕಿಸದೆ ಉರಿಯುತ್ತಿರುವ ದೀಪದ ಜ್ವಾಲೆಯನ್ನು ದಿಟ್ಟಿಸಿ ನೋಡಿ. ನಂತರ ಕಣ್ಣುಗಳನ್ನು ಮುಚ್ಚಿ ಆ ಜ್ವಾಲೆಯ ಚಿತ್ರವನ್ನು ಮಿದುಳಿನಲ್ಲಿ ಕೇಂದ್ರೀಕರಿಸಿ.
ಪ್ರಯೋಜನ: ಕಣ್ಣಿನ ಆಯಾಸವನ್ನು ನಿವಾರಿಸುತ್ತದೆ ಮತ್ತು ಏಕಾಗ್ರತೆಯನ್ನು ಅದ್ಭುತವಾಗಿ ಸುಧಾರಿಸುತ್ತದೆ.
ಬೆಸ್ಟ್ ಟೈಂ: ಸಂಜೆ ಅಥವಾ ರಾತ್ರಿ ಮಲಗುವಾಗ ಸೂಕ್ತ.

3 **ಉಷ್ಟ್ರಾಸನ (ಒಂಟೆ ಭಂಗಿ):** ಮೊಣಕಾಲುಗಳ ಮೇಲೆ ಕುಳಿತು, ನಿಧಾನವಾಗಿ ಹಿಂದಕ್ಕೆ ಬಾಗಿ ಮತ್ತು ಎರಡೂ ಕೈಗಳಿಂದ ಪಾದಗಳ ಹಿಮ್ಮಡಿಯನ್ನು ಹಿಡಿದುಕೊಳ್ಳಿ.
ಪ್ರಯೋಜನ: ಬೆನ್ನು ನೋವನ್ನು ನಿವಾರಿಸುತ್ತದೆ. ಕರುಳನ್ನು ಹಿಗ್ಗಿಸಿ, ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ.
ಬೆಸ್ಟ್ ಟೈಂ: ದಿನಕ್ಕೆ 2 ಬಾರಿ, 1ರಿಂದ 2 ನಿಮಿಷಗಳ ಕಾಲ.

4 **ಅರ್ಧ ಮತ್ಸ್ಯೇಂದ್ರಾಸನ:** ಕಾಲುಗಳನ್ನು ಚಾಚಿ ಕುಳಿತು, ಒಂದು ಕಾಲನ್ನು ಮಡಚಿ ಇನ್ನೊಂದು ಕಾಲಿನ ತೊಡೆಯ ಬಳಿ ಇರಿಸಿ. ಸೊಂಟವನ್ನು ವಿರುದ್ಧ ದಿಕ್ಕಿಗೆ ತಿರುಗಿಸಿ ಮತ್ತು ಕೈಯಿಂದ ಆಸರೆ ನೀಡಿ.
ಪ್ರಯೋಜನ: ದೇಹದಲ್ಲಿ ಶಕ್ತಿಯ ಹರಿವನ್ನು ಸುಧಾರಿಸಿ, ಬೆನ್ನುಮೂಳೆಯ ಬಿಗಿತ ಮತ್ತು ದೋಷವನ್ನು ನಿವಾರಿಸುತ್ತದೆ.
ಬೆಸ್ಟ್ ಟೈಂ: ಬೆಳಗ್ಗೆ ಮತ್ತು ಸಂಜೆ, 30 ಸೆಕೆಂಡುಗಳಿಂದ 1 ನಿಮಿಷ.

5 **ವಿಪರೀತ ಕರಣಿ:** ಬೆನ್ನಿನ ಮೇಲೆ ಮಲಗಿ. ಎರಡೂ ಕಾಲುಗಳನ್ನು ಗೋಡೆಯ ಆಧಾರದೊಂದಿಗೆ ನೇರವಾಗಿ ಮೇಲಕ್ಕೆ ಇರಿಸಿ. ಕೈಗಳನ್ನು ದೇಹದ ಪಕ್ಕದಲ್ಲಿ ಸಡಿಲವಾಗಿ ಬಿಡಿ.
ಪ್ರಯೋಜನ: ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ. ಕಣ್ಣು ಮತ್ತು ಮನಸ್ಸನ್ನು ತಂಪಾಗಿಸಿ, ಒತ್ತಡವನ್ನು ನಿವಾರಿಸುತ್ತದೆ.
ಬೆಸ್ಟ್ ಟೈಂ: ಸಂಜೆ ವೇಳೆ 5 ನಿಮಿಷಗಳ ಕಾಲ ಮಾಡಬಹುದು.

ಯೋಗ ಮಾರ್ಗದಲ್ಲಿ ಗೆದ್ದವರು
ಯೋಗ ಬಲ್ಲವರಿಗೆ ರೋಗವಿಲ್ಲ ಎಂಬುದು ನಂಬಿಕೆ. ಯೋಗ ಮಾಡಿ, ಕಾಯಿಲೆ ಹತೋಟಿಗೆ ತಂದುಕೊಂಡವರು ನಮ್ಮ ಸುತ್ತಮುತ್ತ ಇದ್ದೇ ಇರುತ್ತಾರೆ. ನಿಮಗೆ ಈ ಅನುಭವವಾಗಿದ್ದರೆ, ಆ ಯಶೋಗಾಥೆಯನ್ನು 50 ಪದಗಳಲ್ಲಿ ಚುಟುಕಾಗಿ ಬರೆದು ಕಳುಹಿಸಿ.
VK WhatsApp 6366422240

ಒಡುವ ವಯಸ್ಸಿಗೆ ಗೋಡೆ ಕಟ್ಟುವ ಆಸನಗಳು

ಆ್ಯಂಟಿ ಏಜಿಂಗ್ ಯೋಗ

ಆರೋಗ್ಯವಂತ ಬದುಕಿಗೆ ಯೋಗವೇ ಮದ್ದು ಎಂಬ ಮಾತುಂಟು. ಅಷ್ಟೇ ಅಲ್ಲ, ಯೋಗ ಚಿರಯೌವ್ವನಕ್ಕೂ ಮದ್ದೇ. ಇಂದಿನ ವೇಗದ ಜೀವನಶೈಲಿಯಲ್ಲಿ, ಯೋಗವು ಯೌವನಭರಿತ ಬದುಕಿಗೆ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ನಮ್ಮನ್ನು ಚಿರಯೌವ್ವನವಾಗಿಡುವ ಆಸನಗಳ ಗುಟ್ಟು ಗೊತ್ತೇ?

■ ಪುಣ್ಯವತಿ ಎಚ್.ಪಿ.

ಸಿಂಹಾಸನ ಭಂಗಿ

ಭ್ರಮರಿ ಆಸನ

ಪ್ರಾಣಾಯಾಮ

ಮಂಡೂಕಾಸನ

ಅಧೋಮುಖ ಶ್ವಾನಾಸನ

ಸಿಂಹಾಸನ (ಸಿಂಹ ಭಂಗಿ)
ಮುಖ ಮತ್ತು ಎದೆ ಭಾಗದ ಒತ್ತಡವನ್ನು ಕಡಿಮೆ ಮಾಡುತ್ತದೆ. ನಿಷ್ಕ್ರಿಯ ಥೈರಾಯ್ಡ್ ಗ್ರಂಥಿಯ ಕಾರ್ಯನಿರ್ವಹಣೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಪ್ಲಾಟಿಸ್ಮಾವನ್ನು (ಗಂಟಲಿನ ಮುಂಭಾಗದಲ್ಲಿರುವ ಚಪ್ಪಟೆಯಾದ ತೆಳುವಾದ ಸ್ನಾಯು) ಉತ್ತೇಜಿಸುತ್ತದೆ. ಸುಕ್ಕುಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ ಮತ್ತು ಮುಪ್ಪನ್ನು ತಡೆಯುತ್ತದೆ. ಕುತ್ತಿಗೆಯ ಮೇಲಿನ ಹೆಚ್ಚುವರಿ ಕೊಬ್ಬನ್ನು ನಿವಾರಿಸುತ್ತದೆ. ಕುತ್ತಿಗೆಯ ಸ್ನಾಯುಗಳು ಜೋತು ಬೀಳದಂತೆ ತಡೆಯುತ್ತದೆ.

ವೀರಭದ್ರಾಸನ (ಯೋಧ ಭಂಗಿ)
ಬಲವಾದ ಸ್ನಾಯುಗಳಿಗಾಗಿ ಉತ್ತಮ ಆಸನವಿದು. ಇದು ತೋಳುಗಳು, ಕೆಳ ಬೆನ್ನು ಮತ್ತು ಕಾಲುಗಳನ್ನು ಬಲಪಡಿಸುತ್ತದೆ ಮತ್ತು ಟೋನ್ ಮಾಡುತ್ತದೆ.

ಧನುರಾಸನ (ಬಿಲ್ಲು ಭಂಗಿ)
ವಯಸ್ಸಾದಂತೆ ದುರ್ಬಲಗೊಳ್ಳುವ ತೋಳುಗಳು ಮತ್ತು ಕಾಲುಗಳ ಸ್ನಾಯುಗಳನ್ನು ಟೋನ್ ಮಾಡುತ್ತದೆ. ನರಮಂಡಲವನ್ನು ಉತ್ತೇಜಿಸುವ ಮೂಲಕ ದೇಹವನ್ನು ಚೈತನ್ಯಗೊಳಿಸುತ್ತದೆ. ಬೆನ್ನುಮೂಳೆಯನ್ನು ಬಲಪಡಿಸುತ್ತದೆ ಮತ್ತು ವಿಶ್ರಾಂತಿ ನೀಡುತ್ತದೆ.

ಕಪಾಲಭಾತಿ, ಸೂರ್ಯ ನಮಸ್ಕಾರ
ಕಾಂತಿಯುತ ಚರ್ಮಕ್ಕೆ ಕಪಾಲಭಾತಿ ಕ್ರಿಯೆ ಉತ್ತಮ. ಇದು ಮುಖದ ಸ್ನಾಯುಗಳನ್ನು ಬಿಗಿಗೊಳಿಸಲು ಮತ್ತು ಕಣ್ಣಿನ ಸುತ್ತಲಿನ ಕಪ್ಪು ಕಲೆಗಳನ್ನು ಕಡಿಮೆ ಮಾಡಲು ಸಹಾಯಕವಾಗಿದ್ದು, ಪ್ರತಿದಿನ ಮಾಡಬಹುದು. ಮಿದುಳಿಗೆ ಪುನರ್‌ಯೌವ್ವನ ನೀಡುತ್ತದೆ ಮತ್ತು ನರಗಳಿಗೆ ಶಕ್ತಿ ನೀಡುತ್ತದೆ. ಮನಸ್ಸನ್ನು ಶಾಂತಗೊಳಿಸುತ್ತದೆ. ಇದು ಸ್ಥೂಲಕಾಯವನ್ನೂ ಕಡಿಮೆ ಮಾಡುತ್ತಿದೆ.

ಅಧೋಮುಖ ಶ್ವಾನಾಸನ (ಕೆಳಮುಖವಾಗಿ ನಾಯಿ ಭಂಗಿ)
ಕೂದಲು ಉದುರುವಿಕೆ ತಡೆಯಲು ಸಹಾಯಕ. ರಕ್ತ ಪರಿಚಲನೆಯೊಂದಿಗೆ ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ. ವಯಸ್ಸಾದಂತೆ ಜೋತು ಬೀಳುವ ಕೈಕಾಲುಗಳನ್ನು ಟೋನ್ ಮಾಡುತ್ತದೆ. ಆತಂಕವನ್ನು ಕಡಿಮೆ ಮಾಡುತ್ತದೆ.

ಹಸ್ತಪಾದಾಸನ (ಮುಂದೆ ನಿಂತು ಬಾಗಿ)
ವೃದ್ಧಾಪ್ಯದೊಂದಿಗೆ ಬರುವ ಬೆನ್ನುಮೂಳೆಯ ನಮ್ಯತೆಯನ್ನು ತಡೆಯುತ್ತದೆ. ನರಮಂಡಲವನ್ನು ಚೈತನ್ಯಗೊಳಿಸುತ್ತದೆ.

ಭಸ್ತ್ರಿಕಾ ಪ್ರಾಣಾಯಾಮ
ವಯಸ್ಸಾದಂತೆ ರೋಗಗಳು ಮುತ್ತಿಗೆ ಹಾಕುತ್ತವೆ. ಈ ವೇಳೆ ರೋಗನಿರೋಧಕ ಶಕ್ತಿ ಹೆಚ್ಚಿಸಲು ಈ ಆಸನ ಬೆಸ್ಟ್.

ಅರ್ಧ ಮತ್ಸ್ಯೇಂದ್ರಾಸನ, ಮಂಡೂಕಾಸನ
ಸಕ್ಕರೆ ಕಾಯಿಲೆ ಈಗ ನಲ್ವತ್ತರ ಗಡಿ ದಾಟಿದ ಬಹುತೇಕರಿಗಿದೆ. ಇಂಥ ಮಧುಮೇಹ ನಿಯಂತ್ರಣಕ್ಕೆ ಈ ಆಸನ ಸಹಾಯಕ.

ಬಾಲಾಸನ, ನಾಡೀಶೋಧನ ಪ್ರಾಣಾಯಾಮ
ಈಗಿನ ಕೆಲಸದಲ್ಲಿ ಒತ್ತಡ ಅಧಿಕ. ಇದರ ಪ್ರಮುಖ ಕೊಡುಗೆಯೇ ರಕ್ತದೊತ್ತಡ. ಬಿಪಿ ನಿಯಂತ್ರಿಸಲು ಈ ಆಸನ ಸಹಾಯಕ.

ತಾಡಾಸನ, ಭುಜಂಗಾಸನ
ನಲ್ವತ್ತರ ಗಡಿಯಲ್ಲೇ ಇಂದು ಹಾರ್ಟ್ ಅಟ್ಯಾಕ್ ಪ್ರಕರಣಗಳು ದಾಖಲಾಗುತ್ತಿವೆ. ನಮ್ಮ ಹೃದಯವನ್ನು ಗಟ್ಟಿಮುಟ್ಟಾಗಿಟ್ಟುಕೊಳ್ಳಲು ತಾಡಾಸನ, ಭುಜಂಗಾಸನ ಬೆಸ್ಟ್.

ಕಪಾಲಭಾತಿ


ಭುಜಂಗಾಸನ

ಧ್ಯಾನದಿಂದ ಯುವಕರಾಗಿರಿ
ಒತ್ತಡವು ವಯಸ್ಸಾಗುವ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ ಎಂದು ಅಧ್ಯಯನಗಳು ಹೇಳುತ್ತವೆ. ಒತ್ತಡವನ್ನು ಕಡಿಮೆ ಮಾಡಲು ಪರಿಣಾಮಕಾರಿ ಮಾರ್ಗವೆಂದರೆ ನಿಯಮಿತವಾಗಿ ಧ್ಯಾನ ಮಾಡುವುದು. ಧ್ಯಾನ ಮಾಡುವುದರಿಂದ ನಮ್ಮ ವರ್ಣತಂತುಗಳು ಕ್ಷೀಣಿಸದಂತೆ ರಕ್ಷಿಸುತ್ತದೆ. ಹೀಗಾಗಿ ಮುಪ್ಪನ್ನು ತಡೆಯುತ್ತದೆ.


ಸೂರ್ಯನಮಸ್ಕಾರ


ನೌಕಾಸನ

ಯೌವ್ವನಕ್ಕೆ ಆಹಾರ ಪದ್ಧತಿಯೂ ಮುಖ್ಯ
50ರ ಇಳಿಯವಸ್ಸಿನಲ್ಲೂ 30ರಂತೆ ಕಾಣಬೇಕೆಂದರೆ ಯೋಗ ಮತ್ತು ಸಮತೋಲಿತ ಆಹಾರ ಕ್ರಮದೊಂದಿಗೆ ಉತ್ತಮ ಜೀವನಶೈಲಿಯಿಂದ ಇದನ್ನು ಸಾಧ್ಯವಾಗಿಸಿಕೊಳ್ಳಬಹುದು. ಯೌವನದಿಂದರಲು ಆಹಾರ ಪದ್ಧತಿ ಕೂಡ ಮುಖ್ಯವಾಗುತ್ತದೆ. ಬಣ್ಣ ಬಣ್ಣದ ಹಣ್ಣು, ತರಕಾರಿಗಳು ಆರೋಗ್ಯಕ್ಕೆ ಉಪಯುಕ್ತ. ಯೋಗದ ಜತೆಗೆ ಹೆಚ್ಚು ನೀರು ಕುಡಿಯುವ ಮೂಲಕ ದೇಹವನ್ನು ನಿರ್ಜಲೀಕರಣದಿಂದ ದೂರಪಿಡಬೇಕು. ಬೀನ್ಸ್, ಮೊಳಕೆ ಕಾಳುಗಳು, ಮೀನು, ಮೊಟ್ಟೆ, ಪಾಲಕ್ ಮತ್ತು ಮೆಂತ್ಯದಂತಹ ಸೊಪ್ಪು ತರಕಾರಿಗಳು ಹೆಚ್ಚು ಪ್ರೊಟೀನ್/ನಾರಿನಂಶಗಳಿಂದ ಕೂಡಿದ್ದು, ಇವು ಉತ್ತಮ ಜೀರ್ಣಕ್ರಿಯೆಗೂ ಸಹಾಯಕ. ಬ್ರೋಕಲಿ, ಮೂಲಂಗಿ ಮತ್ತು ಸೌತೆಕಾಯಿಯಂತಹ ನೀರಿನಂಶ ಹೆಚ್ಚಿರುವ ತರಕಾರಿಗಳು ಚರ್ಮವನ್ನು ಹೈಡ್ರೇಟ್ ಆಗಿಡಲು ಸಹಾಯ ಮಾಡುತ್ತವೆ.

ತಾರುಣ್ಯ ಕಾಪಾಡಿಕೊಳ್ಳಲು....

ಪ್ರತಿದಿನ ಯೋಗ ಮಾಡುವವರು ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯವಾಗಿರುತ್ತಾರೆ. ಯೌವನವನ್ನು (ತಾರುಣ್ಯ) ಕಾಪಾಡಿಕೊಳ್ಳಲು ಮತ್ತು ಸದೃಢವಾಗಿರಲು ಯೋಗ ಅತ್ಯುತ್ತಮ ಮಾರ್ಗವಾಗಿದೆ. ರೋಗ ಬಂದ ನಂತರ ಮದ್ದು ಹುಡುಕುವುದಲ್ಲ, ನಿತ್ಯ ಅರ್ಧ ಗಂಟೆ ಯೋಗ ಮಾಡಿದರೆ ರೋಗಗಳಿಂದ ದೂರವಿರಬಹುದು. ಸದಾ ಚಟುವಟಿಕೆಯಿಂದಿರಬಹುದು.
- **ತನ್ಮಯಿ ದೇಸಾಯಿ** ಯೋಗ ತರಬೇತುದಾರರು, ಶ್ರೀ ಶ್ರೀ ಯೋಗ ಶಾಲೆ, ಆರ್ಟ್ ಆಫ್ ಲಿವಿಂಗ್ ಸಂಸ್ಥೆ

ಕಚೇರಿಯಲ್ಲಿದ್ದರೇನು? ಕುರ್ಚಿಯಲ್ಲಿದ್ದರೆ ಸಾಕಷ್ಟೇ...

ಕುಳಿತೇ ಸೂರ್ಯ ನಮಸ್ಕಾರ



1 **ಸಹಜವಾಗಿ ಉಸಿರಾಡುತ್ತಾ:** ಎದೆಯ ಮುಂದೆ ನಮಸ್ಕಾರ ಮುದ್ರೆ. ಕೈಗಳು ಸೇತುವೆಯಂತೆ ನೇರವಾಗಿರಬೇಕು.

2 **ಉಸಿರನ್ನು ತೆಗೆದುಕೊಳ್ಳುತ್ತಾ:** ನಿಮ್ಮ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಮತ್ತು ಸ್ವಲ್ಪ ಹಿಂದಕ್ಕೆ ಬಾಗಿ. ನಿಮ್ಮ ದೃಷ್ಟಿ ಮೇಲ್ಮುಖವಾಗಿರಲಿ.

3 **ಉಸಿರನ್ನು ಬಿಡುತ್ತಾ:** ಸೊಂಟದಿಂದ ಮುಂದಕ್ಕೆ ಬಾಗಿ. ನಿಮ್ಮ ಎದೆಯು ತೊಡೆಗಳ ಮೇಲೆ ತಾಗುವಂತೆ ಮಾಡಿ ಮತ್ತು ಕೈಗಳನ್ನು ಪಾದಗಳ ಪಕ್ಕದಲ್ಲಿ ನೆಲದ ಕಡೆಗೆ ಚಾಚಿ.

4 **ಉಸಿರನ್ನು ತೆಗೆದುಕೊಳ್ಳುತ್ತಾ:** ನಿಮ್ಮ ಬೆನ್ನನ್ನು ಮೇಲಕ್ಕೆತ್ತಿ. ಬಲ ಮೊಣಕಾಲನ್ನು ಮಡಚಿ, ಎರಡೂ ಕೈಗಳಿಂದ ಅದನ್ನು ಹಿಡಿದುಕೊಂಡು ಎದೆಯ ಕಡೆಗೆ ಎಳೆದುಕೊಳ್ಳಿ. ತಲೆಯನ್ನು ಮೇಲಕ್ಕೆತ್ತಿ ಆಕಾಶದ ಕಡೆಗೆ ನೋಡಿ.

5 **ಉಸಿರನ್ನು ಬಿಡುತ್ತಾ:** ನಿಮ್ಮ ಹಣೆಯನ್ನು (ಮೂಗನ್ನು) ಮಡಚಿರುವ ಬಲ ಮೊಣಕಾಲಿಗೆ ತಾಗಿಸಲು ಪ್ರಯತ್ನಿಸಿ.

6 **ಉಸಿರಾಟ ಸಹಜವಾಗಿರಲಿ:** ಎರಡೂ ಕಾಲುಗಳನ್ನು ಮುಂದಕ್ಕೆ ಚಾಚಿ, ಹಿಮ್ಮಡಿ ನೆಲದ ಮೇಲಿರಲಿ. ಕೈಗಳಿಂದ ಕುರ್ಚಿಯ ಬದಿಗಳನ್ನು ಭದ್ರವಾಗಿ ಹಿಡಿದುಕೊಳ್ಳಿ. ಬೆನ್ನು ನೇರವಾಗಿರಲಿ.

7 **ಉಸಿರನ್ನು ತೆಗೆದುಕೊಳ್ಳುತ್ತಾ:** ಕುರ್ಚಿಯನ್ನು ಹಿಡಿದುಕೊಂಡೇ ಎದೆಯನ್ನು ಮುಂದಕ್ಕೆ ತಳ್ಳಿರಿ. ಭುಜಗಳನ್ನು ಹಿಂದಕ್ಕೆ ಎಳೆದು, ತಲೆಯನ್ನು ಹಿಂದಕ್ಕೆ ಬಾಗಿಸಿ

8 **ಉಸಿರನ್ನು ಬಿಡುತ್ತಾ:** ಮತ್ತೆ ಸೊಂಟದಿಂದ ಮುಂದಕ್ಕೆ ಬಾಗಿ (ಹಂತ 2ರಂತೆ). ಎದೆಯನ್ನು ತೊಡೆಗಳ ಮೇಲಿಟ್ಟು ಕೈಗಳನ್ನು ನೆಲದ ಕಡೆಗೆ ಚಾಚಿ.

9 **ಉಸಿರನ್ನು ತೆಗೆದುಕೊಳ್ಳುತ್ತಾ:** ಈ ಬಾರಿ ಎಡ ಮೊಣಕಾಲನ್ನು ಮಡಚಿ, ಕೈಗಳಿಂದ ಹಿಡಿದು ಎದೆಯ ಕಡೆಗೆ ಎಳೆದುಕೊಳ್ಳಿ. ತಲೆಯನ್ನು ಮೇಲಕ್ಕೆತ್ತಿ ಆಕಾಶದ ಕಡೆಗೆ ನೋಡಿ.

10 **ಉಸಿರನ್ನು ಬಿಡುತ್ತಾ:** ನಿಮ್ಮ ಹಣೆಯನ್ನು ಮಡಚಿರುವ ಎಡ ಮೊಣಕಾಲಿಗೆ ತಾಗಿಸಲು ಪ್ರಯತ್ನಿಸಿ.

11 **ಉಸಿರನ್ನು ತೆಗೆದುಕೊಳ್ಳುತ್ತಾ:** ಎರಡೂ ಕೈಗಳನ್ನು ಮತ್ತೆ ಮೇಲಕ್ಕೆ ಎತ್ತಿ ಮತ್ತು ಬೆನ್ನನ್ನು ಹಿಂದಕ್ಕೆ ಸ್ವಲ್ಪ ಬಾಗಿಸಿ.ಎದೆಯ ಮುಂದೆ ನಮಸ್ಕಾರ ಮುದ್ರೆಗೆ ಬಂದು ಪ್ರಾರಂಭಿಕ ಸ್ಥಿತಿಯಲ್ಲಿ ಕುಳಿತುಕೊಳ್ಳಿ. ಇದು ಒಂದು ಸುತ್ತಿನ ಕುರ್ಚಿ ಸೂರ್ಯ ನಮಸ್ಕಾರ.

***ಗಮನಿಸಿ:** ಈ ಆಸನಗಳನ್ನು ಮಾಡುವಾಗ ಯಾವುದೇ ತರಾತುರಿ ಬೇಡ. ನಿಮ್ಮ ದೇಹದ ಸಾಮರ್ಥ್ಯಕ್ಕೆ ತಕ್ಕಂತೆ, ನಿಧಾನವಾಗಿ ಮತ್ತು ಉಸಿರಾಟದ ಕಡೆ ಗಮನವಿಟ್ಟು ಅಭ್ಯಾಸ ಮಾಡಿ. ಕುರ್ಚಿ ಜಾರದಂತೆ ಭದ್ರವಾಗಿರುವಂತೆ ನೋಡಿಕೊಳ್ಳಿ.*

ಯೋಗಾಮೃತ

ಆರೋಗ್ಯಕರ ವೃದ್ಧಾಪ್ಯಕ್ಕೆ ಯೋಗ, ಜಗಕ್ಕೆ ಭಾರತ ನೀಡಿದ ಸಂಜೀವಿನಿ

ಯೋಗದಿಂದಾಗಿ ಭಾರತವು ತನ್ನ ಪ್ರಾಚೀನ ಜ್ಞಾನವನ್ನು ಆಧುನಿಕ ವಿಜ್ಞಾನದೊಂದಿಗೆ ಸಂಯೋಜಿಸಿ, ಕಡಿಮೆ ವೆಚ್ಚದ, ಪರಿಣಾಮಕಾರಿ ಮತ್ತು ವೈಜ್ಞಾನಿಕ ಆರೋಗ್ಯ ಮಾದರಿಯನ್ನು ಜಗತ್ತಿಗೆ ನೀಡುವ ಮೂಲಕ ‘ವಿಶ್ವಗುರು’ ಸ್ಥಾನವನ್ನು ಮತ್ತಷ್ಟು ಬಲಪಡಿಸಬಲ್ಲದು.

■ ಡಾ. ಡಿ. ವೀರೇಂದ್ರ ಹೆಗ್ಗಡೆ



ಮಾನವ ನಾಗರಿಕತೆಯ ಇತಿಹಾಸದಲ್ಲಿ ಇಂದು ನಾವು ಒಂದು ವಿಶಿಷ್ಟ ತಿರುವಿನಲ್ಲಿದ್ದೇವೆ. ವೈದ್ಯಕೀಯ ವಿಜ್ಞಾನದ ಪ್ರಗತಿಯಿಂದ ಮನುಷ್ಯನ ಆಯುಷ್ಯ ಹೆಚ್ಚುತ್ತಿದೆ. ಆದರೆ, ಆರೋಗ್ಯಪೂರ್ಣ, ಸ್ವಾವಲಂಬಿ ಮತ್ತು ಸಂತೋಷಭರಿತ ಜೀವನ ನಡೆಸುವವರ ಸಂಖ್ಯೆ ಅದೇ ಪ್ರಮಾಣದಲ್ಲಿ ಹೆಚ್ಚುತ್ತಿಲ್ಲ. ಈ ಸಂದರ್ಭದಲ್ಲಿ, ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನದ ‘ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ’ (ಯೋಗಾ ಫಾರ್ ಹೆಲ್ದಿ ಏಜಿಂಗ್) ಎಂಬ ಆಶಯ ಅತ್ಯಂತ ಅರ್ಥಪೂರ್ಣವಾಗಿದೆ.

ಯೋಗ ಭಾರತೀಯ ಋಷಿಮುನಿಗಳಿಂದ ಮಾನವಕುಲಕ್ಕೆ ದೊರೆತ ಸಮಗ್ರ ಜೀವನಶೈಲಿ. ಯೋಗ ಎನ್ನುವುದು ಕೇವಲ ಆಸನಗಳ ಪ್ರದರ್ಶನವಲ್ಲ, ಅದು ಭಾರತದ ಭವ್ಯ ಆಧ್ಯಾತ್ಮಿಕ ಪರಂಪರೆಯ ಕೊಡುಗೆ. ನಮ್ಮ ಪೂರ್ವಜರು ಪಾಲಿಸುತ್ತಿದ್ದ ಸಂಧ್ಯಾವಂದನೆ, ಪ್ರಾಣಾಯಾಮ, ಧ್ಯಾನ ಮತ್ತು ಶಿಸ್ತುಬದ್ಧ ಜೀವನಶೈಲಿಯು ‘ರೋಗ ಬಂದ ನಂತರ ಚಿಕಿತ್ಸೆಗಿಂತ, ರೋಗ ಬಾರದಂತೆ ತಡೆಯುವುದು ಶ್ರೇಷ್ಠ’ ಎಂಬ ಜೀವನ ತತ್ವವನ್ನು ಸಾರುತ್ತವೆ.

ಧರ್ಮಸ್ಥಳದಲ್ಲಿ ‘ಆರೋಗ್ಯ ಧನ’ ಎಂಬ ಧ್ಯೇಯದೊಂದಿಗೆ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮೂಲಕ ಆರೋಗ್ಯ ಸಂರಕ್ಷಣೆಯ ಕಾರ್ಯ ದಶಕಗಳಿಂದಲೂ ನಿರಂತರವಾಗಿ ಸಾಗುತ್ತಿದೆ. ಎಸ್‌ಡಿಎಂ ಶಿಕ್ಷಣ ಸಂಸ್ಥೆಯು 1989ರಲ್ಲೇ ಭಾರತದ ಪ್ರಥಮ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಿ, ಬಿಎನ್‌ವೈಎಸ್ ಪದವಿ ಶಿಕ್ಷಣಕ್ಕೆ ನಾಂದಿ ಹಾಡಿತು. ಶ್ರೀಕ್ಷೇತ್ರದ ಆಶ್ರಯದಲ್ಲಿ ನಡೆಯುತ್ತಿರುವ ಶಾಂತಿವನ ಮಾದರಿ ಸೇವೆ ಒದಗಿಸುತ್ತಿವೆ.

ವಿಜ್ಞಾನ ಮತ್ತು ಸಂಶೋಧನೆಗಳು

ಅಂತಾರಾಷ್ಟ್ರೀಯ ವೈದ್ಯಕೀಯ ಡೇಟಾಬೇಸ್ ಆದ ‘ಪಬ್‌ಮೆಡ್’ ಸೇರಿದಂತೆ ಪ್ರಸಿದ್ಧ ಜರ್ನಲ್‌ಗಳಲ್ಲಿ ಪ್ರಕಟವಾಗಿರುವ ಸಂಶೋಧನೆಗಳು ಯೋಗದ ದಕ್ಷತೆಯನ್ನು ಸಾಬೀತುಪಡಿಸಿವೆ. ರಕ್ತದೊತ್ತಡ, ಮಧುಮೇಹ, ಸ್ಥೂಲಕಾಯ, ಮಾನಸಿಕ ಒತ್ತಡ, ನಿದ್ರಾಹೀನತೆ, ಹೃದಯ ಸಂಬಂಧಿತ ಸಮಸ್ಯೆಗಳು ಮತ್ತು ವೃದ್ಧಾಪ್ಯದಲ್ಲಿ ಕಾಣಿಸಿಕೊಳ್ಳುವ ಅನೇಕ ಸಮಸ್ಯೆಗಳ ನಿಯಂತ್ರಣದಲ್ಲಿ ಯೋಗದ ಪಾತ್ರ ಅನನ್ಯವಾಗಿದೆ. ವಿಶೇಷವಾಗಿ, ವಯೋವೃದ್ಧ ರೋಗಿಗಳಲ್ಲಿ ರೋಗ ತಡೆಗಟ್ಟುವಿಕೆ, ಮಾನಸಿಕ ಶಾಂತಿ ಮತ್ತು ಜೀವನೋತ್ಸಾಹ ಕಾಪಾಡುವಲ್ಲಿ ಯೋಗವು ಭರವಸೆಯ ಆಶಾಕಿರಣವಾಗಿದೆ.

ಸಾಂಕ್ರಾಮಿಕವಲ್ಲದ ಕಾಯಿಲೆ ಸವಾಲು

ಇತ್ತೀಚಿನ ವರ್ಷಗಳಲ್ಲಿ ಹಿರಿಯ ನಾಗರಿಕರಲ್ಲಿ ಸಾಂಕ್ರಾಮಿಕವಲ್ಲದ ದೀರ್ಘಕಾಲಿಕ ಕಾಯಿಲೆಗಳು ಆತಂಕಕಾರಿಯಾಗಿ ಹೆಚ್ಚುತ್ತಿವೆ. ಅನಿಯಂತ್ರಿತ ರಕ್ತದೊತ್ತಡವು ಪಾರ್ಶ್ವವಾಯುವಿಗೆ ಕಾರಣವಾಗಿ ಮನುಷ್ಯನನ್ನು ವಿಕಲಚೇತನನನ್ನಾಗಿ ಮಾಡಬಹುದು. ಹಾಗೆಯೇ, ಮಧುಮೇಹವು ದೃಷ್ಟಿದೋಷ, ಮೂತ್ರಪಿಂಡದ ಕಾಯಿಲೆ ಹಾಗೂ ಹೃದಯಾಘಾತದ ಅಪಾಯವನ್ನು ತಂದೊಡ್ಡಿ ಜೀವಿತಾವಧಿಯನ್ನು ಕುಂಠಿತಗೊಳಿಸುತ್ತದೆ. ಈ ಕಾಯಿಲೆಗಳು ಕೇವಲ ವ್ಯಕ್ತಿಯನ್ನಷ್ಟೇ ಅಲ್ಲ, ಇಡೀ ಕುಟುಂಬವನ್ನೇ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಕ್ಕೆ ತಳ್ಳುತ್ತವೆ.

ಜಾಗತಿಕ ವೇದಿಕೆಯಲ್ಲಿ ಭಾರತ

ಪ್ರಧಾನಿ ನರೇಂದ್ರ ಮೋದಿ ಅವರ ದೂರದರ್ಶಿತ್ವದ ಫಲವಾಗಿ, ಯೋಗವು ಇಂದು ಜಾಗತಿಕ ಮಟ್ಟದ ಅತಿ ದೊಡ್ಡ ಆರೋಗ್ಯ ಆಂದೋಲನವಾಗಿ ಮಾರ್ಪಟ್ಟಿದೆ. ಇಂದು ಹಾರ್ವರ್ಡ್ ಮೆಡಿಕಲ್ ಸ್ಕೂಲ್ ಮತ್ತು ಮೇಯೊ ಕ್ಲಿನಿಕ್‌ನಂತಹ ಪ್ರಪಂಚದ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳೂ ಯೋಗದ ಚಿಕಿತ್ಸಾ ಕಾರ್ಯಕ್ರಮಗಳನ್ನು ಅಧಿಕೃತವಾಗಿ ಅಳವಡಿಸಿಕೊಂಡಿರುವುದು ನಮ್ಮ ಪರಂಪರೆಗೆ ಸಿಕ್ಕ ಜಾಗತಿಕ ಮನ್ನಣೆಯಾಗಿದೆ. ಇದರ ಜೊತೆಗೆ ಯೋಗವು ಉದ್ಯೋಗದ ಹೊಸ ದಾರಿಗಳನ್ನೂ ತೆರೆದಿದೆ. ಪ್ರಮಾಣೀಕೃತ ಯೋಗ ಶಿಕ್ಷಕರು, ಚಿಕಿತ್ಸಕರು ಹಾಗೂ ಬಿಎನ್‌ವೈಎಸ್ ವೈದ್ಯಕೀಯ ತಜ್ಞರಿಗೆ ದೇಶ ವಿದೇಶಗಳಲ್ಲಿ ಬೇಡಿಕೆ ಹೆಚ್ಚುತ್ತಿದ್ದು, ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದಾರೆ. ವಿಶೇಷವಾಗಿ, ಸ್ನಾತಕೋತ್ತರ ಮಟ್ಟದಲ್ಲಿ ‘ಕ್ಲಿನಿಕಲ್ ಯೋಗ ಥೆರಪಿ’ ತರಬೇತಿಯು ಯೋಗವನ್ನು ಆಧುನಿಕ ಆಸ್ಪತ್ರೆಗಳು ಮತ್ತು ಹೆಲ್ತ್‌ಕೇರ್ ಸಂಸ್ಥೆಗಳಲ್ಲಿ ಇತರ ವೈದ್ಯಕೀಯ ಚಿಕಿತ್ಸೆಗಳ ಜೊತೆಗೆ ಪೂರಕವಾಗಿ ಬಳಸುವಂತಹ ಅತ್ಯುನ್ನತ ವೃತ್ತಿಪರ ತಜ್ಞರನ್ನು ಸೃಷ್ಟಿಸುತ್ತಿದೆ.

ಮುಂದಿನ ದಿನಗಳಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಭಾರತವನ್ನು ಜಾಗತಿಕ ವೆಲ್‌ನೆಸ್ ಪ್ರವಾಸೋದ್ಯಮದ ಪ್ರಮುಖ ಕೇಂದ್ರವನ್ನಾಗಿ ರೂಪಿಸುವ ಸಾಮರ್ಥ್ಯ ಹೊಂದಿವೆ. ವಿಶ್ವ ಯೋಗ ದಿನದ ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಯೋಗವನ್ನು ದೈನಂದಿನ ಜೀವನದ ಭಾಗವನ್ನಾಗಿಸಿಕೊಳ್ಳುವ ಸಂಕಲ್ಪ ಮಾಡಬೇಕು. ಶಾಲೆಗಳು, ಕಾಲೇಜುಗಳು, ಕಾರ್ಯಕ್ಷೇತ್ರಗಳು ಹಾಗೂ ಕುಟುಂಬಗಳಲ್ಲಿ ಯೋಗ ಸಂಸ್ಕೃತಿ ಬೆಳೆಯಬೇಕಾಗಿದೆ. ವಿಶೇಷವಾಗಿ ಯುವಜನತೆ ಯೋಗವನ್ನು ಜೀವನಶೈಲಿಯಾಗಿ ಅಳವಡಿಸಿಕೊಂಡರೆ ಭವಿಷ್ಯದ ಆರೋಗ್ಯ ವೆಚ್ಚವನ್ನು ಕಡಿಮೆ ಮಾಡಿ, ಆರೋಗ್ಯವಂತ ಸಮಾಜ ನಿರ್ಮಿಸಲು ಸಾಧ್ಯವಾಗುತ್ತದೆ. ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯನ್ನು ಅಳವಡಿಸಿಕೊಳ್ಳುವುದು ಕೇವಲ ವೈಯಕ್ತಿಕ ಆಯ್ಕೆಯಲ್ಲ; ಅದು ಆರೋಗ್ಯಪೂರ್ಣ ರಾಷ್ಟ್ರ ನಿರ್ಮಾಣದ ದಾರಿಯಾಗಿದೆ.

(ಲೇಖಕರು: ರಾಜ್ಯಸಭಾ ಸದಸ್ಯರು ಹಾಗೂ ಧರ್ಮಾಧಿಕಾರಿಗಳು, ಧರ್ಮಸ್ಥಳ ಕ್ಷೇತ್ರ)